ವಿಸ್ತೃತ ಜಾನಪದ ಗ್ರಂಥಸೂಚಿ

ಸಂಪುಟ ೨


ಪ್ರಧಾನ ಸಂಪಾದಕ

ಪ್ರೊ. ಅಂಬಳಿಕೆ ಹಿರಿಯಣ್ಣ

ಸಂಪಾದಕರು

ಕ್ಯಾತನಹಳ್ಳಿ ರಾಮಣ್ಣ

ಟಿ.ಎಸ್. ರಾಜಪ್ಪ



ಜಾನಪದ ಕಲಾವಿದರು

ವಿಸ್ತೃತ ಜಾನಪದ ಗ್ರಂಥಸೂಚಿ

ಸಂಪುಟ ೨

ಪ್ರಧಾನ ಸಂಪಾದಕರು

ಪ್ರೊ. ಅಂಬಳಿಕೆ ಹಿರಿಯಣ್ಣ

ಸಂಪಾದಕರು

ಕ್ಯಾತನಹಳ್ಳಿ ರಾಮಣ್ಣ
ಟಿ.ಎಸ್. ರಾಜಪ್ಪ

ಸಹಾಯಕರು

ಡಾ. ವೃಷಭಕುಮಾರ್
ಕುಮಾರಿ ಎಂ.ಬಿ. ಶ್ವೇತಾ

ವಿಸ್ತರಣೆ ಹಾಗೂ ಸಲಹಾ ಕೇಂದ್ರ

ಕರ್ನಾಟಕ ಜಾನಪದ ವಿಶ್ವವಿದ್ಯಾಲಯ

ಗೊಟಗೋಡಿ, ರಾ.ಹೆ-೪, ಶಿಗ್ಗಾವಿ ತಾ. ಹಾವೇರಿ ಜಿಲ್ಲೆ

ದೇಶ ಸುತ್ತು ಕೋಶ ಓದು

ಕನ್ನಡನಾಡು ಅಮೂಲ್ಯ ಹಾಗೂ ಸಮೃದ್ಧ ಜಾನಪದ ಸಂಪತ್ತಿನ ಆಗರವಾಗಿದೆ. ಅಪಾರವಾದ ಜ್ಞಾನದ ಅನನ್ಯತೆಯನ್ನು ಶೋಧಿಸುವ, ಸಂರಕ್ಷಿಸುವ ಹಾಗೂ ಸಂವರ್ಧಿಸುವ ಕಾರ್ಯಗಳು ಯಾವ ಕಾಲಕ್ಕೂ ಆಗಬೇಕಾದ ಕಾರ್ಯವೇ ಆಗಿದೆ. ಈ ಮಹತ್ವದ ಉದ್ದೇಶಗಳ ಈಡೇರಿಕೆಗಾಗಿ ಜಾನಪದ ವಿಶ್ವವಿದ್ಯಾಲಯದ ಸ್ಥಾಪನೆಯ ಅಗತ್ಯವಿತ್ತು. ನೆಲದ ಸಂಸ್ಕೃತಿಯನ್ನು ಉಸಿರಾಗಿಸಿಕೊಂಡು ಬದುಕುತ್ತಿರುವ ನಾಡಿನ ಸಮಸ್ತರ ಒಲವು ಮತ್ತು ನಿರೀಕ್ಷೆಗಳು ನಿಜವಾಗಬೇಕೆಂಬ ಮಹದಾಸೆಯೊಂದಿಗೆ ಜಗತ್ತಿನ ಪ್ರಪ್ರಥಮ ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಸ್ಥಾಪನೆಯಾಗಿದೆ. ಇದು ಕನ್ನಡದ ಮಟ್ಟಿಗೆ ಅಷ್ಟೇ ಅಲ್ಲ ದೇಶೀ ಸಂಸ್ಕೃತಿಯ ಮೂಲವನ್ನು ಶೋಧಿಸುವ ಮತ್ತು ಅದರ ಹರವು ವಿಸ್ತಾರಗೊಳ್ಳುವಂತೆ ಮಾಡಬೇಕಾದ ಮಹತ್ವದ ಜವಾಬ್ದಾರಿಯನ್ನು ಹೊತ್ತಿರುವುದರಿಂದ ವಿಶ್ವವಿದ್ಯಾಲಯದ ಸ್ಥಾಪನೆ ಚಾರಿತ್ರಿಕವಾಗಿ ಮಹತ್ವದ್ದೆನಿಸಿದೆ.

ಸಮಾಜದ ಎಲ್ಲ ಸಮುದಾಯಗಳ ಜ್ಞಾನ ಸಂಗ್ರಹಣೆ, ಸಂಪಾದನೆ, ಕಲಿಕೆ, ಪ್ರದರ್ಶನ ಕಾರ್ಯಗಳು ಇನ್ನೂ ತೀವ್ರಗತಿಯಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಹಾಗೂ ಪ್ರಮಾಣಬದ್ಧವಾಗಿ ಮತ್ತು ವೈಜ್ಞಾನಿಕವಾಗಿ ನಡೆಸುವ ಉದ್ದೇಶವೇ ವಿಶ್ವವಿದ್ಯಾಲಯದ ಮೂಲ ಧ್ಯೇಯವಾಗಿದೆ. ಬಹುಭಾಷಿಕ ಹಾಗೂ ಬಹುಸಂಸ್ಕೃತಿಗಳು ಇರುವ ನಾಡಿನಲ್ಲಿ ಇನ್ನೂ ಅನಾವರಣಗೊಳ್ಳಬೇಕಾದ ಜ್ಞಾನ ಸಂಪತ್ತು ಅಗಾಧ ಪ್ರಮಾಣದಲ್ಲಿದೆ. ಈವರೆಗೆ ಆದ ಜಾನಪದ ಕ್ಷೇತ್ರ ಸಂಬಂಧೀ ಕಾರ್ಯಗಳ ಬಗೆಗೆ ನಾವು ಅಷ್ಟೇನೂ ಬೀಗುವಂತಿಲ್ಲ. ಇನ್ನೂ ಆಗಬೇಕಾದ ಕೆಲಸ-ಕಾರ್ಯಗಳು ಬೇಕಾದಷ್ಟು ಇವೆ ಎಂಬ ವಿನಯದಿಂದಲೇ ಜಾನಪದ ವಿಶ್ವವಿದ್ಯಾಲಯ ಕಾರ್ಯಪ್ರವೃತ್ತವಾಗಿದೆ. ಜನಪದರ ಲೋಕದೃಷ್ಟಿ, ಅವರ ವಿವೇಕ ಹಾಗೂ ಜಾಗತೀಕರಣದಿಂದಾಗಿ ತೀವ್ರಗತಿಯಲ್ಲಿ ಬದಲಾಗುತ್ತಿರುವ ಪ್ರಪಂಚಕ್ಕೆ ಪರ್ಯಾಯ ದೇಶೀ ಜ್ಞಾನ ಆಕರವಾಗಿ ಅದರ ಪ್ರಸ್ತುತತೆಗೆ ವಿಶ್ವವಿದ್ಯಾಲಯ ವಿಶೇಷವಾಗಿ ಗಮನಹರಿಸಿದೆ. ಶಿಷ್ಟ ಭಾಷೆಯ ಯಾಜಮಾನ್ಯಕ್ಕೆ ಭಿನ್ನವಾಗಿ ಮೌಖಿಕತೆಯಲ್ಲಿನ ಸಾಂಸ್ಕೃತಿಕ ಅಭಿವ್ಯಕ್ತಿ ಹಾಗೂ ಮೌಖಿಕ ಸಂಕಥನಕ್ಕೆ ಹೆಚ್ಚು ಒತ್ತು ಕೊಡುವ ಜರೂರತ್ತು ನಮ್ಮ ಮುಂದಿದೆ.

ಜಾನಪದ ಎಂದರೆ ಆಧುನಿಕ ಜ್ಞಾನ ಮತ್ತು ತಂತ್ರಜ್ಞಾನಕ್ಕೆ ವಿರುದ್ಧವಾದುದು ಎಂಬ ತಿಳಿವಳಿಕೆ ಬಲವಾಗಿ ಬೇರೂರಿದೆ. ಅಷ್ಟೇ ಅಲ್ಲ ಹಳೆಯದನ್ನು ಸಂಗ್ರಹಿಸುವುದು, ಮುಂದಿನ ವರ್ಗಕ್ಕೆ ಕೂಡಿಟ್ಟು ಕೊಡುವುದು ಎಂಬ ಸ್ಥಾಪಿತ ತಿಳಿವಳಿಕೆಯ ಚೌಕಟ್ಟಿನಾಚೆಗೂ, ಜಾನಪದವನ್ನು ವಿಶಾಲ ಮನೋಭೂಮಿಕೆಯಲ್ಲಿ ಅರ್ಥೈಸಿಕೊಳ್ಳಬೇಕಾದುದು ಇಂದಿನ ಅಗತ್ಯ ವಾಗಿದೆ. ಜಾನಪದವು ಭೂಮಿತೂಕದ್ದು,

ವಿಸ್ತೃತ ಜಾನಪದ ಗ್ರಂಥಸೂಚಿ

ಸಂಪುಟ ೨

VISTRUTA JANAPADA GRANTHASOOCHI

(An Elaborated Bibliography of Folklore Books)

Volume Two

Chief Editor
Prof. Ambalike Hiriyanna
Vice-Chancellor
Karantaka Jaanapada University
Gotagodi – 581 197

Editors
Kyatanahalli Ramanna
No. 463, Boogadi Village,
Mysore-570 023.

T.S. Rajappa
No. 1094, C&D Block,
Lalithadri Road, Kuvempu Nagara,
Mysore-570 023.

Published by
Prof. S.C. Ramesh
Director
Centre for Extension and Consultancy
Karantaka Jaanapada University
Gotagodi – 581 197
Shiggavi Taluk, Haveri Dist, Karnataka
Phone: 0836 - 2255180

Pages: xxii + 506 **Price:** ₹ 700/-
www.janapadauni.in
First Impression : 2014
ISBN-978-93-83149-27-8

ಬೆಲೆ : ೭೦೦/-
ಮುಖಪುಟ: **ಕೆ.ಕೆ. ಮಕಾಳಿ**
ಅಕ್ಷರ ಸಂಯೋಜನೆ : **ಬಿ.ಆರ್. ಸಂದೀಪ ಮತ್ತು ವಿಶ್ವ ಗುಜ್ಜರ್**
ಪುಸ್ತಕ ದೊರೆಯುವ ಸ್ಥಳ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಗೊಟಗೋಡಿ ೫೮೧ ೧೯೭,
ಶಿಗ್ಗಾವಿ ತಾಲೂಕು, ಹಾವೇರಿ ಜಿಲ್ಲೆ
ಮುದ್ರಣ
ರಾಜಾ ಪ್ರಿಂಟರ್ಸ್, ಬೆಂಗಳೂರು
ದೂರವಾಣಿ : 22234066

ಆಕಾಶದಷ್ಟು ವಿಸ್ತಾರವಾದುದು, ನೀರಿನಷ್ಟು ಚಲನಶೀಲವಾದುದು, ಗಾಳಿಯಂತೆ ನಮ್ಮ ಉಸಿರು ಎಂಬುದು ನಮ್ಮ ಅರಿವಿಗೆ ಬರಬೇಕಾಗಿದೆ. ಒಟ್ಟಿನಲ್ಲಿ ಜಾನಪದ ಎಂದರೆ ಎಲ್ಲವನ್ನೂ ಅಖಂಡವಾಗಿ ಅನುಸರಿಸಿದ ಒಂದು ಜೀವನ ವಿಧಾನ; ಜ್ಞಾನವನ್ನು ವಿಶೇಷ ರೀತಿಯಲ್ಲಿ ಹಂಚಿಕೊಂಡಿರುವ ಒಂದು ತವನಿಧಿಯಾಗಿದೆ. ಹಾಗಾಗಿ 'ಹೊನ್ನ ಬಿತ್ತೇವು ಹೊಲಕೆಲ್ಲ' ಎಂಬ ಧ್ಯೇಯ ವಾಕ್ಯವನ್ನು ತನ್ನ ಮೂಲಮಂತ್ರವಾಗಿಸಿಕೊಂಡು ವಿಶ್ವವಿದ್ಯಾಲಯ ಕಾರ್ಯೋನ್ಮುಖವಾಗಿದೆ. ಈವರೆಗೆ ಗುಪ್ತನಿಧಿಯಾಗಿದ್ದ ತವನಿಧಿ ಹೊನ್ನು ಈಗ ಜಗತ್ಪ್ರಕಟವಾಗಬೇಕಿದೆ. ವಿದ್ಯೆಯನ್ನು ಬೋಧಿಸುವುದು, ಸಂರಕ್ಷಿಸುವುದು ಅಷ್ಟೇ ಅಲ್ಲ ಹಂಚುವುದು–ಪ್ರಸರಣ ಮಾಡುವುದು ಜ್ಞಾನ ಕೇಂದ್ರವಾದ ವಿಶ್ವವಿದ್ಯಾಲಯದ ಮೂಲ ಗುರಿಯಾಗಿರಬೇಕು. ಈ ನಾಡು ಮೊದಲ ಬಾರಿಗೆ ವಿಶ್ವವಿದ್ಯಾಲಯದ ಮೂಲಕ ದೇಸೀ ಜ್ಞಾನಸಂಪತ್ತನ್ನು ಜಾಗತಿಕ ಪರಿಸರದಲ್ಲಿ ಬಿತ್ತುವ ಕಾರ್ಯಕ್ಕೆ ಕಂಕಣಬದ್ಧವಾಗಿದೆ. ಬಿತ್ತುವ, ಬೆಳೆಯುವ ಪ್ರಕ್ರಿಯೆ ಹೊಸಹುಟ್ಟಿಗೆ ನಾಂದಿ ಹಾಡುವುದಲ್ಲದೆ ಜ್ಞಾನಪರಂಪರೆಯ ಸತತ ಮುಂದುವರಿಕೆ ಸಂರಕ್ಷಣೆ, ಅಭಿವೃದ್ಧಿಯ ರೂಪವೂ ಆಗಿದೆ.

ಪಾರಂಪರಿಕ ಜ್ಞಾನ/ಸಮುದಾಯ ಜ್ಞಾನ ಮತ್ತು ಆಚರಣೆಯ ಮೂಲ ನೆಲೆಯಿಂದಲೇ ಈ ಹೊತ್ತಿನ ಜ್ಞಾನಪದ್ಧತಿ ಬೆಳೆದು ಬಂದಿದೆ. ಸಮುದಾಯ ಜ್ಞಾನದಿಂದ ತಂತ್ರಜ್ಞಾನ ಕೌಶಲಗಳ ಬಳಕೆಯನ್ವಯ ನಮ್ಮ ಗ್ರಾಮ ವ್ಯವಸ್ಥೆಯನ್ನು ಹೆಚ್ಚು ಉತ್ಪಾದಕವಾಗಿಯೂ, ಪ್ರಾಯೋಜಕವಾಗಿಯೂ, ದೃಢವಾಗಿಯೂ ರೂಢಿಸಬೇಕಾಗಿದೆ. ಆದರೆ ಇವೊತ್ತಿನ ಜಾಗತೀಕರಣ, ಉದಾರೀಕರಣ, ಖಾಸಗೀಕರಣಗಳ ಪ್ರಭಾವದಿಂದಾಗಿ ಜಾನಪದದಲ್ಲಿ ತೀವ್ರ ಸ್ವರೂಪದ ಬದಲಾವಣೆಗಳು ಆಗಿವೆ. ಅದರಲ್ಲೂ ಉದ್ಯಮಪತಿತ್ವ ತನಗೆ ಬೇಕಾದ ಜ್ಞಾನವನ್ನು ಮಾತ್ರ ಸೆಳೆದುಕೊಂಡು ಲಾಭದಾಯಕವಲ್ಲದ್ದನ್ನು ಹಿಂದಕ್ಕೆ ತಳ್ಳುತ್ತಲೇ ಬರುತ್ತಿದೆ. ಪಾರಂಪರಿಕ ಜ್ಞಾನ –ವಿಜ್ಞಾನ ಕುರಿತು ಅತ್ಯಂತ ವೈಜ್ಞಾನಿಕ ತಳಹದಿಯ ಮೇಲೆ ಹಾಗೂ ವರ್ತಮಾನಕ್ಕೆ ಹೊಂದಿಕೆಯಾಗುವ ಅಧ್ಯಯನ ಮಾದರಿಗಳನ್ನು ರೂಪಿಸಿಕೊಳ್ಳುವುದು ಆವಶ್ಯಕವಾಗಿದೆ. ಬದಲಾದ ಸನ್ನಿವೇಶದಲ್ಲಿ ಜಾನಪದ ಎನ್ನುವುದು ನಿತ್ಯದ ಬದುಕಿನ ಒಡಲಾಳದಿಂದಲೇ ರೂಪಾಂತರವನ್ನು ಹೊಂದುತ್ತಿರುವುದರಿಂದ ಜಾನಪದದಲ್ಲಿಯೇ ಅದಕ್ಕೆ ಪರ್ಯಾಯವಾಗಿ, ಪ್ರತಿರೋಧ ಒಡ್ಡುವ ಶಕ್ತಿ ಇರುವುದನ್ನು ಗುರುತಿಸಬೇಕಾಗಿದೆ. ಈ ನಿಟ್ಟಿನಲ್ಲಿ ನಮ್ಮದೇ ಜ್ಞಾನ, ಸಂಸ್ಕೃತಿಯನ್ನು ಆಧುನಿಕ ಸಂದರ್ಭಕ್ಕೆ ಅನ್ವಯಿಸಿಕೊಂಡು ನೋಡಲು ಯತ್ನಿಸಬೇಕಾಗಿದೆ. ಜನಪದರ ನಾಣ್ಣುಡಿಯಂತೆ, ಜ್ಞಾನ ಸಂಪಾದನೆಗೆ ಸಾಮಾನ್ಯವಾಗಿ ಅನುಸರಿಸುವ ಮಾರ್ಗಗಳು ಎರಡೇ; ಅವುಗಳಲ್ಲಿ ಒಂದು ದೇಶ ಸುತ್ತುವುದು, ಮತ್ತೊಂದು ಕೋಶ ಓದುವುದು. ಮನುಷ್ಯ ತನ್ನ ಜ್ಞಾನದಾಹವನ್ನು ನೀಗಿಸಿಕೊಳ್ಳಲು ಎರಡೂ ಮಾರ್ಗಗಳನ್ನು ಅನುಸರಿಸುವುದು ಅಗತ್ಯ. ಆದರೆ ಜ್ಞಾನ ಸಂಪಾದನೆಗೆ ಅವೆರೆಡರಲ್ಲಿ ಒಂದನ್ನಾದರೂ ಮಾಡಲೇಬೇಕು. ವಿಶ್ವವಿದ್ಯಾಲಯವು ಮೌಲಿಕವಾದ ಕೋಶಗಳನ್ನು ಪ್ರಕಟಿಸಿ ಓದುವಂತೆ ಪ್ರೇರೇಪಿಸುವ ಮೂಲಕ ಮಹತ್ವದ ಪ್ರಯತ್ನವನ್ನು ಮಾಡುತ್ತಿದೆ. ವಿಶ್ವವಿದ್ಯಾಲಯ ನೆಲಮೂಲವಾದ ಜನಪದ ಕಲೆ, ಸಾಹಿತ್ಯ, ಸಂಸ್ಕೃತಿ ಪರಂಪರೆಗಳ ಕುರಿತು ವಿಶೇಷ

ಅಧ್ಯಯನ, ಅಧ್ಯಾಪನ, ಸಂಶೋಧನೆ ಸೇರಿದಂತೆ ಹತ್ತು ಹಲವು ಕಾರ್ಯಯೋಜನೆಗಳನ್ನು ರೂಪಿಸಿಕೊಂಡು ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿ ಕೊಳ್ಳುತ್ತಲಿದೆ. ದೇಶೀ ಎನ್ನಬಹುದಾದ ಎಲ್ಲ ಜ್ಞಾನವನ್ನು ಸಂಗ್ರಹಿಸುವ, ನಿರಂತರವಾಗಿ ಚಲನಶೀಲಗೊಳ್ಳುವ ಜಾನಪದವನ್ನು ಅದೇ ನೆಲೆಯಿಂದಲೇ ಗ್ರಹಿಸಿ, ಹೊಸ ಹೊಸ ಜ್ಞಾನ ಶೋಧದೊಂದಿಗೆ ಜಾನಪದವನ್ನು ಇಟ್ಟು ನೋಡುವ ಮತ್ತೆ ಹೊಸದಾಗಿ ಕಟ್ಟಿಕೊಳ್ಳುವ ಕಾರ್ಯವನ್ನು ನೋಂಪಿಯಂತೆ ಮುನ್ನಡೆಸಿಕೊಂಡು ಹೋಗುವುದೇ ಜಾನಪದ ವಿಶ್ವವಿದ್ಯಾ ಲಯದ ಮೂಲ ಆಶಯವಾಗಿದೆ. ಅದರ ಭಾಗವಾಗಿ ವಿಶ್ವವಿದ್ಯಾಲಯವು ವಿಸ್ತರಣೆ ಹಾಗೂ ಸಲಹಾ ಕೇಂದ್ರದ ಮೂಲಕ ಜ್ಞಾನ ಪ್ರಸರಣಕ್ಕೆ ಟೊಂಕಕಟ್ಟಿ ನಿಂತಿದ್ದು, ಪುಸ್ತಕ ಪ್ರಕಟಣೆಗೆ ಮುಂದಾಗಿದೆ. ಈ ಮೂಲಕ ಅಂತರ್‌ಶಿಸ್ತೀಯ ಜ್ಞಾನಶೋಧದ ವಿನೂತನ ಮಾರ್ಗಗಳು ತೆರೆದುಕೊಳ್ಳಲು ವಿಶ್ವವಿದ್ಯಾಲಯ ನಾಂದಿ ಹಾಡಿದೆ.

ನಮ್ಮ ನೆಲದಲ್ಲಿ ಶಿಷ್ಟ ಸಾಹಿತ್ಯ ಅಧ್ಯಯನಕ್ಕೆ ಇದ್ದ ಸೌಲಭ್ಯಗಳು ಜನಪದ ಸಾಹಿತ್ಯಕ್ಕೆ ಇರಲಿಲ್ಲ ಎಂಬ ವಿಚಾರವು ಒಂದು ಐತಿಹಾಸಿಕ ಸತ್ಯ. ಇದೇ ಮಾತನ್ನು ಬದುಕಿಗೂ ಅನ್ವಯಿಸಬಹುದು. ಅಕ್ಷರ ರೂಪವನ್ನು ಪಡೆದಿದ್ದ ಶಿಷ್ಟ ಸಾಹಿತ್ಯವು ಕಾಲಕಾಲಕ್ಕೆ ಹೇಗೆ ಯಾವ ಯಾವ ರೂಪಗಳನ್ನು ಯಾವ ಯಾವ ಕಾಲದಲ್ಲಿ ಪಡೆಯುತ್ತ ಬಂದಿತು ಎಂಬ ಅಂಶವನ್ನು ನಾವು ಸ್ಪಷ್ಟವಾಗಿ ಗುರುತಿಸಬಹುದು. ಆದರೆ ಅಂಥ ಸೌಲಭ್ಯ ಜನಪದ ಬದುಕಿಗಾಗಲಿ, ಜನಪದ ಸಾಹಿತ್ಯಕ್ಕಾಗಲಿ ಇರಲಿಲ್ಲ. ಈ ಕಾರಣದಿಂದ ಜನಪದ ಬದುಕಿನ ಯಾತ್ರೆಯನ್ನು ಸ್ಪಷ್ಟ ರೂಪದಲ್ಲಿ ಗುರುತಿಸಲು ಸಾಧ್ಯವಾಗಲಿಲ್ಲ. ಇತಿಹಾಸಕಾರರು ಕೂಡ ಜನಪದವನ್ನು ಯಾವತ್ತೂ ಗಂಭೀರವಾಗಿ ಪರಿಗಣಿಸಲಿಲ್ಲ. ಅವರು ಕೇವಲ ರಾಜಮಹಾರಾಜರ ಬದುಕನ್ನು, ಅವರ ಯುದ್ಧಗಳನ್ನು, ಅವರ ಸಾಮ್ರಾಜ್ಯ ವಿಸ್ತರಣೆಗಳನ್ನು ಕುರಿತು ಮಾತ್ರವೇ ದಾಖಲಿಸುತ್ತ ಬಂದರು. ಜನಪದ ಬದುಕನ್ನು ಕುರಿತು ಬರೆದ ಉದಾಹರಣೆ ಇಲ್ಲ. ಆದ್ದರಿಂದ ಜನಪದರು ನ್ಯಾಯ ವಂಚಿತರಾಗಿಯೇ ಬದುಕುತ್ತ ಬಂದರು. ಆದರೆ ಅವರು ತಮ್ಮ ಸ್ಥಿತಿಯ ಬಗ್ಗೆ ಚಿಂತಿಸಿದವರಲ್ಲ. ಶ್ರಮವೇ ಅವರ ಗಾಯತ್ರಿಯಾಗಿತ್ತು. ಬಿತ್ತಿ ಬೆಳೆಯುವ ಕಾಯಕದ ಶ್ರಮವನ್ನು ಮರೆಯಲು ಅವರು ತಮ್ಮ ನಾಲಗೆಯನ್ನು ಬಳಸಿಕೊಂಡರು. ನಾರಾಯಣಾ ನಿನ್ನ ನಾಮದ ಸ್ಮರಣೆಯ ನಾನೆಲ್ಲಿ ಬಿತ್ತಿ ಬೆಳೆದೇನು – ಎಂದು ಕೇಳುತ್ತಲೇ ತಮ್ಮ ಬದುಕನ್ನೆಲ್ಲ ನಾಲಗೆಯ ಮೇಲೆಯೇ ದಾಖಲಿಸುತ್ತ ಬಂದಂಥವರು ನಮ್ಮ ಜನಪದರು. ಇತಿಹಾಸಕಾರರ ಅವಜ್ಞೆಗೆ ಕನ್ನಡಿ ಹಿಡಿದಂತಿರುವ ನಮ್ಮ ಜನಪದರ ಇತಿಹಾಸವು ಅವರ ನಾಲಗೆಯ ಮೇಲೆಯೇ ರೂಪುಗೊಳ್ಳುತ್ತ ಬಂದಿತು.

ಮುಗ್ಧ ಮನಸ್ಸಿನಿಂದ ರೂಪುಗೊಂಡ ಆ ಇತಿಹಾಸವು ಅಕ್ಷರ ರೂಪ ಪಡೆದದ್ದು ಬಹುಶಃ ೧೯ನೆಯ ಶತಮಾನದಲ್ಲಿ. ಜನಪದ ಸಾಹಿತ್ಯವು ಗುರುತಿಸಲ್ಪಟ್ಟು ಗ್ರಂಥರೂಪ ಪಡೆದುಕೊಳ್ಳುತ್ತ ಬಂದುದೇ ಒಂದು ರೋಚಕ ಇತಿಹಾಸ. ನಮ್ಮ ಜನಪದರೇ ಇತಿಹಾಸಕಾರರಾಗಿಯೂ ಪಾತ್ರ ವಹಿಸುತ್ತ ಬಂದದ್ದು ಒಂದು ಸಹಜ ಪ್ರಕ್ರಿಯೆ.

ಕನ್ನಡ ಜಾನಪದವು ಜಾಗತಿಕ ಮಟ್ಟಕ್ಕೆ ಏರಿ ನಿಂತಿರುವ ಈ ಹೊತ್ತಿನಲ್ಲಿ ನಮ್ಮ ಜಾನಪದ ಗ್ರಂಥಗಳ ಪಯಣವನ್ನು, ಮಾರ್ಗವನ್ನು, ಗುರುತಿಸಿಕೊಳ್ಳಬೇಕಾದುದು ನಮ್ಮ ಕರ್ತವ್ಯವೂ ಹೌದು. ಇದಕ್ಕೆ ೧೯೭೪ ರಲ್ಲಿಯೇ ನಮಗೆ ಮಾರ್ಗ ಹಾಕಿಕೊಟ್ಟವರು ಡಾ. ಹಾ. ಮಾ. ನಾಯಕ ಅವರು. ಅವರ ಮಾರ್ಗದರ್ಶನದಂತೆ ಕನ್ನಡದಲ್ಲಿ ಇದುವರೆಗೆ ಪ್ರಕಟವಾಗಿರುವ ಜಾನಪದವನ್ನು ಕುರಿತ ಗ್ರಂಥಗಳು ಎಷ್ಟು, ಅವುಗಳ ಬೆಳವಣಿಗೆ ಹೇಗೆ, ವಿಷಯ ವೈವಿಧ್ಯ ಹೇಗೆ – ಮುಂತಾದ ನಿಟ್ಟಿನಲ್ಲಿ ಗ್ರಂಥಸೂಚಿಯೊಂದರ ಮರುಹುಟ್ಟಿನ ಅಗತ್ಯ ಕಂಡು ಬಂದದ್ದರ ಫಲವೇ ಈ ವಿಸ್ತೃತ ಜಾನಪದ ಗ್ರಂಥಸೂಚಿ. ಡಾ. ಹಾ. ಮಾ. ನಾಯಕ ಅವರು ಹಾಕಿಕೊಟ್ಟ ಮಾರ್ಗದಲ್ಲಿ ಈಗಾಗಲೇ ಒಬ್ಬಿಬ್ಬರು ನಡೆದದ್ದಿದೆ. ಆದರೆ, ಹೆಚ್ಚು ವಿಸ್ತಾರವಾಗಿ, ಪ್ರಕಟಣೆಯನ್ನು ಕುರಿತ ಇತಿಹಾಸವನ್ನು ಒಳಗೊಂಡು, ಇದುವರೆಗೆ ಎಲ್ಲಿಯೂ ಕಾಣಸಿಗದಷ್ಟು ಹೇರಳ ಮಾಹಿತಿಗಳನ್ನು ಹೊತ್ತು ಈ ಗ್ರಂಥಸೂಚಿ ರೂಪುಗೊಂಡಿದೆ. ಅಲ್ಲಲ್ಲಿ ಸಣ್ಣಪುಟ್ಟ ಕೊರತೆಗಳು ಕಂಡು ಬಂದರೂ ತುಂಬಾ ಉಪಯುಕ್ತ ಗ್ರಂಥವಾಗಿ ಬೃಹತ್ ರೂಪದಲ್ಲಿ ಹೊರಬಂದಿದೆ.

ಇಂಥ ಒಂದು ಗ್ರಂಥಸೂಚಿಯನ್ನು ಸಿದ್ಧಪಡಿಸಿರುವವರು, ಕನ್ನಡ ಜಾನಪದ ಕ್ಷೇತ್ರದಲ್ಲಿ ಸಾಕಷ್ಟು ಕೆಲಸ ಮಾಡಿ ಪ್ರಸಿದ್ಧರಾಗಿರುವ ಶ್ರೀ ಕ್ಯಾತನಹಳ್ಳಿ ರಾಮಣ್ಣ ಅವರು. ರಾಮಣ್ಣ ಕ್ಷೇತ್ರಕಾರ್ಯದಲ್ಲಿ ಪಳಗಿದವರು. ನಲವತ್ತೈದು ವರ್ಷಗಳಿಗೂ ಹೆಚ್ಚು ಕಾಲವನ್ನು ಅವರು ಕ್ಷೇತ್ರಕಾರ್ಯಕ್ಕಾಗಿ ಬಳಸಿಕೊಂಡಿದ್ದಾರೆ. ಅವರ ಆ ಅನುಭವ ಹಾಗೂ ಡಾ. ಹಾ. ಮಾ. ನಾಯಕ ಅವರ ಮೇಲ್ಪಂಕ್ತಿ ಇವುಗಳಿಂದ ಈ ಗ್ರಂಥಸೂಚಿಯು ಸಾಕಷ್ಟು ಸಶಕ್ತವಾಗಿಯೇ ರೂಪುಗೊಂಡಿದೆ. ಅನುಬಂಧವನ್ನು ಸಿದ್ಧಪಡಿಸುವಲ್ಲಿ ಶ್ರೀ ಟಿ.ಎಸ್. ರಾಜಪ್ಪ ಅವರು ಸಹಕರಿಸಿದ್ದಾರೆ. ಈ ಈರ್ವರಿಗೂ ಜಾನಪದ ವಿಶ್ವವಿದ್ಯಾಲಯದ ಕೃತಜ್ಞತೆಗಳು ಸಲ್ಲುತ್ತವೆ.

ಗ್ರಂಥವನ್ನು ಅಚ್ಚುಕಟ್ಟಾಗಿ ಹೊರತುವಲ್ಲಿ ತುಂಬ ಮುತುವರ್ಜಿ ವಹಿಸಿದ ವಿಶ್ವವಿದ್ಯಾಲಯದ ವಿಸ್ತರಣೆ ಹಾಗೂ ಸಲಹಾ ಕೇಂದ್ರದ ನಿರ್ದೇಶಕರೂ, ಮೌಲ್ಯಮಾಪನ ಕುಲಸಚಿವರೂ ಆದ ಪ್ರೊ. ಸ.ಚಿ. ರಮೇಶ ಹಾಗೂ ಸಿಬ್ಬಂದಿ ವರ್ಗಕ್ಕೆ ಅಭಿನಂದನೆಗಳು

ಪ್ರೊ. ಅಂಬಳಿಕೆ ಹಿರಿಯಣ್ಣ

ಕುಲಪತಿ

ನಿರ್ದೇಶಕರ ಮಾತು

ಕರ್ನಾಟಕ ಜಾನಪದ ವಿಶ್ವವಿದ್ಯಾಲಯವು ಸಮಾಜದ ಸಮಸ್ತ ಸಮುದಾಯಗಳ ಜ್ಞಾನ ಸಂಗ್ರಹಣೆ, ಅಧ್ಯಯನ, ಅಧ್ಯಾಪನ, ಸಂಶೋಧನೆಯಂತ ಶೈಕ್ಷಣಿಕ ಕಾರ್ಯಚಟುವಟಿಕೆಗಳನ್ನು ರೂಪಿಸಿಕೊಂಡು ಕಾರ್ಯ ಪ್ರವೃತ್ತವಾಗಿದೆ. ವಿಶ್ವವಿದ್ಯಾಲಯವು ಇನ್ನೊಂದು ಹೆಜ್ಜೆ ಮುಂದೆ ಹೋಗಿ ತನ್ನ ಕಾರ್ಯಕ್ಷೇತ್ರಗಳನ್ನು ವಿಸ್ತರಿಸಿಕೊಳ್ಳುವ ಭಾಗವಾಗಿ 'ವಿಸ್ತರಣೆ ಹಾಗೂ ಸಲಹಾ ಕೇಂದ್ರ' ವನ್ನು ಆರಂಭಿಸಿದೆ. ವಿಶ್ವವಿದ್ಯಾಲಯಗಳು ನಿಜವಾದ ಅರ್ಥದಲ್ಲಿ ಜ್ಞಾನದ ಪುನರುತ್ಪಾದನೆಯಲ್ಲಿ ತೊಡಗಿಕೊಳ್ಳಬೇಕು. ಸ್ಥಾಪಿತ ಸಿದ್ಧ ಜ್ಞಾನದ ಸಂಗ್ರಹದ ಜೊತೆಗೆ ನಿತ್ಯನೂತನವಾದ ಜನಪದ ಸಂಸ್ಕೃತಿಯನ್ನು ಪುನರ್‌ನಿರ್ವಚಿಸುವ, ಹೊಸ ರೀತಿಯಲ್ಲಿ ಸ್ಥಾಪಿತಗೊಳಿಸುವ ಕೈಂಕರ್ಯಕ್ಕೆ ಕೈ ಹಾಕಬೇಕು. ಋತುಮಾನಗಳು ಬದಲಾದಂತೆ ಮನುಷ್ಯ ಬದುಕು ಬದಲಾಗುತ್ತಲೇ ಸಂವೇದನಾಶೀಲಗೊಳ್ಳುತ್ತ ಹೋಗುತ್ತದೆ. ನಮ್ಮ ಜನಪದ ಕಲೆ, ಸಾಹಿತ್ಯ, ಸಂಸ್ಕೃತಿಗಳು ತನ್ನತನದ ಛಾಯೆಯನ್ನು ಕಳೆದುಕೊಳ್ಳುತ್ತ ನಡೆದ ಇವೊತ್ತಿನ ಸಂದಿಗ್ಧತೆಯಲ್ಲಿ ನಾವು ಮಾಡುವ ವಿನೂತನ ಜ್ಞಾನಶೋಧಗಳು, ಪ್ರಯೋಗಗಳು ಕಳೆಗುಂದುತ್ತಿರುವ ಜನಪದ ಸಂಸ್ಕೃತಿಯನ್ನು ಕಳೆಗಟ್ಟುವಂತೆ ಮಾಡದೇ ಹೋದರೆ ನಮ್ಮ ಪ್ರಯತ್ನಗಳು ನಿರರ್ಥಕ. ಆ ಎಚ್ಚರಿಕೆಯನ್ನು ಇಟ್ಟುಕೊಂಡೇ ಜಾನಪದ ವಿಶ್ವವಿದ್ಯಾಲಯವು ವಿಸ್ತರಣೆ ಹಾಗೂ ಸಲಹಾ ಕೇಂದ್ರದ ಮೂಲಕ ಅತ್ಯುಪಯುಕ್ತ ಕಾರ್ಯಯೋಜನೆಗಳನ್ನು ರೂಪಿಸಿದೆ.

ಅಂತರ್‌ಶಿಸ್ತೀಯ ಜ್ಞಾನ ಶಾಖೆಗಳಲ್ಲಿ ಜಾನಪದವೂ ಒಂದು. ನೆಲಮೂಲ ಜೀವನ, ಕಲೆ, ಸಾಹಿತ್ಯ, ಸಂಸ್ಕೃತಿಗೆ ಸಂಬಂಧಿಸಿದ ಹೊಸ ಹೊಸ ಜ್ಞಾನವನ್ನು ಶೋಧಿಸಿ, ಜಗತ್ತಿನ ಮೂಲೆ ಮೂಲೆಗೆ ತಲುಪಿಸುವ ಗುರುತರ ಜವಾಬ್ದಾರಿ ವಿಶ್ವವಿದ್ಯಾಲಯದ ಮೇಲಿದೆ. ಅದನ್ನು ಸಾಧ್ಯವಾಗಿಸುವ ಉದ್ದೇಶ ಇಟ್ಟುಕೊಂಡೇ ಆರಂಭವಾದ ವಿಶ್ವವಿದ್ಯಾಲಯದ ವಿಸ್ತರಣೆ ಹಾಗೂ ಸಲಹಾ ಕೇಂದ್ರವು ಜಾನಪದ ಕ್ಷೇತ್ರದ ಬಾಹುಳ್ಯತೆ, ವಿಶ್ವವ್ಯಾಪಕತೆ, ಅದರ ಮೂಲ-ಚೂಲಗಳನ್ನು ಕಂಡರಿಸುವ ಪ್ರಯತ್ನ ಮಾಡುವ ಮಹದಾಸೆ ಹೊಂದಿದೆ. ಜೊತೆಗೆ ಹೊಸ ಅಧ್ಯಯನಗಳು, ನೂತನ ಮಾದರಿಯ ಸಂಶೋಧನೆಗಳು, ನಾಡಿನ ಶ್ರೇಷ್ಠ ವಿದ್ವಾಂಸರ ಕೃತಿಗಳನ್ನು ಪ್ರಕಟಿಸುವ ಮೂಲಕ ಜ್ಞಾನ ಪ್ರಸಾರದ ಉದ್ದೇಶಕ್ಕೆ ಒತ್ತಾಸೆಯಾಗಿ ನಿಲ್ಲಲಿದೆ. ಕೇಂದ್ರವು ಜ್ಞಾನ ಪ್ರಸರಣಕ್ಕೆ ಟೊಂಕಕಟ್ಟಿ ನಿಂತಿದ್ದು, ಮೌಲಿಕವಾದ ಪುಸ್ತಕಗಳ ಪ್ರಕಟಣೆಗೆ ಮುಂದಾಗಿದೆ. ನಾವು ಪ್ರಕಟಮಾಡುವ ವೈವಿಧ್ಯಪೂರ್ಣವಾದ ಮೌಲಿಕ ಕೃತಿಗಳು ನಾಡಿನ ಓದುಗರಿಗೆ ತಲುಪಿ, ಅವು ಸದುಪಯೋಗವಾದರೆ ಮಾತ್ರ ನಮ್ಮ ಶ್ರಮ ಸಾರ್ಥಕ ಎಂದು ಭಾವಿಸುತ್ತೇನೆ.

ಜ್ಞಾನ ನಿರಂತರವಾಗಿ ಬೆಳೆಯುತ್ತಲೇ ಇರುತ್ತದೆ. ಜಾಗತಿಕ ಪೈಪೋಟಿಯನ್ನು ಎದುರಿಸಲಾರದೇ ಅಳಿದು ಹೋಗುತ್ತಿರುವ ದೇಸೀಜ್ಞಾನ ಪರಂಪರೆಯನ್ನು ಪುನರ್‌ಕಟ್ಟುವ

ಮತ್ತು ಪುನರುಜ್ಜೀವನಗೊಳಿಸುವ ಅಗತ್ಯತೆ ಹಿಂದೆಂದಿಗಿಂತಲೂ ಇಂದು ಹೆಚ್ಚಿದೆ. ಕನ್ನಡದ ನೆಲದಲ್ಲಿ ಶಿಷ್ಟ ಸಾಹಿತ್ಯ ಅಧ್ಯಯನಕ್ಕೆ ಇದ್ದ ಸೌಲಭ್ಯಗಳು ಜನಪದ ಸಾಹಿತ್ಯಕ್ಕೆ ಇರಲಿಲ್ಲ ಎಂಬುದು ಚಾರಿತ್ರಿಕ ಸತ್ಯ. ಅವಜ್ಞೆಗೆ ಒಳಗಾದ ಜಾನಪದ ಅಧ್ಯಯನವು, ಬಹುಶೀಸ್ತೀಯ ನೆಲೆಯಲ್ಲಿ ನಡೆಯಲು ಅದರದೇ ಆದ ಅನೇಕ ತೊಂದರೆಗಳನ್ನು ಎದುರಿಸುವಂತಾಯಿತು. ಜೊತೆಗೆ ವಿದ್ವಾಂಸರ ನಿರ್ಲಕ್ಷ್ಯವೂ ಅದರ ಹಿನ್ನೆಡೆಗೆ ಪರೋಕ್ಷವಾಗಿ ಕಾರಣವಾಯಿತೆನ್ನಬಹುದು. ಶಿಷ್ಟ ಸಾಹಿತ್ಯಕ್ಕೆ ಸಂಬಂಧಿಸಿದಂತೆ ನಡೆಯುತ್ತಿದ್ದ ಅಧ್ಯಯನಗಳು ಆನಂತರದಲ್ಲಿ ಜಾನಪದ ಸಾಹಿತ್ಯಕ್ಕೂ ಸಂಬಂಧಿಸಿದಂತೆ ಆರಂಭಗೊಂಡಿದ್ದು ಗಮನಾರ್ಹ ಸಂಗತಿ. ಜಾನಪದ ಅಧ್ಯಯನದ ಸ್ವರೂಪ ಸ್ಪಷ್ಟವಾದಂತೆಲ್ಲ, ವೈಜ್ಞಾನಿಕ ನೆಲೆಯ ಅಧ್ಯಯನಗಳು ಆರಂಭವಾದವು. ನಾಡಿನಲ್ಲಿ ಜಾನಪದದ ಬೆಳೆ ಹುಲುಸಾಗಿ ಬೆಳೆಯಿತು. ಈ ಹಿನ್ನೆಲೆಯಲ್ಲಿ ಜಾನಪದ ಸಂಬಂಧೀ ಕಾರ್ಯಗಳನ್ನು ಗಮನಿಸಲು ಗ್ರಂಥಸೂಚಿಯಂಥ ಮಾದರಿ ಕೃತಿಗಳು ಪ್ರತ್ಯೇಕವಾಗಿ ಬೆಳಕು ಕಂಡವು. ಅವು ಜಾನಪದ ಅಧ್ಯಯನದ ದಿಕ್ಕು ಮತ್ತು ದಾರಿಗಳನ್ನು ಸ್ಪಷ್ಟವಾಗಿ ತಿಳಿಯಲು ಸಹಾಯಕವಾದವು. ಈ ಪರಂಪರೆಯನ್ನು ಮುಂದುವರೆಸುವ ಕಾರ್ಯಗಳು ಕಾಲದಿಂದ ಕಾಲಕ್ಕೆ ನಡೆಯುತ್ತ ಬಂದಿವೆ. ಇದರ ಭಾಗವಾಗಿ 'ವಿಸ್ತೃತ ಜಾನಪದ ಗ್ರಂಥಸೂಚಿ' ಪ್ರಕಟಗೊಳ್ಳುತ್ತಿದೆ. ಗ್ರಂಥಸೂಚಿಯ ಇತಿಹಾಸದ ಬೆಳಕಿನಲ್ಲಿಯೇ ಹೊಸ ದಾರಿಗಳನ್ನೂ ಇಲ್ಲಿ ಕಂಡುಕೊಳ್ಳಲಾಗಿದೆ. ಕ್ಷೇತ್ರಕಾರ್ಯಾಧಾರಿತ ಈ ಮಹತ್ವದ ಕಾರ್ಯವನ್ನು ಆಗು ಮಾಡಿಕೊಟ್ಟವರು ಜಾನಪದ ಕ್ಷೇತ್ರದ ಹಿರಿಯ ವಿದ್ವಾಂಸರಾದ ಶ್ರೀ ಕ್ಯಾತನಹಳ್ಳಿ ರಾಮಣ್ಣ ಹಾಗೂ ಡಾ. ಟಿ.ಎಸ್. ರಾಜಪ್ಪ ಅವರು. ನಾಡಿನ ಜಾನಪದ ಕ್ಷೇತ್ರದಲ್ಲಾದ ಕಾರ್ಯವನ್ನು ಮನಗಾಣಲು ಪ್ರಕೃತ ಗ್ರಂಥಸೂಚಿ ಸಹಾಯಕವಾಗಲಿದೆ. ಇಂತಹ ಕೃತಿಯನ್ನು ಸಂಪಾದಿಸಿಕೊಟ್ಟಿರುವ ಶ್ರೀ ಕ್ಯಾತನಹಳ್ಳಿ ರಾಮಣ್ಣ ಮತ್ತು ಡಾ. ಟಿ.ಎಸ್. ರಾಜಪ್ಪ ಅವರಿಗೆ ಅಭಿನಂದನೆಗಳು ಸಲ್ಲುತ್ತವೆ. ಅಲ್ಲದೆ ಈ ಕಾರ್ಯದಲ್ಲಿ ಸಹಕರಿಸಿದ ಡಾ. ವೃಷಭಕುಮಾರ್ ಹಾಗೂ ಕುಮಾರಿ ಎಂ.ಬಿ. ಶ್ವೇತಾ ಅವರಿಗೆ ಕೃತಜ್ಞತೆಗಳು.

ಈ ಗ್ರಂಥಸೂಚಿಯು ಪ್ರಕಟಗೊಳ್ಳಲು ಸರ್ವ ರೀತಿಯಲ್ಲೂ ಸಹಕಾರ ನೀಡಿದ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಯವರಾದ ಪ್ರೊ. ಅಂಬಳಿಕೆ ಹಿರಿಯಣ್ಣ ಅವರಿಗೆ, ಕುಲಸಚಿವರಾದ ಪ್ರೊ. ಡಿ.ಬಿ. ನಾಯಕ, ನಿರ್ದೇಶಕ ಹಾಗೂ ಪ್ರಾಧ್ಯಾಪಕ ಡಾ. ಕೆ. ಪ್ರೇಮಕುಮಾರ, ಅನ್ವಯಿಕ ಜಾನಪದ ನಿಕಾಯದ ಡೀನ್ ಪ್ರೊ. ಎಂ. ಚಂದ್ರ ಪೂಜಾರಿ, ತಾಂತ್ರಿಕ ಪುಟಗಳ ಸಿದ್ಧತೆ ಹಾಗೂ ಮುದ್ರಣಪೂರ್ವ ಕೆಲಸದಲ್ಲಿ ಸಹಕರಿಸಿದ ಸಂಗಮೇಶ ಎಸ್. ಗಣಿ, ಅಕ್ಷರ ಸಂಯೋಜನೆ ಮಾಡಿಕೊಟ್ಟ ವಿಶ್ವ ಗುಜ್ಜರ್, ಸಂದೀಪ್. ಬಿ.ಆರ್., ಅಂದವಾದ ಮುಖಪುಟ ವಿನ್ಯಾಸ ಮಾಡಿಕೊಟ್ಟ ಶ್ರೀ ಕೆ.ಕೆ. ಮಕಾಳಿ, ಕಚೇರಿ ಸಹಾಯಕ ಕೆ.ಎಲ್. ಲಕ್ಷ್ಮಣ ಹಾಗೂ ಗ್ರಂಥವು ಪ್ರಕಟಗೊಳ್ಳುವಲ್ಲಿ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಶ್ರಮಿಸಿದ ಎಲ್ಲರಿಗೂ ಕೃತಜ್ಞತೆಗಳು.

ಪ್ರೊ. ಸ.ಚಿ. ರಮೇಶ
ನಿರ್ದೇಶಕ
ವಿಸ್ತರಣೆ ಹಾಗೂ ಸಲಹಾ ಕೇಂದ್ರ

ಪರಿವಿಡಿ

ಪ್ರಸ್ತಾವನೆ

ಬದುಕು ಎಂಬುದು ಒಂದು ಸಂಕೀರ್ಣ ಚಿತ್ರ, ಹುಟ್ಟಿನಿಂದ ಸಾವಿನವರೆಗೆ, ಸಾವಿನಿಂದ ಹುಟ್ಟಿನವರೆಗೆ, ಅರ್ಥಗರ್ಭಿತ ಹಾದಿಯಲ್ಲಿ ಸಾಗುವ ಬದುಕು ತನ್ನ ಅಂತರಂಗದಲ್ಲಿ ಏನೇನನ್ನು ಹುದುಗಿಸಿಕೊಂಡಿರುತ್ತದೆ ಎಂಬುದು ನಿಗೂಢ. ಸಕ್ರಮವಾಗಿ ಅಭ್ಯಾಸ ಮಾಡದೆ ಹೋದರೆ ಎಲ್ಲವೂ ಗೊಂದಲಮಯ ಎನ್ನಿಸುವುದುಂಟು. ಸಕ್ರಮವಾಗಿ ಅಭ್ಯಾಸ ಮಾಡುತ್ತ ಹೋದಹಾಗೆಲ್ಲ ಅದೊಂದು ಸಂಕೀರ್ಣ ರೂಪದ ವಿಸ್ಮಯ ಎಂಬ ಅಂಶವು ಗೋಚರಿಸುವುದೂ ಉಂಟು.

ಏನೊಂದನ್ನೂ ಅರಿಯದ, ಪ್ರಾಣಿಗೂ ಮಾನವನಿಗೂ ಏನೂ ವ್ಯತ್ಯಾಸವೇ ಇಲ್ಲದ, ರೀತಿಯಲ್ಲಿ, ಪ್ರಾಣಿಯಂತೆಯೇ ಒಂದು ಕಾಲದಲ್ಲಿ ಬದುಕುತ್ತಿದ್ದ ಮಾನವನು, ಬೀಜವು ಸಸಿಯಾಗುವುದನ್ನು, ಸಸಿಯು ಬೆಳೆಬೆಳೆದು ಫಲಭರಿತವಾಗಬಲ್ಲುದೆಂಬುದನ್ನು, ಅರಿತು, ಇತರ ಪ್ರಾಣಿಗಳಿಗಿಂತ ಭಿನ್ನ ಮಾರ್ಗದಲ್ಲಿ ನಡೆಯತೊಡಗಿದಾಗ, ತನ್ನದೇ ಒಂದು ಪ್ರಪಂಚವನ್ನು ಕಂಡುಕೊಂಡ.

ಹಣ್ಣನ್ನು ತಿಂದು ಎಲ್ಲೋ ಎಂದೋ ಎಸೆದ ಬೀಜವು ಸಸಿಯಾದುದನ್ನು ಕಂಡುಕೊಂಡ ಘಳಿಗೆಯಲ್ಲಿ ಸಂಸ್ಕೃತಿಯ ಉಗಮವಾಯಿತು. ಸಂಸ್ಕೃತಿಯು ನಾಗರಿಕತೆಗೆ ನಾಂದಿಯಾಯಿತು. Will Durant ಅವರು ತಮ್ಮ The story of Civilization ಎಂಬ ಗ್ರಂಥದಲ್ಲಿ The First form of culture is agriculture ಎಂಬುದಾಗಿ ಕರಾರುವಾಕ್ಕಾಗಿ ಊಹಿಸಿದ್ದಾರೆ.*

ಕೈಸನ್ನೆ ಕಣ್ಸನ್ನೆ ಹಾಗೂ ಇತರ ಸನ್ನೆಗಳ ರೂಪದಲ್ಲಿ, ಪ್ರಾಣಿಗಳಂತೆ ವಿವಿಧ ಹಂತಗಳ ಅರಚುವಿಕೆಗಳ ರೂಪದಲ್ಲಿ ಇದ್ದ ತನ್ನ ಭಾಷೆಯ ಬಳಕೆಗೆ ನಾಲಗೆಯನ್ನೂ ಹಲ್ಲುಗಳನ್ನೂ ಬಳಸತೊಡಗಿದಾಗ, ಅಸ್ಪಷ್ಟ ರೂಪದ ಭಾಷೆಯೊಂದರ ಹುಟ್ಟು ಸಾಧ್ಯವಾಯಿತು.

ಮಾತನ್ನು ಕಲಿತ ಮಾನವನು, ಬೇಸರ ಶಮನಕ್ಕಾಗಿ ಅಥವಾ ಶ್ರಮಶಮನಕ್ಕಾಗಿ, ಅಥವಾ ಮನೋರಂಜನೆಗಾಗಿ, ಅಥವಾ ಕಾವಲು ಕಾಯುವುದೇ ಮುಂತಾದ ಕಾಯಕದಲ್ಲಿರುವಾಗ ಕಾಲಯಾಪನೆಗಾಗಿ, ಇಚ್ಛೆ ಬಂದ ಸ್ವರಗಳನ್ನು ಎಳೆಯತೊಡಗಿದಾಗ

* ಹೀಗೆ ಬೇಸಾಯದೊಂದಿಗೇ ಉಗಮವಾದ ಸಂಸ್ಕೃತಿಯು ಅನೇಕ ಮುಖಗಳನ್ನು ಗಳಿಸಿಕೊಳ್ಳುತ್ತ ಬೆಳೆಯತೊಡಗಿತು. ಸನ್ಯಾಸಿಯೊಬ್ಬ ಸಂಸಾರಿಯಾದ ಕಥೆಯನ್ನು ಹೋಲುತ್ತದೆ ನಮ್ಮ ಸಂಸ್ಕೃತಿಯ ಬೆಳವಣಿಗೆ. ಸಂಸ್ಕೃತಿ ಲೋಕದಲ್ಲಿ ಯಾವುದೂ ಪ್ರತ್ಯೇಕವಲ್ಲ. ಎಲ್ಲವೂ ಒಂದಕ್ಕೊಂದು ಪೂರಕ. ಯಾವೊಂದು ಕ್ಷುಲಕ ಅಂಶವನ್ನೂ ಸಂಸ್ಕೃತಿಯ ಹೊರಗೆ ಇಡಲು ಸಾಧ್ಯವಿಲ್ಲ.

ತನಗರಿವಿಲ್ಲದೆಯೇ ಹಾಡಿನ ಧಾಟಿಯೊಂದರ ಉದ್ಭವಕ್ಕೆ ಕಾರಣನಾದ. ಬರೀ ದನಿಯೆಳೆತ ತಲೆಚಿಟ್ಟು ಹಿಡಿಸತೊಡಗಿದಾಗ ನಡುವೆ ಭಾಷೆಯನ್ನು ಬೆರೆಯಿಸಿ ಆನಂದಿಸತೊಡಗಿದ.

"ಕರ್ನಾಟಕ ಸಂಸ್ಕೃತಿ ಸಮೀಕ್ಷೆ" ಎಂಬ ತಮ್ಮ ಗ್ರಂಥದಲ್ಲಿ ಜನಪದ ಸಂಸ್ಕೃತಿಯನ್ನು ಕುರಿತು ಹೇಳುವಾಗ ಡಾ. ಎಚ್. ತಿಪ್ಪೇರುದ್ರಸ್ವಾಮಿ ಅವರು ಹೇಳಿರುವ ಒಂದು ಮಾತು ಮೇಲಿನ ನನ್ನ ಮಾತುಗಳಿಗೆ ಆಧಾರಸ್ತಂಭದಂತಿದೆ: "ಆದಿಮಾನವ ತನ್ನ ಭಾವನೆಗಳನ್ನು ಹೇಳಲು ಮೊಟ್ಟಮೊದಲು ಬಳಸಿಕೊಂಡ ನಾದರೂಪದ ಗೀತೆಗಳೇ ಜನಪದ ಸಾಹಿತ್ಯದ ಮೂಲರೂಪ ಎನ್ನಬಹುದು....... ಲಯಬದ್ಧವಾದ ಕ್ರಿಯೆಗೆ ಅನುಗುಣವಾಗಿ ನಾದವಿನ್ಯಾಸ ಮೊದಲು ರೂಪುಗೊಳ್ಳುತ್ತದೆ. ಆ ನಾದವಿನ್ಯಾಸವು ಒಳಗೊಂಡ ಭಾವವನ್ನು ಸ್ಪಷ್ಟಪಡಿಸುವುದಕ್ಕಾಗಿ ಅನಂತರ ಲಯಬದ್ಧವಾದ ಮಾತುಗಳು ಸೇರುತ್ತವೆ".

Violet Alford ಎಂಬುವರ Introduction to English Folklore ಎಂಬ ಗ್ರಂಥವನ್ನು ಪರಿಶೀಲಿಸುವಾಗ ಡಾ. ಎಚ್. ತಿಪ್ಪೇರುದ್ರಸ್ವಾಮಿ ಅವರು ಈ ಅಭಿಪ್ರಾಯಕ್ಕೆ ಬರುತ್ತಾರೆ: "೧೭೨೫ರಲ್ಲಿ ಹೆನ್ರಿ ಬೊರ್ನ್ (Henry Borne) ಎಂಬುವರು ಬರೆದ Antiquities of the Common People ಎಂಬ ಗ್ರಂಥವೇ ಈ ರಂಗದಲ್ಲಿ ಮೊಟ್ಟಮೊದಲನೆಯ ಕೃತಿಯೆನ್ನಬಹುದು". ಅಂದರೆ, ಸಾಮಾನ್ಯ ಜನಸಮೂಹದಿಂದ ಉದ್ಭವವಾದುದನ್ನು ಜಾನಪದವೆಂದು ಗುರುತಿಸುತ್ತ ಬಂದಿದ್ದೇವೆ. ಅದರಲ್ಲೂ ಹಳ್ಳಿಯ ಬದುಕು, ಹಾಗೂ ಆ ಬದುಕಿಗೆ ಆಧಾರಸ್ಥಂಭವಾಗಿ ನಿಂತ ನಮ್ಮ ಶ್ರಮಸಂಸ್ಕೃತಿ, ಜನಪದ ಸಾಹಿತ್ಯಕ್ಕೆ ಮೂಲಪ್ರೇರಣೆಯಾಗಿವೆ. ರಾಗಬದ್ಧವಾದ ಸಾಹಿತ್ಯವೇ ಜನಪದ ಸಾಹಿತ್ಯದ ಮೊದಲ ರೂಪ. ಅಂದರೆ, ಜನಪದ ಗೀತೆ ಎಂದು ನಾಮಕರಣಗೊಂಡ ಇಪ್ಪತ್ತನೆಯ ಶತಮಾನದ ರೂಪವೇ ನಮ್ಮ ಮೂಲ ಜನಪದ ಸಾಹಿತ್ಯ.

ನಮಗೆ ಲಭ್ಯವಾದ ಜನಪದ ಸಾಹಿತ್ಯದ ಮೊಟ್ಟಮೊದಲ ರೂಪವೇ ತ್ರಿಪದಿ. ಏಳನೆಯ ಶತಮಾನದ ಬಾದಾಮಿ ಶಾಸನದಲ್ಲಿ ಉಕ್ತವಾಗಿರುವ ತ್ರಿಪದಿಯನ್ನು ಅಕ್ಷರ ರೂಪದಲ್ಲಿರುವ ಮೊದಲ ತ್ರಿಪದಿ ಎಂದು ಭಾವಿಸಲಡ್ಡಿಯಿಲ್ಲ:

ಸಾಧುಗೆ ಸಾಧು ಮಾಧುರ್ಯಂಗೆ ಮಾಧುರ್ಯನ್
ಬಾಧಿಪ್ಪ ಕಲಿಗೆ ಕಲಿಯುಗವಿಪರೀತನ್
ಮಾಧವನೀತನ್ ಪೆಱನಲ್ಲ

ಬಹುಶಃ ಈ ಕಾರಣದಿಂದಲೋ ಏನೋ "ಗರತಿಯ ಹಾಡು" ಸಂಕಲನದ ಮುನ್ನುಡಿಯಲ್ಲಿ ಡಾ. ದ.ರಾ. ಬೇಂದ್ರೆ ಅವರು "ತ್ರಿಪದಿಯೇ ಕನ್ನಡದ ವೃತ್ತಗಳ ಗಾಯತ್ರಿ" ಎಂದದ್ದು.

ಹತ್ತನೆಯ ಶತಮಾನದಲ್ಲಿ ಈ ಸಾಹಿತ್ಯವನ್ನು ಮೆಚ್ಚಿಕೊಂಡವನು ದೊರೆ ನೃಪತುಂಗ. "ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳ್" ಎಂಬ ಅವನ ಪ್ರಶಂಸೆಯನ್ನು

ಲಕ್ಷಿಸಿದಾಗ ಆ ಕಾಲಕ್ಕಾಗಲೇ ಜನಪದ ಕಾವ್ಯವು ಜನಜೀವನದ ಮೇಲೆ ತನ್ನ ಪ್ರಭಾವವನ್ನು ಬೀರತೊಡಗಿತ್ತು ಎಂಬ ಅಂಶವು ಸ್ಪಷ್ಟವಾಗುತ್ತದೆ.

ಹೀಗೆ ಅದು ಅಗಾಧವಾಗಿ ಬೆಳೆಯುತ್ತ ಬೆಳೆಯುತ್ತ ಎಲ್ಲರ ಗಮನವನ್ನು ಸೆಳೆಯ ತೊಡಗಿದಾಗ, ಸಹಜವಾಗಿ ಶಿಷ್ಟ ಕವಿಗಳೂ ಅದರತ್ತ ಗಮನ ಹರಿಸುವುದು ಅನಿವಾರ್ಯವಾಗಿರಬಹುದು. ಕೆಲವು ಕವಿಗಳು ಅದನ್ನು ಮುಕ್ತ ಮನಸ್ಸಿನಿಂದ ಸ್ವೀಕರಿಸಿ ಅದರ ಅಂತಃಸತ್ತ್ವವನ್ನು ತಮ್ಮ ಕಾವ್ಯಗಳಲ್ಲಿ ಬಳಸತೊಡಗಿದರೆ, ಇನ್ನು ಕೆಲವರು ಅದನ್ನು ಅಷ್ಟೇ ಅಸಡ್ಡೆಯಿಂದ ಕಂಡಿರುವ ಉದಾಹರಣೆಗಳಿವೆ.

ಆ ಅಪ್ಪಟ ಕಾವ್ಯದ ಪ್ರಭಾವೀ ಗುಣವನ್ನು ಕಂಡು ಕರುಬಿದ ಹಲವು ಶಿಷ್ಟ ಕವಿಗಳು ಇತಿಹಾಸದುದ್ದಕ್ಕೂ ಇದ್ದಿರಬಹುದು; ಅಲಕ್ಷಿಸಿದವರೂ ಇದ್ದಿರಬಹುದು. ಆದರೆ ತನ್ನ ಅಸಹನೆಯನ್ನು ಬಹಿರಂಗವಾಗಿ ಪ್ರಕಟಿಸಿದ ಕವಿಯೆಂದರೆ ಹದಿನಾಲ್ಕನೆಯ ಶತಮಾನದ ಉತ್ತರಾರ್ಧದಲ್ಲಿದ್ದ ಮಧುರ ಒಬ್ಬನೆ:

ಪಂಡಿತರುಂ ವಿವಿಧ ಕಳಾ।
ಮಂಡಿತರುಂ ಕೇಳತಕ್ಕ ಕೃತಿಯಂ ಕ್ಷಿತಿಯೊಳ್।
ಕಂಡರ್ ಕೇಳ್ವೊಡೆ ಗೊರವರ
ಡುಂಡುಚಿಯೆ ಬೀದಿವರೆಯೆ ಬೀರನ ಕತೆಯೇ॥

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ವಸ್ತುಕ ಮತ್ತು ವರ್ಣಕ ಎಂಬ ಎರಡು ಪ್ರಭೇದಗಳು ಕಂಡುಬರುತ್ತವೆ. ವರ್ಣಕ ಎಂಬುದು ಜನಪದ ಸಾಹಿತ್ಯವನ್ನು ಕುರಿತ ಶಬ್ದವೇ ಆಗಿದೆ. ಆದ್ದರಿಂದಲೇ ಶಿಷ್ಟಕವಿಗಳು "ವರ್ಣಕಕಿಲ್ಲ ಲಕ್ಷಣಂ" ಎಂಬ ಹೀಯಾಳಿಕೆಯ ಮಾತುಗಳನ್ನಾಡಿದ್ದಾರೆ.

ಸಾಹಿತ್ಯಲೋಕದ ಪಂಡಿತರಿಂದ ಹೀಗೆ ನಿರಾಕರಿಸಲ್ಪಟ್ಟರೂ ಜನಪದ ಸಾಹಿತ್ಯವು ತನ್ನ ಸೊಗಸಿನಿಂದ, ತನ್ನ ಗಟ್ಟಿತನದಿಂದ, ಬಾಯಿಯಿಂದ ಬಾಯಿಗೆ ಹರಿಯುತ್ತ, ವಿದ್ವತ್ ಕೃತಿಗಳನ್ನೂ ಮೀರಿಸುವಂತೆ ಪ್ರಚ್ಛನ್ನ ಶಕ್ತಿಯಾಗಿ ಬೆಳೆಯುತ್ತಲೇ ಬಂದಿತು. ಹಾಡುವ ತಲೆಗಳು ಉರುಳಿದರೂ ತನ್ನಷ್ಟಕ್ಕೆ ತಾನು, ತಾನೇ ತಾನಾಗಿ ಸಾರ್ವಭೌಮತ್ವವನ್ನು ಉಳಿಸಿಕೊಂಡದ್ದು ನಮ್ಮ ಜನಪದ ಸಾಹಿತ್ಯದ ದೈತ್ಯಶಕ್ತಿ ಎಂಥದೆಂಬುದನ್ನು ಸಾಬೀತುಪಡಿಸಿಬಿಟ್ಟಿತು. ಹತ್ತಾರು ನೂರು ವರ್ಷಗಳ ಕಾಲ ಜನಪದ ಸಾಹಿತ್ಯವು ವಿದ್ವಜ್ಜನರಿಂದ ಅಂಗೀಕಾರ ಮುದ್ರೆಯನ್ನು ಪಡೆಯದಿದ್ದರೂ ಗ್ರಂಥಸ್ಥವಾಗದೆ ಉಳಿದುಹೋದುದರಿಂದ, ಕಾಲದಿಂದ ಕಾಲಕ್ಕೆ ಉಂಟಾಗಿರಬಹುದಾದ ರೂಪಾಂತರಗಳನ್ನು ಗುರುತಿಸುವುದು ಸಾಧ್ಯವಾಗಿಲ್ಲ. ಹತ್ತೊಂಬತ್ತನೆಯ ಶತಮಾನದಲ್ಲಿ ಸಂಗ್ರಹ ಹಾಗೂ ಬಿಡಿ ಪ್ರಕಟಣೆಗಳು ಪ್ರಾರಂಭವಾದರೂ ಗ್ರಂಥಸ್ಥ ರೂಪದಲ್ಲಿ ನಮಗೆ ಕಾಣಸಿಗುವುದು ಇಪ್ಪತ್ತನೆಯ ಶತಮಾನದಲ್ಲೆ.

* * *

ಕನ್ನಡದಲ್ಲಿ ಜಾನಪದವನ್ನು ಕುರಿತ ಎಷ್ಟು ಗ್ರಂಥಗಳು ಪ್ರಕಟವಾಗಿವೆ? – ಈ ಕುತೂಹಲ ಮೊದಲು ಮೂಡಿದ್ದು ಡಾ.ಹಾ.ಮಾ. ನಾಯಕ ಅವರಲ್ಲಿ; ೧೯೭೨–೭೩ ರಲ್ಲಿ. ಕೂಡಲೇ ಅವರು ಗ್ರಂಥಗಳ ಮಾಹಿತಿಗಳನ್ನು ಸಂಗ್ರಹಿಸಲು ತೊಡಗಿದರು. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿ ಬಿಡುವಿಲ್ಲದವರಾಗಿ ಕನ್ನಡದ ಕೆಲಸಗಳಲ್ಲಿ ತನ್ಮಯರಾಗಿದ್ದರೂ ಡಾ. ಹಾ.ಮಾ. ನಾಯಕ ಅವರು ಬಿಡುವಿನ ಕ್ಷಣಗಳನ್ನೆಲ್ಲ ಜಾನಪದ ಗ್ರಂಥಗಳ ಮಾಹಿತಿಗಳನ್ನು ಕಲೆಹಾಕಲು ಬಳಸತೊಡಗಿದರು. ಅವರ ಆ ಆಸಕ್ತಿಯ ಫಲವಾಗಿ ಅದುವರೆಗೆ ಪ್ರಕಟವಾಗಿದ್ದ ೫೩೨ ಗ್ರಂಥಗಳ ಮಾಹಿತಿಗಳನ್ನೊಳಗೊಂಡ "ಕನ್ನಡ ಜಾನಪದ ಗ್ರಂಥಸೂಚಿ"ಯು ೧೯೭೪ ರಲ್ಲಿ ಪ್ರಕಟವಾಯಿತು.

ಅದಾದ ಮೇಲೆ ೧೯೭೫ ರಿಂದ ೨೦೦೦ ವರೆಗಿನ ಗ್ರಂಥಗಳ ಮಾಹಿತಿಗಳನ್ನು ಸಂಗ್ರಹಿಸಿ ಡಾ.ಸಿ.ಟಿ.ಗುರುಪ್ರಸಾದ್ ಅವರು ಅದೇ ಶೀರ್ಷಿಕೆಯಲ್ಲಿ ೧೦೧೪ ಗ್ರಂಥಗಳ ಮಾಹಿತಿಗಳನ್ನು ೨೦೦೦ ಇಸವಿಯಲ್ಲಿ ಪ್ರಕಟಿಸಿದರು. ಅನಂತರ ಪ್ರಕಟವಾದ ಡಾ.ಎಚ್.ಎಂ. ಮಹೇಶ್ವರಯ್ಯ ಅವರ "ಸಂಕ್ಷಿಪ್ತ ವಿವರಣಾತ್ಮಕ ಕನ್ನಡ ಜಾನಪದ ಗ್ರಂಥಸೂಚಿ"ಯು ೨೦೦೪ ರಲ್ಲಿ ಪ್ರಕಟವಾಗಿ ೧೯೬೮ ಗ್ರಂಥಗಳ ಮಾಹಿತಿಗಳನ್ನು ಒಳಗೊಂಡಿತ್ತು. ಈ ಎರಡೂ ಸಂಕಲನಗಳಿಗಿಂತ ಮುಂಚೆ, ಡಾ.ಹಾ.ಮಾ.ನಾಯಕ ಅವರ ಗ್ರಂಥಸೂಚಿ ಪ್ರಕಟವಾದ ಮೇಲೆ, ೧೯೯೮ ರಲ್ಲಿ, ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗವು ಪ್ರಕಟಿಸಲು ತೊಡಗಿದ್ದ "ಕನ್ನಡ ಗ್ರಂಥಸೂಚಿ"ಯ ಎಂಟನೆಯ ಸಂಪುಟವು ಪ್ರಕಟವಾಯಿತು. ಆ ಸಂಪುಟದ ಒಂದು ಭಾಗವು ಜಾನಪದ ಗ್ರಂಥಗಳನ್ನು ಒಳಗೊಂಡಿತ್ತು. ಅದುವರೆಗೆ, ಹಾಗೂ ಆಮೇಲೂ, ಯಾರಿಗೂ ಲಭ್ಯವಾಗದಿದ್ದ ಹಲವು ಗ್ರಂಥಗಳ ವಿವರಗಳನ್ನು ಆ ಸಂಪುಟದ ಭಾಗವು ಒಳಗೊಂಡಿತ್ತು.

ನಮ್ಮ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ನಮಗೆ ದೊರಕದೆ ಹೋದ ಎಷ್ಟೋ ಗ್ರಂಥಗಳು ಮೇಲಿನ ನಾಲ್ಕೂ ಗ್ರಂಥಗಳಲ್ಲಿ ನಮಗೆ ಕಂಡುಬಂದುವು. ಸಮಗ್ರತೆಯ ದೃಷ್ಟಿಯಿಂದ ಆ ನಾಲ್ಕೂ ಗ್ರಂಥಸೂಚಿಗಳಲ್ಲಿರುವ ಅಂಥ ನಮೂದುಗಳನ್ನು ಪಡೆದಿರುವುದಲ್ಲದೆ ಇತರ ಮೂಲಗಳಿಂದಲೂ ಪಡೆದು ಅವೆಲ್ಲವನ್ನು ಅವರವರ ಹೆಸರಿನಲ್ಲೆ ಅನುಬಂಧದಲ್ಲಿ ನೀಡಿದ್ದೇವೆ. ಇತರ ಮೂಲಗಳೆಂದರೆ, ಡಾ. ಹಿ.ಚಿ. ಬೋರಲಿಂಗಯ್ಯ ಅವರ ಅಭಿನಂದನ ಗ್ರಂಥ "ಆದಿವಾಸಿ ಆಖ್ಯಾನ"ದಲ್ಲಿರುವ ಶ್ರೀ ಕೊಂತಮ್ ಸತೀಶ್ ಅವರ ಬುಡಕಟ್ಟುಗಳನ್ನು ಕುರಿತ ಗ್ರಂಥಗಳ ಪಟ್ಟಿ, ಹಾಗೂ "ಹೊನ್ನ ಬಿತ್ತೇವು ಹೊಲಕೆಲ್ಲ" ಎಂಬ ಸಂಸ್ಮರಣ ಗ್ರಂಥದಲ್ಲಿ ಪ್ರೊ. ಡಿ. ಲಿಂಗಯ್ಯ ಅವರು ನೀಡಿರುವ ಗ್ರಂಥಗಳ ಪಟ್ಟಿ. ಇದಕ್ಕಾಗಿ ಪೂರ್ವ ಸಂಪಾದಕರಿಗೆಲ್ಲ ಈ ಸೂಚಿಯು ಋಣಿಯಾಗಿದೆ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಇಷ್ಟಾಗಿಯೂ, ಇನ್ನೂ ಹಲವು ಗ್ರಂಥಗಳು ಸಿಗದೆ ಹೋಗಿರುವ ಸಂಗತಿಯು ಈ ಸೂಚಿಯನ್ನು ಒಳಹೊಕ್ಕಾಗ ತಮ್ಮ ಗಮನಕ್ಕೆ ಬಂದೀತು.

* * *

ಎರಡು ಹಂತಗಳಲ್ಲಿ ಗ್ರಂಥಗಳ ವಿವರಗಳನ್ನು ನೀಡುವ ಕ್ರಮವು ಡಾ. ಹಾ.ಮಾ.ನಾಯಕ ಅವರು ಹಾಕಿಕೊಟ್ಟ ಮೇಲ್ಪಂಕ್ತಿ. ಡಾ.ಸಿ.ಟಿ.ಗುರುಪ್ರಸಾದ್ ಕೂಡ ಅದೇ ಹಾದಿಯಲ್ಲಿ ನಡೆದಿದ್ದಾರೆ. ಆಮೇಲೆ ಬಂದ ಡಾ.ಎಚ್.ಎಂ.ಮಹೇಶ್ವರಯ್ಯ ಅವರು ಎರಡು ಭಾಗಗಳಲ್ಲೂ ತಮ್ಮದೇ ಹಾದಿಯನ್ನು ಕಂಡುಕೊಂಡಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಸೂಚಿಯ ನಮೂದುಗಳು ತಮ್ಮದೇ ಹಾದಿಯಲ್ಲಿವೆ.

ಆದರೆ, ನಾಯಕರ ಮೊದಲ ಅರ್ಧ ಭಾಗವು ಅತ್ಯುತ್ತಮ ರೀತಿಯಲ್ಲಿದೆ ಎಂಬ ಕಾರಣಕ್ಕಾಗಿ ನಾವು ಮಾತ್ರ ಅವರ ಮೊದಲ ಅರ್ಧ ಭಾಗದ ಕ್ರಮವನ್ನು ಯಥಾವತ್ತಾಗಿ ಸ್ವೀಕರಿಸಿದ್ದೇವೆ; ಮತ್ತು ಉತ್ತರಾರ್ಧದ ಭಾಗವನ್ನು ಸ್ವತಂತ್ರವಾಗಿ ನಿರ್ವಹಿಸಿದ್ದೇವೆ.

"ನಾನು ಸೂಚಿಶಾಸ್ತ್ರಜ್ಞನಲ್ಲ. ಆದುದರಿಂದ ಈ ಗ್ರಂಥಸೂಚಿಯಲ್ಲಿ ಆ ಶಾಸ್ತ್ರ ಸಂಬಂಧವಾದ ದೋಷಗಳಿರಬಹುದು. ಬಲ್ಲವರು ಮನ್ನಿಸಬೇಕು"– ಇದು ತಮ್ಮ ಗ್ರಂಥಸೂಚಿಯ ಮುನ್ನುಡಿಯಲ್ಲಿ ಡಾ.ಹಾ.ಮಾ.ನಾಯಕ ಅವರು ಆಡಿರುವ ವಿನಯದ ಮಾತು. ನಮ್ಮ ಸದ್ಯದ ಭಾವನೆಯೂ ಅದೇ ಆಗಿದೆ. ಸೂಚಿಶಾಸ್ತ್ರ ಅಥವಾ ಸೂಚಿವಿಜ್ಞಾನ ಎಂಬುದೊಂದು ಇದೆಯೋ ಇಲ್ಲವೋ ನಮಗೆ ತಿಳಿಯದು. ನಾಯಕರ ಆ ಮಾತಿನಿಂದ ಅಂಥ ಶಾಸ್ತ್ರವೊಂದು ಇದೆ ಎಂಬ ಸಂಗತಿಯು ಖಚಿತವಾಗುತ್ತದೆ. ನಮಗೆ ಗೊತ್ತಿದ್ದದ್ದು ಡಾ.ಹಾ.ಮಾ.ನಾಯಕ, ಡಾ.ಸಿ.ಟಿ. ಗುರುಪ್ರಸಾದ್, ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗವು ಪ್ರಕಟಿಸಿರುವ ಕನ್ನಡ ಗ್ರಂಥಸೂಚಿಯ ಸಂಪುಟಗಳು, ಹಾಗೂ ಡಾ.ಎಚ್.ಎಂ.ಮಹೇಶ್ವರಯ್ಯ ಅವರ ಸೂಚಿಗಳು ಮಾತ್ರ. ಆ ನಾಲ್ಕರಿಂದಲೂ ನಾವು ಎರಡು ಬಗೆಯಲ್ಲಿ ಮಾರ್ಗದರ್ಶನವನ್ನು ಪಡೆದಿದ್ದೇವೆ. ಒಂದು, ಹೇಗೆ ಮಾಡಬಹುದು ಎಂಬುದು; ಇನ್ನೊಂದು, ಹೇಗೆ ಮಾಡಬಾರದು ಎಂಬುದು. ಈ ಎರಡೂ ಮಾರ್ಗಗಳಿಗಿಂತ ಭಿನ್ನವಾದ ಮಾರ್ಗವೊಂದಕ್ಕೆ ಮೇಲಿನ ಎಲ್ಲ ಗ್ರಂಥಸೂಚಿಗಳು ನಮ್ಮನ್ನು ಪ್ರಚೋದಿಸಿವೆ. ಈ ಕಾರಣಕ್ಕಾಗಿ, ಹಾಗೂ ಅವೆಲ್ಲ ಹಿರೀಕರ ಸ್ಥಾನದಲ್ಲಿರುವ ಕಾರಣಕ್ಕಾಗಿ, ನಾವು ಅವಕ್ಕೆ ವಿನೀತರಾಗಿದ್ದೇವೆ.

ಇಲ್ಲೇ ಇನ್ನೂ ಒಂದು ಮಾತನ್ನು ಹೇಳಿಕೊಳ್ಳಬಹುದೆನಿಸುತ್ತಿದೆ. ಡಾ.ಹಾ.ಮಾ.ನಾಯಕ ಅವರ "ಕನ್ನಡ ಜಾನಪದ ಗ್ರಂಥಸೂಚಿ"ಯ ಬಗ್ಗೆ ಬರೆದಿರುವ ಲೇಖನದಲ್ಲಿ ಡಾ.ಸಿ.ಪಿ.ಕೃಷ್ಣಕುಮಾರ್ ಅವರು "ಇದು ನಿಲುಗಡೆಯಿಲ್ಲದ ಕೆಲಸ" ಎಂದಿದ್ದಾರೆ. ಸತತವಾಗಿ ಪ್ರಕಟವಾಗುತ್ತಿರುವ ಜಾನಪದ ಗ್ರಂಥಗಳ ವಾತಾವರಣದಲ್ಲಿ ಡಾ.ಸಿ.ಪಿ.ಕೆ. ಅವರ ಮಾತು ಅತ್ಯಂತ ಸಹಜ ಹಾಗೂ ಸಾರ್ವಕಾಲಿಕ ಸತ್ಯ.

"ಹೆಸರಿಲ್ಲದ, ಲೇಖಕರ ಹೆಸರಿಲ್ಲದ, ಪ್ರಕಟಣೆಯ ಊರು ವರ್ಷಗಳಿಲ್ಲದ ಕೆಲವು ಪುಸ್ತಕಗಳು ನನ್ನ ಗಮನಕ್ಕೆ ಬಂದಿದ್ದರೂ ಅವನ್ನು ಇಲ್ಲಿ ಸೇರಿಸಿಲ್ಲ" ಎಂಬುದಾಗಿ ಡಾ.ಹಾ.ಮಾ.ನಾಯಕ ಅವರು ತಮ್ಮ ಗ್ರಂಥಸೂಚಿಯ ಮುನ್ನುಡಿಯಲ್ಲಿ ಹೇಳಿದ್ದಾರೆ. ಈ ಮಾತಿಗೆ ಪ್ರತಿಕ್ರಿಯೆಯೋ ಎಂಬಂತೆ ಡಾ.ಸಿ.ಪಿ.ಕೆ. ಅವರು "ಲೇಖಕರ ಹೆಸರು

ಇತ್ಯಾದಿಗಳಿಲ್ಲದ ಪುಸ್ತಕಗಳ ಒಂದು ಪಟ್ಟಿಯನ್ನು ಅಕಾರಾದಿಯಾಗಿ ಕಡೆಯಲ್ಲಿ ಕೊಟ್ಟಿದ್ದರೆ ಚೆನ್ನಾಗಿತ್ತು ಎನಿಸುತ್ತದೆ" ಎಂಬುದಾಗಿ ಅಭಿಪ್ರಾಯಪಟ್ಟಿದ್ದಾರೆ. ಹೆಸರುಗಳಿಲ್ಲದಿದ್ದರೂ ಗ್ರಂಥವೊಂದು ಇದೆ ಎಂಬ ಕಾರಣಕ್ಕಾಗಿ ನಾವು ಅಂಥ ಗ್ರಂಥಗಳನ್ನು ಈ ನಮ್ಮ ಗ್ರಂಥಸೂಚಿಯಲ್ಲಿ ಉಲ್ಲೇಖಿಸಿದ್ದೇವೆ. ಹೆಸರು ಇತ್ಯಾದಿ ಇಲ್ಲದ ಕಡೆ "ನಮೂದು ಇಲ್ಲ" ಎಂದು ಹೇಳಿದ್ದೇವೆ. ಆದ್ದರಿಂದ ನಾಯಕರು ಕೈಬಿಟ್ಟಿದ್ದ ಅಪೂರ್ಣ ರೂಪದ ಎಷ್ಟೋ ಗ್ರಂಥಗಳ ಉಲ್ಲೇಖಗಳನ್ನೂ ಇಲ್ಲಿ ಕಾಣಬಹುದು. ಅಂಥವನ್ನು ಪ್ರತ್ಯೇಕವಾಗಿ ಕಡೆಯಲ್ಲಿ ಕೊಡದೆ ಪಠ್ಯದೊಳಗೇ ಸೇರಿಸಲಾಗಿದೆ.

ಇಷ್ಟಾದರೂ, ನಾವು ಮಾಡಿರುವುದು ಶ್ರೇಷ್ಠ ಎಂಬ ಅಹಮಿಕೆಯೇನೂ ಇಲ್ಲ. ಯಾಕೆಂದರೆ, "ನಡೆವರೆಡಹುವ" ಸಾಧ್ಯತೆಗಳು ಇದ್ದೇ ಇರುತ್ತವೆ. ಒಂದು ಮಾತನ್ನು ಇಲ್ಲಿ ಹೇಳಲೇಬೇಕೆನಿಸುತ್ತಿದೆ: ಈ ಗ್ರಂಥಸೂಚಿಯ ಪಠ್ಯಭಾಗದಲ್ಲಿ ನಮೂದಾಗಿರುವ ಪ್ರತಿಯೊಂದು ಗ್ರಂಥವನ್ನೂ ಪ್ರತ್ಯಕ್ಷವಾಗಿ ಪರಿಶೀಲಿಸಿರುವುದರಿಂದ ಸೆಕೆಂಡ್ ಹ್ಯಾಂಡ್ ಮಾಹಿತಿಗೆ ಅವಕಾಶ ಸಿಕ್ಕಿಲ್ಲ. ಇಲ್ಲಿರುವ ವಿವರಗಳೆಲ್ಲ ಫಸ್ಟ್ ಹ್ಯಾಂಡ್ ಹಾಗೂ ಅತ್ಯಂತ ವಿಶ್ವಾಸಾರ್ಹ ಮಾಹಿತಿಗಳಾಗಿವೆ.

* * *

ಈ ನಮ್ಮ ಗ್ರಂಥಸೂಚಿಯಲ್ಲಿ ಕೆಲವು ವೈಶಿಷ್ಟ್ಯಗಳಿವೆ, ಕೆಲವು ಆಶ್ಚರ್ಯಗಳಿವೆ. ಅಂಥ ಒಂದೆರಡು ಸಂದರ್ಭಗಳನ್ನು ಇಲ್ಲಿ ನಮೂದಿಸಬಹುದೆನಿಸುತ್ತಿದೆ:

ಜನಪದ ಗಣಿತವನ್ನು ಕುರಿತ ಗ್ರಂಥಗಳು ಕನ್ನಡದಲ್ಲಿ ಹಲವು ಪ್ರಕಟವಾಗಿವೆ. ಈ ಪ್ರಕಾರದ ಮೊದಲಿಗರು ಡಾ.ಪಿ.ಕೆ. ರಾಜಶೇಖರ ಎಂಬುದು ನಮ್ಮ ತಿಳಿವಳಿಕೆ. ಅನಂತರ ಈ ಕ್ಷೇತ್ರದಲ್ಲಿ ಸಾಕಷ್ಟು ಕೆಲಸ ಮಾಡಿದವರು ಶ್ರೀ ಜೀನಹಳ್ಳಿ ಸಿದ್ಧಲಿಂಗಪ್ಪ. ಇವರುಗಳ ಗ್ರಂಥಗಳೆಲ್ಲ ಪ್ರಕಟವಾಗಿರುವುದು ೧೯೭೦ ರ ದಶಕದಿಂದೀಚೆಗೆ. ಇದುವರೆಗೆ ಯಾರೂ ಮಾಡದ ರೀತಿಯಲ್ಲಿ ೧೧೮ ವರ್ಷಗಳ ಹಿಂದೆಯೇ ಅಂಥದೊಂದು ಗ್ರಂಥವು ಪ್ರಕಟವಾಗಿರುವ ಅತ್ಯಾಶ್ಚರ್ಯಕರ ಸಂಗತಿಯೊಂದು ನಮ್ಮ ಈ ಗ್ರಂಥಸೂಚಿಯ ಮೂಲಕ ಘಟಿಸಿದೆ. ಅದು ೧೮೯೬ ರಲ್ಲಿ ಪ್ರಕಟವಾಗಿರುವ ಜನಪದ ಗಣಿತವನ್ನು ಒಳಗೊಂಡ ಕೃತಿ. ಬಹುಶಃ ಆ ಪ್ರಕಾರದಲ್ಲಿ ಅದು ಮೊಟ್ಟಮೊದಲ ಗ್ರಂಥ. ಅದನ್ನು ರೂಪಿಸಿದವರಿಗೆ ಅದು ಮೊದಲ ಗ್ರಂಥವೆಂಬ ಅರಿವು ಇತ್ತು ಎಂಬುದು ಗ್ರಂಥದ ಶೀರ್ಷಿಕೆಯಿಂದಲೇ ತಿಳಿದುಬಿಡುತ್ತದೆ: "ಬಾಯಲೆಕ್ಕದ ಮೊದಲನೆಯ ಪುಸ್ತಕ". ಆ ಗ್ರಂಥಕರ್ತರಿಗೆ ಅಷ್ಟರಮಟ್ಟಿಗೆ ಜಾನಪದ ಪ್ರಜ್ಞೆ ಅಥವಾ ಜಾನಪದ ಅರಿವು ಇತ್ತು ಎಂಬುದು ಆ ಶೀರ್ಷಿಕೆಯಿಂದ ತಿಳಿದುಬರುತ್ತದೆ. 'ಇದುವರೆಗೆ ಯಾರೂ ಮಾಡದ ರೀತಿಯಲ್ಲಿ' ಎಂಬ ಮಾತೊಂದು ಈ ಮೇಲೆ ನಮೂದಾಗಿದೆ. ಒಂದೆರಡು ಇತ್ತೀಚಿನ ಗ್ರಂಥಗಳಲ್ಲಿ ಆ ರೀತಿಯು ಸೂಕ್ಷ್ಮವಾಗಿ ಕಂಡು ಬಂದರೂ ಈ "ಮೊದಲನೆಯ ಪುಸ್ತಕ"ದ ಮುಂದೆ ಅವೆಲ್ಲ ಗೌಣವೆನಿಸಿಬಿಡುತ್ತವೆ.

ಯಾಕೆಂದರೆ, ಇಲ್ಲಿನ ವಿಭಾಗ ಕ್ರಮವೇ ಕೌತುಕಮಯವಾಗಿದೆ: ಬೇರೀಜು ವಜಾ ಬಾಕಿಯ ಗುಣಾಕಾರ ಭಾಗಾಕಾರ, ಬೆಲ್ಲ ಮುಂತಾದ ಕಿರಾಣಿ ಜೀನಸುಗಳನ್ನು ತೂಗುವ ಲೆಕ್ಕ, ಚಿನ್ನ ಬೆಳ್ಳಿ ಮುಂತಾದ ಬೆಲೆಯುಳ್ಳ ಒಡವೆಗಳ ಪರಿಮಾಣಗಳ ಲೆಕ್ಕ, ಅಳೆಯುವ ಪರಿಮಾಣಗಳ ಬಾಯಲೆಕ್ಕಗಳು, ಧಾರವಾಡ ವಿಜಾಪುರ ಬೆಳಗಾವಿ ಭಾಗಗಳಲ್ಲಿ ಬಳಕೆಯಲ್ಲಿದ್ದ ರೀತಿನೀತಿಗಳು, ಎಣ್ಣೆ ಮುಂತಾದ ದ್ರವಪದಾರ್ಥಗಳು (ಇದನ್ನು ಅವರು 'ರಸಪದಾರ್ಥಗಳು' ಎಂದಿದ್ದಾರೆ!), ಕಾಲದರ್ಶಕಗಳು, ಕಾಗದಗಳು, ಭೂಮಿ, ಅರಿವೆ, ಇಂಥವನ್ನು ಕುರಿತ ಲೆಕ್ಕಗಳು– ಹೀಗೆ ಕುತೂಹಲವನ್ನು ವೃದ್ಧಿಸುವ ಕ್ರಮವನ್ನು ಈ ಗ್ರಂಥದಲ್ಲಿ ಕಾಣಬಹುದು. ಈ ಗ್ರಂಥವನ್ನು ರೂಪಿಸಿದ ಶ್ರೀ ರಾಮಚಂದ್ರ ಹಣಮಂತ ದೇಶಪಾಂಡೆ ಅವರಿಗೆ ಮಾರ್ಗದರ್ಶಕವಾಗಿ ನಿಂತದ್ದು ಒಂದು ಮರಾಠಿ ಗ್ರಂಥ!

"ಪಿರಿಯಾಪಟ್ಟಣದ ಕಾಳಗ"ದ ಬಗ್ಗೆ ಕೆಲಸ ಮಾಡಿರುವ ಮೊದಲಿಗರೊಬ್ಬರು ಈ ಗ್ರಂಥದಲ್ಲಿ ಕಾಣಿಸಿಕೊಂಡಿದ್ದಾರೆ. ಪಿರಿಯಾಪಟ್ಟಣದವರೇ ಆದ ಶ್ರೀ ಪಿ.ಸಿ.ವೀರಯ್ಯ ಅವರು ೧೯೩೦ಕ್ಕೂ ಹಿಂದೆಯೇ ಈ ಕಾವ್ಯವನ್ನು ನೀಲಗಾರರಿಂದ ಸಂಗ್ರಹಿಸಿದ್ದ ಸಂಗತಿ ಇಲ್ಲಿ ಬೆಳಕಿಗೆ ಬಂದಿದೆ. ಆ ಮೂಲ ಸಂಗ್ರಹ ನಮಗೆ ಲಭ್ಯವಾಗಿಲ್ಲ. ಆದರೆ, ವೀರಯ್ಯನವರ ಮೂಲ ಸಂಗ್ರಹವನ್ನು ಶ್ರೀಮತಿ ಪಾರ್ವತಮ್ಮ ದೇವಲಿಂಗಯ್ಯ ಅವರು ಗದ್ಯಾನುವಾದ ಮಾಡಿ ಪ್ರಕಟಿಸಿರುವ ಪ್ರತಿಯ ವಿವರಗಳು ಮಾತ್ರ ಇಲ್ಲಿ ನಮೂದಾಗಿವೆ.

ಹಾಗೆಯೇ, ಡಾ. ಡಿ.ವಿ.ಜಿ., ಶ್ರೀ ಜಿ.ಪಿ.ರಾಜರತ್ನಂ, ಪ್ರೊ. ತೀ.ನಂ.ಶ್ರೀ., ಪ್ರೊ. ಎಂ.ರಾಮರಾವ್, ಶ್ರೀಮತಿ ಎಚ್.ವಿ.ಸಾವಿತ್ರಮ್ಮ ಅವರುಗಳಂಥ ಪ್ರಸಿದ್ಧರು ಕೂಡ ಜಾನಪದ ಕ್ಷೇತ್ರದಲ್ಲಿ ಕೈಯಾಡಿಸಿರುವ ದಾಖಲೆಗಳು ಇಲ್ಲಿವೆ.

ಒಗಟು ಎಂಬುದಕ್ಕೆ ಗಟ್ಟಿಪದ ಎಂಬ ಪರ್ಯಾಯ ನಾಮವೊಂದು ಪ್ರಾಚೀನ ಕಾವ್ಯ ಪ್ರಕಾರದಲ್ಲಿ ಇದ್ದುದಕ್ಕೆ "ವಾವೆ ಮತ್ತು ಗಟ್ಟಿಪದಗಳು" ಎಂಬ ಶ್ರೀ ಜಿ.ಜಿ. ಮಂಜುನಾಥನ್ ಸಂಪಾದಿತ ಕೃತಿಯು ಸಾಕ್ಷಿಯಾಗುತ್ತದೆ. "ಸಾಮಾನ್ಯವಾಗಿ ಪ್ರತಿಯೊಂದು ಪ್ರಾಚೀನ ಕಾವ್ಯದ ಪ್ರಾರಂಭದಲ್ಲಿ, ಅದರಲ್ಲೂ ಇಷ್ಟದೇವತಾ ಪ್ರಾರ್ಥನೆಯಲ್ಲಿ ಈ ತೆರನ ಪದ್ಯಗಳನ್ನು ಕಾಣಬಹುದಾಗಿದೆ" ಎಂಬುದಾಗಿ ವಿದ್ವಾಂಸರಾದ ಶ್ರೀ ಎನ್.ಬಸವಾರಾಧ್ಯ ಅವರು ಆ ಗ್ರಂಥದ ವಿಭಾಗ ಸಂಪಾದಕರ ಮಾತಿನಲ್ಲಿ ಹೇಳಿದ್ದಾರೆ.

ಮೊದಲ ಮಹಾಯುದ್ಧವನ್ನು ಹಾಗೂ ಸ್ವಾತಂತ್ರ್ಯ ಸಂಗ್ರಾಮಗಳನ್ನು ಕುರಿತು ರಚಿತವಾಗಿರುವ ಲಾವಣಿ ಸಂಗ್ರಹಗಳು ಈ ಗ್ರಂಥಸೂಚಿಯಲ್ಲಿ ಪ್ರವೇಶ ಪಡೆದಿವೆ. ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಹಾಗೂ ಮೈಸೂರಿನ ಕಾವ್ಯಾಲಯ, ಮುಂತಾದ ಖಾಸಗಿ ಪ್ರಕಾಶಕರು ಹಾಗೂ ಸಂಘ ಸಂಸ್ಥೆಗಳು ಕೂಡ ಜನಪದ ಸಾಹಿತ್ಯವನ್ನು ಪ್ರೋತ್ಸಾಹಿಸಿರುವ ವಿಚಾರ ಉಲ್ಲೇಖನೀಯ.

* * *

ಯಾವುದೇ ಒಂದು ಘಟನೆಗೆ ಐತಿಹಾಸಿಕ ಮಹತ್ವ ಪ್ರಾಪ್ತವಾಗಬೇಕಾದರೆ ಕಾಲದ ನಮೂದು ಅಗತ್ಯ. ಈ ದೃಷ್ಟಿಯಿಂದ ಪ್ರತಿಯೊಂದು ಗ್ರಂಥದ ಮೊದಲ ಮುದ್ರಣಕ್ಕೆ ಮಹತ್ವವಿದೆ. ಐತಿಹಾಸಿಕ ಮಹತ್ವವನ್ನು ಉಳಿಸಿಕೊಳ್ಳಬೇಕೆಂಬ ಉದ್ದೇಶದಿಂದ ನಾವು ಪ್ರತಿಯೊಂದು ಗ್ರಂಥದ ಮೊದಲ ಮುದ್ರಣದ ವರ್ಷವನ್ನು ತಪ್ಪದೆ ನಮೂದಿಸಿದ್ದೇವೆ. ಮರುಮುದ್ರಣಗಳೆಲ್ಲವನ್ನೂ ಜೊತೆಗೇ ಉಳಿಸಿಕೊಂಡಿದ್ದೇವೆ. ಯಾಕೆಂದರೆ, ಈ ಮರುಮುದ್ರಣಗಳು ಒಂದು ಗ್ರಂಥದ ಉಪಯುಕ್ತತೆಯನ್ನೋ ಜನಪ್ರಿಯತೆಯನ್ನೋ ಸೂಚಿಸುತ್ತವೆ. ನಮಗೆ ಲಭ್ಯವಾದ ಪ್ರತಿಯಲ್ಲಿ ಮೊದಲ ಮುದ್ರಣದ ನಮೂದು ಇಲ್ಲದಿದ್ದಾಗ ಮಾತ್ರ ಈ ನಮ್ಮ ಸೂಚಿಯಲ್ಲೂ ಸಹಜವಾಗಿಯೇ ಅದು ನಮೂದಿಸಲ್ಪಟ್ಟಿಲ್ಲ. ಅಂಥ ಗ್ರಂಥಗಳು ಹೆಚ್ಚು ಇಲ್ಲ.

ಎಷ್ಟೋ ಗ್ರಂಥಗಳ ಶೀರ್ಷಿಕೆಗಳೊಂದಿಗೆ ಸಂಕ್ಷಿಪ್ತ ವಿವರಣೆ ಇರುತ್ತದೆ. ಅಂಥ ವಿವರಣೆಗಳು ಕೆಲವು ಗ್ರಂಥಗಳಲ್ಲಿ ಶೀರ್ಷಿಕೆಯ ಕೆಳಗೂ, ಕೆಲವು ಗ್ರಂಥಗಳಲ್ಲಿ ಶೀರ್ಷಿಕೆಯ ಮೇಲೂ, ಇರುತ್ತವೆ. ನಾವು ಇಲ್ಲಿ ಒಟ್ಟಾರೆಯಾಗಿ ಅಂಥ ವಿವರಣೆಗಳನ್ನೆಲ್ಲ "ಅಡಿಬರಹ" ಎಂಬುದಾಗಿ ನಮೂದಿಸುತ್ತ ಹೋಗಿದ್ದೇವೆ.

ಲೇಖಕರ ಹೆಸರಿನೊಂದಿಗೆ ಇರುವ ಪದವಿ, ಹುದ್ದೆ, ಗೌರವಸೂಚಕ ಶಬ್ದ ಮುಂತಾದುವನ್ನೆಲ್ಲ ಏಕರೂಪವನ್ನು ಕಾಯ್ದುಕೊಳ್ಳುವ ಸಲುವಾಗಿ ಕೈಬಿಟ್ಟಿದ್ದೇವೆ. ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ಅಲ್ಲಲ್ಲಿ ಉಳಿದುಕೊಂಡಿವೆ.

ಈ ಗ್ರಂಥಸೂಚಿಯು, ಸಂಶೋಧಕರಿಗೆ ಒಂದು ಮಾರ್ಗದರ್ಶಿಯೂ ಜನಪದ ಸಾಹಿತ್ಯ ಚರಿತ್ರೆಯನ್ನು ಬರೆಯುವವರಿಗೆ ಒಂದು ಹೆದ್ದಾರಿಯೂ ಆಗಬಲ್ಲುದೆಂದು ನಾವು ನಂಬಿದ್ದೇವೆ.

* * *

ಡಾ.ಹಾ.ಮಾ.ನಾಯಕ ಅವರು ತಮ್ಮ ಗ್ರಂಥಸೂಚಿಯಲ್ಲಿ, ಗ್ರಂಥಗಳನ್ನು ವರ್ಗೀಕರಿಸಿ, ಪ್ರತಿಯೊಂದು ವರ್ಗಕ್ಕೂ ಪ್ರತ್ಯೇಕ ಅಕಾರಾದಿ ಮಾಡಿದ್ದಾರೆ. ಡಾ.ಸಿ.ಟಿ.ಗುರುಪ್ರಸಾದ್ ಅವರು ಕೂಡ ಹಾಗೇ ಮಾಡಿದ್ದಾರೆ. ಈ ವಿಧಾನದಲ್ಲಿ ಒಂದು ತೊಡಕು ಇದೆ ಎಂದು ನಮಗೆ ಅನ್ನಿಸಿದೆ. ಒಂದು ಗ್ರಂಥದ ಶೀರ್ಷಿಕೆಯಿಂದ ಅದು ಯಾವ ವಿಭಾಗಕ್ಕೆ ಸೇರುತ್ತದೆ ಎಂಬುದು ತಿಳಿಯದೆ ಹೋದಾಗ ಎಲ್ಲ ವರ್ಗೀಕೃತ ಅಕಾರಾದಿಗಳನ್ನು ಪರಿಶೀಲಿಸುತ್ತ ಹೋಗಬೇಕಾಗುತ್ತದೆ. ಇದೇ ಆ ತೊಡಕು. ಉದಾಹರಣೆಗೆ, ಕೆಲವು ಗ್ರಂಥಗಳ ಶೀರ್ಷಿಕೆಗಳು ಹೀಗಿವೆ: ದುಂಡಮಲ್ಲಿಗಿ ಹೂವ ಬುಟ್ಟೀಲಿ ಬಂದಾವ, ಪೊಳ್ಳಿನೊಳಗೆ ಪಕ್ಷಿ, ತನಿ ಎರೆದವರೆ, ನಾರಾಯಣದೇವ, ಮಂಥಾನ, ಸಿದ್ಧರ ಭಂಡಾರ, ರ್‍ವಾಣಗಳು, ಬೆಳ್ಳಕ್ಕಿ ಹಿಂಡು ಬೆದರ್‍ಯಾವೋ, ಸೋರೇ ಬುರುಡೆ, ಹಬ್ಬದ ದಿನವೂ ಹಳೆ ಗಂಡನೆ?, ಇತ್ಯಾದಿ.

ಇಂಥ ಶೀರ್ಷಿಕೆಗಳನ್ನುಳ್ಳ ನೂರಾರು ಗ್ರಂಥಗಳಿವೆ. ಈ ಗ್ರಂಥ ಏನು? ಕಥೆಯೆ?

ಗೀತೆಯೆ? ಗಾದೆಯೆ? ಒಗಟೆ? ವಿಚಾರ ವಿಮರ್ಶೆ ಆಚರಣೆ ಸಂಪ್ರದಾಯ ಯಾವ ವರ್ಗಕ್ಕೆ ಇದು ಸೇರುತ್ತದೆ? ಗ್ರಂಥಸೂಚಿಯ ಯಾವ ವಿಭಾಗದಲ್ಲಿ ಹುಡುಕೋಣ? ಇಂಥ ಯಾವ ಪ್ರಶ್ನೆಗೂ ಅವಕಾಶ ಇರಬಾರದೆಂಬುದು ಇಲ್ಲಿನ ನಮ್ಮ ಉದ್ದೇಶ. ಬರೀ ಗ್ರಂಥದ ಹೆಸರು ತಿಳಿದರೆ ಸಾಕು, ಸುಲಭವಾಗಿ ಕೂಡಲೆ ನಮಗೆ ಸಿಗಬೇಕು, ಇದು ನಮ್ಮ ಉದ್ದೇಶದ ಗುರಿ. ಈ ಗುರಿಯನ್ನು ನಾವು ಯಶಸ್ವಿಯಾಗಿ ತಲಪಿದ್ದೇವೆ ಎಂಬ ಸಮಾಧಾನ ನಮಗಿದೆ. ಇಡೀ ಗ್ರಂಥದಲ್ಲಿ ಒಂದೇ ಅಕಾರಾದಿ ಇರುವುದರಿಂದ, ಹುಡುಕುವ ಶ್ರಮವಿಲ್ಲದೆ, ನೇರವಾಗಿ ಗುರಿಯನ್ನು ತಲಪಬಹುದು.

ನಿಯತಕಾಲಿಕೆಗಳನ್ನು ಎರಡು ಕಾರಣಗಳಿಗಾಗಿ ಕೈಬಿಟ್ಟಿದ್ದೇವೆ: ಅವು, ನಮ್ಮ ಕಾರ್ಯಾವಧಿಯಲ್ಲಿ ಸಮಗ್ರವಾಗಿ ಸಂಗ್ರಹಿಸಲು ಸಾಧ್ಯವಿಲ್ಲವಾಗಿ, ಹಾಗೂ ಅಲ್ಲೊಂದು ಇಲ್ಲೊಂದು ಮಾಹಿತಿಯನ್ನು ಕೊಡುವುದು ಸಮಂಜಸವಲ್ಲ ಎಂಬ ಕಾರಣಕ್ಕಾಗಿ.

* * *

ಈ ಬಗೆಯ ಕಾರ್ಯಕ್ಕೆ ಕ್ಷೇತ್ರಕಾರ್ಯವು ಅನಿವಾರ್ಯ. ಕ್ಷೇತ್ರಕಾರ್ಯವೆಂದರೆ ಅದು ಗ್ರಂಥ ಸಂಗ್ರಹವಿರುವೆಡೆಯಲ್ಲೆ ನಡೆಯಬೇಕಾದ್ದು. ಮಾಹಿತಿ ಸಂಗ್ರಹಕ್ಕಾಗಿ ಹಲವಾರು ಗ್ರಂಥಾಲಯಗಳಿಗೆ ಹಾಗೂ ಖಾಸಗಿ ಸಂಗ್ರಹಗಳಿಗೆ ಹೋಗಬೇಕಾದ ಸಂದರ್ಭ ಬಂದಿತ್ತು. ಹಾಗೆ ಭೇಟಿ ಮಾಡಿದ ಗ್ರಂಥಾಲಯಗಳ ಹಾಗೂ ಖಾಸಗಿ ಸಂಗ್ರಹಗಳ ವಿವರ ಹೀಗಿದೆ:

ಗ್ರಂಥಾಲಯಗಳು: ೧.ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಗ್ರಂಥಾಲಯ ೨.ಜಾನಪದ ವಿಭಾಗದ ಗ್ರಂಥಾಲಯ ೩.ಮಾನಸ ಗಂಗೋತ್ರಿಯ ಸ್ನಾತಕೋತ್ತರ ಗ್ರಂಥಾಲಯ ೪.ಮಹಾರಾಜಾ ಕಾಲೇಜು ಆವರಣದಲ್ಲಿರುವ ಪದವಿ ಗ್ರಂಥಾಲಯ ೫.ನಗರ ಕೇಂದ್ರ ಗ್ರಂಥಾಲಯ ೬.ಪಾಂಡವಪುರದ ಶ್ರೀ ಎಂ.ಅಂಕೇಗೌಡ ಜ್ಞಾನಪ್ರತಿಷ್ಠಾನ ಗ್ರಂಥಾಲಯ ೭.ಬೆಂಗಳೂರಿನ ಕಬ್ಬನ್ ಪಾರ್ಕ್‌ನಲ್ಲಿರುವ ಕರ್ನಾಟಕ ರಾಜ್ಯ ಕೇಂದ್ರ ಗ್ರಂಥಾಲಯ ೮.ಜಯನಗರದ ಸೌತ್‌ಎಂಡ್ ಸರ್ಕಲ್ ಬಳಿ ಇರುವ ನಗರ ಕೇಂದ್ರ ಗ್ರಂಥಾಲಯ ೯.ವಿಜಯನಗರದ ನಗರಕೇಂದ್ರ ಗ್ರಂಥಾಲಯ ೧೧.ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಸಿರಿಗನ್ನಡ ಗ್ರಂಥಾಲಯ ೧೨.ಅಕ್ಷರ ಗ್ರಂಥಾಲಯ ೧೩.ಬುಡಕಟ್ಟು ಅಧ್ಯಯನ ವಿಭಾಗದ ಗ್ರಂಥಾಲಯ ೧೪.ಜಾನಪದ ಅಧ್ಯಯನ ವಿಭಾಗದ ಗ್ರಂಥಾಲಯ ೧೫.ಧರ್ಮಸ್ಥಳದ ಶ್ರೀ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನ ಪ್ರತಿಷ್ಠಾನದ ಗ್ರಂಥಾಲಯ ೧೬.ಉಜಿರೆಯ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜಿನ ಗ್ರಂಥಾಲಯ ೧೭.ಮತ್ತು ಆ ಗ್ರಂಥಾಲಯದೊಳಗೇ ಮೂರನೆಯ ಮಹಡಿಯಲ್ಲಿರುವ ಡಾ.ಹಾ.ಮಾ.ನಾಯಕ ಸಂಶೋಧನ ಕೇಂದ್ರದ ಗ್ರಂಥಾಲಯ ೧೮.ಬೆಂಗಳೂರಿನಲ್ಲಿ ಕರ್ನಾಟಕ ಜಾನಪದ ಅಕಾಡೆಮಿ ೧೯.ಕರ್ನಾಟಕ ಸಾಹಿತ್ಯ ಅಕಾಡೆಮಿ ೨೦.ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಗ್ರಂಥಾಲಯ ೨೧.ಕನ್ನಡ

ಪುಸ್ತಕ ಪ್ರಾಧಿಕಾರ ೨೨.ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಗ್ರಂಥಾಲಯ. ೨೩.ಮೈಸೂರು ಮಾನಸ ಗಂಗೋತ್ರಿಯಲ್ಲಿರುವ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಗ್ರಂಥಾಲಯ.

ಖಾಸಗಿ ಸಂಗ್ರಹಗಳು: ೧.ನಮ್ಮಿಬ್ಬರ ಸ್ವಂತ ಸಂಗ್ರಹಗಳು ೨.ಧಾರವಾಡದ ಡಾ.ಎಂ.ಎಂ. ಕಲಬುರ್ಗಿ ಅವರ ಸಂಗ್ರಹ ೩.ಬೆಂಗಳೂರಿನ ಡಾ.ಚಕ್ಕೆರೆ ಶಿವಶಂಕರ್ ಅವರ ಸಂಗ್ರಹ ೪.ಪಾಂಡವಪುರದ ಡಾ.ಬೋರೇಗೌಡ ಚಿಕ್ಕಮರಳಿ ಅವರ ಸಂಗ್ರಹ.

– **ಸಂಪಾದಕರು**

ಸಂಪಾದಕರ ಅರಿಕೆ

ಈ ಗ್ರಂಥಸೂಚಿಯ ಪ್ರಸ್ತಾಪ ನಮ್ಮೆದುರು ಬಂದದ್ದು ಕರ್ನಾಟಕ ಜಾನಪದ ಅಕಾಡೆಮಿಯಲ್ಲಿ, ಆಚರಣೆಗೆ ಬಂದದ್ದು ಹಾಗೂ ಮುಕ್ತಾಯವಾದದ್ದು ಕರ್ನಾಟಕ ಜಾನಪದ ವಿಶ್ವವಿದ್ಯಾಲಯದಲ್ಲಿ. ನಡೆದದ್ದು ಇಷ್ಟು: ಕರ್ನಾಟಕ ಜಾನಪದ ಅಕಾಡೆಮಿಯ ಅಧ್ಯಕ್ಷರಾಗಿದ್ದ ಶ್ರೀ ಗೊ.ರು.ಚನ್ನಬಸಪ್ಪ ಅವರ ಆಹ್ವಾನದ ಮೇರೆಗೆ ೨೦೧೧ ರಲ್ಲಿ ನಾವಿಬ್ಬರೂ ಕನ್ನಡ ಜಾನಪದ ನಿಘಂಟು ಯೋಜನೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾಗ ಒಮ್ಮೆ ಶ್ರೀ ಗೊ.ರು.ಚ. ಅವರು ನಮ್ಮನ್ನು ಕರೆದು ನಿಘಂಟುವಿನ ಕೆಲಸ ಮುಗಿದ ಮೇಲೆ "ಜಾನಪದ ಗ್ರಂಥಸೂಚಿ" ಯೊಂದನ್ನು ಸಿದ್ಧಪಡಿಸಿಕೊಡಬೇಕೆಂದು ಸೂಚಿಸಿದರು. ನಾವೇನೋ ಒಪ್ಪಿಕೊಂಡೆವು. ಆದರೆ, ನಿಘಂಟುವಿನ ಕೆಲಸ ಮುಗಿದು ಅದು ಬಿಡುಗಡೆಯಾಗುವ ವೇಳೆಗೆ ಸರಿಯಾಗಿ ಅವರ ಅಧ್ಯಕ್ಷಾವಧಿಯು ಮುಗಿದುಹೋಯಿತು. ಶ್ರೀ ಗೊ.ರು.ಚ. ನಿರಾಶರಾಗಲಿಲ್ಲ. ಆ ಅದೇ ಉತ್ಸಾಹದಲ್ಲಿ "ಅಕಾಡೆಮಿಯಲ್ಲಿ ಸಾಧ್ಯವಾಗದಿದ್ದರೇನು, ವಿಶ್ವವಿದ್ಯಾಲಯದಲ್ಲಿ ಮಾಡುವಿರಂತೆ" ಎಂದು ನಮ್ಮಲ್ಲಿ ಹುಮ್ಮಸ್ಸು ತುಂಬಿದರು. ಅವರ ಆಲೋಚನೆ ವ್ಯರ್ಥವಾಗಲಿಲ್ಲ. ಕೆಲವೇ ತಿಂಗಳುಗಳಲ್ಲಿ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದಿಂದ ನಮಗೆ ಆದೇಶ ಪತ್ರಗಳು ಬಂದುವು.

ಈ ಸೂಚಿಯ ಸಿದ್ಧತೆಗಾಗಿ ವಿಶ್ವವಿದ್ಯಾಲಯವು ನಮಗೆ ನೀಡಿದ ಕಾಲದ ಅವಧಿ ಹತ್ತು ತಿಂಗಳು ಮಾತ್ರ. ಯಾವ ಸಹಾಯಕರ ನೆರವು ಇಲ್ಲದಿದ್ದರೂ ಅವಧಿ ಪೂರ್ಣವಾಗುವುದರೊಳಗೆ ಈ ಸೂಚಿಯ ಕರಡು ಪ್ರತಿಯನ್ನು ನಾವು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದೆವು. ಮತ್ತು ಕ್ಷೇತ್ರಕಾರ್ಯವನ್ನು ಮುಂದುವರಿಸಿ ಹೆಚ್ಚಿನ ನೂರಾರು ಗ್ರಂಥಗಳನ್ನು ಪರಿಶೀಲಿಸಿ ಮಾಹಿತಿಗಳನ್ನು ಸಂಗ್ರಹಿಸಿದೆವು.

ಗ್ರಂಥದ ಶೀರ್ಷಿಕೆ ಕುರಿತು ಒಂದು ಮಾತನ್ನು ಹೇಳಬೇಕಾಗಿದೆ. ಇದುವರೆಗೆ ಪ್ರಕಟವಾಗಿರುವ ಗ್ರಂಥಸೂಚಿಗಳೆಲ್ಲ "ಕನ್ನಡ ಜಾನಪದ ಗ್ರಂಥಸೂಚಿ" ಎಂಬ ಶೀರ್ಷಿಕೆಯಲ್ಲೆ ಬಂದಿವೆ. ಅವುಗಳಲ್ಲಿ ಒಂದು ಮಾತ್ರ "ಸಂಕ್ಷಿಪ್ತ ವಿವರಣಾತ್ಮಕ" ಎಂಬ ವಿಶೇಷಣವನ್ನು ಹೊಂದಿದೆ. ನಮ್ಮ ಈ ಗ್ರಂಥಸೂಚಿಯಲ್ಲಿ ಕನ್ನಡ ಗ್ರಂಥಗಳು ಮಾತ್ರವಲ್ಲದೆ ಕರ್ನಾಟಕದ ಭಾಷೆಗಳೇ ಆಗಿರುವ ಕೊಡವ ತುಳು ಕೊಂಕಣಿ ಭಾಷಾಗ್ರಂಥಗಳ ನಮೂದುಗಳೂ ಇರುವುದರಿಂದ, ಹಾಗೂ ನಮ್ಮ ಕ್ಷೇತ್ರಕಾರ್ಯಗಳ ಸಂದರ್ಭಗಳಲ್ಲಿ ನಮಗೆ ಲಭ್ಯವಾಗದ ಗ್ರಂಥಗಳ ಮಾಹಿತಿಗಳನ್ನುಳ್ಳ ಇತರ ಗ್ರಂಥಗಳ ಭಾಗಗಳನ್ನೂ ಒಳಗೊಂಡಿರುವುದರಿಂದ, ಇದೊಂದು "ವಿಸ್ತರಿಸಲ್ಪಟ್ಟ" ಗ್ರಂಥಸೂಚಿ ಎನ್ನಿಸಿಕೊಳ್ಳುತ್ತದೆ. ಆದ್ದರಿಂದ ನಮ್ಮ ಗ್ರಂಥಸೂಚಿಯ ಶೀರ್ಷಿಕೆಯನ್ನು "ವಿಸ್ತೃತ ಜಾನಪದ ಗ್ರಂಥಸೂಚಿ" ಎಂಬುದಾಗಿ ಹೆಸರಿಸಿದ್ದೇವೆ. ಪ್ರಧಾನ ಸಂಪಾದಕರೂ ಆಗಿರುವ ಕುಲಪತಿ

ಪ್ರೊ. ಅಂಬಳಿಕೆ ಹಿರಿಯಣ್ಣ ಅವರು ಈ ನಮ್ಮ ಆಲೋಚನೆಯನ್ನು ಮುಕ್ತ ಮನಸ್ಸಿನಿಂದ ಸ್ವಾಗತಿಸಿದ್ದಾರೆ.

ಈ ನಮ್ಮ ಗ್ರಂಥಸೂಚಿಯಲ್ಲಿ ನಾವು ನೇರವಾಗಿ ಸಂಗ್ರಹಿಸಿರುವ ನಮೂದುಗಳ ಸಂಖ್ಯೆ ೨೨೮೫. ಇತರ ಮೂಲಗಳಿಂದ ಸಂಗ್ರಹಿಸಿರುವ ನಮೂದುಗಳ ಒಟ್ಟು ಸಂಖ್ಯೆ ೧೫೧೩. ಹೀಗೆ ಈ ಗ್ರಂಥಸೂಚಿಯಲ್ಲಿ ಒಟ್ಟು ೩೭೯೮ ಗ್ರಂಥಗಳ ನಮೂದುಗಳಿವೆ.

ಕನ್ನಡ ಜಾನಪದ ಗ್ರಂಥಸೂಚಿಯನ್ನು ಮೊಟ್ಟಮೊದಲು ರೂಪಿಸಿ ೧೯೭೪ರಲ್ಲೆ ಪ್ರಕಟಿಸಿದವರು ಡಾ.ಹಾ.ಮಾ.ನಾಯಕ ಅವರು ಎಂಬ ವಿಚಾರ ಸರ್ವವಿದಿತ. ಈ ವಿಚಾರದಲ್ಲಿ ಅವರು ಆದ್ಯರು. ಅವರಿಗೆ ಗೌರವ ಸಲ್ಲಿಸುವ ಉದ್ದೇಶದಿಂದ ಈ ನಮ್ಮ "ವಿಸ್ತೃತ ಜಾನಪದ ಗ್ರಂಥಸೂಚಿ"ಯನ್ನು ಅವರಿಗೆ ಅರ್ಪಿಸುತ್ತಿದ್ದೇವೆ.

ಕುಲಪತಿಗಳಾದ ಪ್ರೊ.ಅಂಬಳಿಕೆ ಹಿರಿಯಣ್ಣ ಅವರು ನಮ್ಮ ಮೇಲೆ ವಿಶ್ವಾಸವಿರಿಸಿ ಈ ಕೆಲಸವನ್ನು ನಮಗೆ ವಹಿಸಿದ್ದಲ್ಲದೆ, ಸತತವಾಗಿ ಪ್ರೋತ್ಸಾಹಿಸಿದ್ದಾರೆ. ಆಗ ಕುಲಸಚಿವರಾಗಿದ್ದ ಡಾ.ಸಿ.ಎ.ಸೋಮಶೇಖರಪ್ಪ ಅವರು, ಈಗ ಕುಲಸಚಿವರಾಗಿರುವ ಡಾ.ಡಿ.ಬಿ.ನಾಯಕ ಅವರು, ವಿಸ್ತರಣೆ ಹಾಗೂ ಸಲಹಾ ಕೇಂದ್ರದ ನಿರ್ದೇಶಕರೂ ಆಗಿರುವ ಮೌಲ್ಯಮಾಪನದ ಕುಲಸಚಿವರಾದ ಪ್ರೊ.ಸ.ಚಿ.ರಮೇಶ ಅವರು, ಯೋಜನಾ ನಿರ್ದೇಶಕರಾದ ಡಾ.ಕೆ.ಪ್ರೇಮಕುಮಾರ ಅವರು, ಇವರೆಲ್ಲರ ಸಹಕಾರ ನಮಗೆ ಸಿಕ್ಕಿತ್ತು.

ಪ್ರೊ.ಅಂಬಳಿಕೆ ಹಿರಿಯಣ್ಣ ಅವರು ನಮಗೆ ಎಷ್ಟರಮಟ್ಟಿಗೆ ನೆರವಾದರೆಂದರೆ, ಈ ಗ್ರಂಥಸೂಚಿಯ ಸಂಗ್ರಹೋತ್ತರ ಕೆಲಸಗಳಿಗೆ ಸಹಾಯವಾಗಲೆಂದು ಡಾ.ವೃಷಭಕುಮಾರ್ ಹಾಗೂ ಕುಮಾರಿ ಶ್ವೇತಾ.ಎಂ.ಬಿ. ಅವರುಗಳನ್ನು ನಮಗೆ ಅರಿವಿಲ್ಲದಂತೆ ನಿಯೋಜಿಸಿದ್ದುದು ನಮಗೆ ಆಶ್ಚರ್ಯವನ್ನೂ ಸಂತೋಷವನ್ನೂ ಉಂಟುಮಾಡಿತ್ತು. ಡಿ.ಟಿ.ಪಿ., ವಿನ್ಯಾಸ ಹಾಗೂ ಇನ್ನಿತರ ಪ್ರಗತಿಗಳ ಬಗ್ಗೆ ಡಾ.ವೃಷಭಕುಮಾರ್ ಅವರು ನಮಗೆ ಆಗಾಗ ಮಾಹಿತಿ ನೀಡಿ ಸಹಕರಿಸುತ್ತಿದ್ದರು. ಡಿ.ಟಿ.ಪಿ. ಕಾರ್ಯದಲ್ಲಿ ವಿಶ್ವ ಗುಜ್ಜರ್, ಸಂದೀಪ. ಬಿ.ಆರ್., ವಿಮೋಚನಾ ಹಳಿಂಗಳಿ ಮತ್ತು ಪುಟ್ಟಮ್ಮ ವೀರಯ್ಯ ಗೊಟಗೋಡಿಮಠ ಅವರು ನೆರವಾಗಿದ್ದಾರೆ.

ಈ ಎಲ್ಲ ಮಹನೀಯರನ್ನೂ ನಾವು ಕೃತಜ್ಞತೆಯಿಂದ ಸ್ಮರಿಸುತ್ತೇವೆ.

ಕ್ಯಾತನಹಳ್ಳಿ ರಾಮಣ್ಣ
ಟಿ.ಎಸ್. ರಾಜಪ್ಪ

ಮ

೧೫೬೦. ಮಂಟೇಸ್ವಾಮಿ

ಸಂ: ಹಿ.ಚಿ. ಬೋರಲಿಂಗಯ್ಯ; ಪ್ರ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ; ಮೊ.ಮು: ೧೯೯೭; ಪುಟ ೨೪+೮೫೪=೮೭೮; ಡಿಮ್ಮೈ ೧/೮

ಒಂಬತ್ತು ಅಧ್ಯಾಯಗಳಲ್ಲಿರುವ ಮಹಾಕಾವ್ಯ: ೧.ಜಗತ್ತು ಸೃಷ್ಟಿಯ ಸಾಲು ೨.ಕಲ್ಯಾಣ ಪಟ್ಟಣದ ಸಾಲು ೩.ರಾಚಪ್ಪಾಜಿ ಸಾಲು ೪.ಬೊಪ್ಪಗೌಡನ ಪುರದ ಸಾಲು ೫.ಕೆಂಪಾಚಾರಿ ಸಾಲು ೬.ಫಲಾರದಯ್ಯನ ಸಾಲು ೭.ಕಲಿಪುರುಷನ ಸಾಲು ೮.ಸಿದ್ದಪ್ಪಾಜಿ ಸಾಲು ೯.ಮಂಗಳಾರತಿ. ಚಂದ್ರಶೇಖರ ಕಂಬಾರ ಅವರ ಮುನ್ನುಡಿ, ಸಂಪಾದಕರ ಪ್ರಸ್ತಾವನೆ, ಪ್ರಾರ್ಥನೆ ಎಂಬ ಹಾಡು, ಕೊನೆಯಲ್ಲಿ, ಪದಸೂಚಿ, ಅರ್ಥಕೋಶ, ಕಲಾವಿದರೊಡನೆ ಸಂದರ್ಶನ, ಇವೆ.

೧೫೬೧. ಮಂಟೇಸ್ವಾಮಿ ಕಾವ್ಯ

ಲೇ: ಚಂದ್ರು ಕಾಳೇನಹಳ್ಳಿ; ಪ್ರ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಮೊ.ಮು: ೨೦೧೧; ಪು: ೪+೨೨; ಡಿಮ್ಮೈ ೧/೮

ಮಂಟೇಸ್ವಾಮಿಗಳ ಸಂಕ್ಷಿಪ್ತ ಜೀವನಚಿತ್ರವನ್ನೊಳಗೊಂಡ ಕೃತಿ.

೧೫೬೨. ಮಂಟೇಸ್ವಾಮಿ ಕಾವ್ಯ

ಸಂ: ವೆಂಕಟೇಶ ಇಂದ್ವಾಡಿ; ಪ್ರ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ; ಮೊ.ಮು. ೨೦೦೪; ಪುಟ ೧೬+೨೯೪=೩೧೦; ಡಿಮ್ಮೈ ೧/೮

ಮೂರು ಭಾಗಗಳಲ್ಲಿ ಇಲ್ಲಿನ ಬರಹಗಳು ವಿಂಗಡಿಸಲ್ಪಟ್ಟಿವೆ: ಭಾಗ ಒಂದು: ೧.ಸೂತಕ ಎಂಬ ರೂಪಕ ಶಕ್ತಿ –ವೆಂಕಟೇಶ ಇಂದ್ವಾಡಿ ೨.ಉದ್ಘಾಟನಾ ಭಾಷಣ–ಸಿದ್ಧಲಿಂಗಯ್ಯ ೩.ಅಧ್ಯಕ್ಷೀಯ ಭಾಷಣ–ನೀಲಕಂಠ ಸ್ವಾಮಿಗಳು ೪.ವಿಸರ್ಜಿತ ಲೋಕಗಳಿಂದ ಹುಟ್ಟಿ ಬಂದ ಆಧ್ಯಾತ್ಮಿಕ ದಂಗೆಕೋರ–ಡಿ.ಆರ್.ನಾಗರಾಜ ೫.ಮಂಟೇಸ್ವಾಮಿ: ಸೃಜನಶೀಲ ಅನುಸಂಧಾನ– ಎಚ್.ಎಸ್. ಶಿವಪ್ರಕಾಶ್ ೬.ಮಂಟೇಸ್ವಾಮಿ ಪರಂಪರೆ: ಕುಲಸ್ಥಾಪನೆಯ ಯತ್ನ– ಕಿ.ರಂ.ನಾಗರಾಜ ೭.ಮಂಟೇಸ್ವಾಮಿ ಪರಂಪರೆ: ಅಪವಸಾಹತೀಕರಣಗೊಳಿಸುವ ಬಗೆ–ಟಿ.ಎಸ್.ಸತ್ಯನಾಥ್ ೮.ಮಂಟೇಸ್ವಾಮಿ ಕಾವ್ಯ: ಅಂತರ್‌ಪಠ್ಯೀಯತೆ – ಸಿ.ಎನ್.ರಾಮಚಂದ್ರನ್ ೯.ಮಂಟೇಸ್ವಾಮಿ: ಜನಪ್ರಿಯ ಸಂಸ್ಕೃತಿ –ಶಿವರಾಮ ಪಡಿಕ್ಕಲ್. ಭಾಗ ಎರಡು: ಈ ಭಾಗದಲ್ಲಿ ರಹಮತ್ ತರೀಕೆರೆ, ಬಂಜಗೆರೆ ಜಯಪ್ರಕಾಶ್, ಕೃಷ್ಣಮೂರ್ತಿ ಹನೂರು, ಓ.ಎಲ್.ನಾಗಭೂಷಣಸ್ವಾಮಿ, ಅವರುಗಳು ಮಂಡಿಸಿದ

ವಿಚಾರಗಳಿಗೆ ಪ್ರತಿಕ್ರಿಯೆ ಹಾಗೂ ಚರ್ಚೆಗಳಲ್ಲಿ ಹಲವು ವಿದ್ವಾಂಸರು ಭಾಗವಹಿಸಿದ ನಮೂದುಗಳಿವೆ. ಇದಾದ ಮೇಲೆ ಕೋಟಗಾನಹಳ್ಳಿ ರಾಮಯ್ಯ, ಕಿ.ರಂ. ನಾಗರಾಜ, ರಹಮತ್ ತರೀಕೆರೆ, ಅವರುಗಳ ವಿಚಾರಗಳಿವೆ. ಭಾಗ ಮೂರು: ಈ ಭಾಗದಲ್ಲಿ ಈ ಹಿಂದೆ ಪ್ರಕಟವಾಗಿದ್ದ ಮಂಟೇಸ್ವಾಮಿ ಕಾವ್ಯಗಳ ಸಂಪಾದಕರ ಪ್ರಸ್ತಾವನೆಗಳಿವೆ. ಅನುಬಂಧಗಳಿವೆ.

೧೫೬೩. ಮಂದಾರೋಜ್ವಲಾ ಪರಿಣಯ ನಾಟಕಂ

ಪ್ರಾರಂಭದ ಪುಟಗಳು ಈ ಪ್ರತಿಯಲ್ಲಿ ಇಲ್ಲ; ಕಾಗದದ ಸ್ಥಿತಿ ಹಾಗೂ ಅಕ್ಷರರೂಪಗಳನ್ನು ಗಮನಿಸಿದರೆ ಈ ಗ್ರಂಥವು ೧೯೦೦ಕ್ಕಿಂತ ಹಿಂದೆ ಅಚ್ಚಾಗಿರುವಂತೆ ತೋರುತ್ತದೆ; ಕೊನೆಯ ಪುಟಸಂಖ್ಯೆ ೯೬; ಡೆಮ್ಮಿ ೧/೮

ನಡುನಡುವೆ ಗದ್ಯದಲ್ಲಿ ಸಂಭಾಷಣೆ ಇರುವ ರಾಗ ತಾಳ ಛಂದೋ ಸಹಿತದ ಯಕ್ಷಗಾನ ಗ್ರಂಥವಿದು.

೧೫೬೪. ಮಂಡ್ಯ ಜಿಲ್ಲೆಯ ಜನಪದ ಕಥೆಗಳು

ಸಂ: ನಂ. ನಾರಾಯಣಗೌಡ; ಪ್ರ: ಸಂಯುಕ್ತ ಪ್ರಕಾಶನ, ಮೈಸೂರು; ಮೊ.ಮು: ೧೯೭೬; ಪುಟ ೧೬+೨೦೬=೨೨೨; ಡೆಮ್ಮಿ ೧/೮

ಏಳು ತಾಲ್ಲೂಕುಗಳಿಂದ ಸಂಗ್ರಹಿಸಲ್ಪಟ್ಟ ೩೦ ಕಥೆಗಳಿವೆ. ದೇಜಗೌ ಅವರ ಮುನ್ನುಡಿ ಇದೆ. ಐದು ಅನುಬಂಧಗಳಿವೆ: ೧.ಘಟ್ಟದ ಶೆಟ್ಟಿ ಉದ್ದಂಡ್ರಾಯ ೨.ನೊಣಮುತ್ತ ೩.ಅಡಕ್ರಾಜನ ಮಳ್ಳು ೪.ವಕ್ತ್ಯಗಳು ೫.ಅರ್ಥಕೋಶ.

೧೫೬೫. ಮಂಡ್ಯ ಜಿಲ್ಲೆಯ ಜನಪದ ಕಲಾವಿದರು

ಲೇ: ಜಿ.ವಿ.ದಾಸೇಗೌಡ; ಪ್ರ: ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು; ಮೊ.ಮು: ೨೦೧೦; ಪುಟ ೧೪+೧೨೪=೧೩೮; ಡೆಮ್ಮಿ ೧/೮

ಮಂಡ್ಯ ಜಿಲ್ಲೆಯ ೬೭ ಕಲಾವಿದರನ್ನು ಪರಿಚಯಿಸಿಕೊಡುವ ಗ್ರಂಥ: ೧.ಪುಟ್ಟೇಗೌಡ ೨.ಸಿದ್ಧಪ್ಪ ಉರುಫ಼ ಧ್ವಂಸಣ್ಣ ೩.ಎಚ್.ಎನ್. ಪರಶಿವಮೂರ್ತಿ ೪.ನಿಂಗಣ್ಣ ೫.ಎಲ್. ಶಂಕರ್ ೬.ಅರ್ಚಕ ಗಂಗಾಧರ ೭.ರಾಮಯ್ಯ ೮.ಜಿ.ಸಿ.ದೊಡ್ಡಹನುಮೇಗೌಡ ೯.ಶೀನಪ್ಪ ೧೦.ಎಚ್, ಎಸ್. ಕೆಂಪಯ್ಯ ೧೧.ಚಂದ್ರಶೇಖರ ಆರಾಧ್ಯ ೧೨.ಬೆಟ್ಟಯ್ಯ ೧೩.ಪುಟ್ಟಸ್ವಾಮಿ ೧೪.ಹೆಮ್ಮಿಗೆ ಬಸವರಾಜು ೧೫.ದೊಡ್ಡ ತಾಯಮ್ಮ ೧೬.ಚಿಕ್ಕತಾಯಮ ೧೭.ಲಕ್ಷ್ಮಮ್ಮ ೧೮.ವೆಂಕಟಮ್ಮ ೧೯.ರುದ್ರಪ್ಪ ಗೊರವಾಲೆ ೨೦.ಜವರಯ್ಯ ೨೧.ಬೋರಮ್ಮ ೨೨.ಕೆ.ಎಂ.ಕೃಷ್ಣೇಗೌಡ ೨೩.ಗೌರಮ್ಮ ೨೪.ಕೃಷ್ಣೇಗೌಡ ೨೫.ನರಸಿಂಹಶೆಟ್ಟಿ ೨೬.ಆರ್. ಶಿವಣ್ಣಗೌಡ ೨೭.ನಾಗಮ್ಮ ೨೮.ಸ್ವಾಮಿಗೌಡ ೨೯.ತಿಮ್ಮಮ್ಮ ೩೦.ಹನುಮಮ್ಮ ೩೧.ಶಿವಣ್ಣ ೩೨.ತಾಯಮ್ಮ ೩೪.ಸಾಕಮ್ಮ ೩೫.ಅಂಗಡಿ ಜಯರಾಮ್ ೩೬.ಶ್ರೀನಿವಾಸಪ್ಪ ಸ್ವಾಮೀಜಿ

೩೭.ಗಿರಿಯಮ್ಮ ೩೮.ಮರಿಅರಸಮ್ಮ ೩೯.ಸ್ವಾಮಿ ೪೦.ಪುಟ್ಟಸಿದ್ದಮ್ಮ ೪೧.ವೆಂಕಟಮ್ಮ ೪೨.ಮಹದೇವಯ್ಯ ೪೩.ಎಲ್. ಮಾದಯ್ಯ ೪೪.ಚೀರ್ಕುಣಿ ೪೫.ಕರಿಯಪ್ಪ ೪೬.ಚಿಕ್ಕಾಡೆ ಹೊನ್ನಮ್ಮ ೪೭.ಚೆನ್ನಮ್ಮ ೪೮.ಸಿ. ಅಂಕಯ್ಯ ೪೯.ಲಿಂಗದ ವೀರಪ್ಪನವರು ೫೦.ಡಿ. ಎಂ. ಮಹೇಶ್ ೫೧.ಚಿಕ್ಕೇಗೌಡ ೫೨.ಕನ್ನಲಿ ಶಾರೀಮಂಚಯ್ಯ (ಮರಯ್ಯ) ೫೩.ಸಿದ್ದಯ್ಯ ೫೪.ಬಸವೇಗೌಡ ೫೫.ಬಿ.ಕೆ. ರಾಮಣ್ಣ ೫೬.ಚಿಕ್ಕೀರಯ್ಯ ೫೭.ಗಂಗಣ್ಣ ೫೮.ಎಂ. ಮಹದೇವ ಸ್ವಾಮಿ ೫೯.ಕಾಳೀರಯ್ಯ ತಳಗವಾದಿ ೬೦.ನರಸಮ್ಮ ೬೧.ಬೋರಮ್ಮ ೬೨.ಸರೋಜಮ್ಮ ೬೩.ಪುಟ್ಟಲಿಂಗಮ್ಮ ೬೪.ದೊಡ್ಡತಾಯಮ್ಮ ೬೫.ಹಿಂದಲ ಹಟ್ಟಿ ಚನ್ನೇಗೌಡ ೬೬.ಮೂಗಣ್ಣ (ಕೃಷ್ಣ) ೬೭.ಭೂಮಿಗೌಡ

೧೫೬೬. ಮಂಡ್ಯ ಜಿಲ್ಲೆಯ ಜಾತ್ರೆಗಳು

ಲೇ: ಜಿ. ವಿ. ದಾಸೇಗೌಡ; ಪ್ರ: ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು –೧೮; ಮೊ.ಮು: ೨೦೦೦, ಪುಟ ೧೬+೧೯೬=೨೧೨, ಡಿಮ್ಮೈ ೧/೮

ಜಾತ್ರೆಗಳನ್ನು ತಾಲ್ಲೂಕುವಾರು ಏಳು ಅಧ್ಯಾಯಗಳನ್ನಾಗಿ ವಿಂಗಡಿಸಲಾಗಿದೆ. ಎಚ್.ಜೆ. ಲಕ್ಕಪ್ಪಗೌಡ ಅವರ ಮುನ್ನುಡಿ, ಸಂಧ್ಯಾರೆಡ್ಡಿ ಹಾಗೂ ದೇವೇಂದ್ರಕುಮಾರ ಹಕಾರಿ ಅವರುಗಳ ಸಂಪಾದಕರ ಮಾತು, ಪ್ರಸ್ತಾವನೆ, ಇವೆ. ಕೊನೆಯಲ್ಲಿ ಟಿಪ್ಪಣಿಗಳು, ಮಾಹಿತಿದಾರರು, ಪರಾಮರ್ಶನ ಗ್ರಂಥಗಳು, ಇವೆ.

೧೫೬೭. ಮಂಡ್ಯ ಜಿಲ್ಲೆಯ ಸ್ಥಳನಾಮಗಳ ಅವಲೋಕನ

ಲೇ: ತೈಲೂರು ವೆಂಕಟಕೃಷ್ಣ; ಪ್ರ: ಬಾನು ಪ್ರಕಾಶನ, ೨೯೫೮, ನೆಹರು ನಗರ, ಮಂಡ್ಯ; ಮೊ.ಮು: ೨೦೦೪; ಪು: ೬+೧೧೨=೧೧೮; ಡಿಮ್ಮೈ ೧/೮

ಎಂಟು ಶೀರ್ಷಿಕೆಗಳಿವೆ: ೧.ಪ್ರವೇಶ ೨.ಮಂಡ್ಯ ತಾಲೂಕಿನ ಸ್ಥಳನಾಮಗಳು ೩.ಮದ್ದೂರು ತಾಲೂಕಿನ ಸ್ಥಳನಾಮಗಳು ೪.ಮಳವಳ್ಳಿ ತಾಲೂಕಿನ ಸ್ಥಳನಾಮಗಳು ೫.ನಾಗಮಂಗಲ ತಾಲೂಕಿನ ಸ್ಥಳನಾಮಗಳು ೬.ಕೃಷ್ಣರಾಜ ಪೇಟೆ ತಾಲೂಕಿನ ಸ್ಥಳನಾಮಗಳು ೭.ಪಾಂಡವಪುರ ತಾಲೂಕಿನ ಸ್ಥಳನಾಮಗಳು ೮.ಶ್ರೀರಂಗ ಪಟ್ಟಣ ತಾಲೂಕಿನ ಸ್ಥಳನಾಮಗಳು. ಎಂ. ಚಿದಾನಂದ ಮೂರ್ತಿ ಅವರ ಮುನ್ನುಡಿ ಇದೆ.

೧೫೬೮. ಮಂಡ್ಯ ಜಿಲ್ಲೆಯ ಸಾಂಸ್ಕೃತಿಕ ಪರಂಪರೆ

ಲೇ: ತೈಲೂರು ವೆಂಕಟಕೃಷ್ಣ; ಪ್ರ: ಬಾನು ಪ್ರಕಾಶನ, ೨೯೫೮, ನೆಹರು ನಗರ, ಮಂಡ್ಯ; ಮು.ಗಳು: ೧೯೯೨, ೧೯೯೯, ೨೦೦೨; ಪು: ೧೨+೧೨೨=೧೩೪; ಡಿಮ್ಮೈ ೧/೮

ಐದು ಭಾಗಗಳಲ್ಲಿ ಇಲ್ಲಿನ ವಿಚಾರಗಳು ಹರಡಿಕೊಂಡಿವೆ: ೧.ಶಾಸನ ಸಂಸ್ಕೃತಿ ೨.ದೇವಾಲಯ ಸಂಸ್ಕೃತಿ, ವಾಸ್ತು ಶಿಲ್ಪ=ಮೂರ್ತಿ ಶಿಲ್ಪ ೩.ಐತಿಹ್ಯ, ಅಗ್ರಹಾರ ಮತ್ತು ಮಠಗಳು ೪.ಸಾಹಿತ್ಯ, ಧರ್ಮ ಮತ್ತು ಕಲೆ ೫.ಜಾನಪದ. ಪ್ರಾರಂಭದಲ್ಲಿ ಮಂಡ್ಯ

ಕೆಲವು ಜಾನಪದೀಯ ಅಂಶಗಳು ೮.ಕಣತೂರಮ್ಮ-ಒಂದು ಅಧ್ಯಯನ ೯.ಬೇಲೂರು ಅಥವಾ ಕೋವಿಪೇಟೆ ದುರ್ಗಮ್ಮ-ಒಂದು ಅಧ್ಯಯನ ೧೦.ಜಾನಪದದ ಸಂರಕ್ಷಣೆ ಹೇಗಾಗಬೇಕು? ಕೆಲವು ಅಭಿಪ್ರಾಯಗಳು. ಅನುಬಂಧದಲ್ಲಿ, ಹೊಗಳಿಕೆ ಪದಗಳು, ಕಣತೂರಮ್ಮನ ಹಾಡುಗಳು (ಪಾಲಿಕೆ ಪದಗಳು), ಬಿಷ್ಟಮ್ಮ-ಒಂದು ಹಾಡ್ಗತೆ, ದುರ್ಗಮ್ಮನ ಹಾಡುಗಳು ಇವೆ. ಎಚ್.ಎಲ್. ನಾಗೇಗೌಡ ಅವರ ಹಿರಿಯರ ಮಾತು ಎಂಬ ಮುನ್ನುಡಿ ಇದೆ.

೧೫೭೪. ಮಣ್ಣಿನ ಪದಗಳು

ಸಂ: ಹೆಜ್ಜಿಗೆ ಲಿಂಗಣ್ಣ; ಪ್ರ: ಶ್ರೀ ಶಿವಯೋಗ ಪ್ರಕಾಶನ, ನಂಜನಗೂಡು; ಮೊ.ಮು: ೧೯೭೭; ಪುಟ ೧೬+೧೧೭=೧೩೩; ಕ್ರೌನ್ ೧/೮

೫೮೫ ಸ್ವರಚಿತ ತ್ರಿಪದಿಗಳ ಸಂಕಲನ. ಹನ್ನೆರಡು ಭಾಗಗಳಾಗಿ ವಿಂಗಡಿಸಲ್ಪಟ್ಟಿವೆ. ದೇಜಗೌ ಅವರ ಮುನ್ನುಡಿ, ತ.ಸು.ಶಾಮರಾಯ ಅವರ ಹರಕೆ, ಇವೆ.

೧೫೭೫. ಮಣ್ಣಿನ ಮಿಡಿತ

ಸಂ: ಡಿ. ಲಿಂಗಯ್ಯ; ಪ್ರ: ದಿನಕರ ಪ್ರಕಾಶನ, ೬೯೦, ೭ನೇ ಬ್ಲಾಕ್, ಬನಶಂಕರಿ ೩ನೇ ಹಂತ, ಬೆಂಗಳೂರು-೫೬೦ ೦೮೫; ಮೊ.ಮು: ೧೯೬೯, ಎ.ಮು: ೧೯೮೬; ಪ್ರ: ೨೪+೧೫೬=೧೮೦; ಕ್ರೌನ್ ೧/೮

ಜನಪದ ಕತೆಗಳ ಸಂಕಲನ ಎಂಬ ಅಡಿಬರಹ ಇದೆ. ಇಲ್ಲಿ ೨೨ ಕತೆಗಳು ಆರು ಬಗೆಯಲ್ಲಿ ವರ್ಗೀಕೃತಗೊಂಡಿವೆ. **ಐತಿಹ್ಯ ಕತೆ:** ೧.ಹೆಗ್ಡೆ ದ್ಯಾವ. **ಬುದ್ಧಿವಂತಿಕೆ ಕತೆಗಳು:** ೨.ಮೂರ್ಖ ರಾಜ ಮುತ್ಠಾಳ ಮಂತ್ರಿ ೩.ಒಂದಾಣೆ ಮದುವೆ ೪.ಸತ್ತು ಬದುಕಿದ ಸೊಸೆ ೫.ಅತ್ತಿಗೆ-ನಾದಿನಿ ೬.ಮೂರು ಪಾವಲಿ ೯.ಹಸುವಿನ ಪಾಲು ೧೦.ಅತ್ತೆ-ಸೊಸೆ ೧೧.ಮೂರು ಜನ ಕಿವುಡ್ರು. **ರಮ್ಯ ಕತೆಗಳು:** ೧೨.ರಾಜನಿಗೆ ಬೇಡವಾದ ಮಗಳು ೧೩.ನಾಯಿಯ ಮಕ್ಕಳು ೧೪.ಮಿತ್ರದ್ರೋಹಿ ೧೫.ರಾಜಕುಮಾರನ ಸಾಹಸ ೧೬.ಸತ್ತ ನಿರಂಜನ ೧೭.ಗಿಣಿ ಒಳಗಿನ ರಾಜಕುಮಾರಿ ೧೮.ರಾಜಕುಮಾರ ಮಂತ್ರಿಕುಮಾರ ೧೯.ಸವತಿ ಕಾಟ ೨೦.ಮಲತಾಯಿ. **ಅತಿಮಾನುಷ ಪತ್ನಿಯರ ಕತೆ:** ೨೧.ದೇವಕನ್ನಿಕೆಯರು. **ಪ್ರಾಣಿಕತೆ:** ೨೨.ಕಿಲಾಡಿ ನರಿ. ಜಿ. ಎಸ್. ಶಿವರುದ್ರಪ್ಪ ಅವರ ಮುನ್ನುಡಿ, ಅನುಬಂಧದಲ್ಲಿ, ಶಬ್ದಕೋಶ, ವರ್ಗ ಮತ್ತು ಆಶಯ ಸೂಚಿ, ಇವೆ.

೧೫೭೬. ಮದಗದ ಕೆಂಚಮ್ಮ

ಸಂ: ಬಳ್ಳೇಕೆರೆ ಹನುಮಂತಪ್ಪ; ಪ್ರ: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡಿಮ್ಮೆ, ನೃಪತುಂಗರಸ್ತೆ, ಬೆಂಗಳೂರು-೫೬೦ ೦೦೨; ಮೊ.ಮು: ೧೯೯೪; ಪುಟ ೧೦೦; ಡೆಮ್ಮೆ ೧/೮

೧೫೭೧. ಮಂಥಾನ

ಲೇ: ಎಸ್.ವಿ. ಪರಮೇಶ್ವರ ಭಟ್ಟ; ಪ್ರ: ರತ್ನಾಕರ ಪ್ರಕಾಶನ, ಮಂಗಳೂರು–೩; ಮೊ.ಮು: ೧೯೬೯; ಪು: ೮+೧೦೦ = ೧೦೮; ಕ್ರೌನ್ ೧/೮

ಏಳುನೂರು ಸ್ವತಂತ್ರ ಗಾದೆಗಳು ಎಂಬ ಅಡಿಬರಹ ಇದೆ. "ಮಂಥಾನ ಎಂಬ ಹೆಸರಿನ ಈ ಹೊತ್ತಗೆ ಏಳುನೂರು ಬಿಡಿನುಡಿಗಳ ಒಂದು ಸಂಕಲನ. ಭಾಷೆ ಶೈಲಿಗಳಲ್ಲಾಗಲಿ, ವಸ್ತು ಉದ್ದೇಶಗಳಲ್ಲಾಗಲಿ, ರೂಪ ರಚನೆಗಳಲ್ಲಾಗಲಿ ಈ ಬಿಡಿನುಡಿಗಳಿಗೂ ನಮ್ಮಲ್ಲಿ ಈಗಾಗಲೆ ಪ್ರಚಾರದಲ್ಲಿರುವ ಗಾದೆಗಳಿಗೂ ಹೆಚ್ಚಿನ ಹೋಲಿಕೆ ಇದೆ. ಈ ಕಾರಣದಿಂದ ಇವುಗಳನ್ನು ಗಾದೆಗಳೆಂದೇ ಕರೆಯಲಾಗಿದೆ" ಎಂಬುದಾಗಿ ಲೇಖಕರು ತಮ್ಮ ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾರೆ.

೧೫೭೨. ಮಕ್ಕಳ ಹಾಡುಗಳು

ಸಂ: ವೈ.ಸಿ. ಭಾನುಮತಿ; ಪ್ರ: ಕರ್ನಾಟಕ ಸರ್ಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು–೫೬೦ ೦೦೨; ಮೊ.ಮು: ೨೦೦೯; ಪುಟ ೫೮+೬೭೮=೭೩೬; ಡಿಮ್ಮೈ ೧/೮

ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯಮಾಲೆಯ ೨೫ನೆಯ ಸಂಪುಟ. ಹನ್ನೊಂದು ಬಗೆಯ ಹಾಡುಗಳಿವೆ: ೧.ಆಟದ ಹಾಡುಗಳು ೨.ಪರಿಹಾಸದ ಹಾಡುಗಳು ೩.ದೇವರ ಹಾಡುಗಳು ೪.ಪ್ರಕೃತಿ ಸಂಬಂಧಿ ಹಾಡುಗಳು ೫.ಸಂವಾದದ ಹಾಡುಗಳು ೬.ಎಣಿಕೆ ಕಲಿಕೆ ಹಾಡುಗಳು ೭.ಘಟನಾತ್ಮಕ ಹಾಡುಗಳು ೮.ಆಚರಣೆ ಸಂಬಂಧಿ ಹಾಡುಗಳು ೯.ಬಿಡಿ ಹಾಡುಗಳು ೧೦.ಅಧುನಿಕ ಹಾಡುಗಳು ೧೧.ಅಶ್ಲೀಲ ಹಾಡುಗಳು **ಅನುಬಂಧಗಳು:** ೧.ಆಣೀಪೀಣೆ ೨.ಜೋಗುಳ ೩.ಲಾಲಿಹಾಡು ೪.ಉರ್ದು ಹಾಡುಗಳು ೫.ತುಳು ಹಾಡುಗಳು ೬.ಟಿಪ್ಪಣಿಗಳು ೭.ಆಕರ ಗ್ರಂಥಸೂಚಿ. ಅನುಬಂಧದಲ್ಲಿ, ಆಣೀಪೀಣೀ, ಜೋಗುಳ, ಲಾಲಿಹಾಡು, ಉರ್ದು ಹಾಡುಗಳು, ತುಳು ಹಾಡುಗಳು, ಟಿಪ್ಪಣಿಗಳು, ಆಕರ ಗ್ರಂಥಸೂಚಿ ಇವೆ.

೧೫೭೩. ಮಗನ ತಿಂದ ಮಾರಾಯನ ದುರ್ಗ

ಲೇ: ರಾಜೇಗೌಡ ಹೊಸಹಳ್ಳಿ; ಪ್ರ: ಅಂಕಿ ಅಂಶಿ ಪ್ರಕಾಶನ, ಮರಸು ಹೊಸಹಳ್ಳಿ, ಆಲೂರು ಅಂಚೆ, ಹಾಸನ ಜಿಲ್ಲೆ; ಮೊ.ಮು: ೧೯೮೯; ಪು: ೮+೧೭೮=೧೮೬; ಕ್ರೌನ್ ೧/೮

ಹತ್ತು ಲೇಖನಗಳ ಸಂಕಲನ: ೧.ಹಾಸನ ಜಿಲ್ಲೆಯ ಜನಪದ ಕಲೆಗಳು–ಒಂದು ಸಮೀಕ್ಷೆ ೨.ತೊಡಕಿನ ಕಲ್ಲು–ಒಂದು ಕತಾ ವಿಚಾರ ೩.ಯಾರೀ ಸತ್ಹೇಳು ದೇವಪ್ಪ ಹೆಗ್ಗಡೆ? ೪.ಮಗನ ತಿಂದ ಮಾರಾಯನ ದುರ್ಗ ೫.ಚಿಕ್ಕಯ್ಯ ಹೇಳಿದ ಮೂರು ಪುರಾಣ ಕತೆಗಳು ೬.ಗಾದೆ ಒಗಟುಗಳಲ್ಲಿ ಲೈಂಗಿಕತೆ ೭.ಮಲೆನಾಡಿನ ಪ್ರಾಣಿಪಕ್ಷಿಗಳ

೧೫೭೯. ಮದುವೆಯ ಮಂಟಪ

ಸಂ: ವಿ.ಜಿ.ಹೊಸಮನೆ, ಶಾರದಾ ವಿ. ಭಟ್ಟ; ಪ್ರ: ಭಾರದ್ವಾಜ ಪ್ರಕಾಶನ, ಕದಿರೆ, ಮಂಗಳೂರು-೫೭೫೦೦೨; ಮೊ.ಮು: ನಮೂದು ಇಲ್ಲ; ಪು: ೧೦+೨೨=೩೨; ಫೂಲ್ಸ್ ಕ್ಯಾಪ್ ೧/೮

ಮದುವೆಯ ಹಾಡುಗಳು ಎಂಬ ಅಡಿಬರಹ ಇದೆ.ಹದಿನೆಂಟು ಹಾಡುಗಳಿವೆ: ೧.ಪಾರ್ವತಿ ಕಲ್ಯಾಣ(ಧಾರೆಗೆ ಹೇಳುವ ಹಾಡು)೨.ಮದುವೆ ದಿಬ್ಬಣದ ಸ್ವಾಗತ ೩.ಬಾಯಾರಿಕೆ ನೀಡುವುದು ೪.ಉಪಚಾರಕ್ಕೆ ಉತ್ತರ ೫.ಸ್ವೀಕಾರ ೬.ಮದುಮಗಳಿಗೆ ಹೂ ಮುಡಿಸುವುದು ೭.ವರನ ಪಾದ ತೊಳೆಯುವುದು ೮.ದಿಬ್ಬಣ ಒಳಹೋಗುವುದು ೯.ಧಾರೆಗೆ ಕರೆದೊಯುವುದು ೧೦.ಹೂಮಾಲೆ ಹಾಕುವುದು ೧೧.ಧಾರೆ ಎರೆಯುವುದು ೧೨.ಹೂ ಹಂಚುವುದು ೧೩.ವರನನ್ನು ಹಸೆಗೆ ಕರೆಯುವುದು ೧೪.ವಧುವನ್ನು ಹಸೆಗೆ ಕರೆಯುವುದು ೧೫.ಹಸೆಗೆ ಬರುವುದು ೧೬.ಭೋಜನಕ್ಕೆ ಏಳಿ ನೀಡುವುದು ೧೭.ದಿಬ್ಬಣ ಹೊರಡುವುದು ೧೮.ಚತುರ್ಥಿಗೆ ಆಮಂತ್ರಣ ಹೊಸಮನೆ ನಾರಾಯಣ ಭಟ್ಟ ಅವರ ಆಶೀರ್ವಚನ, ದಿ.ಹೊಸಮನೆ ಗಂಗಮ್ಮ ಅವರ ಹಾಡಿರುವ ಜನಪದ ಸಾಹಿತ್ಯದಲ್ಲಿ ನೀತಿ ಎಂಬ ನಾಲ್ಕು ತ್ರಿಪದಿಗಳು ,ಪ್ರಕಾಶಕರ ಎರಡು ಮಾತು,ಎಂ.ರಾಮಕೃಷ್ಣ ಭಟ್ಟ ಅವರ ಮುನ್ನುಡಿ (೧೯೭೯)ಮದುವೆಯ ಮಂಟಪ ಎಂಬ ಬರಹ ,ಕೊನೆಯಲ್ಲಿ ಸಂಪಾದಕರ ಹಿನ್ನುಡಿ ಇದೆ.

೧೫೮೦. ಮದ್ದುಂಟೆ ಜನನ ಮರಣಕ್ಕೆ

ಸಂ: ಗುಂಡ್ಮಿ ಚಂದ್ರಶೇಖರ ಐತಾಳ; ಪ್ರ: ಆನಂದಪ್ರಕಾಶನ, ಮಂಗಳೂರು; ಮೊ.ಮು: ೧೯೭೩; ಪುಟ ೧೬+೪೪೨+೪=೪೬೨; ಡಿಮೈ ೧/೮

ದಕ್ಷಿಣ ಕನ್ನಡ ಜಿಲ್ಲೆಯ ಕನ್ನಡ ಮಾತನಾಡುವ ಪ್ರದೇಶದ ಜನಪದ ಸಾಹಿತ್ಯ ಎಂಬ ಅಡಿಬರಹ ಇದೆ. ೭೨ ಪುಟಗಳ ಸುದೀರ್ಘ ಪ್ರಸ್ತಾವನೆಯಲ್ಲಿ, ಸ್ವವಿಚಾರ, ಭೌಗೋಳಿಕ ಹಿನ್ನೆಲೆ, ಆಚಾರ ವಿಚಾರಗಳು, ಹಬ್ಬಹಾಡುಗಳು, ಕಟ್ಟುಕಟ್ಟಳೆಗಳು, ರೀತಿ ನೀತಿಗಳು, ತಿಂಡಿ-ತಿನಿಸಗಳು, ಕಸಬುಗಳು, ಉಡುಗೆತೊಡುಗೆಗಳು, ಆಭರಣಗಳು, ಆರಾಧನೆಗಳು, ಮಳೆಗೆ ಸಾಧನಗಳು, ಹವ್ಯಾಸಗಳು, ಆಟಗಳು, ಕಲೆಗಳು, ನಂಬಿಕೆಗಳು, ಜನಪದ ಸಾಹಿತ್ಯ ಸಂಪಾದನೆ, ಊಹಾತ್ಮಕ ಪರಿಷ್ಕರಣ, ಪ್ರಾಸ ವಿಚಾರ, ಇತ್ಯಾದಿ ಪ್ರಸ್ತಾಪಿಸಲಾಗಿದೆ. ಮುಂದಿನ ವಿಭಾಗದಲ್ಲಿ 'ಸಂಗ್ರಹಿಸಿದ ಜನಪದ ಗೀತೆಗಳ ರಸಘಟ್ಟಗಳನ್ನೂ ಕಾವ್ಯ ಸ್ವಾರಸ್ಯವನ್ನೂ ಗುರುತಿಸುತ್ತ' ಹೋಗಿರುವುದಾಗಿ ಸಂಪಾದಕರು ಹೇಳಿಕೊಂಡಿದ್ದಾರೆ. ಅದರ ಜೊತೆಗೆ ಭಾಷಾ ಪ್ರಭೇದಗಳ ಬಗ್ಗೆಯೂ ಚರ್ಚೆ ಇದೆ. ಅಲ್ಲಿಂದ ಮುಂದೆ ತ್ರಿಪದಿಗಳ ಸಂಗ್ರಹವಿದೆ. ಅದನ್ನು ಹೀಗೆ ವಿಂಗಡಿಸಲಾಗಿದೆ: ಹರಕೆ, ತಾಯಿ-ಮಗು, ತಾಯಿ ಮಗಳು ತವರು, ಗೋಮಾತೆ, ಸರಸ, ವಿರಸ, ಹಾಸ್ಯ, ದುಃಖ ನಿವೇದನೆ, ಸುಖನಿವೇದನೆ, ವರ್ಣನೆ, ಉಪದೇಶ, ಪ್ರಣಯ, ರಾಮಾಯಣ, ಭಾಗವತ, ಇತಿಹಾಸ,

ಜನಪದ ಖಂಡಕಾವ್ಯ ಎಂಬ ಅಡಿಬರಹ ಇದೆ. ಪ್ರಸ್ತಾವನೆಯಲ್ಲಿ ೧.ಐತಿಹ್ಯ ಮತ್ತು ಇತಿಹಾಸದ ಒಂದು ನೋಟ ೨.ಕೆಂಚಮ್ಮನ ಹಾಡ್ಗತೆಯ ಒಳಧ್ವನಿ – ಎಂಬ ಎರಡು ವಿಭಾಗಗಳಿವೆ. ಪ್ರಾರಂಭದಲ್ಲಿ ಜೀ.ಶಂ. ಪರಮಶಿವಯ್ಯ ಅವರ ಪ್ರಧಾನ ಸಂಪಾದಕರ ಮಾತು ಇದೆ. ಕೊನೆಯಲ್ಲಿ, ಕೆಂಚಮ್ಮನ ಬಗ್ಗೆ ಐತಿಹ್ಯ, ಹಾಡಿದವರು, ಮುಖ್ಯ ಆಶಯಸೂಚಿ, ಅರ್ಥಕೋಶ ಇವೆ.

೧೫೭೭. ಮತಿಘಟ್ಟ ಕೃಷ್ಣಮೂರ್ತಿ

ಲೇ: ಹಂಪನಹಳ್ಳಿ ತಿಮ್ಮೇಗೌಡ; ಪ್ರ: ಕರ್ನಾಟಕ ಜಾನಪದ ಪರಿಷತ್ತು, ೧, ಜಲದರ್ಶಿನಿ ಬಡಾವಣೆ, ಎಂ.ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ, ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು–೫೬೦ ೦೫೪; ಮೊ.ಮು.೨೦೦೮; ಪುಟ ೩೨; ಕ್ರೌನ್ ೧/೮

ವ್ಯಕ್ತಿ ಪರಿಚಯ ಎಂಬ ಅಡಿಬರಹ ಇದೆ. ಅಧ್ಯಕ್ಷರ ಮಾತು ಎಂಬ ಜಿ. ನಾರಾಯಣ ಅವರ ಮುನ್ನುಡಿ ಇದೆ.

೧೫೭೮. ಮದುವೆ ಮನೆ ಚೆಂದ

ಲೇ: ವಿ.ಗ. ನಾಯಕ; ಪ್ರ: ಸ್ಮೃತಿ ಪ್ರಕಾಶನ, ಅಡ್ಯನಡ್ಕ, ೫೭೪ ೨೪೩; ಮೊ.ಮು.೧೯೭೮; ಪುಟ ೭೬; ಡಿಮ್ಮೈ ೧/೮

ಜನಪದ ಎಂಬ ಅಡಿಬರಹ ಇದೆ. ೨೯ ಹಾಡುಗಳು ೩ ಲೇಖನಗಳು ಇವೆ. ಹಾಡುಗಳು: ೧.ಲಾತ ತಮ್ಮ್ಯನ ಮದುವಿಯೆ ೨.ಸಂಪುಗೆ ಹೂಂಗ ಮುಡುಬಾರೆ ೩.ಮೋರಿತಕೋಗ್ವಾಗೆ ಒಳ್ಳೆ ಮೋರಿತ ಬೇಕು ೪.ಸಾಸೆ ಬಂದದ್ಯೊ ನುಸುಲೀಗೆ ೫.ಯೇನ ಬಿಲ್ಲಾಣಿ ಬರವೇಕೆ ಕಟ್ಟಿಸೀತು ೬.ಮುತ್ತಿವಂತ ಮೈಗೆ ತೆಗುರೆಣ್ಣೆ ೭.ನಿಸ್ತ್ರೇನಿನ ಮಗುನ ಜಳಕವೇ ೮.ಬಾಸಿಂಗ.....ಸೂಡವನೆ ಸುಗುಣದಿಂದ ೯.ದೇವರ ಸರುಣಿಗೆ ಬರುವಾಗ ೧೦.ಸವನೇಯ ಅಕ್ಕ ಮದುವೇಗೆ ೧೧.ಜಾಣ ಲಗ್ಗಿನಕೆ ಸವುನನೆ ೧೨.ದೊರೆಗಳ ದಿಬ್ಬಣವೆ ಬರುವದು ೧೩.ಬೇಗೆ ದಿಬ್ಬಣದ ಎದುರ್ಗೊಳ್ಳಿ ೧೪.ಬೇಗೊಂದ ಬಳುವ ತೆಗಿಬಾರೆ ೧೫.ಮಾವ ಮೆಚ್ಚಿ ಮಗುಳ ಕೊಡುತೇನೆಂದ ೧೬.ಅತ್ತೆ ನಿಮ್ಮನಿಗೆ ಅಳಿ ಬಂದ ೧೭.ಮುದ್ರೆದುಂಗಿಲವಲಿಡಬೇಕು ೧೮.ರಂಬೆಗೆ ತುಂಬವರೆ ಮಡಿಲವ ೧೯.ವಲ್ಲಿಗೆಯ ಸೆರುಗ ಮರೆಮಾಡಿ ೨೦.ಎರುದನೆಲ್ಲಪ್ಪಯ್ಯ ಕೈದಾರಿ ೨೧.ಮಾವಯ್ನ ಕೂಡಾಡಿ ಮಗುಳ ಗೆದ್ದ ೨೨.ಮಡದಿ ಕೂಡೆ ಮನೆಗೆ ಸವನೆಂದಿ ೨೩.ಬೇಡಿಕೊಳೆ ನಾರಿ ಬಳುವಳಿ ೨೪.ಕೊಲ್ಬೇಡ ಮಗಳ ಬೈಬೇಡ ೨೫.ಬಲುಗಾಲ ಮುಂದಿಟ್ಟೆ ಬರಹೇಳಿ ೨೬.ಸೆಸುಬಾಳಿಗೆಲ್ಲ ಪಲು ಬಂತೇ ೨೭.ಮುತ್ತ ಕಂಡಂತೆ ಸಲಗಿಕೊಳ್ಳೆ ೨೮.ಕದಬಿಡೆನಂಗಿ ಮೋಹನಾಂಗಿ ೨೯.ಬಾವಿಗೆ ಬೆಲ್ಲ ಬೆರೂ ಸವರೆ. ಲೇಖನಗಳು: ೧.ಗಿಳಿ ವರ್ಣದ ಹೆಣ್ಣ ಗೆಲುವೇನೆ ೨.ಮೈ ನೆರೆದಳೆ.... ನೆಗ್ಗಿ ನೆಗುದನೆ ೩.ಸೋಬನದ ಕೆಲಸ ನಿಮಗಂಟು. ಕೊನೆಯಲ್ಲಿ, ಶಬ್ದಕೋಶ, ಅಜ್ಜಿ ನಿಮ್ಮೊಡನಿನ್ನೊಂದು ನಿಮಿಷ ಎಂಬ ಹಾಡುಗಾರ್ತಿಯ ವಿವರಗಳು ಇವೆ.

ಜಿಲ್ಲೆಯ ನಕ್ಷೆಯೂ, ಮಂಡ್ಯ ಜಿಲ್ಲೆಯ ಸಾಂಸ್ಕೃತಿಕ ಪರಂಪರೆ ಎಂಬ ನಾಲ್ಕು ಪುಟಗಳ ಬರಹವೂ, ಇವೆ. ಕೆಲವು ಫೋಟೋಗಳಿವೆ. ಎಂ. ಚಿದಾನಂದಮೂರ್ತಿ ಅವರ ಮುನ್ನುಡಿ ಇದೆ.

೧೫೬೯. ಮಂಡ್ಯ ಸುತ್ತಿನ ಗಾದೆಗಳು

ಸಂ: ಕೆ.ಬಿ. ಪುಟ್ಟಸ್ವಾಮಿ; ಪ್ರ: ರಶ್ಮಿ ಪ್ರಕಾಶನ, ೭೦೧, ಇ ಮೊದಲನೇ ಮಹಡಿ, ೨ನೇ ಹಂತ, ಕೆ.ಎಚ್.ಬಿ.ಕಾಲೋನಿ, ಕುವೆಂಪುನಗರ, ಮೈಸೂರು–೫೭೦ ೦೨೩; ಮೊ.ಮು: ೨೦೦೨; ಪುಟ ೧೪+೧೦೬=೧೨೦; ಕ್ರೌನ್ ೧/೮

೨೨೦೬ ಗಾದೆಗಳ ಸಂಕಲನ. ಜಿ.ಟಿ. ವೀರಪ್ಪ ಅವರ ಮುನ್ನುಡಿ, ರಾಗೌ ಅವರ ಹಾರೈಕೆ ಇವೆ.

೧೫೭೦. ಮಂಡ್ಯ ಸುತ್ತಿನ ಜಾನಪದ ಕಥೆಗಳು

ಸಂ: ಕೆ.ಬಿ. ಪುಟ್ಟಸ್ವಾಮಿ, ಕೀಲಾರ; ಪ್ರ: ಶಾರದ ಪಬ್ಲಿಕೇಶನ್, ಶಂಭೂನಹಳ್ಳಿ, ಗೊರವಾಲೆ ಅಂಚೆ, ಮಂಡ್ಯ ತಾಲ್ಲೂಕು; ಮೊ.ಮು: ೨೦೧೦; ಪು: ೮+೧೫೮=೧೬೬; ಡಿಮ್ಮೈ ೧/೮

೪೧ ಕಥೆಗಳಿವೆ: ೧.ಆಪತ್ಕಾಲದ ನಂಬಿಕೆ ೨.ಮೂರು ಸಾವಿರಕ್ಕೆ ಮೂರು ಮಾತು ೩.ನೀವು ಉತ್ತರಿಸಬಲ್ಲಿರಾ ೪.ಅತಿಯಾಸೆ ಗತಿ ಕೆಡಿಸಿತು ೫.ಮೈಸೂರು ಕಳ್ಳ ಬೆಂಗಳೂರು ಕಳ್ಳರು ೬.ತಂದೆಗೆ ತಕ್ಕ ಮಗ ೭.ಪೆದ್ದಗುಂಡ ೮.ಬಾಲ ಹೋಯ್ತು ಕತ್ತಿ ಬಂತು ಡುಂಡುಂ ಕತ್ತಿ ಹೋಯ್ತು? ೯.ಇಬ್ಬರ ಹೆಂಡಿರ ಗಂಡ ೧೦.ಲಿಂಗಾಯಿತ ಒಕ್ಕಲಿಗನಾದ ೧೧.ದಾಸಪ್ಪ ಜೋಗಪ್ಪ ೧೨.ಇದ್ದಾಗಲು ಸುಖವಿಲ್ಲ ಸತ್ತಾಗ್ಲೂ ಸುಖವಿಲ್ಲ ೧೩.ಗುರುಶಿಷ್ಯರು ೧೪.ಬೇಟೆಗಾರ ೧೫.ಪ್ರೀತಿ ಯಾರ ಮೇಲೆ/ಯಾತರ ಮೇಲೆ ೧೬.ದೇವರ ಮೂರು ವರಗಳು ೧೭.ಋಷಿ ಶಾಪ/ಇಲಿಯ ಪುನರ್ಜನ್ಮ ೧೮.ನೆಂಟ ದೊಣ್ಣೆ ತುಪ್ಪ ೧೯.ಗುಲಗಂಜಿಯ ಅವಾಂತರ/ಸನ್ಯಾಸಿಯ ಸಿಂಹಾಸನ ೨೦.ದಡ್ಡ ಜಾಣರ ದಾರಿಗಳು ೨೧.ದೇವರಿದ್ದಾನೆಯೇ? ೨೨.ದಾಸಯ್ಯ ಜೋಗಯ್ಯನ ಅವಾಂತರ ೨೩.ಸತ್ಯಕ್ಕೆ ಜಯ ಆದರೆ ನಿಧಾನ ೨೪.ಸರ್/ಡಬ್/ಹೋಯ್ಯ/ ಆಷಾಢಭೂತಿ ಬುದ್ಧಿವಂತರು ೨೫.ಕೈಲಾಸ ಎಷ್ಟು ದೂರ ೨೬.ಪೆದ್ದಗುಂಡ೨ ೨೭.ಬುಡಬುಡಿಕೆ ೨೮.ಕಾಶಿಯ ಪುಣ್ಯ ೨೯.ಗುರುಶಿಷ್ಯರು ೩೦.ಸುಳ್ಳಯ್ಯ ೩೧.ಸಂಗಪ್ಪನ ಜಾಣ್ಮೆ ೩೨.ಸಂಗಪ್ಪನ ದೊಡ್ಡ ಗುಣ ೩೩.ಪೆದ್ದಗುಂಡ ೩೪.ಕುರುಡನ ಎಮ್ಮೆ ೩೫.ಕಜ್ಜಾಯ ೩೬.ಮೆಣಸು ೩೭.ದಾಸಯ್ಯ ೩೮.ನರಿಯ ನ್ಯಾಯ ೩೯.ಎಂದೂ ಮುಗಿಯದ ಕತೆ ೪೦.ಕಾಗೆ–ಗೂಬೆ ೪೧.ಮುದುಕಿಯ ಕೋಳಿ. ಕತೆ ಹೇಳಿದವರ ಹೆಸರುಗಳಿವೆ.

ಒಗಟು, ಲೋಕಾನುಭವ. ಅನುಬಂಧ ೧ರಲ್ಲಿ ಇನ್ನಷ್ಟು ಹಾಡುಗಳಿವೆ. ಅನುಬಂಧ ೨: ಅರ್ಥಕೋಶ, ಎಸ್.ವಿ.ಪರಮೇಶ್ವರ ಭಟ್ಟ ಅವರ ಹಿನ್ನುಡಿ, ಇವೆ.

೧೫೮೧. ಮಧುಗಿರಿಯ ದಂಡಿನ ಮಾರಮ್ಮ

ಲೇ: ಎಂ.ಎಲ್. ನರಸಿಂಹ ಮೂರ್ತಿ; ಪ್ರ: ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ, ೧೪/೩, ನೃಪತುಂಗ ರಸ್ತೆ, ಬೆಂಗಳೂರು-೫೬೦ ೦೦೨; ಮೊ.ಮು: ೧೯೯೫; ಪು: ೧೨+೮೮=೧೦೦; ಡಿಮ್ಮೈ ೧/೮

ಹದಿಮೂರು ಅಧ್ಯಾಯಗಳಿವೆ; ೧.ದವನ ೨.ಜಾತ್ರೆಗಳ ಹುಟ್ಟು ಮತ್ತು ಬೆಳವಣಿಗೆ ೩.ಜಾತ್ರೆಗಳ ಸಾಮಾಜಿಕ ಮಹತ್ವ ೪.ರಥೋತ್ಸವ ೫.ಮಾರಮ್ಮನ ಕಲ್ಪನೆ ೬.ಮಧುಗಿರಿ ದಂಡಿನ ಮಾರಮ್ಮನ ಕಥೆ ೭.ಮಧುಗಿರಿ ದಂಡಿನ ಮಾರಮ್ಮನ ಸ್ಥಾಪನೆ ೮.ಮಧುಗಿರಿ ದಂಡಿನ ಮಾರಮ್ಮ ೯.ಮೂಲ ವಿಗ್ರಹ ೧೦.ದೇವಸ್ಥಾನದ ಪರಿಸರ ೧೧.ಹಟ್ಟಿ ಮಾರಮ್ಮ ೧೨.ಮಧುಗಿರಿ ದಂಡಿನ ಮಾರಮ್ಮನ ಜಾತ್ರೆ ೧೩.ಸಂಬಂಧಿತ ಆಚರಣೆಗಳು. ಅನುಬಂಧದಲ್ಲಿ ಶಬ್ದಕೋಶ, ಕೆಲವು ಆಚರಣೆಗಳ ವಿವರಣೆಗಳು, ಮಾರಮ್ಮನ ಕಥೆಯ ಒಳನೋಟ, ಇವೆ.

೧೫೮೨. ಮಧುರ ಮನೋಜ್ಞ ಜಾನಪದ ಕಥೆಗಳು

ಲೇ: ಕೋಮಲ ಮೋಹನ್; ಪ್ರ: ಗಾಯಿತ್ರಿ ಎಂಟರ್‌ಪ್ರೈಸಸ್, ಸಿಎಚ್-೧೦, ಚಾಮರಾಜಪುರಂ, ಮೈಸೂರು-೫೭೦ ೦೦೫; ಮೊ.ಮು: ೨೦೦೧; ಪುಟ ೧೨೦; ಕ್ರೌನ್ ೧/೮

'ಈ ಕೃತಿಯನ್ನು ಬರೆಯುವಾಗ.......' ಎಂಬ ಮಾತು ಲೇಖಕಿಯ ಮಾತಿನಲ್ಲಿ ಕಾಣಿಸಿಕೊಂಡು ಇವು ಸ್ವರಚಿತ ಜನಪದ ಕಥೆಗಳೆಂಬ ಸಂಗತಿಯನ್ನು ತಿಳಿಸುತ್ತದೆ. ೨೧ ಕಥೆಗಳಿವೆ: ೧.ಪರ್ಣಿಕಾ ಅರ್ಜುನನ ಅಭ್ಯಾಸ ಬಲದ ಕಥೆ ೨.ಸಿಕ್ಕಿಬಿದ್ದ ಗುಳ್ಳೊ ಕಥೆ ೩.ಕರಡಿ ಮತ್ತು ಮಂಗಣ್ಣನ ಕಥೆ ೪.ಹುಚ್ಚು ಕುರಿಮರಿ ಕಥೆ ೫.ಹಸಿರೇ ಉಸಿರಿನ ಕಥೆ ೬.ರೊಟ್ಟಿಯ ಕನಸಿನ ಕಥೆ ೭.ಬಕಾಸುರನ ಕಥೆ ೮.ಕೊಕ್ಕರೆ ಕಥೆ ೯.ದಢೂತಿ ಕೋತಿ ಕಥೆ ೧೦.ತೋಳ ಮತ್ತು ನರಿಕಥೆ ೧೧.ರಾಜೀವ, ರೋಬಾಯ್ ಕಥೆ ೧೨.ಕಿರಿಮೀನಿನ ಕಥೆ ೧೩.ಮುಗಿಲ ಲೋಕದ ಕಥೆ ೧೪.ಜಿಂಕೆ ಮತ್ತು ಹುಲಿ ಕಥೆ ೧೫.ಶ್ರಮಕ್ಕೆ ತಕ್ಕ ಬಹುಮಾನದ ಕಥೆ ೧೬.ಬಡ ಬಾಲಕನ ಕಥೆ ೧೭.ನೀನಾಳ ನಾಯಿ ಕಥೆ ೧೮.ತಾತನ ಉಡುಗೊರೆ ಕಥೆ ೧೯.ದೇವಿ ಕೊಟ್ಟ ದೃಷ್ಟಿ ಕಥೆ ೨೦.ಹಸ್ತಿಕಾಂತನೆಂಬ ವೀಣೆಕಥೆ ೨೧.ಅಗಸ್ತ್ಯರ ಅಶೀರ್ವಾದದ ಕಥೆ. ಕೆಲವು ರೇಖಾಚಿತ್ರಗಳಿವೆ.

೧೫೮೩. ಮಧುರವಾಣಿ

ಲೇ: ವಾಗೀಶ್ವರಿ ಶಿವರಾಮ್; ಪ್ರ: ಕೆನರಾ ಹೈಸ್ಕೂಲ್ ಅಸೋಸಿಯೇಷನ್, ಮಂಗಳೂರು; ಮೊ.ಮು: ೧೯೯೧; ಪುಟ.: ೮ + ೭೨= ೮೦; ಡಿಮ್ಮೈ ೧/೮

ಸುಭಾಷಿತ, ಹಾಸ್ಯೋಕ್ತಿ, ಚತುರೋಕ್ತಿ, ಗಾದೆ, ಒಗಟು, ಜಾಣ್ಮೆಯ ಪ್ರಶ್ನೆ, ಬುದ್ಧಿಗೆ ಕಸರತ್ತು-ಇವುಗಳ ಸಂಗ್ರಹ ಎಂಬ ಅಡಿಬರಹ ಇದೆ. ಈ ಗ್ರಂಥದಲ್ಲಿ ೩೦೦ ಗಾದೆಗಳು, ೨೦೦ ಒಗಟುಗಳು, ೧೦ ಸಂಸ್ಕೃತ ಒಗಟುಗಳು ಇವೆ.

೧೫೮೪. ಮಧ್ಯ ಕರ್ನಾಟಕದ ಜಾನಪದ ಐಸಿರಿ

ಸಂ: ಇಂದಿರಾ ಕೃಷ್ಣಪ್ಪ; ಪ್ರ: ಪ್ರೊ. ಬಿ. ಕೃಷ್ಣಪ್ಪ ಟ್ರಸ್ಟ್, ೧೮೭೬, ಯಲಹಂಕ, ಬೆಂಗಳೂರು-೬೪; ಮೊ.ಮು: ೨೦೦೪; ಪುಟ ೧೨+೬೭=೭೯; ಡೆಮ್ಮಿ ೧/೮

ಶಿವಮೊಗ್ಗ, ದಾವಣಗೆರೆ, ಹಾವೇರಿ ಹಾಗೂ ಚಿತ್ರದುರ್ಗದ ಜಾನಪದ ಕಲಾವಿದರು ಮತ್ತು ಅವರ ಜನಪದ ಹಾಡುಗಳು ಎಂಬ ಅಡಿಬರಹ ಇದೆ. ಎರಡು ಭಾಗಗಳಿವೆ: ೧.ಜನಪದರ ಜೀವನ ೨.ಜಾನಪದ ಪದಗಳು. ಮೊದಲನೆಯ ಭಾಗದಲ್ಲಿ ಹನ್ನೊಂದು ಕಲಾವಿದರನ್ನು ಪರಿಚಯಿಸಲಾಗಿದೆ: ೧.ಡಿ.ಪಿ.ಆರ್. ಹನುಮಂತಪ್ಪ ೨.ಹೊದಿಗೆರೆ ಕೆಂಚಪ್ಪ ೩.ಸಿರಿಯಜ್ಜಿ ೪.ನೀಲಪ್ಪ ನಾಗಪ್ಪ ಕರೆದುರ್ಗಣ್ಣ ೫.ನಿಂಗದಹಳ್ಳಿ ಮಾರಪ್ಪ ೬.ಸನಾಯಿ ಚನ್ನಬಸಪ್ಪ ೭.ರಂಗಪ್ಪ ಚಮಾಳ ೮.ಫಕೀರವ್ವ, ಗೌರವ್ವ ಮತ್ತು ಕೆಂಚವ್ವ ಸುಣಗಾರ ೯.ಗುಡ್ಡಪ್ಪ ಜೋಗಿ ೧೦.ಸನಾಯಿ ತಿಪ್ಪಣ್ಣ. ಎರಡನೆಯ ಭಾಗದಲ್ಲಿ ೨೩ ಹಾಡುಗಳಿವೆ. ಹಿ.ಶಿ. ರಾಮಚಂದ್ರೇಗೌಡ ಅವರ ಮುನ್ನುಡಿ ಇದೆ. ಕೊನೆಯಲ್ಲಿ, ಈ ಗ್ರಂಥದಲ್ಲಿ ಪರಿಚಯಿಸಿಲಾಗಿರುವ ಕಲಾವಿದರ, ವಿಳಾಸಗಳನ್ನು ನೀಡಲಾಗಿದೆ.

೧೫೮೫. ಮನದಾಳದ ಕನಸುಗಳು

ಸಂ: ಕಾಳೇಗೌಡ ನಾಗವಾರ, ಮೀರಾಸಾಬಿಹಳ್ಳಿ ಶಿವಣ್ಣ; ಪ್ರ: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-೫೬೦೦೦೨; ಮೊ.ಮು: ೨೦೧೧; ಪು: ೨೪+೩೦೪=೩೨೮; ಡೆಮ್ಮಿ ೧/೮

ಎಂಟು ಲೇಖನಗಳ ಸಂಕಲನ: ೧.ಪೈಲ್ವಾನ್ ವಸಂತರಾವ್ ನೆನೆಪುಗಳು-ಟಿ.ಆರ್.ರಾಧಾಕೃಷ್ಣ ೨.ಗ್ರಾಮದೇವತೆಯ ದೂತ ಸೋಮನ ಕರಿಯಪ್ಪ -ಎಚ್.ಶ್ರೀಶೈಲ ಆರಾಧ್ಯ ೩.ಸೋಬಾನೆ ಸಿದ್ದಮ್ಮ-ನೀಲಮ್ಮ -ಜಿ.ಎಸ್.ಉಜನಪ್ಪ ೪.ಜಾನುವಾರು ವೈದ್ಯ ತಾಯಜ್ಜಿ ಕರಿಯಣ್ಣ -ಈ ಮಹಾಲಿಂಗಪ್ಪ ೫.ಬಯಲಾಟದ ನೇಮಕಲ್ಲಪ್ಪ -ಬಿ.ಟಿ.ಚಂದ್ರಶೇಖರ ೬.ಜನಪದ ವಸ್ತ್ರವಿನ್ಯಾಸಕಾರ ಮಹೇಶ್ವರರಾವ್ -ಬಾಗೂರು ನಾಗರಜಪ್ಪ ೭.ಎತ್ತಿನ ಕಿಲಾರಿಬೋರಯ್ಯ -ಎಸ್.ಎಂ.ಮುತ್ತಯ್ಯ ೮.ಕತೆಗಾರ ಇಮಾಂ ಖಾಸಿಂ -ಎಂ.ಸಿದ್ದಪ್ಪ.

೧೫೮೬. ಮನನ

ಲೇ: ಹಂಪನಹಳ್ಳಿ ತಿಮ್ಮೇಗೌಡ; ಪ್ರ: ಬ್ಯಾಲದಕೆರೆ ಪ್ರಕಾಶನ, ಬ್ಯಾಲದ ಕೆರೆ, ಬೆಳ್ಳೂರು ಹೋಬಳಿ, ಜಿ.ನಾಗತಿಹಳ್ಳಿ ಅಂಚೆ, ನಾಗಮಂಗಲ ತಾಲೂಕು, ಮಂಡ್ಯ ಜಿಲ್ಲೆ; ಮೊ.ಮು: ೨೦೦೫; ಪು: ೧೪+೧೫೪=೧೬೨; ಡೆಮ್ಮಿ ೧/೮

ಎರಡು ಭಾಗಗಳಿವೆ: ೧.ಜಾನಪದ; ವ್ಯಕ್ತಿ–ವಿಷಯ ೨.ಸಾಹಿತ್ಯ ಸಂದರ್ಭ. ಮೊದಲ ಭಾಗದಲ್ಲಿ ಜಾನಪದಕ್ಕೆ ಸಂಬಂಧಿಸಿದ ಹದಿನೈದು ಲೇಖನಗಳಿವೆ: ೧.ಒಬ್ಬ ಜಾನಪದ ಸಂತ ೨.ಸೌಜನ್ಯವೆಂಬ 'ಜನಪದ' ೩.ಜಾನಪದ ಗೌಡಿಕೆ ೪.ಬೇಲೂರಿನ ಸಾಧಕಿ ೫.ಹಳ್ಳಿಯನ್ನು ಮೀರಿದ.... ೬.ರಾಮನಲ್ಲ ಕೃಷ್ಣ ಈ 'ಗೊಂಬೆರಾಮ' ೭.ಕನ್ನಡನಾಡು ಕಳೆದುಕೊಂಡ ನಾಯಕ ೮.'ಜಾನಪದಭೀಷ್ಮ' ಕರೀಂಖಾನ್ ೯."ನಮ್ಮವರು" ಇವರು ೧೦."ಹದನೋಡಿ ಹರಗಣ" ೧೧.ಯಾರಿಗೂ ಸಿಗದವರು! ೧೨.ಆಮ್ಮೆ ರೈಟ್ ೧೩.ಗ್ರಾಮ ಸಂಸ್ಕೃತಿ ೧೪.ಚಿಲಿಪಿಲಿ ೧೫.ಹಾಸನದಲ್ಲಿ ವೈಭವ. ಚಕ್ಕೆರೆ ಶಿವಶಂಕರ್ ಅವರ 'ಮನನ'ಕ್ಕೆ ಒಂದೆರಡು ಮಾತು ... ಎಂಬ ಮುನ್ನುಡಿ ಇದೆ.

೧೫೮೭. ಮನೆ, ಸಮಾಜ ಮತ್ತು ಸಂಸ್ಕೃತಿ

ಲೇ: ವೀಣಾ ಎಂ.ಪಿ; ಪ್ರ: ನೆಲಮನೆ ಪ್ರಕಾಶನ, ರಂಗನಾಥನಗರ, ಜೈನಬಸದಿ ಹಿಂಭಾಗ, ಶ್ರೀರಂಗಪಟ್ಟಣ, ಮಂಡ್ಯ ಜಿಲ್ಲೆ; ಮೊ.ಮು: ೨೦೦೦; ಪುಟ ೪+೧೪೦=೧೪೪; ಡಿಮೈ ೧/೮

ಮ್ಯಾಸನಾಯಕರು ಹಾಗೂ ಊರನಾಯಕರ ಅಧ್ಯಯನ ಎಂಬ ಅಡಿಬರಹ ಇದೆ. ಎಂ.ಫಿಲ್ ನಿಬಂಧ. ನಾಲ್ಕು ಅಧ್ಯಾಯಗಳಿವೆ: ೧.ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ ೨.ಗ್ರಾಮ ದರ್ಶನ ೩.ಅಧ್ಯಯನ ವಿಧಾನ ೪.ಸಮಾರೋಪ. ಅನುಬಂಧದಲ್ಲಿ, ಬೆಡಗುಗಳು, ಕಥೆಗಳು, ಮನೆದಿಕ್ಕು, ಪ್ರಶ್ನಾವಳಿ, ವಕ್ತೃಗಳು, ನಕ್ಷೆಗಳು, ರೇಖಾಚಿತ್ರಗಳು, ಛಾಯಾಚಿತ್ರಗಳು, ಪಾರಿಭಾಷಿಕ ಶಬ್ದಗಳು ಇವೆ.

೧೫೮೮. ಮನೋವಿಜಯ

ಲೇ: ಎಂ.ಟಿ. ಧೂಪದ; ಪ್ರ: ವಿದ್ಯಾ ಪ್ರಕಾಶನ, ೨೭೯೦; ೧೪ ಬಿ ಮುಖ್ಯರಸ್ತೆ , ಆರ್.ಪಿ.ಸಿ. ಬಡಾವಣೆ, ವಿಜಯನಗರ, ಬೆಂಗಳೂರು–೪೦; ಮೊ.ಮು: ೨೦೦೪; ಪುಟ ೧೪೮; ಕ್ರೌನ್ ೧/೮

ರಂಗಭೂಮಿಯ ಸಂಶೋಧನೆಯ ಅಲೆದಾಟದಲ್ಲಿ ದೊರೆತ ಅನೇಕ ವಿಷಯಗಳಲ್ಲಿ ಮತ್ತು ಹಸ್ತಪ್ರತಿಗಳಲ್ಲಿ ವಿಶಿಷ್ಟವಾದದ್ದು ಈ ಮನೋವಿಜಯ ಎಂಬುದಾಗಿ ಲೇಖಕರು ಹೇಳಿಕೊಂಡಿದ್ದಾರೆ.

೧೫೮೯. ಮನರಂಜನೆಯ ಒಗಟುಗಳು

ಸಂ: ಮುಕ್ತ; ಪ್ರ: ಮಹದೇವ ಪ್ರಕಾಶನ, ೩೩, ೩ನೇ ಘಟ್ಟ, ೩ನೇ ಹಂತ, ಬಸವೇಶ್ವರ ನಗರ, ಬೆಂಗಳೂರು – ೫೬೦ ೦೭೬; ಮೊ.ಮು: ೨೦೧೧; ಪು: ೬೪; ಕ್ರೌಜ್ ೧/೮.

ರಕ್ಲಾಪುರದ ಮೇಲೆ ಮಾನವ ಜಗತ್ತಿಗೆ ದಾರಿದೀಪ ಎಂಬ ಅಡಿಬರಹ ಇದೆ. ೫೩೨ ಒಗಟುಗಳಿವೆ. ಉತ್ತರಗಳು ಜೊತೆಜೊತೆಯಲ್ಲಿ ಇವೆ.

ಬಳ್ಳಾರಿ ಜಿಲ್ಲೆ ಜಾನಪದ ಸಾಹಿತ್ಯ ಸಂಗ್ರಹ ಎಂಬ ಅಡಿಬರಹ ಇದೆ. ತ್ರಿಪದಿಗಳು, ಶಿಶುಪ್ರಾಸಗಳು, ಕೋಲು ಪದ, ಮುಂಡಿಗೆಗಳು, ಸೋಬಾನೆ ಮುಂತಾದ ೨೦ಕ್ಕೂ ಹೆಚ್ಚಿನ ಹಾಡುಗಳಿವೆ. ನಡುವೆ ಯಾರೀ ಜೋಕುಮಾರ? ಎಂಬ ಬರಹ, ೭೩ ಗಾದೆಗಳು, ೧೦೮ ನಂಬಿಗೆ, ಶಕುನ, ನೀತಿ, ವೈದ್ಯ, ಹಿತಮಿತ ಮಾತು, ಇವೆ.

೧೬೭೮. ಮುತ್ತುಗದ ಮರ ನೆರಳಲ್ಲ

ಲೇ: ತಮಂಪಮೂರ್ತಿ; ಪ್ರ: ಮಯೂರ ಪ್ರಕಾಶನ, ೨೦೩/೧, ದತ್ತಾತ್ರೇಯ ಬಡಾವಣೆ, ಕೆಂಪೇಗೌಡನಗರ, ಬೆಂಗಳೂರು-೧೯; ಮೊ.ಮು: ೧೯೭೩; ಪುಟ ೧೩೦; ಕ್ರೌನ್ ೧/೮

ಜಾನಪದ ಲೇಖನಗಳ ಸಂಗ್ರಹ ಎಂಬ ಅಡಿಬರಹ ಇದೆ. ಎರಡು ಭಾಗಗಳಲ್ಲಿರುವ ಹನ್ನೊಂದು ಲೇಖನಗಳಿವೆ. **ಭಾಗ ಒಂದು:** ೧.ನನ್ನ ಮಂಡೆ ಮುಡಿದ ಮಲ್ಲಿಗೆ ೨.ಎಳ್ಳು ಕೇಳುತ ಬಂದ ಬಣಜೀಗ ೩.ಗೌಡರ ಸೊಸೆ ೪.ಮುತ್ತುಗದ ಮರ ನೆರಳಲ್ಲ ತಾಯಮ್ಮ ೫.ಕಟ್ಟೆಗೆ ಹೊಂಟ್ಯಾಳು ಮಾದೇವಿ. **ಭಾಗ ಎರಡು:** ೬.ಶರಣ ಸರಗೂರು ಮಾದಪ್ಪ ೭.ಬಿಡದೆ ತಂದನು ಶಿವ ಗಂಗೆಯಾ ೮.ಗಿರಿಜೆಯ ಒಲುಮೆ ೯.ಬಿಳಿಗಿರಿ ರಂಗಯ್ಯನಿಗೆ ಕುಸುಮಾಲೆ ಅರ್ಪಣೆ ೧೦.ಯಾವ ನನ್ನೂಳೆ ನೆನೆದಾಳು ೧೧.ಶಿವ ನಾರಾಯಣ ಹೊರಟರು ಕಳುವೀಗೆ. ಮತಿಘಟ್ಟ ಕೃಷ್ಣಮೂರ್ತಿ ಅವರ ಮುನ್ನುಡಿ ಇದೆ.

೧೬೭೯. ಮುತ್ತು ಸುರಿದಾವ

ಲೇ: ಈರಣ್ಣ ಮಠಪತಿ; ಪ್ರ: ಸ್ನೇಹಕುಂಜ, ವಿಚಾರ ವೇದಿಕೆ, ಹಾರೂಗೇರಿ, ಬೆಳಗಾವಿ ಜಿಲ್ಲೆ; ಮೊ.ಮು: ೯೯೦; ಪು: ೮+೧೪೨=೧೫೦; ಡಿಮ್ಮೈ ೧/೮

ಜಾನಪದ ವೈಚಾರಿಕ ಸಂಕಲನ ಎಂಬ ಅಡಿಬರಹ ಇದೆ. ನಾಲ್ಕು ಲೇಖನಗಳಿವೆ: ೧.ಜಾನಪದರಲ್ಲಿ ಲೈಂಗಿಕ ನಿಲುವುಗಳು ೨.ಹಳ್ಳಿಗಾಡಿನ ಕುಲಕಸುಬುಗಳು ೩.ಜಾನಪದರಲ್ಲಿ ದೇವರ ಕಲ್ಪನೆ ೪.ಜಾನಪದರಲ್ಲಿ ಪಕ್ಷಿಲೋಕ.

೧೬೮೦. ಮುದ್ದು ಮಾದೇವನ ನೆನೆದೇವು

ಸಂ: ಪಿ.ಕೆ. ರಾಜಶೇಖರ; ಪ್ರ: ಸಂಯುಕ್ತ ಪ್ರಕಾಶನ, ಮೈಸೂರು; ಮೊ.ಮು: ೧೯೭೪; ಪುಟ ೪+೬೦=೬೪; ಡಿಮ್ಮೈ ೧/೮

ಇಲ್ಲಿನ ತ್ರಿಪದಿಗಳು ಮಾದೇಶ್ವರ ಮಹಾಕಾವ್ಯದ 'ಮಂಗಳಾರ್ತಿ ಮಾದೇವನಿಗೆ' ಎಂಬ ಅಧ್ಯಾಯದಿಂದ ಎತ್ತಿಕೊಂಡ ಜನಪ್ರಿಯ ಆವೃತ್ತಿ-ಎಂಬುದಾಗಿ ಸಂಪಾದಕರು ಅರಿಕೆಯಲ್ಲಿ ಹೇಳಿದ್ದಾರೆ.

೧೬೮೧. ಮುರಾವು

ಲೇ: ಡಿ.ಕೆ. ರಾಜೇಂದ್ರ; ಪ್ರ: ತಳಗವಾದಿ ಪ್ರಕಾಶನ, ೨೨, ವಿಜಯಶ್ರೀ, ಕುವೆಂಪು ನಗರ, ಮೈಸೂರು-೫೭೦೦೨೩; ಮೊ.ಮು: ೧೯೮೬; ಪು: ೮+೧೬೨=೧೭೦; ಕ್ರೌನ್ ೧/೮

ಎಂಟು ಲೇಖನಗಳ ಸಂಕಲನ: ೧.ಮೂಡಲಪಾಯ ಯಕ್ಷಗಾನದಲ್ಲಿ ಕುಣಿತ ಮತ್ತು ಅಭಿನಯ ೨.ಕನ್ನಡದಲ್ಲಿ ಜಆನಪದ ಮಹಾಪ್ರಬಂಧಗಳು ೩.ಮಾಟ-ಮಂತ್ರ-ಮೋಡಿ

೪.ಮಂಟೇಸ್ವಮಿ ಕಾವ್ಯ: ಒಂದು ನೋಟ ೫.ಕರ್ನಾಟಕ ಕಲಾಪರಂಪರೆಯಲ್ಲಿ ಜನಪದ ಕಲೆಗಳು, ೬.ಜನಪದ ರಂಗಭೂಮಿ ಮತ್ತು ಅದರ ಕೆಲವು ವಿಚಾರಗಳು ೭.ಶ್ರೀಕಂಠೇಶಗೌಡರ ಜಾನಪದ ಕೊಡುಗೆ ೮.ಗ್ರಾಮೀಣ ಜಾನಪದ.

೧೬೮೨. ಮುಸ್ಲಿಮರ ಹಬ್ಬಗಳು

ಲೇ: ಮಹಮ್ಮದ್ ಷೌಕತ್ ಅಲಿ; ಪ್ರ: ಅಲ್ ಅವಿಲಾಸ್ ಯಕೀನ್ ಷಾ: ವಲಿ ಗ್ರಂಥ ಪ್ರಕಟಾಣಾ ವಿಭಾಗ, ಅಲ್ ಅಮೀನ್ ಯಜುಕೇಷನಲ್ ಸೊಸೈಟಿ, ಬೆಂಗಳೂರು-೫೬೦೦೦೨; ಮೊ.ಮು: ೧೯೭೩; ಪು: ೮+೬೦=೬೮; ಕ್ರೌನ್ ೧/೮

ನಾಲ್ಕು ಭಾಗಗಳಿವೆ. ೧.ಈದ್-ಎ-ಮಿಲಾದ್ (ಪೈಗಂಬರರ ಜಯಂತಿ) ೨.ಕುರಾನಿನ ವೈಭವ ಜಯಂತಿ ರಂಜಾನ್ ೩.ಬಲಿದಾನದ ಹಬ್ಬ ಬಕ್ರೀದ್ ೪.ಮೊಹರಂ ಮಹತ್ವ (ಹುತಾತ್ಮ ಹಸೇನರ ವೀರ ಕಥೆ). ಪತ್ರಿಕೆಗಳಲ್ಲಿ ಆಗಾಗ ಪ್ರಕಟವಾದ ತಮ್ಮ ಲೇಖನಗಳನ್ನು ಆಯ್ದು ಈ ಗ್ರಂಥವನ್ನು ರೂಪಿಸಿರುವುದಾಗಿ ಲೇಖಕರು ಹೇಳಿಕೊಂಡಿದ್ದಾರೆ.

೧೬೮೩. ಮೂಕಜ್ಜಿ: ಬದುಕು-ಸಾಹಿತ್ಯ

ಸಂ: ಗಾಯತ್ರೀ ನಾವಡ; ಪ್ರ: ಪ್ರಾದೇಶಿಕ ವ್ಯಾಸಂಗ, ಕುಂದಾಪುರ; ೨೭೬ ೨೦೧, ಮೊ.ಮು: ೧೯೮೮, ಪುಟ ೧೨+೧೦೦=೧೧೨, ಕ್ರೌನ್ ೧/೮

ಮೂಕಜ್ಜಿಯವರ 'ನನ್ ಬದ್ಕಿನ್ ಕತೆ' ಇದೆ. ಅವರ ಸಾಹಿತ್ಯವನ್ನು ಎರಡು ಭಾಗವಾಗಿ ವಿಂಗಡಿಸಲಾಗಿದೆ: ೧.ಕವಿತೆಗಳು ೨.ಕಥೆಗಳು. ಕವಿತೆಗಳಲ್ಲಿ ಬಹುಪಾಲು ಮೂಕಜ್ಜಿಯವರ ಸ್ವಂತ ಸೃಷ್ಟಿಗಳೇ ಆಗಿವೆ. ಇಲ್ಲಿರುವ ಹತ್ತು ಕಥೆಗಳು ಜನಪದ ಕಥೆಗಳೇ ಆಗಿದ್ದು ಅವನ್ನು ಐದು ಭಾಗವಾಗಿ ವಿಂಗಡಿಸಲಾಗಿದೆ: ೧.ನೀತಿ ಕಥೆಗಳು ೨.ವಿನೋದ ಕಥೆಗಳು ೩.ಬುದ್ಧಿವಂತಿಕೆಯ ಕಥೆಗಳು ೪.ಪ್ರಾಣಿ ಕಥೆಗಳು ೫.ಅತಿಮಾನುಷ ಕಥೆ. ಕೊನೆಯಲ್ಲಿ ಎರಡು ಅನುಬಂಧಗಳಿವೆ: ೧.ಕಥೆಗಳ ಭಿನ್ನರೂಪಗಳು ೨.ಅರ್ಥಕೋಶ. ಅಮೃತ ಸೋಮೇಶ್ವರ ಅವರ ಮುನ್ನುಡಿ, ಕಥೆಗಳ ಪ್ರಾರಂಭಕ್ಕೆ ಮುಂಚೆ 'ಕಥೆಗಳನ್ನು ಓದುವ ಮುನ್ನ' ಎಂಬ ಸಂಪಾದಕರ ಬರಹ ಇವೆ. ರಕ್ಷಾಪುಟದ ಹಿಂಬದಿಯಲ್ಲಿ ಬಿ.ಎಚ್.ಶ್ರೀಧರ ಅವರ 'ಮೂಕಜ್ಜಿಯನ್ನು ಕುರಿತು' ಎಂಬ ಬೆನ್ನುಡಿ ಇದೆ.

೧೬೮೪. ಮೂಡಲಪಾಯ ಯಕ್ಷಗಾನ (ಭಾಗ೧)

ಸಂ: ಚಕ್ಕರೆ ಶಿವಶಂಕರ್; ಪ್ರ: ಕರ್ನಾಟಕ ಸರ್ಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು-೫೬೦೦೦೨; ಮೊ.ಮು: ೨೦೦೬; ಪು: ೬೬+೫೨೮=೫೯೪; ಡಿಮ್ಮೈ ೧/೮

ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಮಾಲೆಯ ೩೬ನೆಯಸಂಪುಟ. ಏಳು ಪ್ರಸಂಗಗಳಿವೆ: ೧.ಕರಿಬಂಟನ ಕಾಳಗ: ಕವಿ: ತಿರುವೆಂಗಡ ಜೀಯರ್, ಪ್ರತಿಕಾರರು:

ಬೆಂಗಳೂರ ನಗರ ಜಿಲ್ಲೆ ದೊಡ್ಡಬಳ್ಳಾಪುರ ತಾಲ್ಲೂಕಿನ ದೊಡ್ಡಬಳ್ಳಾಪುರ ಟೌನ್ ವೀರಭದ್ರಪ್ಪನ ಪೇಟೆಯ ಶ್ರೀ.ಎನ್.ಚಿಕ್ಕವೆಂಕಟಪ್ಪನವರ ಪ್ರತಿಯನ್ನು ದೊಡ್ಡಬಳ್ಳಾಪುರದ ಮೂಡಲಪಾಯ ಯಕ್ಷಗಾನ ಭಾಗವತರಾದ ಶ್ರೀ ಯದ್ಲಳ್ಳಿ ಪಾಪಣ್ಣವರ ಶಿಷ್ಯರಾದ ಶ್ರೀ ಮಂಜುನಾಥ್, ಶಾಲಾ ಶೀಕ್ಷಕರು ಪ್ರತಿ ಮಾಡಿದ ದಿನಾಂಕ: ೧೬-೨-೧೯೮೪.೨.ಶ್ರೀಕೃಷ್ಣಾರ್ಜುನರ ಕಾಳಗ ಅಥವಾ ಗಯಚರಿತ್ರೆ, ಕವಿ: ಹರಿಶರ್ಮನ ಶಿಷ್ಯ ಗೋವಿಂದ, ಪ್ರತಿಕಾರರು: ಮೂಡಲಪಾಯ ಯಕ್ಷಗಾನ ಭಾಗವತರಾದ ನೇರಲಗುಡ್ಡದ ಶ್ರೀ.ಬಿ.ಗೋವಿಂದಪ್ಪನವರು, ಪ್ರತಿ ಮಾಡಿದ ದಿನಾಂಕ: ೧೯೭೮ರ ಜನವರಿ ೨೫ರಂದು ಕಾಳಯುಕ್ತ ಸಂವತ್ಸರ, ಪುಷ್ಯ ಬಹುಳ ಏಕಾದಶಿ, ಮೂಲಪ್ರತಿ: ೧೯೩೬ರ ಧಾತು ಸಂವತ್ಸರ. ೩.ಲವಕುಶರ ಕಾಳಗ: ತಾರೀಖು೨೫-೯-೧೯೪೯ರ ಭಾನುವಾರದಂದು ದೊಡ್ಡಬಳ್ಳಾಪುರದ ಎಲೇಪೇಟೆ ಶ್ರೀಆರ್.ತಮ್ಮಯ್ಯನವರು ಪ್ರತಿ ಮಾಡಿರುವುದು.೪.ಅಭಿಮನ್ಯು ಕಾಳಗ: ಪ್ರತಿಕಾರರು: ಭಾಗವತ ಸಿದ್ದೇಗೌಡರು, ಪ್ರತಿ, ಮಾಡಿದ ದಿನಾಂಕ೧೪-೧೦-೧೯೪೨.೫.ಕೃಷ್ಣಾರ್ಜುನರ ಕಾಳಗ. ೬.ಕಂಸವಧೆ: ಪ್ರತಿಕಾರರು: ಕೇಳಿಕೆ ಮುನಿಯಪ್ಪ, ಅಂಗೀರಸ ನಾಮ ಸಂವತ್ಸರದ ಆಷಾಢ ಶುದ್ಧ ಶುಕ್ರವಾರ ಪ್ರತಿ ಮಾಡಿದ್ದು. ೭.ದುಶ್ಯಾಸನ ವಧೆ: ದೊಡ್ಡಬಳ್ಳಾಪುರ ತಾಲ್ಲೂಕು ಕಸಬಾಪೇಟೆಯಲ್ಲಿರುವ ಶ್ರೀಮದ್ವೀರಶೈವರ ಚನ್ನಬಸಯ್ಯನ ವರಕುಮಾರ ಮಿಠಾಯಿ ಅಂಗಡಿ ಕೆಂಪಣ್ಣನವರು ವಿಭವ ಸಂವತ್ಸರದ ಪುಷ್ಯಬಹುಳ ೧೧ ಮಂಗಳವಾರದಂದು ಪ್ರತಿ ಮಾಡಿದ್ದು. ಬಿ.ಎಸ್.ಯಡಿಯೂರಪ್ಪ ಅವರ ಪೂರ್ವಾಪರ ಎಂಬ ಅಧ್ಯಕ್ಷರ ಮಾತು, ಅಂತರಂಗದ ಕದವು ತೆರೆಯುತಿಹುದು ಎಂಬ ಸಂಪಾದಕರ ಪ್ರಸ್ತಾವನೆ ಇವೆ.

೧೬೮೫. ಮೂಡಲಪಾಯ ಯಕ್ಷಗಾನ ಸಂಪುಟ-೨: ಕಾಳಗ ಪ್ರಸಂಗಳು

ಸಂ: ಚಕ್ಕೆರೆ ಶಿವಶಂಕರ್; ಪ್ರ: ಕರ್ನಾಟಕ ಸರ್ಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು-೫೬೦ ೦೦೨; ಮೊ.ಮು: ೨೦೦೯; ಪುಟ ೬೮+೩೭೪=೪೪೨; ಡಿಮ್ಮೈ ೧/೮

ಆರು ಪ್ರಸಂಗಗಳ ಸಂಕಲನ: ೧.ಸುಧನ್ವ ಕಾಳಗ – ಸಿ. ಮುನಿಯಪ್ಪನವರು ೨.ಬಬ್ರುವಾಹನ ಕಾಳಗ-ಎಚ್.ಎಸ್. ಸುಬ್ಬರಾಯಪ್ಪನವರು ೩.ತಾಮ್ರಧ್ವಜನ ಕಾಳಗ-ಎಚ್.ಎಸ್. ಸುಬ್ಬರಾಯಪ್ಪನವರು ೪.ತ್ರಿಪುರ ಸಂಹಾರ-ಜಿ. ಕೆಂಪಣ್ಣ ೫.ರಕ್ತ ಬೀಜಾಸುರ ಸಂಹಾರ-ಉಪಾಧ್ಯ ಎಚ್. ಭಾಗವತ ಲಿಂಗಣ್ಣಯ್ಯನವರು ೬.ದಕ್ಷವಧೆ. ಗೊ.ರು.ಚನ್ನಬಸಪ್ಪ ಅವರ ಅಕಾಡಿಮ್ಯೆ ಅಧ್ಯಕ್ಷರ ನುಡಿ, ಹಿ.ಶಿ. ರಾಮಚಂದ್ರೇಗೌಡ ಅವರ ಅಧ್ಯಕ್ಷರ ಮಾತು ಪೂರ್ವಾಪರ, ಸಂಪಾದಕರ ಪ್ರಸ್ತಾವನೆ, ಇವೆ.

೧೬೮೬. ಮೂಡಲ ವೈಭವ

ಸಂ: ಜಿ.ಆರ್. ತಿಪ್ಪೇಸ್ವಾಮಿ; ಪ್ರ: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ,

ಬೆಂಗಳೂರು-೫೬೦ ೦೦೨; ಮೊ.ಮು: ೧೯೯೮; ಪುಟ ೧೨+೮೧=೯೩; ಡೆಮ್ಮೆ ೧/೮

ವಿಚಾರ ಸಂಕಿರಣ ಪ್ರಬಂಧಗಳು ಎಂಬ ಅಡಿಬರಹ ಇದೆ. ಅಧ್ಯಕ್ಷ ಭಾಷಣಗಳೂ ಒಳಗೊಂಡಂತೆ ಬೇರೆ ಬೇರೆ ಲೇಖಕರ ಹದಿನಾಲ್ಕು ಲೇಕನಗಳನ್ನುಳ್ಳ ಗ್ರಂಥ ೧.ತೇರಹಳ್ಳಿ ಸುತ್ತಮುತ್ತಲಿನ ಜಾನಪದ –ಎನ್.ರಾಮಚಂದ್ರಪ್ಪ ೨.ಜನಪದ ನೃತ್ಯಗಳು –ರಂಗಾರೆಡ್ಡಿ ಕೋಡಿರಾಂಪುರ ೩.ಗ್ರಾಮದೇವತೆಗಳು ಹಾಗೂ ಸಾಂಸ್ಕೃತಿಕ ಸ್ಥಿತ್ಯಂತರ –ಜಿ.ಆರ್.ತಿಪ್ಪೇಸ್ವಾಮಿ ೪.ಜಾನಪದ ಹಿನ್ನೆಲೆಯಲ್ಲಿ ಸ್ಥಳನಾಮಗಳು –ವಿ.ಗೋಪಾಲಕೃಷ್ಣ ೫.ಬಯಲಾಟದ ಹಳಮೆ(ಅಧಕ್ಷ ಭಾಷಣ)– ಬಿ.ಸಿದ್ಧಗಂಗಯ್ಯ ಕಂಬಾಳು ೬.ಗಾರುಡಿಗರು –ನರಸಿಂಹೇಗೌಡ ನಾರಣಾಪುರ ೭.ಮಾಸ್ವೀಕರು –ಲಕ್ಷ್ಮೀಪತಿ ಕೋಲಾರ ೮.ಜನಾಂಗೀಯ ಅಧ್ಯಯನ (ಅಧ್ಯಕ್ಷ ಭಾಷಣ)–ಎ.ಬಿ.ಬಸವರಾಜು ೯.ದ್ವಿ ಭಾಷಾಜನಪದ ಸ್ವರೂಪ –ವಿ.ಚಂದ್ರಶೇಖರ ನಂಗಲಿ ೧೦.ಅತ್ತೆ ಒಬ್ಬಳು ಬೇಕಿದ್ದಾಳೆ–ಸ.ರಘುನಾಥ್ ೧೧.ಸಂಗ್ರಹಕಾರ್ಯವೇ ನಡೆದಿಲ್ಲ –ಆರ್.ಲಕ್ಷ್ಮೀನಾರಾಯಣ ೧೨.ಸಂಸ್ಕೃತಿಯ ಎಲಬುಗಳನ್ನು ಸಂಗ್ರಹಿಸಿಡುವುದು–ಹ.ವೆಂ.ವೇಣುಗೋಪಾಲ ೧೩.ಅಪರೂಪದ ಕಲೆಗಳು ಇಲ್ಲಿವೆ –ಟಿ.ಎಸ್.ದಕ್ಷಣಮೂರ್ತಿ ೧೪.ಜಿಲ್ಲೆಯ ಜಾನಪದ: ಸಂಗ್ರಹಣೆಯ ಸಮಸ್ಯೆ ಮತ್ತು ಸವಾಲುಗಳು(ಅಧ್ಯಕ್ಷ ಭಾಷಣ) ಶಿವರಾಮಯ್ಯ

೧೬೮೭. ಮೂಡಲಪಾಯ ಯಕ್ಷಗಾನ

ಲೇ: ಡಿ.ಕೆ. ರಾಜೇಂದ್ರ; ಪ್ರ: ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು-೫೭೦ ೦೦೬; ಮೊ.ಮು.೨೦೧೦; ಪುಟ ೨೪+೯೬=೧೨೦; ಕ್ರೌನ್ ೧/೮

ಎಂಟು ಅಧ್ಯಾಯಗಳನ್ನುಳ್ಳ ಗ್ರಂಥವಿದು: ೧.ಮೂಡಲಪಾಯ ಯಕ್ಷಗಾನ ಸ್ವರೂಪ ೨.ಬಯಲಾಟ ೩.ಮೂಡಲಪಾಯ ಯಕ್ಷಗಾನ ಅಂಗೋಪಾಂಗಗಳು ೪.ಮೂಡಲಪಾಯ ಸಂಗೀತ ಮತ್ತು ವಾದ್ಯ ವಿಶೇಷಗಳು ೫.ಪಾತ್ರಗಳು ಮತ್ತು ವೇಷ ಭೂಷಣಗಳು ೬.ಬಯಲು ರಂಗಸ್ಥಳ ೭.ರಂಗಸ್ಥಳದ ಸಂಪ್ರದಾಯಗಳು ೮.ಭಾಗವತರು ಮತ್ತು ಆಟ ಕಲಿಸುವ ವಿಧಾನ.

೧೬೮೮. ಮೂಢನಂಬಿಕೆಗಳು

ಲೇ: ಎಲ್.ಆರ್. ಹೆಗಡೆ; ಪ್ರ: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ; ಮೊ.ಮು: ೧೯೫೭, ಎ.ಮು. ೧೯೬೩; ಪುಟ ೮+೧೨೪=೧೩೨; ಫೂಲ್ಸ್‌ಕ್ಯಾಪ್ ೧/೮

೨೮ ಅಧ್ಯಾಯಗಳಿವೆ: ೧.ಮೂಢನಂಬಿಕೆಗಳು ೨.ವಿಜ್ಞಾನ ಮತ್ತು ಅಜ್ಞಾನ ೩.ಮೂಢನಂಬಿಕೆಗಳ ತರ್ಕ ಸರಣಿ ೪.ಮಾಟಗಳ ಪ್ರಪಂಚ ೫.ನಿಸರ್ಗ ವ್ಯಾಪಾರ ನಿಯಂತ್ರಣ ೬.ಆತ್ಮದ ಕಲ್ಪನೆ ೭.ಮರಣದ ಕಲ್ಪನೆ ೮.ಕಾಕತಾಲೀಯ ಸಂಬಂಧ

೯.ಹಗಲುಗನಸುಗಳು, ಸ್ವಪ್ನಗಳು ೧೦.ಭಯದಿಂದ ದೆವ್ವ, ಭೂತಗಳ ಸೃಷ್ಟಿ ೧೧.ಅಪೂರ್ವ ವಿಕೃತ ರೀತಿಗಳಿಂದ ಹೆದರಿಕೆ ೧೨.ರೋಗಗಳ ಚಿಕಿತ್ಸೆ ೧೩.ಜ್ಯೋತಿಷದಲ್ಲಿ ನಂಬಿಕೆ ೧೪.ನಿಮಿತ್ತಗಳು, ಶಕುನಗಳು ೧೫.ಸ್ವಪ್ನ ಫಲ ೧೬.ರತ್ನಗಳು ೧೭.ದೃಷ್ಟಿದೋಷ ೧೮.ಕಾವ್ಯ ಕಲ್ಪನೆಗಳು ೧೯.ಕೃತಜ್ಞತೆಯ ಪೂಜೆ ೨೦.ಧಾರ್ಮಿಕ ವಿಧಿಗಳ ಉದ್ದೇಶ ೨೧.ಮೂಢನಂಬಿಕೆಗಳ ಉಪಯುಕ್ತತೆ ೨೨.ಮೂಢನಂಬಿಕೆಗಳಿಂದಾದ ದುಷ್ಪರಿಣಾಮಗಳು ೨೩.ಸೇಡಿನ ವಿಚಿತ್ರ ೨೪.ಭೀತಿಯ ಭೂತ ೨೫.ಭೀತಿಯ ಪರಿಣಾಮ ೨೬.ವಿಜ್ಞಾನದ ಹೋರಾಟ ೨೭.ಧರ್ಮ ಹಾಗೂ ಮೂಢನಂಬಿಕೆ ೨೮.ಉಪಸಂಹಾರ. ಡಿ.ಸಿ. ಪಾವಟೆ ಅವರ ಮುನ್ನುಡಿ, ಕೊನೆಯಲ್ಲಿ ಕೆಲವು ಸಂದರ್ಭ ಗ್ರಂಥಗಳು, ಇವೆ.

೧೬೮೯. ಮೂಢನಂಬಿಕೆಗಳು

ಲೇ: ಡಾ. ಆರ್. ಇಂದಿರಾ: ಪ್ರ: ಮನೋವಿಕಾಸ ಪುಸ್ತಕ ಮಾಲೆ, ಮೈಸೂರು; ಮೊ.ಮು: ೧೯೮೮, ಪುಟ: ೩೨, ಕ್ರೌನ್ ೧/೮

ನಂಬಿಕೆಗಳ ಬಗೆಗಿನ ಚರ್ಚೆ ಇಲ್ಲಿದೆ. ನಂಬಿಕೆಗಳಲ್ಲಿ ಅಗತ್ಯ ಯಾವುದು ಅನಗತ್ಯ ಯಾವುದು ಎಂಬ ಜಿಜ್ಞಾಸೆ ಇದೆ. ಅಜ್ಞಾನ, ಧಾರ್ಮಿಕ ಹಿನ್ನೆಲೆ, ವೈಚಾರಿಕತೆ ಮುಂತಾದ ಪ್ರಸ್ತಾಪಗಳಿವೆ. ಕೊನೆಯಲ್ಲಿ 'ಸಾರ್ವತ್ರಿಕ ಸಾಮಾಜಿಕ ಪಿಡುಗು' ಎಂಬ ಶೀರ್ಷಿಕೆಯನ್ನುಳ್ಳ ಪ್ರಧಾನ ಸಂಪಾದಕರಾದ ಕೆ.ಬಿ. ಪ್ರಭುಪ್ರಸಾದ್ ಅವರ ಲೇಖನವಿದೆ.

೧೬೯೦. ಮೂಲ ಜಾನಪದ ಸಂಪ್ರದಾಯ ಪದಗಳು

ಸಂ: ಯಕ್ಕೇರಪ್ಪ ಮ. ನಡುವಿನಮನಿ; ಪ್ರ: ಯಕ್ಕೇರಪ್ಪ ಪ್ರಕಾಶನ, ೨೦, ಪುರೋಹಿತನಗರ, ಕಲಘಟಗಿ ರೋಡ್, ಧಾರವಾಡ; ಪುಟ ೮+೧೬೪=೧೭೨; ಡಿಮ್ಮೈ ೧/೮

ವಿವಿಧ ಬಗೆಯ ಹಾಡುಗಳ ಸಂಕಲನ. ಹಾಡುಗಾರ್ತಿಯರನ್ನು ಪರಿಚಯ ಮಾಡಿ, ಅವರು ಹಾಡಿರುವ ಹಾಡುಗಳನ್ನು ನೀಡುವ ಕ್ರಮವನ್ನು ಅನುಸರಿಸಲಾಗಿದೆ. ಸಿದ್ಧಲಿಂಗ ದೇಸಾಯಿ ಅವರ ಮುಮ್ಮಾತು ಇದೆ.

೧೬೯೧. ಮೂಲ್ಕಿಯ ಸಾಂಸ್ಕೃತಿಕ ವೀರರು (ಕಾಂತಾಬಾರೆ ಬೂದಾಬಾರೆಯರು ಮತ್ತು ಅಗೋಳಿ ಮಂಜಣ)

ಲೇ: ಮದ್ದು ಮೂಡಬೆಳ್ಳೆ; ಪ್ರ: ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ; ಮೊ.ಮು: ೨೦೦೬; ಪುಟ ೮+೧೧೫=೧೨೩; ಡಿಮ್ಮೈ ೧/೮

ಜಾನಪದ, ಸಾಂಸ್ಕೃತಿಕ ಅಧ್ಯಯನ / ಜಾನಪದೀಯ ಅಧ್ಯಯನ ಎಂಬ ಅಡಿಬರಹಗಳಿವೆ. ಐದು ಅಧ್ಯಾಯಗಳಿವೆ: ೧.ವೀರ ಪರಂಪರೆ ಮತ್ತು ತುಳು ಜಾನಪದ ಸಂಸ್ಕೃತಿ, ಕ್ಷೇತ್ರಾಧ್ಯಯನ ಪ್ರದೇಶದ ನಕ್ಷೆ, ಕಾಂತಬಾರೆ ಬೂದಬಾರೆ ಅಧ್ಯಯನಕ್ಕೊಂದು ಪ್ರಸ್ತಾವನೆ, ಅಧ್ಯಯನವಸ್ತು–ಹಿನ್ನೆಲೆ, ಕಾಂತಬಾರೆ ಬೂದಬಾರೆ ಬೀರದ ಕೆಲವು ಸಂದಿಗಳು,

ಬೀರ ಕಥಾನಕದ ಸಾರರೂಪ. ೨.ಐತಿಹ್ಯ ಕ್ಷೇತ್ರಾಧ್ಯಯನ, ಛಾಯಾಚಿತ್ರಗಳು ೩.ಕೋಟಿ ಚೆನ್ನಯರು ಮತ್ತು ಕಾಂತಬಾರೆ ಬೂದಬಾರೆ ಒಂದು ತೌಲನಿಕ ನೋಟ, ಸಮಕಾಲೀನ ವೀರ ಐತಿಹ್ಯ, ಆರಾಧನಾರಂಗದಲ್ಲಿ ಕಾಂತಬಾರೆ ಬೂದಬಾರೆಯರು, ಕೊಲ್ಲೂರು ಜನ್ಮ ಕ್ಷೇತ್ರಕ್ಕೆ ದಾರಿ. ೪.ಐತಿಹಾಸಿಕ ನಿಲುವಿನಲ್ಲಿ ಕಾಂತಬಾರೆ-ಬೂದಬಾರೆ, ಇತಿಹಾಸ ರಚನೆಗೆ ಆಕರಗಳು, ವೀರರು ಬೆಳಗಿ ಬಾಳಿದ ತುಳುನಾಡು, ಮೂಲ್ಕಿ (ಮೂಲಿಕೆ), ಸಾವಂತರಸರು, ವಂಶಾವಳಿ ೫.ಪಾಡ್ದನಗಳು ಮತ್ತು ಸಾಂಸ್ಕೃತಿಕ ವೀರದ್ವಯರು, ಐತಿಹಾಸಿಕ ನಿಲುವಿನಲ್ಲಿ ಕಾಂತಬಾರೆ ಬೂದಬಾರೆಯರು. ಅನುಬಂಧದಲ್ಲಿ ಎರಡು ಭಾಗಗಳಿವೆ. ಭಾಗ ಒಂದು: ೧.ಸಂಶೋಧಕ ಕೆ.ಜಿ. ವಸಂತಮಾಧವರೊಡನೆ ನಡೆಸಿದ್ದ ಮಾತುಕತೆ ೨.ಸಸಿ ಹಿತ್ತಿಲಲ್ಲಿ ಬಾರೆಯರ ಕುರುಹುಗಳು ೩.ಐತಿಹ್ಯಗಳ ಕೊಲ್ಲೂರು ೪.ಕೊಲ್ಲೂರಿನ ಇನ್ನಷ್ಟು ಐತಿಹ್ಯ. ಭಾಗ ಎರಡು: ಜಾನಪದ ವೀರ ಅಗೋಳಿ ಮಂಜಣ. ಅಮೃತ ಸೋಮೇಶ್ವರ ಅವರ ಬಾರೆಯರ ಅಧ್ಯಯನಕ್ಕೊಂದು ಕೆಳೆನುಡಿ ಎಂಬ ಮುನ್ನುಡಿ ಇದೆ.

೧೬೯೨. ಮೂವತ್ತು ಜನಪದ ಕಥೆಗಳು

ಸಂ: ಕೆ.ಆರ್. ಸಂಧ್ಯಾರೆಡ್ಡಿ; ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು-೧೮; ಮೊ.ಮು: ೧೯೮೧; ಪುಟ ೧೬+೫೧=೬೭; ಡಿಮ್ಮೈ ೧/೮

ಕಥೆಗಳಿವು: ೧.ಜಂಬೂರಾಯನ ಕಥೆ ೨.ವಿಷ್ಣು ಪರಮಾತ್ಮನ ಕಥೆ ೩.ಅಲವಲ ದೇವಿ ಕಥೆ ೪.ಆನೆರಾಜ ೫.ಕನಸಿನಲ್ಲಿ ಕಂಡ ಮರ ೬.ನಾಗೇಂದ್ರ ೭.ಅಕ್ಕಮ್ಮನ ಕಥೆ ೮.ಇದಿಮಾಯಿ ೯.ಮುದುಕಿಯ ಮದುವೆ ೧೦.ಮೋಸದ ಹೆಂಡತಿ ೧೧.ಕಳ್ಳ ದಂಪತಿಗಳು ೧೨.ಯಾರು ಹೆಚ್ಚು ೧೩.ತಾಯಿ ಕರುಳು ೧೪.ಜಿಪುಣಿ ಸಂಗಮ್ಮ ೧೫.ದುರಾಸೆಯ ಫಲ ೧೬.ಅತಿಯಾಸೆ ೧೭.ಕುರುಬನ ನಿದ್ದೆ ೧೮.ಪೆದ್ದನ ಕಥೆ ೧೯.ಐದು ರೊಟ್ಟಿ ೨೦.ಅಳಿಯನ ತ್ಯಂಬಿಟ್ಟು ೨೧.ಅತ್ತೆ ಅಳಿಯ ೨೨.ಅಕ್ಕನ ಬಂಗಾರ ೨೩.ಬುದ್ಧಿವಂತ ೨೪.ಬುದ್ಧಿವಂತ ಹೆಣ್ಣು ೨೫.ಮೊಸಳೆ ನರಿ ೨೬.ನರಿದೇವ್ರು ೨೭.ನರಿಗೆ ಬುದ್ದಿ ಕಲಿಸಿದ್ದು ೨೮.ಅಗಸ ಮತ್ತು ಪ್ರಾಣಿಗಳು ೨೯.ನರಿ ಮಾವ ಮೊಲ ಅಳಿಯ ೩೦.ಗೂಬೆ. ಹಂಪ ನಾಗರಾಜಯ್ಯ ಅವರ ಮುನ್ನುಡಿ, ಸಂಪಾದಕರ ಪ್ರಸ್ತಾವನೆ, ಕೊನೆಯಲ್ಲಿ, ಕಥಾವರ್ಗಗಳು, ನಿರೂಪಕರನ್ನು ಕುರಿತು, ಇವೆ.

೧೬೯೩. ಮೂರು ಪ್ರಾಣಿಯ ಕಥೆಗಳು

ಲೇ: ಪಿ.ಕೆ. ರಾಜಶೇಖರ; ಪ್ರ: ನಭಶ್ರೀ ಪ್ರಕಾಶನ, ಮೈಸೂರು-೯; ಮೊ.ಮು: ಈ ಪ್ರತಿಯಲ್ಲಿ ನಮೂದು ಇಲ್ಲ; ಪುಟ ೨೬; ಕ್ರೌನ್ ೧/೮

ಕಥೆಗಳು: ೧.ಮೊಲದ ಮುಸುಡಿ ಸೆಳೆತ ೨.ಕಿಲಾಡಿ ಕುದುರೆ ೩.ಮಾತಿನ ಮಲ್ಲ ಆಮೆ.

೧೬೯೪. ಮೆಲ್ಲಾಗೆ ಹಬ್ಬಿತು ಮಲ್ಲೀಗೆ ಗಮಲು

ಲೇ: ಸಂತೆಕಸಲಗೆರೆ ಪ್ರಕಾಶ್; ಪ್ರ: ಜ್ಯೋತಿ ಪ್ರಕಾಶನ, ಎಂ-೪೫, ಕರ್ನಾಟಕ ಬ್ಯಾಂಕ್ ರಸ್ತೆ, ವಿವೇಕಾನಂದ ಸರ್ಕಲ್ ಹತ್ತಿರ, ಮೈಸೂರು-೫೭೦ ೦೨೩; ಮೊ.ಮು: ೨೦೦೯; ಪುಟ ೨೦೦; ಡಿಮ್ಮೈ ೧/೮

ಮಂಡ್ಯ ಜಿಲ್ಲೆಯ ಹಿಂದಣ ಮುಂದಣ ಎಂಬ ಪ್ರಸ್ತಾವನೆಯಿಂದ ಪ್ರಾರಂಭವಾಗುವ ಈ ಗ್ರಂಥವು ೧೪ ಹಳ್ಳಿಗಳನ್ನು ಪರಿಚಯ ಮಾಡಿ ಕೊಡುತ್ತದೆ: ೧.ಸಂತೆಕಸಲಗೆರೆ ೨.ಕಾರಸವಾಡಿ ೩.ಹನಿಯಂಬಾಡಿ ೪.ಮಂಗಲ ೫.ಕೊತ್ತತ್ತಿ ೬.ಮೊತ್ತಹಳ್ಳಿ ೭.ಬೇವಿನಹಳ್ಳಿ ೮.ತಗ್ಗಹಳ್ಳಿ ೯.ಹಳುವಾಡಿ ೧೦.ಚೀರನಹಳ್ಳಿ ೧೧.ಮಲ್ಲಿಗೆರೆ ೧೨.ಪುರ ೧೩.ಕಮ್ಮನಾಯಕನಹಳ್ಳಿ ೧೪.ಕೋಲಕಾರನ ದೊಡ್ಡಿ. ಪ್ರಾರಂಭದಲ್ಲಿ, ಮುತ್ತ ಮುಕ್ಕಳಿಸಿ ಉಗಿದು ಎಂಬ ಲೇಖಕರ ಮಾತು, ಕನ್ನಡ ಜಗತ್ತಿನ ಒಂದು ಕಣ ಎಂಬ ಆರ್. ರಾಜಪ್ಪ ದಳವಾಯಿ ಅವರ ಮುನ್ನುಡಿ, ಕಳೆದು ಹೋದ ಕಾಲದ ನಡುವೆ ಎಂಬ ಬರಹ, ಕೊನೆಯಲ್ಲಿ ಮಾಹಿತಿ ನೀಡಿದವರಿಗೆ ಕೃತಜ್ಞತೆಗಳು, ಇವೆ.

೧೬೯೫. ಮೇಲುಕೋಟೆ ಸುತ್ತಿನ ಜನಪದ ಕಥೆಗಳು

ಸಂ: ನರಸಿಂಹೇಗೌಡ ನಾರಣಾಪುರ; ಪ್ರ: ಹೊಂಗಿರಣ ಪ್ರಕಾಶನ, ಕೆ.ಜಿ.ಎಫ್; ಮೊ.ಮು; ೧೯೮೯; ಪು: ೪೪+೧೪೦ = ೧೮೪; ಡಿಮ್ಮೈ.

ಮೂವತ್ತು ಜನಪದ ಕಥೆಗಳ ಸಂಕಲನ ೧.ಬ್ರಾಹ್ಮಣ ಮತ್ತು ನರಿ ೨.ರಾಜದತ್ತ ೩.ಕುಂಟಣ್ಣನ ಸಾಹಸ ೪.ಮುದ್ಕಿ ಮತ್ತು ಮಗ ೫.ಮಂತ್ರಿಯಾದ ಕುರ್ಬಣ್ಣ ೬.ತೋಡ ಮತ್ತು ಕಲ್ಲು ೭.ನರಿ ಮತ್ತು ಸಾವ್ಕಾರ ೮.ಹೋತ ಮತ್ತು ನರಿ ೯.ಚಿತ್ತಾರವಾದೊ ಹೊಳೆಯಲ್ಲಿ ೧೦.ಕೋತಿ ಮತ್ತು ಗುಂಚಕ್ಕಿ ೧೧.ಮಲ್ಲಿ-ಶ್ಯಾನುಭೋಗ ೧೨.ದಾಸಪ್ಪ-ಪುರುಷಪ್ಪ ೧೩.ಕಳ್ಳ-ಮಂತ್ರಿ ೧೪.ಪೆದ್ದಗಂಡ ೧೫.ಪಟೇಲ್ರ ಸೊಸೆ ೧೬.ಬೆಳ್ಳಿ ಚೆಂಜೆಡೆ ಚಿನ್ನದ ಚೆಂಜೆಡೆ ಮಗ ೧೭.ಅಳಿಬಾಬು-ಕಾಸಿನ ಸಾಬು ೧೮.ಹುಲ್ಲೆ-ನರಿ ೧೯.ಬ್ರಹ್ಮಚಾರಿ ಮತ್ತು ಮಗ ೨೦.ಅಣ್ಣ-ತಂಗಿ ೨೧.ಕೆಂಚರಾಯ್ರು ೨೨.ಕಳ್ಳ ೨೩.ಐಭೋಗದ ರಂಗಸ್ವಾಮಿ ೨೪.ನಾರಾಯಣಿ ೨೫.ಕರಿನಾಯಿ ೨೬.ಮಲಗಮ್ಮನ ಮಗ ೨೭.ತಿಮ್ಮಪ್ಪನ ಹುಂಡಿ ೧೮.ತಲೆನೋವು ೨೯.ಕಾಡುಬಸವಣ್ಣ ೩೦.ಮುನಿಯಪ್ಪನ ಸೇವೆ. ರಾಗೌ ಅವರ ಮುನ್ನುಡಿ, ಸಂಪಾದಕರ ಪ್ರಸ್ತಾವನೆ, ಅನುಬಂಧದಲ್ಲಿ ವಕ್ತೃಗಳ ಪರಿಚಯ, ಅರ್ಥಕೋಶ, ಇವೆ.

೧೬೯೬. ಮೇಲು ಷಿಕಾರಿಗರು

ಲೆ: ಬೆನಕನಹಳ್ಳಿ ಜಿ. ನಾಯಕ್; ಪ್ರ: ಐಬಿಎಚ್ ಪ್ರಕಾಶನ, ಗಾಂಧಿನಗರ, ಬೆಂಗಳೂರು-೫೬೦೦೦೯; ಮೊ.ಮು: ೧೯೮೨; ಪು: ೪೬; ಕ್ರೌನ್ ೧/೮

ಕರ್ನಾಟಕದಲ್ಲಿ ನೆಲೆಸಿರುವ ಒಂದು ಬುಡಕಟ್ಟು ಜನಾಂಗ. ಇವರ ಬದುಕು ಮತ್ತು ಸಂಸ್ಕೃತಿಗಳನ್ನು ಪರಿಚಯಿಸುವ ಕೃತಿ. ಕಲವು ರೇಖಾಚಿತ್ರಗಳಿವೆ.

೧೬೯೭. ಮೈಲಾರ

ಸಂ: ಸಿ. ಮಹದೇವ; ಪ್ರ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಮೊ.ಮು: ೨೦೧೨; ಪು: ೧೬+೧೦೬+೧೬=೧೩೮; ಡಿಮ್ಮೈ ೧/೮

ಈ ಗ್ರಂಥದಲ್ಲಿ ಆರು ಲೇಖನಗಳಿದ್ದು ಅವುಗಳಲ್ಲಿ ಎರಡು ಜಾನಪದಕ್ಕೆ ಸಂಬಂಧಿಸಿವೆ: ೧.ಮೌಖಿಕ ಸಾಹಿತ್ಯ ಹಾಗೂ ಸಾಂಸ್ಕೃತಿಕ ನೆಲೆಗಳು– ಮಂಜುನಾಥ ಬೇವಿನಕಟ್ಟಿ ೨.ನಂಬಿಕೆ ಮತ್ತು ಆಚರಣೆಗಳು– ಕೇಶವನ್ ಪ್ರಸಾದ್. ಕೆ.

೧೬೯೮. ಮೈಲಾರಲಿಂಗ ಈರಬಡಪ್ಪ

ಸಂ: ಕರಾಕೃ; ಪ್ರ: ಜನಪದ ಸಾಹಿತ್ಯ ಅಕಾಡೆಮಿ, ಮೈಸೂರು; ಮೊ.ಮು: : ೧೯೬೩, ಎ.ಮು.: ೧೯೬೭, ಪುಟ: ೮ + ೬೨ = ೭೦, ಕ್ರೌನ್ ೧/೮

'ಎರಡು ಸ್ಥಳದ ಜಾನಪದ ಕಥಾನಕಗಳು' ಎಂಬ ಅಡಿಬರಹ ಇದೆ. ಮೈಲಾರಲಿಂಗ, ಈರಬಡಣ್ಣ–ಎಂಬ ಎರಡು ಕಥನಗೀತೆಗಳ ಸಂಕಲನ ಇದು. ಎಸ್. ನಂಜುಂಡಸ್ವಾಮಿ, ಕುಮಾರಿ ಎಂ.ಜೆ. ಕಮಲಾಕ್ಷಿ ಅವರುಗಳ ಒಟ್ಟು ೧೫ ರೇಖಾಚಿತ್ರಗಳಿವೆ. ಕ್ಷೇತ್ರ ಕಾರ್ಯಕ್ಕಾಗಿ ಸಂಗ್ರಹಕಾರರ ಜೊತೆಯಲ್ಲಿ ಹೋದಾಗ ಆಗಿರುವ ಅನುಭವವನ್ನು ಚೇಳು ಕುಟಕಲಿಲ್ಲ ಎಂಬ ಶೀರ್ಷಿಕೆಯಲ್ಲಿ ಪಿ.ಆರ್. ತಿಪ್ಪೇಸ್ವಾಮಿ ಅವರು ಬರೆದಿದ್ದಾರೆ. ಇದಕ್ಕೆ, ಇದು ಸತ್ಯ ಕತೆ! ನಡೆದ ಕತೆ! ಎಂಬ ವಿಶೇಷಣ ಇದೆ.

೧೬೯೯. ಮೈಲಾರಲಿಂಗ ಕಾವ್ಯ

ಸಂ: ಎಂ.ಬಿ. ನೇಗಿನಹಾಳ; ಪ್ರ: ಕರ್ನಾಟಕ ಸಾಹಿತ್ಯ ಅಕಾಡೆಮಿ, ನೃಪತುಂಗ ರಸ್ತೆ ಬೆಂಗಳೂರು – ೨; ಮೊ.ಮು: ೧೯೯೭; ಪು: ೮+೧೦೦ = ೧೦೮; ಕ್ರೌನ್ ೧/೮

ಏಳು ಅಧ್ಯಾಯಗಳಿವೆ: ೧.ಏಳಯ್ಯ ಬೆಳಗಾದಾವೊ ೨.ಮೈಲಾರ ಲಿಂಗಪ್ಪ ತಿರುಪತಿ ತಿಮ್ಮಪ್ಪ ೩.ಬ್ಯಾಡೋ ಕುರುಬರ ಸಂಗ ೪.ಮಾಳವ್ವ ೫.ಸ್ವಾಮಿ ಗುಡ್ಡದಯ್ಯಗೆ ಬೆಳುಗ್ಯಾಳಿ ೬.ಕೊಮಾಲಿ ಪದ ೭.ಮಂಗಳಾರತಿ ಅನುಬಂಧದಲ್ಲಿ ಕೆಲವು ವಿವರಗಳಿವೆ: ೧.ಕಥೆ: ದೇವರ ಉತ್ಪತ್ತಿ ೨.ಗಂಗಿಮಳಮ್ಮನೊಡನೆ ಲಗ್ನ ೩.ಕುರುಬರ ಮುಳವ್ವ ೪.ಕೋಮಾಲಿ ೫.ರಡ್ಡೇರ ನೀಲವ್ವ ೬.ದೋಣಿ ಕತೆ.

೧೭೦೦. ಮೈಲಾರಲಿಂಗನ ಕಾವ್ಯ

ಸಂ. ಚಕ್ಕೆರೆ ಶಿವಶಂಕರ್; ಪ್ರ: ಕರ್ನಾಟಕ ಜಾನಪದ ಟ್ರಸ್ಟ್, ಬೆಂಗಳೂರು; ಮೊ.ಮು: ೧೯೮೭, ಪುಟ: ೧೮೨, ಕ್ರೌನ್ ೧/೮

ಗೊರವರ ಕೆಂಚಮಲ್ಲಯ್ಯ ಹಾಡಿದ ಕಾವ್ಯ ಇದು. ಪ್ರಸ್ತಾವನೆ ಎಂದು ನಮೂದಿಸದ ೩೯ ಪುಟಗಳ ದೀರ್ಘ ಪ್ರಸ್ತಾವನೆಯಿದೆ. ಸ್ಥಳ ಪುರಾಣಗಳು-ಕಥೆಗಳು, ಪ್ರಾಚೀನತೆ, ನಾಮನಿಷ್ಪತ್ತಿ, ಕ್ಷೇತ್ರಗಳು, ಪ್ರಾಚೀನತೆ- ವೇಷಭೂಷಣಗಳು-ಆಚಾರ ವಿಚಾರಗಳು, ವೃತ್ತಿಗಾಯಕರಾಗಿ ಗೊರವರು, ಕೆಂಚಮಲ್ಲಯ್ಯನವರ ಪರಿಚಯ, ಕಥಾ ಪರಿಚಯ, ಇತರ ಪಾಠಗಳು, ಧಾಟಿಗಳು, ಕೆಂಚಮಲ್ಲಯ್ಯನವರ ಹಾಡಿನಲ್ಲಿ ಗೊರವರ ದಿರಸು, ಕೊನೆಯ ಮಾತು –ಎಂಬ ಉಪಶೀರ್ಷಿಕೆಗಳು ಪ್ರಸ್ತಾವನೆಯಲ್ಲಿವೆ. ಗ್ರಂಥ ಋಣದಲ್ಲಿ ಆರು ಗ್ರಂಥಗಳನ್ನು ನಮೂದಿಸಲಾಗಿದೆ. ಕಾವ್ಯವು ಗದ್ಯಪದ್ಯಾತ್ಮಕವಾಗಿದೆ. ೧೫ ಪುಟಗಳ ಅರ್ಥಕೋಶ ಇದೆ. ೧೪ ಪುಟಗಳ ಶಬ್ದಸೂಚಿ ಇದೆ.

೧೭೦೧. ಮೈಲಾರಲಿಂಗನ ಪದಗಳು (ಭಾಗ ೧)

ಸಂ: ಎಂ. ಬಿ. ನೇಗಿನಹಾಳ; ಪ್ರ: ಶ್ರೀಮತಿ ಸಿ.ಎಂ. ನೇಗಿನಹಾಳ, ಬೆಳಗಾಂವಿ; ಮೊ.ಮು: ೧೯೮೩; ಪುಟ ೨೦+೯೦=೧೧೦; ಕ್ರೌನ್ ೧/೮

ಹದಿನೈದು ಹಾಡುಗಳಿವೆ. ಸಂಪಾದಕರ ಪೀಠಿಕೆ, ಕೊನೆಯಲ್ಲಿ, ಹಾಡಿದವರು, ಟಿಪ್ಪಣಿಗಳು ಮತ್ತು ಕಠಿಣ ಪದಕೋಶ ಇವೆ.

೧೭೦೨. ಮೈಸೂರು ನಗರದ ಅಶೋಕಪುರಂ

ಲೇ: ವಾಸುದೇವಮೂರ್ತಿ; ಪ್ರ: ಅಭಿರುಚಿ ಪ್ರಕಾಶನ, ೪, ೨ನೆಯ ಮಹಡಿ, ನಗರ ಸಾರಿಗೆ ಸಂಸ್ಥೆ ಕಟ್ಟಡ, ಕೆ.ಆರ್. ವೃತ್ತ, ಮೈಸೂರು-೧; ಮೊ.ಮು: ೨೦೦೩; ಪು: ೪೬೮; ಡೆಮ್ಮೈ ೧/೮

ಒಂದು ಜಾನಪದೀಯ ಅಧ್ಯಯನ ಎಂಬ ಅಡಿಬರಹ ಇದೆ. ಪಿ.ಎಚ್.ಡಿ. ಮಹಾಪ್ರಬಂಧ. ಒಂಬತ್ತು ಅಧ್ಯಾಯಗಳಿವೆ: ೧.ಅಶೋಕಪುರಂನ ಹುಟ್ಟು ಮತ್ತು ಬೆಳವಣಿಗೆ ೨.ಅಶೋಕಪುರಂನ ಭೌಗೋಳಿಕ ಲಕ್ಷಣಗಳು ೩.ಅಶೋಕಪುರಂನ ಸಾಂಸ್ಥಿಕ ಸ್ವರೂಪ ೪.ಅಶೋಕಪುರಂನ ಪ್ರಮುಖ ಆಚರಣೆಗಳು ೫.ನಂಬಿಕೆ ಮತ್ತು ಸಂಪ್ರದಾಯ ೬.ಅಶೋಕಪುರಂನಲ್ಲಿ ಜನಪದ ಸಾಹಿತ್ಯದ ವೈವಿಧ್ಯತೆಗಳು ೭.ಜನಪದ ವೈದ್ಯ ೮.ಉಡುಗೆ-ತೊಡುಗೆ ಹಾಗೂ ಆಹಾರ ಪದ್ಧತಿ ೯.ಜನಪದ ಕಲೆ ಮತ್ತು ಕ್ರೀಡೆಗಳು. ಹಿ.ಶಿ. ರಾಮಚಂದ್ರೇಗೌಡ ಅವರ ಮುನ್ನುಡಿ, ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ ಎಂಬ ಶೀರ್ಷಿಕೆ, ಕೊನೆಯಲ್ಲಿ, ಉಪಸಂಹಾರ, ವಕ್ತೃಗಳ ವಿವರ ಇವೆ.

೧೭೦೩. ಮೈಸೂರು ಜಿಲ್ಲೆಯ ಐತಿಹ್ಯಗಳು: ಒಂದು ಅಧ್ಯಯನ

ಲೇ: ವೃಷಭಕುಮಾರ್; ಪ್ರ: ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು; ಮೊ.ಮು. ೨೦೧೦; ಪು: ೧೬+೧೭೨=೧೮೮; ಡೆಮ್ಮೈ ೧/೮

ಈ ಪಿಎಚ್.ಡಿ. ಮಹಾಪ್ರಬಂಧದಲ್ಲಿ ಐದು ಅಧ್ಯಾಯಗಳಿವೆ: ೧.ಪೀಠಿಕೆ: ಉದ್ದೇಶ ಮತ್ತು ವ್ಯಾಪ್ತಿ, ಜಾಗತಿಕ ನೆಲೆಯಲ್ಲಿ ಭಾರತದಲ್ಲಿ, ಕರ್ನಾಟಕದಲ್ಲಿ. ೨.ಐತಿಹ್ಯಗಳ ಸ್ವರೂಪ ಮತ್ತು ಲಕ್ಷಣಗಳು: ವ್ಯಾಖ್ಯೆಗಳು ಇತರ ಜಾನಪದ ಪ್ರಕಾರಗಳೊಡನೆ ಐತಿಹ್ಯಗಳ ಸಂಬಂಧಗಳು, ಐತಿಹ್ಯ ಮತ್ತು ಇತಿಹಾಸ, ಐತಿಹ್ಯಗಳ ವರ್ಗೀಕರಣ. ೩.ಮೈಸೂರು ಜಿಲ್ಲೆ ಒಂದು ಸ್ಥೂಲ ಪರಿಚಯ: ಭೌಗೋಳಿಕ ವೈಲಕ್ಷಣಗಳು, ಚಾರಿತ್ರಿಕ ಹಿನ್ನೆಲೆ. ೪.ಮೈಸೂರು ಜಿಲ್ಲೆಯ ಐತಿಹ್ಯಗಳು ವಿವರಣಾತ್ಮಕ ಪರಿಶೀಲನೆ: ಘಟನಾ ಐತಿಹ್ಯಗಳು, ಸ್ಥಳೀಯ ಐತಿಹ್ಯಗಳು, ವ್ಯಕ್ತಿ ಐತಿಹ್ಯಗಳು. ೫.ಉಪಸಂಹಾರ. ಗೊ.ರು. ಚನ್ನಬಸಪ್ಪ ಅವರ ಅಧ್ಯಕ್ಷರ ನುಡಿ ಇದೆ.

೧೭೦೪. ಮೈಸೂರು ಜಿಲ್ಲೆಯ ಜನಪದ ಕಲಾವಿದರು

ಲೇ: ಮಹೇಶ ಎಂ; ಪ್ರ: ಕರ್ನಾಟಕ ಜಾನಪದ ಅಕಾಡಿಮೈ, ಬೆಂಗಳೂರು; ಮೊ.ಮು.ನಮೂದು ಇಲ್ಲ; ಪುಟ ೧೪+೧೧೪=೧೨೮; ಡಿಮೈ ೧/೮

೭೧ ಅಧ್ಯಾಯಗಳಲ್ಲಿ ೭೮ ಕಲಾವಿದರನ್ನು ಫೋಟೋ ಸಹಿತ ಪರಿಚಯ ಮಾಡಿಕೊಡಲಾಗಿದೆ. ಗೊ.ರು. ಚನ್ನಬಸಪ್ಪ ಅವರ ಅಧ್ಯಕ್ಷರ ನುಡಿ ಇದೆ. ಎರಡು ಅನುಬಂಧಗಳಿವೆ. ೧.ಹದಿನೈದು ಕಲೆಗಳನ್ನು ಪರಿಚಯ ಮಾಡಿಕೊಡಲಾಗಿದೆ ೨.ಕಲಾವಿದರ ವಿಳಾಸಗಳನ್ನು ನೀಡಲಾಗಿದೆ.

೧೭೦೫. ಮೊಂಡರ ಸಂಸ್ಕೃತಿ

ಲೇ: ಎನ್. ಚಂದ್ರಪ್ಪ; ಪ್ರ: ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು; ಮೊ.ಮು: : ೧೯೯೩, ಪು: ೪೮ + ೨೭೬ = ೩೨೪, ಕ್ರೌನ್ ೧/೮

ಈ ಗ್ರಂಥದಲ್ಲಿ ಆರು ಅಧ್ಯಾಯಗಳಿವೆ. ೧.ಹಿನ್ನೆಲೆ ೨.ಜೀವನ ವಿಧಾನ ಮತ್ತು ಸಾಮಾಜಿಕ ವ್ಯವಸ್ಥೆ ೩.ಆಚರಣೆ ಮತ್ತು ಕಲೆ ೪.ನಂಬಿಕೆಗಳು ೫.ಪರಿವರ್ತನೆ ಸಂದರ್ಭದಲ್ಲಿ. ೬.ನೆಯದಾದ 'ಅನುಬಂಧ'ದಲ್ಲಿ ಮೂರು ಭಾಗಗಳಿವೆ. ೧.ಗೀತೆಗಳು ೨.ಒಂದು ವಿಶೇಷ ಟಿಪ್ಪಣಿ ೩.ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸಂದರ್ಶಿಸಿದವರ ವಿವರಗಳು. ಗೀತೆಗಳು ಎಂಬ ಭಾಗದಲ್ಲಿ ಮೂರು ಗೀತೆಗಳಿವೆ: ೧.ಹರಹರ ಮೊಂಡಿ ಜಂಗಮನೆ ೨.ಎಲ್ಲಮ್ಮನ ಕಥೆ ೩.ಬಳ್ಳಾಳರಾಜು ಕಥೆ. ಈ ಮೂರೂ ಗೀತೆಗಳು ತೆಲುಗಿನಲ್ಲಿದ್ದು ಇಲ್ಲಿ ಕನ್ನಡ ಅನುವಾದವನ್ನು ಕೊಡಲಾಗಿದೆ ಎಂಬ ಆವರಣದ ಮಾಹಿತಿ ಇದೆ. ಪ್ರಾರಂಭದಲ್ಲಿ ಬರಗೂರು ರಾಮಚಂದ್ರಪ್ಪ ಅವರ 'ಸಂಸ್ಕೃತಿ–ಉಪಸಂಸ್ಕೃತಿ' ಎಂಬ ಸಂಶೋಧನಾತ್ಮಕ ಪ್ರಸ್ತಾವನೆ ಇದೆ.

೧೭೦೬. ಮೊಗ್ಗಾಗಿ ಬಾರೊ ತುರುಬೀಗೆ

ಸಂ: ಮೈಸೂರು ಕೃಷ್ಣಮೂರ್ತಿ, ಮೈಸೂರು ಉಮೇಶ್, ರವಿ ಕೋಳಘಟ್ಟ; ಪ್ರ: ಕ್ಷೀರಸಾಗರ

ಪ್ರಕಾಶನ, ಕೀಲಾರ, ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ; ಮೊ.ಮು.೨೦೧೨; ಪು:೧೨೮; ಡಿಮೈ ೧/೮

"ಈ ಸಂಕಲನದ ಗೀತೆಗಳು ಮೂಲತಃ ಹೊನ್ನಾರು ಜನಪದ ಗಾಯಕರು ಹಾಡಿ ಪ್ರಚಾರ ಪಡಿಸಿದ ಧ್ವನಿಸುರುಳಿಗಳಲ್ಲಿ ಬಿತ್ತರಗೊಂಡಂಥವು" ಎಂಬ ವಿವರಣೆ ಸಂಪಾದಕರ ನುಡಿಯಲ್ಲಿದೆ. ಇಲ್ಲಿರುವ ಧ್ವನಿಸುರುಳಿಗಳು ಇವು: ೧.ಮಲೆಯ ಮಾದೇಶ್ವರ ೨.ಶರಣು ಶರಣು ಮಾದೇಶ್ವರಗೆ (ಹಿಂಡುಲಿಯೊಡೆಯ ದುಂಡು ಮಾದಯ್ಯ) ೩.ಎದ್ದು ಬಾರೊ ಮುದ್ದು ಭೈರೂವ ೪.ಹಾಡೋ ಮುತ್ತಿನರಗಿಣಿ ೫.ಕೋಗಿಲಾಗಿ ಕೂಗುತೀಯಲ್ಲೋ ೬.ನಕ್ಕರೆ ನಗಲೇಳು.

೧೭೦೭. ಮೊರಸು ಒಕ್ಕಲಿಗರ ದ್ಯಾವರ ಸಂಪ್ರದಾಯಗಳು

ಲೇ: ಟಿ, ಎ, ನಾಗರಾಜ; ಪ್ರ: ಜನನಿ ಪ್ರಕಾಶನ, ರಾಜರಾಜೇಶ್ವರಿ ನಗರ, ಬೆಂಗಳೂರು; ಮೊ, ಮು.೨೦೦೫; ಪು: ೧೨+೧೦೮+೮=೧೨೮; ಡಿಮೈ ೧/೮

ಐದು ಅಧ್ಯಾಯಗಳಿವೆ: **ಒಂದು:** ಪೀಠಿಕೆ, **ಎರಡು:** ಜನಾಂಗದ ಐತಿಹಾಸಿಕ ಹಿನ್ನೆಲೆ, **ಮೂರು:** ಹೊಸ ದ್ಯಾವರಗಳು: ೧.ಒಂದು ದಿನದ ಹೊಸದ್ಯಾವರಗಳು ೨.ಎರಡು ಬಾರಿ ಆಚರಿಸುವ... ೩.ಶನಿವಾರದ ... ೪.ಬಂಡೆ ಮೇಲಿನ .. ೫.ಬೆತ್ತಲೆ ಹಿತ್ತಲ... ೬.ಮೂರು ದಿವಸದ... ೭.ಹೊಸತು ಕೊಡುವುದು. **ನಾಲ್ಕು:** ಬಂಡಿ ದ್ಯಾವರಗಳು ಮಕ್ಕಳ ದ್ಯಾವರಗಳು: ೧.ಬಂಡಿ ದ್ಯಾವರಗಳು ೨.ಬೆಂಡಿಗಾನಹಳ್ಳಿ ಬಂಡಿದ್ಯಾವರಗಳು ೩.ಮಕ್ಕಳ ದ್ಯಾವರಗಳು ೪.ಪೂಜೆ ದ್ಯಾವರಗಳು ೫.ಲಗುಮಮ್ಮನ ದ್ಯಾವರಗಳು ೬.ಕರಗದ ದ್ಯಾವರಗಳು ೭.ದೇವನಗೊಂದಿ ದ್ಯಾವರಗಳು. **ಐದು:** ಮುನಿದ್ಯಾವರಗಳು. ಉಪಸಂಹಾರ ಎಂಬ ಅಧ್ಯಾಯವೂ ಇದೆ. ಬೈರಮಂಗಲ ರಾಮೇಗೌಡ ಅವರ ಮುನ್ನುಡಿ ಇದೆ. ಅಲ್ಲಲ್ಲಿ ರೇಖಾಚಿತ್ರಗಳಿವೆ, ಕೊನೆಯಲ್ಲಿ ಕೆಲವು ಫೋಟೋಗಳಿವೆ.

೧೭೦೮. ಮೋಟ್ನಳ್ಳಿ ಹಸನ ಸಾಹೇಬ

ಆಯ್ಕೆ: ಬಿ.ಮಹಾದೇವಪ್ಪ; ಪ್ರ: ಕರ್ನಾಟಕ ಸಾಹಿತ್ಯ ಅಕಾಡೆಮಿ, ನೃಪತುಂಗ ರಸ್ತೆ, ಬೆಂಗಳೂರು-೨; ಮೊ.ಮು: ೧೯೯೬; ಪು: ೧೬+೬೪=೮೦; ಕ್ರೌನ್ ೧/೮

ಅನುಭಾವಿ ಹಾಗೂ ತತ್ವಪದಕಾರ ಹಸನ ಸಾಹೇಬರು ಹಾಡಿರುವ ೬೪ ಹಾಡುಗಳ ಸಂಕಲನ. ಕೊನೆಯಲ್ಲಿ, ಕಠಿಣ ಶಬ್ದಾರ್ಥಗಳು, ಕೆಲವು ಪದ್ಯಗಳಿಗೆ ಭಾವ ಸಂದರ್ಭ ಸೂಚಿ ಇವೆ.

೧೭೦೯. ಮೋಡಿ ಮಾಟ ಎಂಬ ಅದ್ಭುತ ಮಾಯಾಜಾಲ

ಲೇ: ಆರ್. ಬಸವರಾಜು; ಪ್ರ: ವಾಣಿ ಪ್ರಕಾಶನ, ೧ನೇ ಕ್ರಾಸ್, ಬ್ರಾಹ್ಮಣರ ಬೀದಿ, ಚಿಕ್ಕನಾಯಕನಹಳ್ಳಿ-೫೭೨ ೨೧೪, ತುಮಕೂರು ಜಿಲ್ಲೆ; ಮೊ.ಮು.೨೦೦೬; ಪು:೧೨೨; ಕ್ರೌನ್ ೧/೮

ಈ ಗ್ರಂಥದಲ್ಲಿ ಎಂಟು ಅಧ್ಯಾಯಗಳಿವೆ: ೧.ಇಂಥವರನ್ನ ಏನಂತ ಕರೆಯೋಣ? ೨.ಮಂತ್ರಕ್ಕೆ ತಿರುಮಂತ್ರ ಏಟಿಗೆ ಎದಿರೇಟು ೩.ಮ್ಯಾಜಿಸ್ಟ್ರೇಟರ ಮೇಜಿನ ಮೇಲೆ ಚೇಳುಗಳು! ೪.ಹಂದನ ಕೆರೆಯಲ್ಲಿ ಅಂದು ನಡೆದದ್ದೇನು? ೫.ಕರಿಯಣ್ಣ ಸೆಟ್ಟರನ್ನು ಕುರಿತ ಮತ್ತಷ್ಟು ಮಾಹಿತಿ ೬.ಹಂದನ ಕೆರೆಗೆ ಬಂದ ಮೋಡಿ ಕೊರಮರು ೭.ರಣಮೋಡಿ ರಾಜಮೋಡಿ ಎಂದರೇನು? ೮.ಮಾಟ ಮೋಡಿಯ ಸಾಮಗ್ರಿಗಳು. ಹಲವು ಉಪಶೀರ್ಷಿಕೆಗಳಡಿ ಇನ್ನೂ ಹೆಚ್ಚಿನ ವಿಚಾರಗಳಿವೆ. ಎಂ.ವಿ.ನಾಗರಾಜರಾವ್ ಅವರ ಮುನ್ನುಡಿ ಹಾಗೂ ಕೆಲವು ಫೋಟೋಗಳಿವೆ.

೧೭೧೦. ಮೌಖಿಕ

ಲೇ: ವೀರಣ್ಣ ದಂಡೆ; ಪ್ರ: ಕವಿಮಾರ್ಗ ಪ್ರಕಾಶನ, ತೇಜಸ್ವಿನಿ, ಸರಸ್ವತಿಪುರ, ವಿಶ್ವವಿದ್ಯಾಲಯ ಅಂಚೆ, ಗುಲಬರ್ಗಾ–೫೮೫ ೧೦೬; ಮೊ.ಮು: ೨೦೦೭; ಪುಟ ೮+೧೭೨=೧೮೦; ಡಿಮ್ಮೈ ೧/೮

ಹತ್ತೊಂಬತ್ತು ಲೇಖನಗಳ ಸಂಕಲನ: ೧.ಜನಪದ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು ೨.ಗೋವಿನ ಹಾಡು ೩.ಸೋಮರಾಯ ಭೀಮರಾಯ ೪.ಜನಪದ ವೈದ್ಯ ಪದ್ಧತಿಯ ಸಾಂಸ್ಕೃತಿಕ ಮತ್ತು ವೈಜ್ಞಾನಿಕ ಮುಖಗಳು ೫.ಕರ್ನಾಟಕದ ಜನಪದ ಕಲೆಗಳು ೬.ಜನಪದ ಕಲೆಗಳ ಸಂರಕ್ಷಣೆ ಮತ್ತು ಸಮಸ್ಯೆ ೭.ದೊಡ್ಡಾಟ: ಹೊಸ ಸಾಧ್ಯತೆಗಳು ೮.ಜಾನಪದ ಮತ್ತು ಕರ್ನಾಟಕದ ಸಂಸ್ಕೃತಿ ೯.ದೀಪಾವಳಿ: ಚಳಿಯನ್ನು ಸ್ವಾಗತಿಸುವ ಉತ್ಸವ ೧೦.ಕರ್ನಾಟಕದ ಜಾನಪದ ಶಾಸ್ತ್ರ ಅಧ್ಯಯನ: ಒಂದು ಮುನ್ನೋಟ ೧೧.ದೇಸಿ ಸಾಹಿತ್ಯ ನಡೆದುಬಂದ ದಾರಿ ೧೨.ಜನಪದ ಕಾವ್ಯಮೀಮಾಂಸೆ–ಪ್ರತಿಕ್ರಿಯೆ ೧೩.ಜನಪದ ಕಥೆಗಳ ಲಕ್ಷಣಗಳು ೧೪.ಮುದೇನೂರ ಸಂಗಣ್ಣನವರು ಸಂಪಾದಿಸಿದ ಜನಪದ ಪ್ರದರ್ಶನ ಪಠ್ಯಗಳು ೧೫.ಡಾ.ಜೀಶಂಪ ಅವರ ಜನಪದ ಕಥೆಗಳ ಸಂಗ್ರಹಗಳು ೧೬.ಡಾ.ಬಿ.ಎಸ್. ಗದ್ದಗಿಮಠ ಅವರ ಬಿಡಿ ಲೇಖನಗಳು ೧೭.ಡಾ.ಬಿ.ಬಿ. ಹೆಂಡಿ ೧೮.ಜಾನಪದ ಡಿಂಡಿಮ ಬಾಳಪ್ಪ ಹುಕ್ಕೇರಿ ೧೯.ಡಾ.ಎಂ.ಎಸ್. ಲಠ್ಠೆ: ನೆನಪು.

೧೭೧೧. ಮಾನೌಮಿಯ ಚೌಪದ

ಸಂ: ಎನ್.ಅನಂತರಂಗಾಚಾರ್; ಪ್ರ: ಶಾರದಾ ಮಂದಿರ, ರಾಮಯ್ಯರ್ ರಸ್ತೆ, ಮೈಸೂರು; ಮೊ.ಮು: ೧೯೪೦, ಎ.ಮು: ೧೯೬೧; ಪು: ೧೬+೪೪=೬೦; ಕ್ರೌನ್ ೧/೮

೩೭ ಪುಟಗಳ ವಿವಿಧ ವ್ಯಕ್ತಿಗಳ, ದೈವಗಳ, ವಿಷಯಗಳ ಚೌಪದನಗಳಿವೆ. ಶಬ್ದಕೋಶ ಮತ್ತು ಟಿಪ್ಪಣಿ ಇವೆ.

೧೭೧೨. ಮ್ಯಾಸ ಬೇಡರು

ಲೇ: ಎಂ.ಜಿ. ಈಶ್ವರಪ್ಪ; ಪ್ರ: ಐ.ಬಿ.ಎಚ್. ಪ್ರಕಾಶನ, ಗಾಂಧಿನಗರ, ಬೆಂಗಳೂರು–೫೬೦ ೦೦೯; ಮೊ.ಮು: ೧೯೮೨; ಪುಟ ೪೮; ಕ್ರೌನ್ ೧/೮

ಮ್ಯಾಸ ಬೇಡರನ್ನೂ ಅವರ ಸಾಂಸ್ಕೃತಿಕ ಬದುಕನ್ನೂ ಪರಿಚಯಿಸುವ ಗ್ರಂಥ. ವೇಷಭೂಷಣಗಳು, ವೃತ್ತಿ, ಆಹಾರ ಪದ್ಧತಿ, ಧಾರ್ಮಿಕ ವ್ಯವಸ್ಥೆ, ಸಂಪ್ರದಾಯಗಳು, ಹುಟ್ಟು, ವಿವಾಹ, ಮರಣ, ಹಬ್ಬ ಹರಿದಿನಗಳು ಮುಂತಾದ ಉಪಶೀರ್ಷಿಕೆಗಳಿವೆ. ಕೆಲವು ಫೋಟೋಗಳೂ ರೇಖಾಚಿತ್ರಗಳೂ ಇವೆ.

೧೭೧೩. ಮ್ಯಾಸ ಬೇಡರ ಸಂಸ್ಕೃತಿ

ಲೇ: ಕೃಷ್ಣಮೂರ್ತಿ ಹನೂರು; ಪ್ರ: ಕರ್ನಾಟಕ ಸಾಹಿತ್ಯ ಅಕಾಡೆಮಿ, ನೃಪತುಂಗ ರಸ್ತೆ, ಬೆಂಗಳೂರು-೫೬೦೦೦೨, ಮೊ.ಮು: ೧೯೯೩; ಪು: ೪೮+೩೨೪=೩೭೨; ಕ್ರೌನ್೧/೮

ಎಂಟು ಅಧ್ಯಾಯಗಳಿವೆ.೧.ಹಿನ್ನಲೆ ೨.ಜೀವನವಿಧಾನ ಮತ್ತು ಸಾಮಾಜಿಕ ವ್ಯವಸ್ಥೆ ೩.ಆಚರಣೆ ಮತ್ತು ಕಲೆ ೪.ಭಾಷೆ-ಸಾಹಿತ್ಯ ೫.ಪ್ರದರ್ಶನಾತ್ಮಕ ಕಲೆಗಳು ೬.ಕ್ರೀಡೆಗಳು ೭.ಸಾಮಾಜಿಕ ಪರಿವರ್ತನೆ ೮.ಸಮಾರೋಪ ಅನುಬಂಧದಲ್ಲಿ ಕಿಲಾರಿ ದೇವರೆತ್ತುಗಳು, ಬೇಡ ಶರಣರ ಕಥನಗೀತೆಗಳು; ಮ್ಯಾಸಬೇಡರ ಸೃಷ್ಠಿ, ಬೇಡನಾಯಕ ನಡುವಣ ಗಿಥೆಗಳು; ನಾಯಕನಹಟ್ಟಿ ತಿಪ್ಪೇರುದ್ರಸ್ವಾಮಿ, ಸೋಬಾನೆ ಪದಗಳು, ಬರಗೂರು ರಾಮಚಂದ್ರಪ್ಪ ಅವರ ಸಂಸ್ಕ್ರತಿ ಉಪಸಂಸ್ಕ್ರತಿ ಎಂಬ ಸುದೀರ್ಘ ಪ್ರಸ್ತಾವನೆ ಇದೆ.

೧೭೧೪. ಮ್ಯಾಸ ಮಂಡಲ

ಲೇ: ಮೀರಾಸಾಬಿಹಳ್ಳಿ ಶಿವಣ್ಣ; ಪ್ರ: ಕನ್ನಡ ಪುಸ್ತಕ ಪ್ರಾಧಿಕಾರ, ಚಾಮರಾಜಪೇಟೆ, ಬೆಂಗಳೂರು-೧೮; ಮೊ.ಮು: ೨೦೦೩; ಪು: ೧೪+೧೩೮=೧೫೨; ಡಿಮ್ಮೈ ೧/೮

ಮ್ಯಾಸಬೇಡ ಬುಡಕಟ್ಟಿನ ಕ್ಷೇತ್ರಾಧ್ಯಯನ ಆಧಾರಿತ ಸಂಶೋಧನ ಲೇಖನಗಳು ಎಂಬ ಅಡಿಬರಹ ಇದೆ. ಹದಿನೇಳು ಲೇಖನಗಳಿವೆ: ೧.ನಾಯಕ ಜನಾಂಗ-ಒಂದು ನೋಟ ೨.ಮೊಳಕಾಲ್ಮೂರು ತಾಲ್ಲೂಕಿನ ಜಾನಪದ ನೆಲೆಗಳು ೩.ಪಶುಪಾಲಕ ಮ್ಯಾಸ ಬೇಡರು ೪.ನಾಯಕನಹಟ್ಟಿ ಪಾಳೆಗಾರರ ವಂಶಾವಳಿ - ಒಂದು ಮರು ಪರಿಶೀಲನೆ ೫.ನಾಯಕನಹಟ್ಟಿ ಪಾಳೆಯಗಾರರ ಕಾಲದ ನ್ಯಾಯಾಡಳಿತ ೬.ಜಾನಪದ ನೆಲೆಯಲ್ಲಿ ಹಟ್ಟಿ ಜಾತ್ರೆ ೭.ಜನಪದ ಸಾಹಿತ್ಯದಲ್ಲಿ 'ಮದಕರಿ' ಪಾಳೆಗಾರರು ೮.ಪಾಳೇಗಾರ ವೇಷ ೯.ಚಿತ್ರದುರ್ಗ ಜಿಲ್ಲೆಯ ಜನಪದ ವೀರರು ೧೦.ಚಳ್ಳಕೆರೆ ತಾಲ್ಲೂಕಿನ ಸಾಂಸ್ಕೃತಿಕ ಮಹತ್ವದ ತಾಣಗಳು ೧೧.ಒಂದು ರೋಚಕ ಜನಪದ ಸಂಪ್ರದಾಯ -ಕಳಶ ಕೀಳೋದು ೧೨.ತರಿಮರ ೧೩.ಕುರುಬ ಮೂಲದ ಕುಂಚಿಟಿಗರ ಸಾಂಸ್ಕೃತಿಕ ವೀರ ೧೪.ಚೌಡಿಕೆ ರಾಣಿ ಉಚ್ಚಂಗಮ್ಮ ೧೫.ಕತೆಗಳ ಕಣಜ-ಈರಬಡಪ್ಪ ೧೬.ಗಡಿನಾಡಿನ ಜನಪದ ಕಾವ್ಯಪ್ರಕಾರಗಳು ೧೭.ಬುಡಕಟ್ಟು ಅಭಿವೃದ್ಧಿ -ಒಂದು ಚಿಂತನೆ. ಮಲ್ಲೇಪುರಂ ಜಿ. ವೆಂಕಟೇಶ ಅವರ ಅಕ್ಷರ ಸೂರ್ಯನಿಗೆ ನಮನ ಎಂಬ ಮುನ್ನುಡಿ, ಒಳಗೆ ಅಲ್ಲಲ್ಲಿ ಸಂದರ್ಭಕ್ಕೆ ತಕ್ಕ ರೇಖಾಚಿತ್ರಗಳು, ಇವೆ.

ಯ

೧೭೧೫. ಯಕ್ಷನಾಟಕಗಳು

ಲೇ: ರಾಮಚಂದ್ರ ಭಟ್ಟ ಹಾಸಣಗಿ; ಪ್ರ: ಪರ್ಣಕುಟಿ ಗ್ರಂಥಮಾಲೆ ಧಾರವಾಡ; ಮೊ.ಮು: ೧೯೫೦; ಪು: ೧೩೦; ಕ್ರೌನ್ ೧/೮

ಹೆಸರಿನ ಬಗ್ಗೆ ಸ್ವಲ್ಪ ವಿಚಾರ, ಇವುಗಳ ಪೂರ್ವೇತಿಹಾಸ, ಯಕ್ಷನಾಟಕಗಳ ಉಗಮ, ಪೂರ್ವರಂಗ, ಉತ್ತರ ರಂಗ, ಪುರಾಣಗಳ ಪ್ರಭಾವ, ಯಕ್ಷನಾಟಕಗಳ ವೈಶಿಷ್ಟ್ಯ, ನಟರ ಯೋಗ್ಯತೆ, ವಿದೂಷಕ ಪಾತ್ರ, ವೇಷಭೂಷಣಗಳು, ನಾಟ್ಯಭಾಗ, ಆಗಬೇಕಾದ ಸುಧಾರಣೆಗಳು, ಹೀಗೆ ಉಪ ಶೀರ್ಷಿಕೆಗಳನ್ನುಳ್ಳ ಗ್ರಂಥ. ಪರಿಶಿಷ್ಟದಲ್ಲಿ ಎರಡು ಯಕ್ಷನಾಟಕಗಳ ವಿಮರ್ಶೆಯನ್ನು ನೀಡಲಾಗಿದೆ. ಗಣಪತಿ ರಾವ್ ಪಾಂಡೇಶ್ವರ್ ಅವರ ಮುನ್ನುಡಿ ಇದೆ.

೧೭೧೬. ಯಕ್ಷಗಾನ (ಅರ್ಥ ಸಹಿತ) ಖರಾಸುರ ವಧೆ (ಪಂಚವಟಿ)

ಲೇ: ಕೀರಿಕ್ಕಾಡು ಮಾಸ್ತರ್ ವಿಷ್ಣು ಭಟ್; ಪ್ರ: ಶ್ರೀ ಗೋಪಾಲಕೃಷ್ಣ ಪ್ರಕಾಶನ, ದೇಲಂಪಾಡಿ, ಕಾಸರಗೋಡು ತಾಲೂಕು; ಮೊ.ಮು: ೧೯೮೨; ಪು: ೪+೩೨=೩೬; ಕ್ರೌನ್ ೧/೮

ರಾಗ ತಾಳ ಸಹಿತದ ಯಕ್ಷಗಾನ ಕೃತಿ ಪಾತ್ರವರ್ಗ ಇದೆ

೧೭೧೭. ಯಕ್ಷಗಾನ

ಸಂ: ನಮೂದು ಇಲ್ಲ; ಪ್ರ: ಕೆ. ಬಾಲಕೃಷ್ಣರಾವ್, ಶರವು ಯಕ್ಷಗಾನ ಸಂಘ, ಮಂಗಳೂರು; ಮೊ.ಮು.೧೯೫೮; ಪು: ೨+೪೦=೪೨; ಕ್ರೌನ್ ೧/೮

ಪ್ರಾರಂಭದಲ್ಲಿ ಸಂಘದ ಪರಿಚಯ ಇದೆ. ಆಮೇಲೆ ೩ ಲೇಖನಗಳಿವೆ: ೧.ಯಕ್ಷಗಾನ– ಕೆ.ಬಾಲಕೃಷ್ಣರಾವ್ ೨.ಯಕ್ಷಗಾನದ ಪ್ರಾಚೀನತೆ–ಚೊಕ್ಕಾಡಿ ಯಂ. ಸೀತಾರಾಮಯ್ಯ ೩.ಯಕ್ಷಗಾನದ ಹಾಡುಗಾರಿಕೆ–ಹರಿದಾಸ ಗೋಪಾಲಕೃಷ್ಣ ಭಟ್ಟ. ಒಳಗೆ ಅಲ್ಲಲ್ಲಿ ಫೋಟೋಗಳಿವೆ.

೧೭೧೮. ಯಕ್ಷಗಾನ

ಲೇ: ಕೆ. ಶಿವರಾಮ ಕಾರಂತ; ಪ್ರ: ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ; ಮೊ.ಮು.೧೯೭೪; ಪು: ೧೦+೨೪+೨೦೨=೨೩೬; ಡಿಮ್ಮೆ ೧/೪

ಹತ್ತು ಅಧ್ಯಾಯಗಳಿವೆ: ೧.ಹಿಂದೆ ಮತ್ತು ಸುತ್ತಲೂ ೨.ಯಕ್ಷಗಾನ ಆಟ ೩.ಸಭಾಲಕ್ಷಣ ಸಾಹಿತ್ಯ ೪.ಭಾಷಾ ಮಾಧ್ಯಮ ೫.ಯಕ್ಷಗಾನ ೬.ನೃತ್ಯ ೭.ಕಲ್ಪನಾ ಸೃಷ್ಟಿ ೮.ಯಕ್ಷಗಾನದ ಪ್ರಾಚ್ಯತೆ ೯.ಯಕ್ಷಗಾನದ ಇತರ ಪ್ರಕಾರಗಳು ೧೦.ಪ್ರಸಂಗ ಕರ್ತರು ಮತ್ತು ಪ್ರಸಂಗಗಳು.

ನಾಲ್ಕು ಅನುಬಂಧಗಳಿವೆ: ೧.ರತಿಕಲ್ಯಾಣ ೨.ಯಕ್ಷಗಾನ ರಾಗಗಳು ೩.ಯಕ್ಷಗಾನ ನೃತ್ಯಲೇಖನ ೪.ಯಕ್ಷಗಾನ ಮುಸ್ತೈದೆಗಳು. ಹಾ.ಮಾ.ನಾಯಕ ಅವರ ಮುನ್ನುಡಿ, ಲೇಖಕರ ಪ್ರಸ್ತಾವನೆ, ಕೆಲವು ಫೋಟೋಗಳು, ಇವೆ.

೧೭೧೯. ಯಕ್ಷಗಾನ ಅಂಧಕಾಸುರನ ಕಾಳಗ

ಲೇ: ಕೊಳಂಬೆ ಪುಟ್ಟಣ್ಣಗೌಡ; ಪ್ರ: ಶ್ರೀಮನ್ಮಧ್ವ ಸಿದ್ಧಾಂತ ಗ್ರಂಥಾಲಯ, ಉಡುಪಿ; ಮೊ.ಮು. ೧೯೨೮; ಪುಟ ೨+೪೨=೪೪; ಕ್ರೌನ್ ೧/೮

ರಾಗ ತಾಳ ಛಂದೋಸಹಿತ ಯಕ್ಷಗಾನ ಕಾವ್ಯ.

೧೭೨೦. ಯಕ್ಷಗಾನ ಅಮರವಾಹಿನಿ

ಲೇ: ಅಮೃತ ಸೋಮೇಶ್ವರ; ಪ್ರ: ಸಮೀರ ಪ್ರಕಾಶನ, ಪುತ್ತೂರು, ದ.ಕ.; ಮೊ.ಮು.೧೯೮೩; ಪು: ೬+೬೪=೭೦; ಕ್ರೌನ್ ೧/೮

ತ್ರಿಪಥಗಾಮಿನೀ ಎಂಬ ಅಡಿಬರಹ ಇದೆ. ರಾಗ ತಾಳ ಛಂದೋ ಸಹಿತದ ಯಕ್ಷಗಾನ ಕಾವ್ಯ. ಪಾತ್ರಗಳ ಪಟ್ಟಿ ಇದೆ.

೧೭೨೧. ಯಕ್ಷಗಾನ ಅಮರಶಿಲ್ಪಿ ವೀರ ಕಲ್ಕುಡ

ಲೇ: ಅಮೃತ ಸೋಮೇಶ್ವರ; ಪ್ರ: ಪ್ರಕೃತಿ ಪ್ರಕಾಶನ, ಕೋಟೆಕಾರು, ದ.ಕ.; ಮೊ.ಮು.೧೯೭೯; ಪು: ೬+೪೭=೫೩; ಡಿಮೈ ೧/೮

ರಾಗ ತಾಳ ಛಂದೋ ಸಹಿತದ ಯಕ್ಷಗಾನ ಕಾವ್ಯ.

೧೭೨೨. ಯಕ್ಷಗಾನ ಅಮೋಘವರ್ಷ ನೃಪತುಂಗ

ಲೇ: ಕೀರಿಕ್ಕಾಡಿ ಮಾಸ್ತರ್ ವಿಷ್ಣು ಭಟ್; ಪ್ರ: ಶ್ರೀ ಗೋಪಾಲಕೃಷ್ಣ ಪ್ರಕಾಶನ ದೇಲಂಪಾಡಿ, ಕಾಸರಗೋಡು ತಾಲೂಕು; ಮೊ.ಮು: ೧೯೮೦; ಪು: ೨+೫೪ = ೫೬; ಕ್ರೌನ್ ೧/೮

ರಾಗ ತಾಳ ಛಂದೋಸಹಿತದ ಯಕ್ಷಗಾನ ಕೃತಿ

೧೭೨೩. ಯಕ್ಷಗಾನ ಅಶೋಕ ಸುಂದರೀ ಪರಿಣಯ (ನಹುಷೋಪಾಖ್ಯಾನ) ಮತ್ತು ವೃತ್ರಾಸುರ ಕಾಳಗ

ಲೇ/ಪ್ರ: ಡಿ.ವಿ. ಹೊಳ್ಳ, ತೆಕ್ಕಟ್ಟೆ, ದ.ಕ.; ಮೊ.ಮು.೧೯೬೮; ಪು: ೨+೪೪=೪೬; ಕ್ರೌನ್ ೧/೮

ರಾಗ ತಾಳ ಛಂದೋಸಹಿತದ ಎರಡು ಯಕ್ಷಗಾನ ಕಾವ್ಯಗಳ ಸಂಕಲನ. ಪಾತ್ರಗಳ ಪಟ್ಟಿ ಇದೆ.

೧೭೨೪. ಯಕ್ಷಗಾನ ಅಶ್ವಮೇಧ ಪ್ರಸಂಗಗಳು

ಸಂ: ಜಿ.ಎಸ್. ಭಟ್; ಪ್ರ: ಕರ್ನಾಟಕ ಸರ್ಕಾರ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು-೫೬೦ ೦೦೨; ಮೊ.ಮು.೨೦೦೬; ಪು: ೫೪+೪೫೬=೫೧೦; ಡಿಮ್ಮೈ ೧/೮

ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಮಾಲೆಯ ೧೪ನೆಯ ಸಂಪುಟ. ಇದರಲ್ಲಿ, ಬರೆದವರ ಹೆಸರು ಸಹಿತ ಒಂಬತ್ತು ಪ್ರಸಂಗಗಳಿವೆ: ೧.ವಾಜಿ ಗ್ರಹಣ ಅಥವಾ ಯೌವನಾಶ್ವ ಕಾಳಗ – ಬಡೆಕ್ಕಿಲ ವೆಂಕಟರಮಣ ಭಟ್ಟ ೨.ಯೌವನಾಶ್ವ-ಅನುಸಾಲ್ವ ಕಾಳಗವು – ಜಾನಕೈ ತಿಮ್ಮಪ್ಪ ಹೆಗಡೆ ೩.ಅನುಸಾಲ್ವ ಗರ್ವಭಂಗ ಮತ್ತು ನೀಲಧ್ವಜ ಕಾಳಗ – ಅಜ್ಜನಗದ್ದೆ ಶಂಕರನಾರಾಯಣ ೪.ಸುಧನ್ವ ಕಾಳಗ –ಮೂಲ್ಕಿ ವೆಂಕಟೇಶನ ಭಕ್ತ ೫.ತಾಮ್ರಧ್ವಜ ಕಾಳಗ –ರಾಮ ೬.ಬಭ್ರುವಾಹನ ಕಾಳಗ –ದೇವಿದಾಸ ೭.ವಿಷಯೆ ಕಲ್ಯಾಣ ಎಂಬ ಚಂದ್ರಹಾಸೋಪಾಖ್ಯಾನ – ಮಾಲೆ ಕೋಡಲು ಶಂಭು ಗಣಪತಿ ಭಟ್ಟ ೮.ಚಂದ್ರಹಾಸ ಚರಿತ್ರೆ – ಹಲಸಿನಹಳ್ಳಿ ನರಸಿಂಹ ಶಾಸ್ತ್ರಿ ೯.ಶ್ರೀಕೃಷ್ಣ ಪರಂಧಾಮ ಪಾಂಡವ ಸ್ವರ್ಗಾರೋಹಣ–ಕೆ.ವಿ. ಗೋವಿಂದ ಭಟ್ಟ. ಎಚ್.ಡಿ. ಕುಮಾರಸ್ವಾಮಿ ಅವರ ಹೊನ್ನುಡಿ, ಹಿ.ಶಿ. ರಾಮಚಂದ್ರೇಗೌಡ ಅವರ ಪೂರ್ವಾಪರ ಎಂಬ ಅಧ್ಯಕ್ಷರ ಮಾತು, ಪ್ರಸ್ತಾವನೆ, ಇವೆ.

೧೭೨೫. ಯಕ್ಷಗಾನ ಆಹಾರ್ಯ

ಲೇ: ಮೋಹನ ಕುಂಟಾರ್; ಪ್ರ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ; ಮೊ.ಮು: ೨೦೦೯; ಪು: ೮+೩೦೪=೩೧೨; ಡಿಮ್ಮೈ ೧/೮

ಹನ್ನೊಂದು ಅಧ್ಯಾಯಗಳಿವೆ: ೧.ಯಕ್ಷಗಾನದ ಆಹಾರ್ಯ ೨.ಕರ್ನಾಟಕದ ಯಕ್ಷಗಾನ ಪರಂಪರೆ ೩.ಯಕ್ಷಗಾನದ ಆಹಾರ್ಯದ ಪರಿಕರಗಳು ಮತ್ತು ಸಂಪ್ರದಾಯ ೪.ಪೂರ್ವರಂಗದ ವೇಷಗಳು ೫.ಪುರುಷ ವೇಷಗಳು ೬.ಸ್ತ್ರೀವೇಷಗಳು ೭.ಬಣ್ಣದ ವೇಷಗಳು ೮.ಹಾಸ್ಯವೇಷಗಳು ೯.ಆಹಾರ್ಯದ ಸಮಕಾಲೀನ ಸ್ಥಿತಿಗತಿಗಳು ೧೦.ಪಾರಂಪರಿಕ ರಂಗಭೂಮಿ ಮತ್ತು ಯಕ್ಷಗಾನ ಆಹಾರ್ಯಗಳ ತೌಲನಿಕ ಅಧ್ಯಯನ ೧೧.ಸಮಾರೋಪ: ಯಕ್ಷಗಾನ ಆಹಾರ್ಯದ ಅನನ್ಯತೆ ಹಾಗೂ ಸಮಕಾಲೀನ ಪ್ರಸ್ತುತತೆ. ಎ. ಮುರಿಗೆಪ್ಪ ಅವರ ಶಬ್ದಪಾರಮಾರ್ಗಮಶಕ್ಯಂ ಎಂಬ ಮುನ್ನುಡಿ ಇದೆ.

೧೭೨೬. ಯಕ್ಷಗಾನ ಇಂದ್ರಕೀಲಕ

ಲೇ/ಸಂ ನಮೂದು ಇಲ್ಲ; ಪ್ರ: ಶ್ರೀಮನ್ಮಧ್ವ ಸಿದ್ಧಾಂತ ಗ್ರಂಥಾಲಯ, ಉಡುಪಿ; ಮೊ.ಮು. ನಮೂದು ಇಲ್ಲ, ಎರಡನೆಯ ಅಚ್ಚು ೧೯೫೧; ಪು: ೪೨; ಕ್ರೌನ್ ೧/೮

ರಾಗ ತಾಳ ಛಂದೋರೂಪಗಳಲ್ಲಿ ರಚಿತವಾಗಿರುವ ಕೃತಿ.

೧೭೨೭. ಯಕ್ಷಗಾನ ಊರ್ವಶಿ ಪುರೂರವ

ಲೇ: ಕೀರಿಕ್ಕಾಡಿ ಮಾಸ್ತರ್ ವಿಷ್ಣು ಭಟ್; ಪ್ರ: ಶ್ರೀ ಗೋಪಾಲಕೃಷ್ಣ ಪ್ರಕಾಶನ, ದೇಲಂಪಾಡಿ, ಕಾಸರಗೋಡು ತಾಲೂಕು; ಮೊ.ಮು: ೧೯೮೪; ಪು: ೨+೩೦ = ೩೨; ಕ್ರೌನ್

ರಾಗ ತಾಳ ಛಂದೋಸಹಿತದ ಯಕ್ಷಗಾನ ಕೃತಿ. ಪಾತ್ರವರ್ಗ ಇದೆ.

೧೭೨೮. ಯಕ್ಷಗಾನ ಐರಾವತ ಪ್ರಸಂಗ

ಲೇ: ನಮೂದು ಇಲ್ಲ; ಪ್ರ: ಶ್ರೀಮನ್ಮಧ್ವ ಸಿದ್ಧಾಂತ ಗ್ರಂಥಾಲಯ, ಉಡುಪಿ; ಮೂರು ಮುದ್ರಣಗಳ ನಮೂದು ಇಲ್ಲ, ನಾ.ಮು. ೧೯೫೧; ಪು: ೨+೪೪=೪೬; ಕ್ರೌನ್ ೧/೮

ರಾಗ ತಾಳ ಛಂದೋಸಹಿತ ಯಕ್ಷಗಾನ ಕಾವ್ಯ.

೧೭೨೯. ಯಕ್ಷಗಾನ ಕರೀಭಂಟನ ಕಥೆಯು

ಲಭ್ಯ ಪ್ರತಿಯಲ್ಲಿ ಪ್ರಾರಂಭದ ಪುಟಗಳಿಲ್ಲ; ಕಾಗದದ ಸ್ಥಿತಿಯನ್ನು ಹಾಗೂ ಅಕ್ಷರ ರೂಪಗಳನ್ನು ಗಮನಿಸಿದರೆ ಈ ಗ್ರಂಥವು ೧೯೦೦ ಕ್ಕಿಂತ ಹಿಂದೆ ಅಚ್ಚಾಗಿರುವಂತೆ ತೋರುತ್ತದೆ; ಕಾವ್ಯ ಭಾಗ ಪೂರ್ತಿ ಇದ್ದು ೭೯ನೆಯ ಪುಟದಲ್ಲಿ ಮುಕ್ತಾಯವಾಗಿದೆ. ರಾಗ ತಾಳ ಛಂದೋಸಹಿತದ ಕಾವ್ಯ. ಒಳಗೆ ಅಲ್ಲಲ್ಲಿ ರೇಖಾಚಿತ್ರಗಳಿವೆ; ಡೆಮ್ಮಿ ೧/೮

೧೭೩೦. ಯಕ್ಷಗಾನ ಕರ್ಣಪರ್ವ

ಲೇ/ಸಂ: ನಮೂದು ಇಲ್ಲ; ಪ್ರ: ಶ್ರೀಮನ್ಮಧ್ವ ಸಿದ್ಧಾಂತ ಗ್ರಂಥಾಲಯ, ಉಡುಪಿ; ಮೊ.ಮು.. ನಮೂದು ಇಲ್ಲ, ಎ.ಮು. ೧೯೫೧; ಪು: ೧೦+೫೬=೬೬; ಕ್ರೌನ್ ೧/೮

ರಾಗ ತಾಳ ಛಂದೋರೂಪಗಳಲ್ಲಿ ರಚಿತವಾಗಿರುವ ಕೃತಿ. ಪ್ರಾರಂಭದಲ್ಲಿ ಕಥಾಸಾರ, ಪಾತ್ರವರ್ಗ, ಇವೆ.

೧೭೩೧. ಯಕ್ಷಗಾನ ಕಲಾದರ್ಶನ

ಲೇ: ಟಿ. ಕೇಶವಭಟ್ಟ; ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೫೬೦ ೦೧೮; ಮೊ.ಮು. ೨೦೦೨; ಪು: ೬+೧೨೧=೧೨೭; ಡೆಮ್ಮಿ ೧/೮

ಹದಿಮೂರು ಲೇಖನಗಳ ಸಂಕಲನ: ೧.ದಕ್ಷಿಣ ಕನ್ನಡದ ಯಕ್ಷಗಾನ ೨.ಯಕ್ಷಗಾನದ ಮೂಲ ೩.ಯಕ್ಷಗಾನದ ಸ್ವರೂಪ ೪.ಯಕ್ಷಗಾನ ತೆಂಕುತಿಟ್ಟು, ಬಡಗುತಿಟ್ಟು ೫.ಯಕ್ಷಗಾನ: ತಾಳ, ಛಂದಸ್ಸು, ಗಮಕ ೬.ಯಕ್ಷಗಾನದಲ್ಲಿ ತಾಳ ಮತ್ತು ಲಯ ೭.ಯಕ್ಷಗಾನದಲ್ಲಿ

ಸಂಗೀತ ೮.ಕೆಲವು ಯಕ್ಷಗಾನ ಕವಿಗಳು ಮತ್ತು ಪ್ರಸಂಗಗಳು ೯.ಲೋಕಶಿಕ್ಷಣಕ್ಕೆ ಯಕ್ಷಗಾನದ ಕೊಡುಗೆ ೧೦.ಕನ್ನಡ ಯಕ್ಷಗಾನ ತುಳು ಪಂಚವಟಿ (ಪರಿಚಯ) ೧೩.ಯಕ್ಷಗಾನ ಯುಗಾದಿ ವೈಭವ (ಪ್ರಸಂಗ).

೧೭೩೨. ಯಕ್ಷಗಾನ ಕಲಾವಿದರು

ಲೇ: ಅ.ಗಣಪಯ್ಯ ಅಲ್ಸೆ; ಪ್ರ: ಮಯೂರ ಪ್ರಕಾಶನ, ಬೆಂಗಳೂರು–೧೯; ಮೊ.ಮು. ೧೯೭೪; ಪು: ೧೨೮; ಕ್ರೌನ್ ೧/೮

ಮೂರು ಭಾಗಗಳಿವೆ: **ಭಾಗ ಒಂದು: ಯಕ್ಷಗಾನ ದರ್ಶನ:** ಈ ಭಾಗದಲ್ಲಿ ನಾಲ್ಕು ಲೇಖನಗಳಿವೆ: ೧.ಬಡಗುತಿಟ್ಟು –ಎ.ಸದಾನಂದ ಹೆಬ್ಬಾರ ೨.ತೆಂಕುತಿಟ್ಟು–ಕಡತೋಕ ಮಂಜುನಾಥ ಭಾಗವತ. ೩.ತೆಂಕುತಿಟ್ಟು–ಪೆರ್ಲ ಕೃಷ್ಣಭಟ್ಟ ೪.ಯಕ್ಷಗಾನ 'ಮನೋವಿಜ್ಞಾನ' – ಕೃಷ್ಣ ನಿಡಂಬೂರ್, ಮುಂಬಯಿ. ಉಳಿದೆರಡು ಭಾಗಗಳಲ್ಲಿ ಕಲಾವಿದರನ್ನು ಪರಿಚಯ ಮಾಡಿಕೊಡಲಾಗಿದೆ: **ಭಾಗ ಎರಡು: ಬಡಗುತಿಟ್ಟು ಕಲಾವಿದರು:** ೧.ಹಾರಾಡಿ ರಾಮ ೨.ತೆಕ್ಕಟ್ಟೆ ಬಾಬಣ್ಣ ಶಾನುಭಾಗರು ೩.ಕುಂಜಾಲು ಶೇಷಗಿರಿ ಕಿಣಿಯವರು ೪.ಗಣಪತಿ ಪ್ರಭುಗಳು ೫.ಮಾವಿನ ನಾರ್ಣಪ್ಪ ಉಪ್ಪೂರ್ ೬.ಬಿ. ವೀರಭದ್ರ ನ್ಯಾಕ್ ೭.ಜಾನುವಾರ ಕಟ್ಟೆ ಗೋಪಾಲಕೃಷ್ಣ ಕಾಮತ್ ೮.ಕಿಸ್ಮತಿ ಪರಮೇಶ್ವರ ಹೆಬ್ಬಾರ ೯.ಹಿರಿಯಡಕ ಗೋಪಾಲರಾವ್ ೧೦.ಉಡುಪಿ ಬಸವ ೧೧.ಶಿರಿಯಾರ ಮಂಜುನ್ಯಾಕ್ ೧೨.ಆರಾಟಿ ಮಂಜುನಾಥ ೧೩.ಸಕ್ಕಟ್ಟು ಲಕ್ಷ್ಮೀ ನಾರಾಯಣಯ್ಯ ೧೪.ಹಳ್ಳಾಡಿ ಮಂಜುಶೆಟ್ಟಿ ೧೫.ಕೋಟ ವೈಕುಂಠ ೧೬.ಕೋಡಿ ಶಂಕರ ೧೭.ಯಕ್ಷಗಾನ ಕಲಾಭ್ಯಾಸಿ ಮಾರ್ತಾ ಆಸ್ಟಿನ್ ೧೮.ಹಾಲಾಡಿ ಕೊರಗಪ್ಪ ೧೯.ಹಾರಾಡಿ ಕೃಷ್ಣ ಗಾಣಿಗ. **ಭಾಗ ಮೂರು: ತೆಂಕುತಿಟ್ಟಿನ ಕಲಾವಿದರು:** ೧.ಶೇಣಿ ಗೋಪಾಲಕೃಷ್ಣ ಭಟ್ಟ ೨.ಅಳಿಕೆ ರಾಮಯ್ಯ ರೈ ೩.ಕುರಿಯ ವಿಠಲ ಶಾಸ್ತ್ರಿ ೪.ಕಡತೋಕ ಮಂಜುನಾಥ ಭಾಗವತರು ೫.ಮಲ್ಪೆ ಶಂಕರನಾರಾಯಣ ಸಾಮಗ ೬.ಕೋಳ್ಯೂರು ರಾಮಚಂದ್ರರಾವ್ ೭.ಕುಂಬಳೆ ಸುಂದರರಾವ್ ೮.ಪಾತಾಳ ವೆಂಕಟರಮಣ ಭಟ್ ೯.ಪುತ್ತೂರು ನಾರಾಯಣ ಹೆಗ್ಡೆ ೧೦.ಬಣ್ಣದ ಮಹಾಲಿಂಗ. ಕೊನೆಯಲ್ಲಿ ವಿಶುಕುಮಾರ್ ಅವರ ಹಾರೈಕೆ ಇದೆ.

೧೭೩೩. ಯಕ್ಷಗಾನ ಕಲಾವಿದರ ಪರಿಚಯ ಭಾಗ–೧

ಲೇ: ಪು ಶ್ರೀನಿವಾಸ ಭಟ್; ಪ್ರ: ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ, ದ.ಕ.; ಮೊ.ಮು.೧೯೭೩; ಪು: ೧೨+೧೬೦=೧೭೨; ಕ್ರೌನ್ ೧/೮

೨೬ ಕಲಾವಿದರನ್ನು ಪರಿಚಯ ಮಾಡಿಕೊಡುವ ಈ ಗ್ರಂಥದಲ್ಲಿ: ೧.ರಾಮಕೃಷ್ಣ ಜೋಯಿಸರು ೨.ಮವ್ವಾರು ಕಿಟ್ಟಣ್ಣ ಭಾಗವತರು ೩.ಮಾಂಬಾಡಿ ನಾರಾಯಣ ಭಟ್ಟರು ೪.ಅಡೂರು ಬಡಕಿಲ ವಿಷ್ಣಯ್ಯ ೫.ಇರಾ ಗೋಪಾಲಕೃಷ್ಣ ಭಾಗವತರು ೬.ಅಗರಿ ಶ್ರೀನಿವಾಸ ಭಾಗವತರು ೭.ನಿಡ್ಲೆ ಗುರಿಕ್ಕಾರ್ ನರಸಿಂಹ ಭಟ್ಟರು ೮.ದಿವಾಣ ಭೀಮ

ಭಟ್ಟರು ೯.ಮದವೂರು ನಾರಾಯಣ ಹಾಸ್ಯಗಾರರು ೧೦.ಹರಿದಾಸ ಶೇಣಿ ಗೋಪಾಲಕೃಷ್ಣ ಭಟ್ಟರು ೧೧.ಕಡಂದೇಲು ಪುರುಷೋತ್ತಮ ಭಟ್ಟರು ೧೨.ಕರ್ಗಲ್ಲು ಸುಬ್ಬಣ್ಣ ಭಟ್ಟರು ೧೩.ಕೋಳ್ಯೂರು ರಾಮಚಂದ್ರರಾವ್ ೧೪.ಕುರಿಯ ವಿಠಲ ಶಾಸ್ತ್ರಿಗಳು ೧೫.ವೇಣೂರು ವೆಂಕಟ್ರಮಣ ಭಟ್ಟರು ೧೬.ಕೋಳ್ಯೂರು ನಾರಾಯಣ ಭಟ್ಟರು ೧೭.ಅಳಿಕೆ ರಾಮಯ ರೈಯವರು ೧೮.ಕುಂಞಿಕೃಷ್ಣ ಮಣಿಯಾಣಿ ೧೯.ಕದ್ರಿ ವಿಷ್ಣು ೨೦.ಕೇದಗಡಿ ಗುಡ್ಡಪ್ಪಗೌಡರು ೨೧.ಪದ್ರೆ ಚಂದುನವರು ೨೨.ಕೆ.ಗೋವಿಂದ ಭಟ್ಟರು ೨೩.ಕುಂಬಳೆ ಕುಟ್ಟಪ್ಪನವರು ೨೪.ಬಣ್ಣದ ಮಹಾಲಿಂಗ ೨೫.ಮುಳ್ಳೇರಿಯಾ ಕುಂಞಣ್ಣನವರು ೨೬.ಚೇಳಾರು ಸೀತರಾಮ ಭಟ್ಟರು. ಕೆ.ವೆಂಕಟರಾಯಾಚಾರ್ಯ ಅವರ ಹಾರೈಕೆ, ಪಿ. ಕೃಷ್ಣಭಟ್ಟ ಅವರ ಶುಭಾಶಂಸನೆ, ಅಲ್ಲಲ್ಲಿ ಕಲಾವಿದರ ಫೋಟೋಗಳು ಇವೆ.

೧೭೩೪. ಯಕ್ಷಗಾನ ಕಲಾಸಕ್ತ ಒಲವಿನ "ಎಚ್ಚಣ್ಣ" ದಿ. ಲಕ್ಷ್ಮೀನಾರ್ಣಪ್ಪಯ್ಯನವರು

ಸಂ: ಕೊಡತ್ತೂರು ಅನಂತಪದ್ಮನಾಭ ಉಡುಪ; ಪ್ರ: ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ, ದ.ಕ.; ಮೊ.ಮು. ೧೯೭೩; ಪು: ೧೦೬; ಡಿಮ್ಮೈ ೧/೮

ಪರಿಚಯ ಎಂಬ ಅಡಿಬರಹ ಇದೆ. ಬೇರೆಬೇರೆಯವರು ಬರೆದ ಹನ್ನೆರಡು ಲೇಖನಗಳಿವೆ: ೧.ಕಲಾಭಿಮಾನಿಗಳ ಮೆಚ್ಚಿನ ಎಚ್ಚಣ್ಣ – ಕೊ.ಅ.ಉಡುಪ ೨.ಯಕ್ಷಗಾನ ಸಾಹಿತ್ಯ –ಪು.ಶ್ರೀನಿವಾಸ ಭಟ್, ಕಟೀಲು ೩.ಲಲಿತ ಕಲೆಯ ತಂಗುದಾಣ – ಯಕ್ಷಗಾನ –ಬಿ.ಪದ್ಮನಾಭ ಸೋಮಯಾಜಿ ೪.ವರ್ಣನಾತೀತ ಸದ್ಗುಣಪೂರ್ಣ ಕರ್ಣ–ಪಿ. ಕೃಷ್ಣಭಟ್ ೫.ಸಹಜೀವನದ ಸವಿನೆನಪುಗಳು –ಪುತ್ತೂರು ಕೃಷ್ಣಭಟ್ ೬.ಮರೆಯಲಾಗದ ಮಹಾವ್ಯಕ್ತಿ – ಮವ್ವಾರು ಕಿಟ್ಟಣ್ಣ ಭಾಗವತ ೭.ಮಧುರ ಸ್ಮೃತಿ – ಪದ್ರೆ ಚಂದು ೮.ಬಾಲ್ಯ ಜೀವನದ ವಿಹಂಗಮಾವಲೋಕನ–ಅಳಕೆ ರಾಮಯ್ಯ ರೈ ೯.ಆದರಣೀಯ ಪೂಜ್ಯಪಾದರು – ಬಿ.ಪಿ.ರಾವ್ ೧೦.ಕೈ ತಟ್ಟಿನ ಮೇಲಿನ ರೂಪ್ಯಾ ಕೆಳಗುರುಳಲಿಲ್ಲ! –ಎಸ್. ತಿರುಮಲೇಶ್ವರ ಭಟ್ ೧೧.ಎಲ್ಲರನ್ನೂ ಮೆಚ್ಚಿಸಿದ ಎಚ್ಚಣ್ಣ – ಸಹೋದರ ೧೨.ದಿ.ಎಚ್ಚಣ್ಣರ ಮೆಚ್ಚಿನ ಶಿಷ್ಯ – ಎ.ರಾಮಣ್ಣ ಭಟ್. ಅಲ್ಲಲ್ಲಿ ಕೆಲವು ಫೋಟೋಗಳಿವೆ, ಕೊನೆಯಲ್ಲಿ ಲಕ್ಷ್ಮೀನಾರ್ಣಪ್ಪಯ್ಯನವರ ವಂಶವೃಕ್ಷದ ನಕ್ಷೆ ಇದೆ.

೧೭೩೫. ಯಕ್ಷಗಾನ ಕುಮಾರ ವಿಜಯ

ಲೇ: ದಿವಂಗತ ನಂದಳಿಕೆ ಲಕ್ಷ್ಮೀನಾರಣಪ್ಪ (ಮುದ್ದಣ); ಪ್ರ: ಶ್ರೀಮನ್ಮಧ್ವ ಸಿದ್ಧಾಂತ ಗ್ರಂಥಾಲಯ, ಉಡುಪಿ; ಐದನೆಯ ಅಚ್ಚು; ೧೯೫೪; ಪು: ೪+೭೩=೭೭; ಕ್ರೌನ್ ೧/೮

ಶೂರಪದ್ಮಾಸುರ ಕಾಳೆಗ ಎಂಬ ಅಡಿಬರಹ ಇದೆ. ರಾಗ ತಾಳ ಛಂದೋ ಸಹಿತದ ಕಾವ್ಯ, ಪಾತ್ರಗಳ ವಿವರ, ಕಥಾಸಾರ, ಇವೆ.

೧೭೩೬. ಯಕ್ಷಗಾನ ಕೃತಿ ಸಂಪುಟ

ಸಂ: ಅಮೃತ ಸೋಮೇಶ್ವರ; ಪ್ರ: ಶ್ರೀ ಸೋಮೇಶ್ವರ ಯಕ್ಷಗಾನ ಕೃತಿ ಪ್ರಕಾಶನ ಸಮಿತಿ, ಮಂಗಳೂರು; ಮೊ.ಮು.೧೯೯೦; ಪು: ೬೮+೩೮೨=೪೫೦; ಕ್ರೌನ್ ೧/೪

ಹದಿಮೂರು ಯಕ್ಷಗಾನ ಕಾವ್ಯಗಳ ಜೊಂಪೆ: ೧.ಸಹಸ್ರ ಕವಚ ಮೋಕ್ಷ ೨.ಕಾಯಕಲ್ಪ ೩.ಅಮರವಾಹಿನಿ ೪.ಮಹಾಕವಿ ಮಗಧೇಂದ್ರ ೫.ತ್ರಿಪುರಮಥನ ೬.ವಂಶವಾಹಿನಿ ೭.ಮಹಾಶೂರ ಭೌಮಾಸುರ ೮.ಚಕ್ರವರ್ತಿ ದಶರಥ ೯.ಆದಿಕವಿ ವಾಲ್ಮೀಕಿ ೧೦.ಸಾರ್ವಭೌಮ ಸಹಸ್ರಾನಿಕ ೧೧.ಚಾಲುಕ್ಯ ಚಕ್ರೇಶ್ವರ ೧೨.ಅಮರಶಿಲ್ಪಿ ವೀರಕಲ್ಕುಡ ೧೩.ಅಂಧಕ ಮೋಕ್ಷ. ಕಯ್ಯಾರ ಕಿಞ್ಞಣ್ಣ ರೈ ಅವರ ಮುನ್ನುಡಿ, ಪುರುಷೋತ್ತಮ ಬಿಳಿಮಲೆ ಅವರ ಪ್ರಸ್ತಾವನೆ, ಕೊನೆಯಲ್ಲಿ ಕೆಲವು ಶಬ್ದಾರ್ಥಗಳು, ಇವೆ.

೧೭೩೭. ಯಕ್ಷಗಾನ ಕೃಷ್ಣಸಂಧಾನ

ಲೇ: ನಾರಂಪಾಡಿ ಸುಬ್ಬಯ್ಯಶೆಟ್ಟಿ; ಪ್ರ: ಯಂ.ವೆಂಕಟರಾವ್, ಶ್ರೀ ನಿತ್ಯಾನಂದ ಗ್ರಂಥಾಲಯ, ಹಂಪನಕಟ್ಟೆ, ಮಂಗಳೂರು–೧; ಮೊ.ಮು. ೧೯೭೧; ಪು: ೨+೯೯=೧೦೧; ಕ್ರೌನ್ ೧/೮

ಅರ್ಥಸಹಿತ ಎಂಬ ಅಡಿಬರಹ ಇದೆ. ರಾಗ ತಾಳ ಛಂದೋ ಸಹಿತದ ಯಕ್ಷಗಾನ ಕಾವ್ಯ.

೧೭೩೮. ಯಕ್ಷಗಾನ ಕೃಷ್ಣ ಸಂಧಾನ

ಲೇ: ಎಂ. ಪ್ರಭಾಕರ ಜೋಶಿ; ಪ್ರ: ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ, ಎಂ.ಜಿ.ಎಂ. ಕಾಲೇಜು, ಉಡುಪಿ– ೫೭೬ ೧೦೨; ಮೊ.ಮು: ೧೯೯೯; ಪು: ೧೦+೩೭೬= ೩೮೬; ಡಿಮ್ಮೈ ೧/೮

ಪ್ರಸಂಗ ಮತ್ತು ಪ್ರಯೋಗ ಎಂಬ ಅಡಿಬರಹ ಇದೆ. ಒಂಬತ್ತು ಅಧ್ಯಾಯಗಳಿವೆ : ೧.ಪೀಠಿಕೆ ೨.ವಸ್ತು ಪರಿಶೀಲನ ೩.ಆಕರ ಪರಿಶೀಲನ ೪.ಪ್ರಸಂಗ ಪರಿಶೀಲನ ೫.ಪ್ರಯೋಗ ಪರಿಶೀಲನ ೬.ಪಾತ್ರ ಪರಿಶೀಲನ ೭.ಅರ್ಥ ಪರಿಶೀಲನ ೮.ನಾಟ್ಯ ಪರಿಶೀಲನ ೯.ಉಪಸಂಹಾರ. ಅನುಬಂಧದಲ್ಲಿ, ಕೃಷ್ಣ ಸಂಧಾನ ಪ್ರಸಂಗದ ಪೂರ್ಣಪಾಠ ಇದೆ.

೧೭೩೯. ಯಕ್ಷಗಾನ ಗದಾಪರ್ವ

ಲೇ/ಸಂ: ನಮೂದು ಇಲ್ಲ; ಪ್ರ: ಶ್ರೀಮನ್ಮಧ್ವ ಸಿದ್ಧಾಂತ ಗ್ರಂಥಾಲಯ, ಉಡುಪಿ; ಮೂರನೆಯ ಅಚ್ಚು ೧೯೫೫; ಪು: ೫೬; ಕ್ರೌನ್ ೧/೮

ರಾಗ ತಾಳ ಛಂದೋರೂಪಗಳಲ್ಲಿ ರಚಿತವಾಗಿರುವ ಕೃತಿ. ಪ್ರಾರಂಭದಲ್ಲಿ ಕಥಾಸಾರ ಹಾಗೂ ಪಾತ್ರಗಳ ವಿವರ ಇವೆ.

೧೭೪೦. ಯಕ್ಷಗಾನ ಗಣೇಶೋದ್ಭವ ಅಥವಾ ಗಜಾಸುರ ವಧೆ

ಸಂ: ಲಭ್ಯ ಪ್ರತಿಯಲ್ಲಿ ನಮೂದು ಇಲ್ಲ. ಅರ್ಥ ಬರೆದವರು: ಬಿ. ಬಾಬು ಕುದ್ತಡ್ಕ; ಪು: ಪ್ರಾರಂಭದ ಪುಟಗಳು ಲಭ್ಯ ಪ್ರತಿಯಲ್ಲಿ ಇಲ್ಲ; ಅಗರಿ ಭಾಸ್ಕರ ರಾವ್ ಅವರ ಎರಡು ಮಾತು ಎಂಬ ಪುಟದಲ್ಲಿ ೧೯-೫-೭೬ ಎಂದೂ ಅರ್ಥಗಾರರ ಅರಿಕೆ ಪುಟದಲ್ಲಿ ೩೦-೬-೭೮ ಎಂದೂ ದಿನಾಂಕಗಳು ನಮೂದಾಗಿವೆ; ಕೊನೆಯ ಪುಟದ ಸಂಖ್ಯೆ ೩೩; ಕ್ರೌನ್ ೧/೮

ರಾಗ ತಾಳ ಛಂದೋಸಹಿತಾದ ಯಕ್ಷಗಾನ ಪ್ರಸಂಗವಿದು.

೧೭೪೧. ಯಕ್ಷಗಾನ ಗಿರಿಜಾಕಲ್ಯಾಣ

ಲೇ/ಸಂ: ನಮೂದು ಇಲ್ಲ; ಪ್ರ: ಶ್ರೀಮನ್ಮಧ್ವ ಸಿದ್ಧಾಂತ ಗ್ರಂಥಾಲಯ, ಉಡುಪಿ; ಐದನೆಯ ಅಚ್ಚು: ೧೯೫೪; ಪು: ೪೦; ಕ್ರೌನ್ ೧/೮

ರಾಗ ತಾಳ ಛಂದೋರೂಪಗಳಲ್ಲಿ ರಚಿತವಾಗಿರುವ ಕೃತಿ.

೧೭೪೨. ಯಕ್ಷಗಾನ ಘೋರ ಮಾರಕ

ಲೇ: ಅಮೃತ ಸೋಮೇಶ್ವರ, ಕಥಾ ಸಯೋಜನೆ: ಭಾಸ್ಕರ ರೈ ಕುಕ್ಕುವಳ್ಳಿ; ಪ್ರ: ಪ್ರಕೃತಿ ಪ್ರಕಾಶನ, ಕೋಟೆಕಾರು, ದ.ಕ.: ಮೊ.ಮು. ೧೯೯೪; ಪು: ೨೪; ಡಿಮ್ಮೈ ೧/೮

ರಾಗ ತಾಳ ಛಂದೋ ಸಹಿತದ ಯಕ್ಷಗಾನ ಕಾವ್ಯ. ಕಥಾಸಾರ, ಪಾತ್ರಗಳಪಟ್ಟಿ ಇವೆ.

೧೭೪೩. ಯಕ್ಷಗಾನ ಚಕ್ರೇಶ್ವರ ಪರೀಕ್ಷಿತ

ಲೇ: ಕೆ.ಎಂ. ರಾಘವ ನಂಬಿಯಾರ್; ಪ್ರ: ಸ್ವಯಂಪ್ರಕಾಶ ಪ್ರಕಟನಾಲಯ, ಉಡುಪಿ; ಮೊ.ಮು.೧೯೭೮; ಪು: ೧೬+೪೬=೬೨; ಕ್ರೌನ್ ೧/೮

ಕಲಿ ಮಹಾತ್ಮ ಎಂಬ ಅಡಿಬರಹ ಇದೆ. ರಾಗತಾಳ ಛಂದೋಸಹಿತದ ಯಕ್ಷಗಾನ ಕಾವ್ಯ. ಒಂದು ಅವಲೋಕನ ಎಂಬ ಎಂ. ಪ್ರಭಾಕರ ಜೋಶಿ ಅವರ ಬರಹ ಇದೆ. ಕೊನೆಯಲ್ಲಿ ಪಾತ್ರವರ್ಗ ಇದೆ.

೧೭೪೪. ಯಕ್ಷಗಾನ ಚರಿತ್ರೆ ಮತ್ತು ಮುದ್ದಣ ಮಹಾಕವಿ

ಲೇ: ಭೀಮರಾವ ಚಿಟಗುಪ್ಪಿ, ರಾಮಚಂದ್ರ ಉಚ್ಚಿಲ, ಶ್ರೀನಿವಾಸ ಹಾವನೂರ; ಪ್ರ: ಮುದ್ದಣ ಶತಮಾನೋತ್ಸವ ಸಮಿತಿ, ಮುಂಬಯಿ; ಮೊ.ಮು: ೧೯೭೦; ಪು: ೪+೧೧೨=೧೧೬; ಡಿಮ್ಮೈ ೧/೮

ಐದು ಲೇಖನಗಳ ಸಂಕಲನ: ೧.ಯಕ್ಷಗಾನ ಆಟದ ಮೂಲ ಮತ್ತು ಸ್ವರೂಪ- ಭೀಮರಾವ ಚಿಟಗುಪ್ಪಿ ೨.ಯಕ್ಷಗಾನ ಸಾಹಿತ್ಯ ಚರಿತ್ರೆ- ರಾಮಚಂದ್ರ ಉಚ್ಚಿಲ, ಶ್ರೀನಿವಾಸ

ಹಾವನೂರ ೩.ಮುದ್ದಣನ ಯಕ್ಷಗಾನ ಕೃತಿಗಳು– ರಾಮಚಂದ್ರ ಉಚ್ಚಿಲ ೪.ಯಕ್ಷಗಾನದ ಹಬ್ಬುಗೆ– ಶ್ರೀನಿವಾಸ ಹಾವನೂರ ೫.ಮುದ್ದಣ ಸಾಹಿತ್ಯ ದರ್ಶಿಕೆ– ಶ್ರೀನಿವಾಸ ಹಾವನೂರ.

೧೭೪೫. ಯಕ್ಷಗಾನ ಛಂದಸ್ಸು

ಲೇ/ಪ್ರ: ಕ.ಪು.ಸೀತಾರಾಮ ಕೆದಿಲಾಯ; ಶಿಶಿಲ, ಬೆಳ್ತಂಗಡಿ ತಾಲ್ಲೂಕು, ದ.ಕ.; ಮೊ.ಮು.೧೯೬೪; ಪು: ೧೨+೪೮=೬೦; ಕ್ರೌನ್ ೧/೮

"ಕನ್ನಡದ ಯಕ್ಷಗಾನ ಪ್ರಬಂಧಗಳಲ್ಲಿ ವಿವಿಧ ಜಾತಿಯ ಪದ್ಯಗಳಿವೆ. ಅವುಗಳಲ್ಲಿ ಮುಖ್ಯವಾದ ಕೆಲವು ಪದ್ಯಗಳ ಸಾಮಾನ್ಯ ಛಂದೋಲಕ್ಷಣವನ್ನು ಈ ಪುಸ್ತಕದಲ್ಲಿ ವಿವೇಚಿಸಿದೆ" ಎಂಬುದಾಗಿ ಲೇಖಕರು ಹೇಳಿದ್ದಾರೆ. ಡಿ.ಎಸ್ ಕರ್ಕಿ, ಕೆ.ಶಂಕರ ನಾರಾಯಣ ಶಾಸ್ತ್ರಿ, ಕೊಳಂಬೆ ಪುಟ್ಟಣ್ಣಗೌಡ, ಅವರುಗಳ ಮುಮಾತುಗಳ ಬರಹಗಳಿವೆ.

೧೭೪೬. ಯಕ್ಷಗಾನ ಛಂದೋವಿವೇಕ

ಲೇ: ಕ.ಪು.ಸೀತಾರಾಮ ಕೆದಿಲಾಯ; ಪ್ರ: ಭಾರದ್ವಾಜ ಪ್ರಕಾಶನ, ಕದಿರೆ, ಮಂಗಳೂರು–೨; ಮೊ.ಮು.೧೯೮೭; ಪು: ೪+೮೦=೮೪; ಕ್ರೌನ್ ೧/೮

"ಯಕ್ಷಗಾನ ಕವಿಗಳಿಗೆ ಇತರ ಛಂದೋ ಗ್ರಂಥಗಳ ಅಧ್ಯಯನ ಮಾಡದೆಯೇ ಕೃತಿಗಳನ್ನು ರಚಿಸಲು ಅನುಕೂಲವಾಗುವಂತೆ" ಈ ಗ್ರಂಥವನ್ನು ಬರೆದಿರುವುದಾಗಿ ಲೇಖಕರು ಹೇಳಿಕೊಂಡಿದ್ದಾರೆ.

೧೭೪೭. ಯಕ್ಷಗಾನ ಛಂದೋಗತಿ

ಲೇ: ಕಬ್ಬಿನಾಲೆ ವಸಂತ ಭಾರದ್ವಾಜ; ಪ್ರ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ; ಮೊ.ಮು. ೨೦೦೦; ಪುಟ ೨+೩೨=೩೪; ಡಿಮ್ಮೈ ೧/೮

ಅಕ್ಷರ ಛಂದಸ್ಸು, ಮಾತ್ರಾ ಛಂದಸ್ಸು, ಗೀತಿಕೆ, ಏಳೆ, ಸಾಂಗತ್ಯ, ಯಕ್ಷಗಾನದ ವಿಶಿಷ್ಟ ಅಂಶಬಂಧಗಳು ಮುಂತಾದ ಉಪಶೀರ್ಷಿಕೆಗಳಲ್ಲಿ ಯಕ್ಷಗಾನದ ಛಂದಸ್ಸನ್ನು ವಿವರಿಸಲಾಗಿದೆ.

೧೭೪೮. ಯಕ್ಷಗಾನ ಜಲಂಧರನ ಕಾಳಗ

ಲೇ: ನಮೂದು ಇಲ್ಲ; ಪ್ರ; ಶ್ರೀಮನ್ಮಧ್ವ ಸಿದ್ಧಾಂತ ಗ್ರಂಥಾಲಯ, ಉಡುಪಿ; ಮೊ.ಮು.೧೯೫೦; ಪು: ೨+೪೨=೪೪; ಕ್ರೌನ್ ೧/೮

ರಾಗ ತಾಳ ಛಂದೋ ಸಹಿತದ ಕಾವ್ಯ.

೧೭೪೯. ಯಕ್ಷಗಾನ ತಾಮ್ರಧ್ವಜನ ಕಾಳಗ

ಲೇ/ಸಂ: ನಮೂದು ಇಲ್ಲ; ಪ್ರ: ಶ್ರೀಮನ್ಮಧ್ವ ಸಿದ್ಧಾಂತ ಗ್ರಂಥಾಲಯ, ಉಡುಪಿ; ಮೊ.ಮು ೧೯೫೨; ಪು: ೨+೨೨=೨೪; ಕ್ರೌನ್ ೧/೮

ಬಡಗುಮಟ್ಟು ಎಂಬ ಅಡಿಬರಹ ಇದೆ. ರಾಗ ತಾಳ ಛಂದೋರೂಪಗಳಲ್ಲಿ ರಚಿತವಾಗಿರುವ ಕೃತಿ.

೧೭೫೦. ಯಕ್ಷಗಾನ ತಾಳಮದ್ದಳೆ ನವ್ಯೋತ್ತರ ಸಂಕಥನ

ಲೇ: ಮಾಧವ ಪೆರಾಜೆ; ಪ್ರ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ; ಮೊ.ಮು. ೨೦೦೦; ಪುಟ ೧೦+೩೧೪=೩೨೪; ಡಿಮ್ಮೈ ೧/೮

ಪಿಎಚ್.ಡಿ. ಮಹಾಪ್ರಬಂಧ. ಹನ್ನೆರಡು ಅಧ್ಯಾಯಗಳಿವೆ: ೧.ಅಧ್ಯಯನದ ಉದ್ದೇಶ ಮತ್ತು ವಿಧಾನ ೨.ತಾಳಮದ್ದಳೆಯ ಅಧ್ಯಯನದ ವಿಮರ್ಶಾತ್ಮಕ ಸಮೀಕ್ಷೆ ೩.ಕಲಾವಿದರು ಮತ್ತು ಸಹೃದಯರು ನಿರೂಪಿಸುವ ತಾಳಮದ್ದಳೆ ೪.ಹರಿಕಥೆ–ಪುರಾಣವಾಚನ–ತಾಳಮದ್ದಳೆ ೫.ಯಕ್ಷಗಾನದ ಪಠ್ಯ: ತಾತ್ತ್ವಿಕ ವಿವೇಚನೆ ೬.ಪ್ರಾತಿನಿಧಿಕ ಯಕ್ಷಗಾನ ಪ್ರಸಂಗಗಳು ಹಾಗೂ ಅಭಿಜಾತ ಕಾವ್ಯಗಳು ೭.ಅರ್ಥಗಾರಿಕೆಯ ತಾತ್ತ್ವಿಕತೆ ೮.ಅರ್ಥದ ಅರ್ಥ ೯.ಬರೆವಣಿಗೆ ಮತ್ತು ಮಾತು ೧೦.ಪ್ರಸಂಗವೊಂದರ ಬರೆವಣಿಗೆ ೧೧.ಕನ್ನಡದ ಅಪೂರ್ವ ಸಂಕಥನ: ಅರ್ಥಗಾರಿಕೆ ೧೨.ಸಮಾರೋಪ. ದೇಸಿಯೊಳ್ ಪುಗುವುದು ಪೊಕ್ಕು ಮಾರ್ಗದೊಳೆ ತಳ್ವುದು ಎಂಬ ಎಂ.ಎಂ. ಕಲಬುರ್ಗಿ ಅವರ ಮುನ್ನುಡಿ ಇದೆ. ಕೊನೆಯಲ್ಲಿ ನಾಲ್ಕು ಅನುಬಂಧಗಳಲ್ಲಿ ಟಿಪ್ಪಣಿಗಳಿವೆ.

೧೭೫೧. ಯಕ್ಷಗಾನ ತ್ರಿಪುರಮಥನ (ತ್ರಿಪುರ ಸಂಹಾರ)

ಲೇ/ಪ್ರ: ಡಿ.ವಿ.ಹೊಳ್ಳ; ಕುಂದಾಪುರ; ಮೊ.ಮು.೧೯೫೭; ಪು: ೨೨; ಕ್ರೌನ್ ೧/೮

ರಾಗ ತಾಳ ಛಂದೋ ಸಹಿತದ ಯಕ್ಷಗಾನ ಕಾವ್ಯ. ಕೊನೆಯಲ್ಲಿ ಪಾತ್ರಗಳ ವಿವರ ಇದೆ.

೧೭೫೨. ಯಕ್ಷಗಾನ ದುರ್ಯೋಧನ ವಧೆ

ಲೇ: ಕ.ಪು.ಸೀತಾರಾಮ ಕೆದಿಲಾಯ; ಪ್ರ: ಲೇಖಕರು, ಶಿಶಿಲ, ಬೆಳ್ತಂಗಡಿ ತಾಲೂಕು, ದ.ಕ.; ಮೊ.ಮು.೧೯೬೯; ಪು: ೨+೪೫=೪೭; ಕ್ರೌನ್ ೧/೮

ರಾಗ ತಾಳ ಛಂದೋ ಸಹಿತದ ಯಕ್ಷಗಾನ ಕಾವ್ಯ.

೧೭೫೩. ಯಕ್ಷಗಾನ ನಳ ಚರಿತ್ರೆ

ಪ್ರಾರಂಭದ ಪುಟಗಳು ಲಭ್ಯ ಪ್ರತಿಯಲ್ಲಿ ಇಲ್ಲ; ಕೊನೆಯ ಪುಟದ ಸಂಖ್ಯೆ ೧೧೨; ಡಿಮ್ಮೈ ೧/೮

ರಾಗ ತಾಳ ಛಂದೋಸಹಿತದ ಯಕ್ಷಗಾನ ಕೃತಿ.

೧೭೫೪. ಯಕ್ಷಗಾನ ಪಂಚವಟಿ ವಾಲಿಸುಗ್ರೀವರ ಕಾಳಗ

ಲೇ/ಸಂ: ನಮೂದು ಇಲ್ಲ; ಪ್ರ: ಶ್ರೀಮನ್ಮಧ್ವ ಸಿದ್ಧಾಂತ ಗ್ರಂಥಾಲಯ, ಉಡುಪಿ; ಹನ್ನೆರಡನೆಯ ಅಚ್ಚು: ೧೯೫೩; ಪು: ೪೮; ಕ್ರೌನ್ ೧/೮

ಅರಣ್ಯಕಾಂಡ –ಕಿಷ್ಕಿಂಧಾಕಾಂಡ ಎಂಬ ಅಡಿಬರಹ ಇದೆ. ಪಾತ್ರಗಳ ವಿವರ, ಪ್ರಸಂಗ ಪೀಠಿಕೆ ಎಂಬ ಎರಡು ಪುಟಗಳ ಬರಹ ಇದೆ. ರಾಗ ತಾಳ ಛಂದೋರೂಪಗಳಲ್ಲಿ ರಚಿತವಾಗಿರುವ ಕೃತಿ.

೧೭೫೫. ಯಕ್ಷಗಾನ ಪಂಚವಟಿ ವಾಲಿಸುಗ್ರೀವರ ಕಾಳಗ

ಲೇ: ಕುಂಬಳೆ ಪಾರ್ತಿಸುಬ್ಬ; ಪ್ರ: ಯಂ.ವೆಂಕಟರಾವ್, ಶ್ರೀ ನಿತ್ಯಾನಂದ ಗ್ರಂಥಾಲಯ, ಹಂಪನಕಟ್ಟೆ, ಮಂಗಳೂರು–೧; ಮೊ.ಮು. ೧೯೭೧; ಪು: ೨+೪೫=೪೭; ಕ್ರೌನ್ ೧/೮

ಅರಣ್ಯಕಾಂಡ–ಕಿಷ್ಕಿಂಧಾಕಾಂಡ ಎಂಬ ಅಡಿಬರಹ ಇದೆ. ರಾಗ ತಾಳ ಛಂದೋಸಹಿತದ ಯಕ್ಷಗಾನ ಕಾವ್ಯ.

೧೭೫೬. ಯಕ್ಷಗಾನ ಪಂಚವಟಿ ವಾಲಿಸುಗ್ರೀವರ ಕಾಳಗ

ಅರ್ಥ ಲೇಖಕರು: ಕೋಟೆ ಸುಬ್ಬರಾಯರು; ಪ್ರ: ಶ್ರೀಮನ್ಮಧ್ವ ಸಿದ್ಧಾಂತ ಗ್ರಂಥಾಲಯ, ಉಡುಪಿ; ಮೊ.ಮು. ೧೯೫೪; ಪು: ೪+೧೫೪=೧೫೮; ಕ್ರೌನ್ ೧/೮

ಅರ್ಥಸಹಿತ ಎಂಬ ಅಡಿಟಿಪ್ಪಣಿ ಇದೆ. ರಾಗ ತಾಳ ಛಂದೋರೂಪ ಸಹಿತ ರಚಿತವಾಗಿರುವ ಕೃತಿ. ಪ್ರತಿ ಪದ್ಯದ ಕೆಳಗೇ ಅದರ ಗದ್ಯರೂಪದ ತಾತ್ಪರ್ಯವನ್ನು ನೀಡಲಾಗಿದೆ. ಪ್ರಾರಂಭದಲ್ಲಿ ಪ್ರಕಾಶಕರ 'ಪುಸ್ತಕದ ಕುರಿತು' ಎಂಬ ಮಾತು, ಹಾಗೂ ಪಾತ್ರಗಳು, ಇವೆ.

೧೭೫೭. ಯಕ್ಷಗಾನ ಪಾಂಚಜನ್ಯ

ಲೇ: ಕೀರಿಕ್ಕಾಡಿ ಮಾಸ್ತರ್ ವಿಷ್ಣು ಭಟ್; ಪ್ರ: ಶ್ರೀ ಗೋಪಾಲಕೃಷ್ಣ ಪ್ರಕಾಶನ, ದೇಲಂಪಾಡಿ, ಕಾಸರಗೋಡು ತಾಲೂಕು; ಮೊ.ಮು: ೧೯೮೨; ಪು: ೨+೩೦ = ೩೨; ಕ್ರೌನ್

ರಾಗ ತಾಳ ಛಂದೋಸಹಿತದ ಯಕ್ಷಗಾನ ಕೃತಿ. ಪಾತ್ರವರ್ಗ ಇದೆ.

೧೭೫೮. ಯಕ್ಷಗಾನ ಪಾಠಗಳು

ಲೇ: ಭಾಗವತ ನೀಲಾವರ ರಾಮಕೃಷ್ಣಯ್ಯ; ಪ್ರ: ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಮಹಾತ್ಮಾ ಗಾಂಧಿ ಸ್ಮಾರಕ ಕಾಲೇಜು, ಉಡುಪಿ; ಮೊ.ಮು: ೧೯೭೮; ಪು:೧೨+೭೬ = ೮೮; ಕ್ರೌನ್ ೧/೮

ಆರು ಅಧ್ಯಾಯಗಳಿವೆ: ೧.ಪ್ರವೇಶ ೨.ನಾಟ್ಯ-ತಾಳ ೩.ಸಂಗೀತ-ಹಾಡುಗಳು ೪.ಹಾಡುಗಳು ೫.ಮಾತುಗಾರಿಕೆ ೬.ಬಣ್ಣಗಾರಿಕೆ ವೇಷಭೂಷಣಗಳು. ಶಿವರಾಮ ಕಾರಂತ ಅವರ ಮುನ್ನುಡಿ ಇದೆ.

೧೭೫೯. ಯಕ್ಷಗಾನ ಪ್ರಭಾ

ಲೇ: ತಾಳ್ತಜೆ ಕೃಷ್ಣಭಟ್ಟ, ವಿದ್ವಾನ್; ಪ್ರ: ನಮೂದು ಇಲ್ಲ; ಮೊ.ಮು. ೧೯೭೪; ಪು: ೧೬+೧೯೪=೨೧೦; ಡಿಮ್ಮೆ ೧/೮

ಸಂಶೋಧನಾತ್ಮಕ ಗ್ರಂಥ ಎಂಬ ಅಡಿಬರಹ ಇದೆ. ಮೂರು ಅಧ್ಯಾಯಗಳಿವೆ: ೧.ಗಂಧರ್ವ-ಯಕ್ಷ-ಗಾನ: ಆಟದ ರೀತಿ, ಪ್ರಾಚೀನತೆ, ರಹಸ್ಯಗಳು ೨.ಆಟದ ಕಲೆ: ಆಟದಲ್ಲಿಯ ಸೊಗಸು-ಸಂವಾದಗಳು, ಶಾಸ್ತ್ರೀಯತೆ ೩.ನಾಟ್ಯಕಲೆ: ರಸ-ಭಾವ ನಿರೂಪಣೆ – ದೇರಾಜೆ ಸೀತರಾಮಯ್ಯ ಅವರ ಮುನ್ನುಡಿ, ಅಮೃತ ಸೋಮೇಶ್ವರ ಅವರ ಮೆಚ್ಚುನುಡಿ, ವೆಂಕಟರಮಣ ಭಟ್ಟ, ಗೋಪಾಲಕೃಷ್ಣ ಶ್ಯಾನುಭೋಗ್ ಕೂಡ್ಲು ಅವರುಗಳ ಬರಹಗಳು, ತೆಕ್ಕುಂಜ ಗೋಪಾಲಕೃಷ್ಣ ಭಟ್ಟ ಅವರ ನಾಲ್ಕು ಮಾತು, ಯಕ್ಷಗಾನ ಪ್ರಭಾ ಎಂಬ ಪ್ರವೇಶಿಕಾ ಇವೆ. ಕೊನೆಯಲ್ಲಿ, ರಸ ಭಾವ ನಿರೂಪಣೆ, ಯಕ್ಷಗಾನದ ವ್ಯಾಕರಣ, ಭರತವಾಕ್ಯ, ಯಕ್ಷಗಾನ ರೂಪಕ ಸಂಬಂಧೀ ಚಿತ್ರಗಳು (ಕೆಲವು ರೇಖಾಚಿತ್ರಗಳು, ಕೆಲವು ಫೋಟೋಗಳು) ಇವೆ.

೧೭೬೦. ಯಕ್ಷಗಾನ ಬಯಲಾಟ

ಲೇ: ಶಿವರಾಮ ಕಾರಂತ; ಪ್ರ: ಐ.ಬಿ.ಎಚ್.ಪ್ರಕಾಶನ, ಗಾಂಧಿನಗರ, ಬೆಂಗಳೂರು-೫೬೦೦೦೯; ಮೊ.ಮು: ೧೯೭೪; ಪು: ೪೮; ಕ್ರೌನ್ ೧/೮

ಯಕ್ಷಗಾನದ ಬಗ್ಗೆ ಒಂದು ಸರಳ ಕೃತಿ. ಇದರೊಳಗಿನ ಎರಡು ಶೀರ್ಷಿಕೆಗಳು: ೧.ಯಕ್ಷಗಾನ ಬಯಲಾಟ ೨.ಬಯಲಾಟವನ್ನು ನೋಡಿ. ಕೆಲವು ಫೋಟೋಗಳಿವೆ.

೧೭೬೧. ಯಕ್ಷಗಾನ ಬಯಲಾಟ

ಲೇ: ಶಿವರಾಮ ಕಾರಂತ; ಪ್ರ: ಹರ್ಷ ಪ್ರಕಟಣಾಲಯ, ಪುತ್ತೂರು, ದ.ಕ; ಮೊ.ಮು. ೧೯೫೭; ಎ.ಮು.೧೯೬೩; ಪುಟ ೨೦+೨೭೨+೮+೪=೩೦೪; ಡಿಮ್ಮೆ ೧/೮

ಎರಡು ಭಾಗಗಳಾಗಿ ಈ ಗ್ರಂಥವು ವಿಭಾಗಿಸಲ್ಪಟ್ಟಿದೆ: **ಭಾಗ ಒಂದು:** ೧.ಸಮಷ್ಟಿ ಕಲೆ; ಸ್ಥೂಲ ಕಲೆ ೨.ಬಯಲಾಟದ ಸಂಸ್ಥೆಗಳು ೩.ನಾಟಕ ವಸ್ತು, ಚಿತ್ರಣ ಮಾಧ್ಯಮ ೪.ಬಯಲಾಟದ ಹುಟ್ಟು ೫.ಎರವಲು ಬಂದುದಲ್ಲ ೬.ರಂಗಸ್ಥಳದ ಸಂಪ್ರದಾಯಗಳು ೭.ಸಭಾಲಕ್ಷಣ ಪರಿಚಯ ೮.ಯಕ್ಷಗಾನ ೯.ನೃತ್ಯ ೧೦.ಬರೆದ ಪದ್ಯ: ಆಡುವ ಗದ್ಯ ೧೧.ವೇಷ ಭೂಷಣಗಳು ೧೨.ಆಟದ ರೂಪಾಂತರಗಳು ೧೩.ಪುನರುಜ್ಜೀವನ ಕಾರ್ಯ. **ಭಾಗ ಎರಡು: ಕವಿಕಾವ್ಯ ಪರಿಚಯ:** ೧.ಹದಿನಾರು ಹದಿನೇಳನೆಯ ಶತಮಾನಗಳಲ್ಲಿ

೨.ಮುಂದಿನ ಶತಮಾನಗಳಲ್ಲಿ ೩.ಉಪಸಂಹಾರ. ಫೋಟೋಗಳು, ರೇಖಾಚಿತ್ರಗಳು, ಬಣ್ಣದ ಚಿತ್ರಗಳು, ತಾಳೆಗರಿ ಗ್ರಂಥದ ಒಂದು ಪುಟದ ಫೋಟೋ, ಇವೆ.

೧೭೬೨. ಯಕ್ಷಗಾನ ಭೀಮಸೇನ ಪ್ರತಾಪ

ಪ್ರಾರಂಭದ ಪುಟಗಳು ಈ ಪ್ರತಿಯಲ್ಲಿ ಇಲ್ಲ; ಪುಟ ೬೦(ಪಠ್ಯಭಾಗ); ಕ್ರೌನ್ ೧/೮

ರಾಗ ತಾಳ ಛಂದೋ ಸಹಿತದ ಯಕ್ಷಗಾನ ಕಾವ್ಯ.

೧೭೬೩. ಯಕ್ಷಗಾನ ಬೇಡರ ಕಣ್ಣಪ್ಪ ಅಥವಾ ಕಾಳಹಸ್ತಿ ಪುರಾಣ

ಲೇ: ಬಿ.ವೀರಭದ್ರ ನಾಯಕ; ಪ್ರ: ಆರ್.ವಿಟ್ಟಪ್ಪ ಶೆಣೈ ಎಂಡ್ ಸನ್ಸ್, ಕಾರ್ಕಳ, ದ.ಕ; ಮೊ.ಮು: ೧೯೬೨; ಪು: ೪+೨೪=೨೮; ಕ್ರೌನ್ ೧/೮

ರಾಗ ತಾಳ ಛಂದೋ ಸಹಿತದ ಯಕ್ಷಗಾನ ಕಾವ್ಯ ಪಾತ್ರ ಪರಿಚಯ ಇದೆ.

೧೭೬೪. ಯಕ್ಷಗಾನ ಬ್ರಹ್ಮಕಪಾಲ

ಲೇ: ದಿ. ಕನ್ಯಾನ ವೆಂಕಟರಮಣ ಭಟ್ಟ; ಪ್ರ: ಶ್ರೀಮನ್ಮಧ್ವ ಸಿದ್ಧಾಂತ ಗ್ರಂಥಾಲಯ, ಉಡುಪಿ; ಮೊ.ಮು. ಮತ್ತು ಎ.ಮು. ನಮೂದು ಇಲ್ಲ, ಮೂ.ಮು. ೧೯೫೫; ಪು: ೨+೪೨=೪೪; ಕ್ರೌನ್ ೧/೮

ಪಾತ್ರಗಳ ವಿವರ ಇದೆ. ರಾಗ ತಾಳ ಛಂದೋಸಹಿತದ ಯಕ್ಷಗಾನ ಕಾವ್ಯ.

೧೭೬೫. ಯಕ್ಷಗಾನ ಬ್ರಹ್ಮ ಯಜ್ಞ(ಗಾಯತ್ರಿ ಪರಿಣಯ)

ಲೇ: ಕೀರಿಕ್ಕಾಡಿ ಮಾಸ್ತರ್ ವಿಷ್ಣು ಭಟ್; ಪ್ರ: ಶ್ರೀ ಗೋಪಾಲಕೃಷ್ಣ ಪ್ರಕಾಶ, ದೇಲಂಪಾಡಿ, ಕಾಸರಗೋಡು ತಾಲೂಕು; ಮೊ.ಮು: ೧೯೮೪; ಪು: ೨+೩೬ = ೩೮; ಕ್ರೌನ್ ೧/೮

ರಾಗ ತಾಳ ಸಹಿತದ ಯಕ್ಷಗಾನ ಕೃತಿ. ಪಾತ್ರವರ್ಗ ಇದೆ

೧೭೬೬. ಯಕ್ಷಗಾನ ಭಾಗವತ ಪ್ರಸಂಗಗಳು

ಸಂ: ಪಾದೇಕಲ್ಲು ವಿಷ್ಣು ಭಟ್ಟ; ಪ್ರ: ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕನ್ನಡ ಭವನ, ಜೆ.ಸಿ, ರಸ್ತೆ, ಬೆಂಗಳೂರು-೫೬೦ ೦೦೨; ಮೊ.ಮು.೨೦೦೬; ಪು:೯೬+೬೫೬=೭೫೨; ಡಿಮ್ಮೈ ೧/೮

ಸಮಗ್ರ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಮಾಲೆಯ ೧೮ನೆಯ ಸಂಪುಟ. ಇದರಲ್ಲಿ ಒಂಬತ್ತು ಯಕ್ಷಗಾನ ಪ್ರಸಂಗಗಳಿವೆ: ಎಲ್ಲ ಪ್ರಸಂಗಗಳ ಹೆಸರೂ 'ಯಕ್ಷಗಾನ' ಶಬ್ದದಿಂದ ಪ್ರಾರಂಭವಾಗುತ್ತವೆ: ೧.ಯಕ್ಷಗಾನ ಅಂಬರೀಷ ಚರಿತ್ರೆ ೨..... ಧ್ರುವ ಚರಿತ್ರೆ ೩.ವೃತ್ರಾಸುರನ ಕಾಳಗ ೪.ಸಮುದ್ರಮಥನ ೫.ರೇವತೀ ಕಲ್ಯಾಣ ೬.ಭಸ್ಮಾಸುರ

ಮೋಹಿನಿ ೭.ಇಂದ್ರವಿಜಯ ೮.ಸತ್ಯ ಹರಿಶ್ಚಂದ್ರ ೯.ಮದಾಲಸೆ ಕಲ್ಯಾಣ. ಹೆಚ್.ಡಿ. ಕುಮಾರಸ್ವಾಮಿ ಅವರ ಹೊನ್ನುಡಿ, ಹಿ.ಶಿ. ರಾಮಚಂದ್ರೇಗೌಡ ಅವರ ಪೂರ್ವಾಪರ ಎಂಬ ಅಧ್ಯಕ್ಷರ ಮಾತು, ಸಂಪಾದಕರ ಪ್ರಸ್ತಾವನೆ ಇವೆ.

೧೭೬೭. ಯಕ್ಷಗಾನ ಭಾಗವತನೊಬ್ಬನ ಅನುಭವಗಳು

ಲೇ/ಪ್ರ: ಕೋಟ ಶ್ರೀನಿವಾಸ ನಾಯಕ್, ಕುಂದಾಪುರ, ದ.ಕ.; ಮೊ.ಮು: ೧೯೭೭; ಪು: ೧೦+೨೨೨ = ೨೩೨; ಕ್ರೌನ್ ೧/೮

ಆತ್ಮಕಥೆಯ ರೂಪದಲ್ಲಿರುವ ಗ್ರಂಥ. ಶಿವರಾಮ ಕಾರಂತ ಅವರ ಮುನ್ನುಡಿ ಇದೆ.

೧೭೬೮. ಯಕ್ಷಭೀಮನ ನೂರು ಹೆಜ್ಜೆಗಳು

ಸಂ: ಪಾದೇಕಲ್ಲು ವಿಷ್ಣು ಭಟ್ಟ, ಕೆ.ಪಿ.ರಾಜಗೋಪಾಲ ಕನ್ಯಾನ; ಪ್ರ: ಡಾ.ಕೃಷ್ಣಮೂರ್ತಿ, ಪಂಜ, ಸುಳ್ಯ ತಾಲ್ಲೂಕು, ದ.ಕ; ಮೊ.ಮು: ೨೦೦೪; ಪು: ೨೬+೪೪೪=೪೩೦; ಡಿಮ್ಮೈ ೧/೮

ಪುತ್ತೂರು (ಮಾಣಂಗಾಯಿ) ಕೃಷ್ಣಭಟ್ಟ ಸಂಸ್ಮರಣ ಗ್ರಂಥ ಎಂಬ ಅಡಿಬರಹ ಇದೆ. ಈ ಗ್ರಂಥದಲ್ಲಿ ಸ್ಮರಣ ಮತ್ತು ಚಿಂತನ ಎಂಬ ಎರಡು ಭಾಗಗಳಿದ್ದು ಸ್ಮರಣ ಎಂಬ ಭಾಗದಲ್ಲಿ ವ್ಯಕ್ತಿಯನ್ನು ಕುರಿತ ಲೇಖನಗಳೂ ಚಿಂತನ ಎಂಬ ಭಾಗದಲ್ಲಿ ಹನ್ನೆರಡು ಲೇಖನಗಳೂ ಇವೆ: **ಚಿಂತನ:** ೧.ಯಕ್ಷಗಾನದಲ್ಲಿ ನವೀನ ಸುಧಾರಣೆ / ಪ್ರಯೋಗಗಳ ಸಾಧ್ಯತೆ – ಒಂದು ಮೀಮಾಂಸೆ – ಆರ್. ಗಣೇಶ್ ೨.ಪ್ರಯೋಗಪರಿಣತಿ – ತಾಳ್ತಜೆ ವಸಂತಕುಮಾರ ೩.ಕಳೆದ ಶತಮಾನಗಳ ಯಕ್ಷಗಾನ – ಒಂದು ಬೀಸುನೋಟ – ಅಮೃತ ಸೋಮೇಶ್ವರ ೪.ಯಕ್ಷಗಾನ ಪ್ರಸಂಗ: ಆಟ–ಕೂಟ (ತಾಳಮದ್ದಳೆ)ಗಳಲ್ಲಿ! – ಅಂಬಾತನಯ, ಮುದ್ರಾಡಿ ೫.ಪ್ರಾಯೋಗಿಕತೆ: ಹಲವು ಮುಖ – ಎಂ. ಪ್ರಭಾಕರ ಜೋಶಿ ೬.ಯಕ್ಷಗಾನದಲ್ಲಿ ಪದ್ಯ ಎತ್ತುಗಡೆ – ಕಬ್ಬಿನಾಲೆ ವಸಂತ ಭಾರದ್ವಾಜ ೭.ಯಕ್ಷಗಾನದಲ್ಲಿ ರಸಮಾಧುರ್ಯ – ಟಿ. ಕೇಶವ ಭಟ್ಟ ೮.ಯಕ್ಷಗಾನವನ್ನು ಹೇಗೆ ನೋಡಬೇಕು(ಬಹುದು)? – ಪಾದೇಕಲ್ಲು ನರಸಿಂಹ ಭಟ್ಟ ೯.ತಾಳಮದ್ದಳೆ – ಹವ್ಯಾಸಿಗಳ ರಂಗದಲ್ಲಿ – ಅಪ್ಪು ಆರ್. ನಾಯಕ್, ಆತ್ರಾಡಿ ೧೦.ಶಿವರಾಮ ಕಾರಂತರ ಗೀತನಾಟಕದ ಯಕ್ಷಗಾನ ರಂಗಪ್ರಯೋಗ – ಕೊರ್ಗಿ ಶಂಕರನಾರಾಯಣ ಉಪಾಧ್ಯಾಯ ೧೧.ಯಕ್ಷಗಾನ – 'ಶಾಸ್ತ್ರೀಯ' 'ಜಾನಪದ' ವಿಭಾಗೀಕರಣದ ಜಿಜ್ಞಾಸೆ – ಎಂ.ಎಲ್. ಸಾಮಗ ೧೨.ಕಲೆ, ಕಲಾವಿದ ಮತ್ತು ಸಮಾಜ – ಕೆ. ರಮಾನಂದ ಬನಾರಿ. ಕೆಲವು ಫೋಟೋಗಳೂ, ಪಾದೇಕಲ್ಲು ವಿಷ್ಣುಭಟ್ಟ ಅವರ ಯಕ್ಷಗಾನ ಗ್ರಂಥಸೂಚಿಯೂ, ಇವೆ. ಹಿರಿಯರ ಸಂದೇಶಗಳಿವೆ.

೧೭೭೯. ಯಕ್ಷಗಾನ ಮಧುಪುರ ಮಹಾತ್ಮೆ

ಲೇ/ಪ್ರ: ಡಿ.ವಿ.ಹೊಳ್ಳ, ಕುಂದಾಪುರ, ದ.ಕ.; ಮೊ.ಮು.೧೯೬೩; ಪು: ೪+೨೧=೨೫; ಕ್ರೌನ್ ೧/೮

ರಾಗ ತಾಳ ಛಂದೋ ಸಹಿತದ ಯಕ್ಷಗಾನ ಕಾವ್ಯ. ಸಾರಾಂಶ, ಪಾತ್ರಗಳ ವಿವರ, ಇವೆ.

೧೭೮೦. ಯಕ್ಷಗಾನ ಮಹಾಭಾರತ ಪ್ರಸಂಗಗಳು

ಸಂ: ಎಂ. ಪ್ರಭಾಕರ ಜೋಶಿ; ಪ್ರ: ಕರ್ನಾಟಕ ಸರ್ಕಾರ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-೫೬೦ ೦೦೨; ಮೊ.ಮು.೨೦೦೬; ಪು: ೫೬+೫೧೨=೫೬೮; ಡಿಮ್ಮೈ ೧/೮

ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಮಾಲೆಯ ೧೫ನೆಯ ಸಂಪುಟ. ಇದರಲ್ಲಿ ಕವಿಗಳ ಸಹಿತ ಒಂಬತ್ತು ಯಕ್ಷಗಾನ ಪ್ರಸಂಗಗಳಿವೆ: ೧.ವಿರಾಟ ಪರ್ವ – ಅಜಪುರ ವಿಷ್ಣು ೨.ಕೃಷ್ಣ ಸಂಧಾನ – ದೇವಿದಾಸ ೩.ಭೀಷ್ಮಾರ್ಜುನ ಕಾಳಗ – ಹಲಸಿನಹಳ್ಳಿ ನರಸಿಂಹಶಾಸ್ತ್ರಿ ೪.ಅಭಿಮನ್ಯು ಸೈಂಧವ ವಧೆ – ದೇವಿದಾಸ ೫.ದ್ರೋಣ ಪರ್ವ – ಉಡುಪಿ ರಾಜಗೋಪಾಲಾಚಾರ್ಯ ೬.ಕರ್ಣಾರ್ಜುನ ಕಾಳಗ – ಪಾಂಡೇಶ್ವರ ವೆಂಕಟ ೭.ಕರ್ಣ ಪರ್ವ–ಗೆರೆಸೊಪ್ಪೆ ಶಾಂತಪ್ಪಯ್ಯ ೮.ಗದಾಪರ್ವ – ಅಜ್ಞಾತಕವಿ ೯.ಸಾಹಸ ಭೀಮ ವಿಜಯ–ಕೆ.ಪಿ.ವೆಂಕಪ್ಪ ಶೆಟ್ಟಿ. ಹೆಚ್.ಡಿ. ಕುಮಾರಸ್ವಾಮಿ ಅವರ ಹೊನ್ನುಡಿ, ಹಿ.ಶಿ. ರಾಮಚಂದ್ರೇಗೌಡ ಅವರ ಪೂರ್ವಾಪರ ಎಂಬ ಅಧ್ಯಕ್ಷರ ಮಾತು, ಸಂಪಾದಕರ ಪ್ರಸ್ತಾವನೆ, ಇವೆ.

೧೭೮೧. ಯಕ್ಷಗಾನ ಮಾರಿಷಾ ಕಲ್ಯಾಣ ಕಲ್ಪನೆ ಮತ್ತು ಕಾವ್ಯ

ಸಂ: ಅಮೃತ ಸೋಮೇಶ್ವರ, ಗದ್ಯಭಾಗ: ಅಭಯಾರಣ್ಯದಲ್ಲಿ ಸೇರಿದ್ದ ಅರ್ಥಧಾರಿಗಳು; ಪ್ರ: ಅತ್ರಿ ಬುಕ್ ಸೆಂಟರ್, ೪, ಶರಾವತಿ ಕಟ್ಟಡ, ಬಲ್ಮಠ, ಮಂಗಳೂರು-೫೭೫೦೦೧; ಮೊ.ಮು: ೨೦೦೦; ಪು: ೭೨; ಕ್ರೌನ್ ೧/೮

ರಾಗ ತಾಳ ಛಂದೋಸಹಿತದ ಯಕ್ಷಗಾನ ಕಾವ್ಯ. ಕೊನೆಯಲ್ಲಿ ಕವಿ ಹಾಗೂ ಅರ್ಥಧಾರಿಗಳ ಸಂಕ್ಷಿಪ್ತ ಪರಿಚಯ, ಜಿ.ಟಿ. ನಾರಾಯಣರಾಯರ ಭವಿಷ್ಯ ವಿಜ್ಞಾನ ಎಂಬ ಗ್ರಂಥದಿಂದ ಉಧೃತವಾಗಿರುವ 'ಬುವಿಯಿದು'ಬರಿ ಮಣ್ಣಲ್ಲೋ'ಎಂಬ ಲೇಖನ, ಇವೆ.

೧೭೮೨. ಯಕ್ಷಗಾನ ಮಾರೀಮುಖನ ಕಾಳಗ

ಲೇ: ನಮೂದು ಇಲ್ಲ; ಪ್ರ: ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ, ಉಡುಪಿ; ಮೊ.ಮು. ೧೯೩೪; ಪು: ೨+೫೦=೫೨; ಕ್ರೌನ್ ೧/೮

ರಾಗ ತಾಳ ಛಂದೋ ಸಹಿತದ ಕಾವ್ಯ.

೧೭೭೩. ಯಕ್ಷಗಾನ ಮಾರ್ಕಂಡೇಯ ಚರಿತ್ರೆ

ಲೇ: ನಮೂದು ಇಲ್ಲ; ಪ್ರ: ಶ್ರೀಮನ್ಮಧ್ವ ಸಿದ್ಧಾಂತ ಗ್ರಂಥಾಲಯ, ಉಡುಪಿ; ಎಂ.ಮು. ೧೯೫೩; ಪು: ೨+೩೯=೪೧; ಕ್ರೌನ್ ೧/೮

ರಾಗ ತಾಳ ಛಂದೋ ಸಹಿತದ ಕಾವ್ಯ.

೧೭೭೪. ಯಕ್ಷಗಾನ ಮೀನಾಕ್ಷಿ ಕಲ್ಯಾಣ

ಲೇ: ನಮೂದು ಇಲ್ಲ; ಪ್ರ: ಶ್ರೀಮನ್ಮಧ್ವ ಸಿದ್ಧಾಂತ ಗ್ರಂಥಾಲಯ, ಉಡುಪಿ; ಮೂರು ಮುದ್ರಣಗಳ ನಮೂದು ಇಲ್ಲ, ನಾ.ಮು. ೧೯೫೩; ಪು: ೨+೫೨=೫೪; ಕ್ರೌನ್ ೧/೮

ರಾಗ ತಾಳ ಛಂದೋಸಹಿತದ ಯಕ್ಷಗಾನ ಕಾವ್ಯ.

೧೭೭೫. ಯಕ್ಷಗಾನ ಮುಖವರ್ಣಿಕೆ

ಲೇ: ಎಚ್.ಬಿ.ಎಲ್.ರಾವ್; ಪ್ರ: ಪದವೀಧರ ಯಕ್ಷಗಾನ ಸಮಿತಿ, ಮುಂಬೈ; ಮೊ.ಮು.೨೦೦೫; ಪು: ೨೦+೬೪=೮೪; ಡಿಮ್ಮೈ ೧/೮

ಈ ಗ್ರಂಥದ ಪರಿವಿಡಿಯಲ್ಲಿ ಹನ್ನೊಂದು ಶೀರ್ಷಿಕೆಗಳಿವೆ: ೧.ಬಣ್ಣದ ವೇಷ ೨.ಕಾಟುಬಣ್ಣ ೩.ಹೆಣ್ಣುಬಣ್ಣ ೪.ವಿಶಿಷ್ಟ ಬಣ್ಣಗಳು ೫.ರಾಜವೇಷ ೬.ಪುಂಡುವೇಷ ೭.ಸ್ತ್ರೀವೇಷ ೮.ಬಡಗುತಿಟ್ಟು ೯.ಬಡಗುತಿಟ್ಟು ಬಣ್ಣದ ವೇಷ ೧೦.ಬಡಗುತಿಟ್ಟು ಹೆಣ್ಣುಬಣ್ಣ ೧೧.ವಿದೂಷಕ ಪಾತ್ರಗಳು. ಪ್ರತಿಯೊಂದು ಶೀರ್ಷಿಕೆಯನ್ನೂ ಬಣ್ಣದ ಚಿತ್ರಗಳ ಮೂಲಕವೇ ವಿವರಿಸಲಾಗಿದೆ. ಪ್ರತಿಯೊಂದು ಚಿತ್ರಕ್ಕೂ ಶೀರ್ಷಿಕೆಯಲ್ಲಿ ವಿವರಗಳನ್ನು ನೀಡಲಾಗಿದೆ. ಎರಡು ಪರಿಶಿಷ್ಟಗಳಿದ್ದು ಸಾಕಷ್ಟು ವಿವರಣೆಗಳನ್ನು ಒಳಗೊಂಡಿವೆ. **ಪರಿಶಿಷ್ಟ ಒಂದು: ಕಿರೀಟಗಳು (ಶಿರೋಭೂಷಣ):** ೧.ತಟ್ಟಿ ಕಿರೀಟ (ಕೇಸರಿ ತಟ್ಟಿ) ೨.ಕುತ್ತರಿ ಕಿರೀಟ (ಶೂರ್ಪನಖಿಯ ಕಿರೀಟ) ೩.ಕ್ಲಾವರ್ ಕಿರೀಟ (ಭಗದತ್ತನ ಕಿರೀಟ) ೪.ಭೀಮನ ಮುಡಿ ೫.ಹನುಮಂತನ ಕಿರೀಟ ೬.ಧರ್ಮರಾಯನ ಕಿರೀಟ ೭.ಕೋಲು ಕಿರೀಟ (ಅಥವಾ ಪೂಂಬೆ ಕಿರೀಟ) ೮.ಕಿರಾತನ ಪಕಡಿ ೯.ಪಕಡಿ ೧೦.ತುರಾಯಿ ೧೧.ಮಹಿಷಾಸುರನ ಕೊಂಬು ೧೨.ನಾಟಕೀಯ ಕಿರೀಟ ೧೩.ದೇವಿಯ ಕಿರೀಟ ೧೪.ಸತ್ತಿಗೆ ೧೫.ಕೋರೆ ದಾಡೆ (ಹಲ್ಲು) ೧೬.ಮೀಸೆ ೧೭.ಗಡ್ಡ ೧೮.ಹತ್ತಿಯ ಉಂಡೆ ೧೯.ಓಲೆ ೨೦.ಕೇಸರಿ. **ಪರಿಶಿಷ್ಟ ಎರಡು:** ಮುಖವರ್ಣಿಕೆಗೆ ಬಳಸುವ ಬಣ್ಣಗಳು: ೧.ಸಫೇದ್ (ಬಿಳಿ) Zinc Oxide White ೨.ಕಪ್ಪು (ಕಾಡಿಗೆ) ೩.ಹಳದಿ ೪.ಕೆಂಪು ೫.ಪಚ್ಚೆ.

೧೭೭೬. ಯಕ್ಷಗಾನ ಮೋಹಿನೀ ಚರಿತ್ರೆ

ಲೇ/ಸಂ ನಮೂದು ಇಲ್ಲ; ಪ್ರ: ಶ್ರೀಮನ್ಮಧ್ವ ಸಿದ್ಧಾಂತ ಗ್ರಂಥಾಲಯ, ಉಡುಪಿ; ಮೊ.ಮು. ೧೯೩೦; ಪು: ೧೬; ಕ್ರೌನ್ ೧/೮

ಭಂಗಿ ತಂಬಾಕು ವಿಲಾಸವು ಎಂಬ ಅಡಿಬರಹ ಇದೆ. ರಾಗ ತಾಳ ಛಂದೋರೂಪಗಳಲ್ಲಿ ರಚಿತವಾಗಿರುವ ಕೃತಿ.

೧೭೭೭. ಯಕ್ಷಗಾನ ರಕ್ಷಾಕವಚ

ಲೇ: ಕೀರಿಕ್ಕಾಡು ಮಾಸ್ತರ್ ವಿಷ್ಣು ಭಟ್; ಪ್ರ: ಶ್ರೀ ಸೀತಾರಾಘವ ಕಲಾ ಸಂಘ, ಪೆರ್ನಾಜೆ, ಕಾಪು, ಪುತ್ತೂರು, ದ.ಕ.; ಮೊ.ಮು: ೧೯೭೬; ಪು: ೧೬+೧೨೩=೧೩೯; ಕ್ರೌನ್೧/೮

ತುಲಸಿ–ಶಂಖಚೂಡ ಎಂಬ ಅಡಿಬರಹ ಇದೆ. ರಾಗತಾಳ ಛಂದೋ ಸಹಿತದ ಕೃತಿ. ಈ ಕೃತಿಯಲ್ಲದೆ, ಇದರೊಳಗೆ, ಅರ್ಥಸಹಿತ ರಕ್ಷಾಕವಚ, ಹಾಗೂ ಕವಿ ಮುದ್ದಣ ವಿರಚಿತ ಅರ್ಥಸಹಿತ ಕುಮಾರ ವಿಜಯ ಎಂಬ ಇನ್ನೆರಡು ಯಕ್ಷಗಾನಗಳೂ ಸೇರಿವೆ. ಪಾತ್ರವರ್ಗ, ಅಮೃತ ಸೋಮೇಶ್ವರ ಅವರ ಮುನ್ನುಡಿ, ಇವೆ. ಇದನ್ನೇ ವಿದ್ಯಾರ್ಥಿಗಳಿಗಾಗಿ ಗದ್ಯರೂಪದಲ್ಲಿಯೂ ನೀಡಲಾಗಿದೆ. ವಿದ್ಯಾರ್ಥಿಗಳಿಗಾಗಿ ಎಂಬ ಅಡಿಬರಹದೊಡನೆ ಕುಮಾರವಿಜಯವನ್ನೂ ಗದ್ಯರೂಪದಲ್ಲೇ ನೀಡಲಾಗಿದೆ.

೧೭೭೮. ಯಕ್ಷಗಾನ ರತ್ನಾವತೀ ಕಲ್ಯಾಣ

ಲೇ: ನಂದಳಿಕೆ ಲಕ್ಷ್ಮೀನಾರಣಪ್ಪ (ಮುದ್ದಣ); ಪ್ರ: ಶ್ರೀ ಮನ್ಮಧ್ವ ಸಿದ್ಧಾಂತ ಗ್ರಂಥಾಲಯ, ಉಡುಪಿ; ನಾ.ಮು. ೧೯೫೪; ಪುಟ ೨+೩೮=೪೦; ಕ್ರೌನ್ ೧/೮

ದೃಢವರ್ಮಕಾಳಗ ಎಂಬ ಅಡಿಬರಹ ಇದೆ. ರಾಗ ತಾಳ ಛಂದೋಸಹಿತದ ಕಾವ್ಯ.

೧೭೭೯. ಯಕ್ಷಗಾನ ಗಿರಿಜಾಕಲ್ಯಾಣ

ಲೇ/ಸಂ: ನಮೂದು ಇಲ್ಲ; ಪ್ರ: ಶ್ರೀಮನ್ಮಧ್ವ ಸಿದ್ಧಾಂತ ಗ್ರಂಥಾಲಯ, ಉಡುಪಿ; ಐದನೆಯ ಅಚ್ಚು: ೧೯೫೪; ಪು: ೪೦; ಕ್ರೌನ್ ೧/೮

ರಾಗ ತಾಳ ಛಂದೋರೂಪಗಳಲ್ಲಿ ರಚಿತವಾಗಿರುವ ಕೃತಿ.

೧೭೮೦. ಯಕ್ಷಗಾನ ರಾಮಾಯಣ ಪ್ರಸಂಗಗಳು

ಲೇ: ಆನಂದರಾಮ ಉಪಾಧ್ಯ; ಪ್ರ: ಕನ್ನಡ ಸಂಘ, ಶೇಷಾದ್ರಿಪುರಂ ಕಾಲೇಜು, ಬೆಂಗಳೂರು–೫೬೦ ೦೨೦; ಮೊ.ಮು.೧೯೮೦; ಪು: ೧೦+೧೧೫=೧೨೫; ಡಿಮ್ಮೈ ೧/೮

ಎರಡು ಭಾಗಗಳಲ್ಲಿ ವಿಂಗಡಿಸಲ್ಪಟ್ಟಿರುವ ಒಂಬತ್ತು ಲೇಖನಗಳಿವೆ: **ಭಾಗ ಒಂದು:** ೧.ಯಕ್ಷಗಾನ ೨.ಯಕ್ಷಗಾನ ಪ್ರಸಂಗಗಳ ವಸ್ತುವೈವಿಧ್ಯ. **ಭಾಗ ಎರಡು:** ೧.ರಾಮಾಯಣ ಪ್ರಸಂಗಗಳು ೨.ಸಾಹಿತ್ಯಿಕ ನೆಲೆ ಹಾಗೂ ತಾತ್ವಿಕ ನಿಲುವುಗಳು ೩.ರಸ ಪ್ರತಿಪಾದನೆ ಹಾಗೂ ವರ್ಣನೆಗಳು ೪.ಪ್ರಸಂಗಗಳಲ್ಲಿ ಸಾಮಾಜಿಕತೆ ೫.ಪ್ರಸಂಗ ಮತ್ತು ಕನ್ನಡ ಕಾವ್ಯ ೬.ಪ್ರಮುಖ ಪ್ರಸಂಗಕಾರರು: ಪಾರ್ತಿಸುಬ್ಬ, ಹಟ್ಟಿಯಂಗಡಿ ರಾಮಭಟ್ಟ, ಗೇರಸೊಪ್ಪೆ ಶಾಂತಪ್ಪಯ್ಯ, ನಗರದ ಸುಬ್ಬ, ಮೈರಾವಣ ಕಾಳಗದ ವೆಂಕಟ, ವಿಷ್ಣು ಸಭಾಹಿತ ೭ಅಧ್ಯಯನದ ನೆಲೆ–ನಿಲುವು.

೧೭೮೧. ಯಕ್ಷಗಾನ ರಾವಣೋದ್ಭವ

ಸಂ: ಕೆರೆಮನೆ ಶಿವಾಣಂದ ಹೆಗಡೆ; ಪ್ರ: ಕರ್ನಾಟಕ ಸರ್ಕಾರ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯು, ಬೆಂಗಳೂರು–೫೬೦೦೦೨; ಮೊ.ಮು: ೨೦೦೬; ಪು: ೧೦೦+೬೫೬=೭೫೬; ಡಿಮ್ಮೈ ೧/೮

ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಮಾಲೆಯ ೧೭ ನೆಯ ಸಂಪುಟ. ಕವಿಗಳ ಹೆಸರು ಸಹಿತ ಹನ್ನೆರಡು ಯಕ್ಷಗಾನ ಪ್ರಸಂಗಗಳ ಸಂಕಲನ: ೧.ರಾವಣೋದ್ಭವ– ನರಿಗೆ ಕವಿ ಸುಬ್ರಹ್ಮಣ್ಯ ೨.ಕುಂಭಕರ್ಣಾದಿ ಕಾಳಗ–ಪಾರ್ತಿಸುಬ್ಬ ೩.ಅತಿಕಾಯ ಕಾಳಗ –ಹಟ್ಟಿಯಂಗಡಿ ರಾಮಭಟ್ಟ ೪.ಕಾಲನೇಮಿ ಕಾಳಗ –ಅಜ್ಞಾತ ಕವಿ ೫.ಮಕರಾಕ್ಷ ಕಾಳಗ –ಜತ್ತಿ ಈಶ್ವರ ಭಾಗವತ ೬.ಇಂದ್ರಜಿತು ಕಾಳಗ–ಅಜ್ಞಾತ ಕವಿ ೭.ಮಾರಿಮುಖನ ಕಾಳಗ– ಪರಮೇಶ್ವರ ೮.ಮೈರಾವಣ ಕಾಳಗ –ಅಜಪುರದ ವೆಂಕಟ ೯.ರಾವಣ ವಧೆ–ಕಾಸರಗೋಡು ಸುಬ್ರಾಯ ಪಂಡಿತ ೧೦.ಶ್ರೀರಾಮ ನಿಜಪಟ್ಟಾಭಿಷೇಕ –ಅಲೆಟ್ಟಿ ರಾಮಣ್ಣ ಶಗ್ರಿತ್ತಾಯ ೧೧.ಅಶ್ವಮೇಧಯಾಗ – ಅಜ್ಞಾತ ಕವಿ ೧೨.ಕುಶಲವರ ಕಾಳಗ –ಪಾರ್ತಿಸುಬ್ಬ .ಹೆಚ್.ಡಿ.ಕುಮಾರಸ್ವಾಮಿ ಅವರ ಹೊನ್ನುಡಿ, ಹಿ.ಶಿ.ರಾಂಚಂದ್ರೇಗೌಡ ಅವರ ಪೂರ್ವಾಪರ ಎಂಬ ಅಧ್ಯಕ್ಷರ ಮಾತು, ಪ್ರಸ್ತಾವನೆ, ಇವೆ.

೧೭೮೨. ಯಕ್ಷಗಾನ ಲವಕುಶರ ಕಾಳಗ

ಲೇ: ನಮೂದು ಇಲ್ಲ; ಪ್ರ: ಪಾವಂಜೆ ಗುರುರಾವ್ ಅಂಡ್ ಸನ್ಸ್, ಶ್ರೀಮನ್ಮಧ್ವ ಸಿದ್ಧಾಂತ ಗ್ರಂಥಾಲಯು, ಉಡುಪಿ; ಮೊ.ಮು. ನಮೂದು ಇಲ್ಲ, ಎ.ಮು. ೧೯೫೧; ಪು:೨+೪೮=೫೦; ಕ್ರೌನ್ ೧/೮

ಪಠದ ಸಂಧಿ ಸಹಿತ ಎಂಬ ಅಡಿಬರಹ ಇದೆ. ರಾಗ ತಾಳ ಛಂದೋಸಹಿತ ಯಕ್ಷಗಾನ ಕಾವ್ಯ.

೧೭೮೩. ಯಕ್ಷಗಾನ ವಾಚಿಕಾಧ್ಯಯನ

ಲೇ: ಮೋಹನ ಕುಂಟಾರ್; ಪ್ರ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ; ಮೊ.ಮು. ೨೦೦೦; ಪು: ೧೦+೧೮೮=೧೯೮; ಡಿಮ್ಮೈ ೧/೮

ಏಳು ಅಧ್ಯಾಯಗಳನ್ನುಳ್ಳ ಗ್ರಂಥ: ೧.ಯಕ್ಷಗಾನದ ನೆಲೆ ೨.ವಾಚಿಕದ ಹಿನ್ನೆಲೆ ೩.ಪರಂಪರೆ ಮತ್ತು ಸಾಂಸ್ಕೃತಿಕ ಸ್ಪಂದನ ೪.ಹಾಸ್ಯ ಸನ್ನಿವೇಶಗಳು ೫.ಐತಿಹಾಸಿಕ ಪ್ರಸಂಗಗಳು ೬.ಭಾಷೆ ಮತ್ತು ಸಾಮಾಜಿಕತೆ ೭.ಉಪಸಂಹಾರ. ದೇಸಿಯೊಳ್ ಪುಗುವುದು ಎಂಬ ಎಂ.ಎಂ. ಕಲಬುರ್ಗಿ ಅವರ ಮುನ್ನುಡಿ ಇದೆ. ಅನುಬಂಧದಲ್ಲಿ ಎರಡು ಟಿಪ್ಪಣಿಗಳಿವೆ.

೧೭೮೪. ಯಕ್ಷಗಾನ ವಾಲಿ ವಧೆಯು

ಲೇ: ನಮೂದು ಇಲ್ಲ; ಪ್ರ: ಆರ್.ವಿಟ್ಟಪ್ಪ ಶೆಣ್ಯೈ, ಕಾರ್ಕಳ, ದ.ಕ.; ಮೊ.ಮು.೧೯೫೦; ಪು: ೪೫; ಕ್ರೌನ್ ೧/೮

ಅರ್ಥಸಹಿತ ಎಂಬ ಅಡಿಬರಹ ಇದೆ. ರಾಗ ತಾಳ ಛಂದೋಸಹಿತದ ಯಕ್ಷಗಾನ ಕಾವ್ಯ.

೧೭೮೫. ಯಕ್ಷಗಾನ ವಿದ್ಯುನ್ಮತಿ ಕಲ್ಯಾಣ

ಲೇ: ಹಲಸಿನಹಳ್ಳಿ ನರಸಿಂಹಶಾಸ್ತ್ರಿ; ಪ್ರ: ಯಂ. ವೆಂಕಟರಾವ್, ಶ್ರೀ ನಿತ್ಯಾನಂದ ಗ್ರಂಥಾಲಯ, ಹಂಪನಕಟ್ಟಾ, ಮಂಗಳೂರು–೫೭೫ ೦೦೧; ಹೊಸ ಮುದ್ರಣ: ೧೯೭೩; ಪು: ೨+೪೮=೫೦; ಕ್ರೌನ್ ೧/೮

ರಾಗ ತಾಳ ಛಂದೋ ಸಹಿತದ ಕಾವ್ಯ.

೧೭೮೬. ಯಕ್ಷಗಾನ ವಿರಾಟಪರ್ವ

ಲೇ/ಸಂ ನಮೂದು ಇಲ್ಲ; ಪ್ರ: ಶ್ರೀಮನ್ಮಧ್ವ ಸಿದ್ಧಾಂತ ಗ್ರಂಥಾಲಯ, ಉಡುಪಿ; ಮುದ್ರಣಗಳ ನಮೂದು ಇಲ್ಲ, ಐದನೆಯ ಅಚ್ಚು ೧೯೫೨; ಪು: ೫೦; ಕ್ರೌನ್ ೧/೮

ಕೀಚಕವಧೆ–ಉತ್ತರ ಗೋಗ್ರಹಣ ಎಂಬ ಅಡಿಬರಹ ಇದೆ. ಒಳಗೆ ಇವನ್ನು ಮೊದಲನೆಯ ಹಾಗೂ ಎರಡನೆಯ ಸಂಧಿಗಳೆಂದು ನಮೂದಿಸಲಾಗಿದೆ. ಎರಡು ಸಂಧಿಗಳೂ ರಾಗ ತಾಳ ಛಂದೋರೂಪಗಳಲ್ಲಿವೆ.

೧೭೮೭. ಯಕ್ಷಗಾನ ವಿವೇಚನೆ

ಸಂ: ನಮೂದು ಇಲ್ಲ; ಪ್ರ: ಮೈಸೂರು ರಾಜ್ಯದ ಸಂಗೀತ ನಾಟಕ ಅಕಾಡೆಮಿ ಬೆಂಗಳೂರು; ಮೊ.ಮು: ನಮೂದು ಇಲ್ಲ; ಪು: ೪+೯೬ = ೧೦೦; ಡಿಮ್ಮೈ ೧/೮

ಉಡುಪಿ ಯಕ್ಷಗಾನ ಗೋಷ್ಠಿಯ ಕಾಲದಲ್ಲಿ ಓದಿದ ವಿವಿಧ ಪ್ರಬಂಧಗಳು ಎಂಬ ಅಡಿಬರಹ ಇದೆ. ಒಟ್ಟು ಒಬ್ಬತ್ತು ಲೇಖನಗಳಿವೆ: ೧.ದುಃಖರಸಕ್ಕೊಪ್ಪದ ರಾಗಗಳು – ಎ.ರಾಮ ಗಾಣಿಗ ೨.ಶೃಂಗಾರ–ಹಾಸ್ಯ–ಭಯಾನಕ ರಸಗಳು–ನಾರಾಯಣಪ್ಪ ಉಪ್ಪೂರರು ೩.ವೀ(ರ)ರಸಕ್ಕೆ ತಕ್ಕ ಧಾಟಿ ರಾಗಗಳು–ಕೆರೆಮನೆ ಮಹಾಬಲ ಹೆಗ್ಗಡೆ ೪."ಶ್ರೀಮದ್ರಾಮಾಯಣ" ದ ಮೂಲ ಕಾವ್ಯದ ಪ್ರಕರಣಗಳಿಗೂ ಯಕ್ಷಗಾನ ಪ್ರಸಂಗಗಳ ಕಲ್ಪನೆಗೂ ಇರುವ ವ್ಯತ್ಯಾಸಗಳು– ದೇರಾಜೆ ಯಂ. ಸೀತಾರಾಮಯ್ಯ ೫.ಪ್ರಸಂಗಕರ್ತರು ಚಿತ್ರಿಸಿರುವ ಶೃಂಗಾರ ದೃಶ್ಯಗಳಲ್ಲಿ ಅರ್ಥಗಾರಿಕೆಯಲ್ಲಿ ಬರುವ ಸಮಸ್ಯೆಗಳು–ಪೆರ್ಲ ಕೃಷ್ಣಭಟ್ಟ ವಿದ್ವಾನ್ ೬.ತಾಳಮದ್ದಳೆಗೆ ಒಲಿಯುವ ಪ್ರಸಂಗಗಳು–ಲೇಖಕರ ಹೆಸರು ನಮೂದಾಗಿಲ್ಲ ೭.ಜಾನಪದ ರಂಗಸ್ಥಳದ ಸಮಸ್ಯೆಗಳು – ಎಂ.ಯಸ್. ನಂಜುಂಡರಾಯರು ೮.ತೊಗಲು ಬೊಂಬೆಯಾಟ– ಎಂ.ಎಸ್. ನಂಜುಂಡರಾವ್ ೯.ಕೃಷ್ಣಾರ್ಜುನ ಕಾಳಗ– ಕಾವ್ಯ ಮತ್ತು ಪ್ರಸಂಗಗಳು – ಕೆ.ವಿ. ಸುಬ್ಬಣ್ಣ. ಶಿವರಾಮ ಕಾರಂತ ಅವರ ಯಕ್ಷಗಾನ ಉತ್ಸವ ಗೋಷ್ಠಿ ಉಡುಪಿ ಎಂಬ ಮುನ್ನುಡಿ ಇದೆ.

೧೭೮೮. ಯಕ್ಷಗಾನ ವಿಶಿಷ್ಟ ಪ್ರಸಂಗಗಳು

ಸಂ: ವಿಜಯನಳಿನಿ ರಮೇಶ್; ಪ್ರ: ಕರ್ನಾಟಕ ಸರ್ಕಾರ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು–೫೬೦೦೦೨; ಮೊ.ಮು: ೨೦೦೬, ಪು: ೫೪+೫೩೦= ೫೮೪; ಡಿಮ್ಮೈ ೧/೮

ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಮಾಲೆಯ ೧೬ನೆಯ ಸಂಪುಟ. ಈ ಸಂಗ್ರಹದಲ್ಲಿ ಹನ್ನೊಂದು ಪ್ರಸಂಗಗಳಿ ಕವಿಗಳ ಹೆಸರುಗಳೊಂದಿಗೆ: ೧.ರತಿ ಕಲ್ಯಾಣ – ಹಟ್ಟಿಯಂಗಡಿ ರಾಮ ಭಟ್ಟ ೨.ದ್ರೌಪದೀ ಪ್ರತಾಪ–ಕಡಂದಲೆ ಬಿ.ರಾಮರಾವ್ ೩.ಕನಕಾಂಗಿ ಕಲ್ಯಾಣ –ನಿತ್ಯಾನಂದ ಅವಧೂತ ೪.ಕಲಾವತಿ ಪರಿಣಯ –ಜಾಣ ಮಂಜಪ್ಪ ಕೆರೆಕೊಪ್ಪ ೫.ರತ್ನಾವತಿ ಕಲ್ಯಾಣ –ಮುದ್ದಣ ೬.ಯೊಗೀನೀ ಕಲ್ಯಾಣ – ಅದ್ಯಪಾಡಿ ರಾಮಕೃಷ್ಣಯ್ಯ ೭.ಚಂದ್ರಮೌಳಿ ವಿಲಾಸ –ಧ್ವಜಪುರದ ನಾಗಪ್ಪಯ್ಯ ೮.ಲವಕುಶರ ಕಾಳಗ (ಪಠದ ಸಂಧಿ) –ಹಟ್ಟಿಯಂಗಡಿ ರಾಮಭಟ್ಟ ೯.ರಾಧಾ ವಿಲಾಸ–ಮಟ್ಟಿ ವಾಸುದೇವ ಪ್ರಭು ೧೦.ಕೃಷ್ಣಾರ್ಜುನರ ಕಾಳಗ–ಹಳೆ ಮಕ್ಕಿರಾಮ ೧೧.ವೀರಮಣಿ ಕಾಳಗ–ಹಲಸಿನಹಳ್ಳಿ ನರಸಿಂಹ ಶಾಸ್ತ್ರೀ. ಹೆಚ್.ಡಿ.ಕುಮಾರಸ್ವಾಮಿ ಅವರ ಹೊನ್ನುಡಿ, ಹಿ.ಶಿ.ರಾಮಚಂದ್ರೇಗೌಡ ಅವರ ಪೂರ್ವಾಪರ ಎಂಬ ಅಧ್ಯಕ್ಷರ ಮಾತು, ಸಂಪಾಕದಕರ ಪ್ರಸ್ತಾವನೆ, ಇವೆ.

೧೭೮೯. ಯಕ್ಷಗಾನ ಶಲ್ಯಪರ್ವ

ದಿವಂಗತ ಹಲಸಿನಹಳ್ಳಿ ನರಸಿಂಹಶಾಸ್ತ್ರಿಗಳಿಂದ ರಚಿಸಲ್ಪಟ್ಟುದು; ಪ್ರ: ಶ್ರೀಮನ್ಮಧ್ವ ಸಿದ್ಧಾಂತ ಗ್ರಂಥಾಲಯ, ಉಡುಪಿ; ಮೊ.ಮು. ನಮೂದು ಇಲ್ಲ, ಎರಡನೆಯ ಅಚ್ಚು ೧೯೫೧; ಪು: ೩೮; ಕ್ರೌನ್ ೧/೮

ರಾಗ ತಾಳ ಛಂದೋರೂಪಗಳಲ್ಲಿ ರಚಿತವಾಗಿರುವ ಕೃತಿ.

೧೭೯೦. ಯಕ್ಷಗಾನ ಶಿಕ್ಷಕ ಅಥವಾ ಯಕ್ಷಗಾನ ಸ್ವಯಂಬೋಧಿನಿ

ಲೇ: ಎಂ.ನಾರ್ಣಪ್ಪ ಉಪ್ಪೂರ; ಪ್ರ: ಶ್ರೀ ಮುಕಾಂಬಿಕಾ ಕೃಪಾಪೋಷಿತ ಯಕ್ಷಗಾನ ಸಂಘ, ನಿಟ್ಟೂರು; ಮೊ.ಮು: ೧೯೬೬; ಪು: ೮+೫೭=೬೫; ಕ್ರೌನ್ ೧/೮

ಯಕ್ಷಗಾನದಲ್ಲಿ ಬಳಕೆಯ ತಾಳಗಳು, ತಾಳಗಳ ವಿವರ, ಬಯಲಾಟ, ಸಭಾ ಲಕ್ಷಣದ ಶ್ಲೋಕಗಳು, ಕೌತುಕ, ಪೀಠಿಕೆ ಪ್ರಾರಂಭ, ಸ್ತ್ರೀ ಪಾತ್ರ ಕುಣಿಸುವ ಕ್ರಮ, ಇಲ್ಲಿಂದ ಮುಂದೆ ಒಡ್ಡೋಲಗ ಪ್ರಾರಂಭ, ಸಾಲಾಗಿ ವೇಷದವರು ನಿಲ್ಲುವುದು–ಪದ್ಯ ಹೇಳುವಾಗ ಅಭಿನಯ ಮಾಡುವುದು, ರಾಮಲಕ್ಷ್ಮಣರ ಒಡ್ಡೋಲಗದ ಪದ್ಯ, ಎಂಬ ಶೀರ್ಷಿಕೆಗಳು ಈ ಕೃತಿಯಲ್ಲಿವೆ.

೧೭೯೧. ಯಕ್ಷಗಾನ ಶಿವನಾಮ ಮಹಿಮೆ

ಲೇ: ಕೀರಿಕ್ಕಾಡಿ ಮಾಸ್ತರ್ ವಿಷ್ಣು ಭಟ್; ಪ್ರ: ಶ್ರೀ ಗೋಪಾಲಕೃಷ್ಣ ಪ್ರಕಾಶನ ದೇಲಂಪಾಡಿ ಕಾಸರಗೋಡು ತಾಲೂಕು; ಮೊ.ಮು: ೧೯೮೧; ಪು: ೨+೪೭ = ೪೯; ಕ್ರೌನ್ ೧/೮

ಶಿವಭಕ್ತ ಸುಪ್ರಿಯ ಎಂಬ ಅಡಿಬರಹ ಇದೆ. ರಾಗ ತಾಳ ಛಂದೋಸಹಿತದ ಯಕ್ಷಗಾನ ಕೃತಿ. ಪಾತ್ರ ಪರಿಚಯ ಇದೆ.

೧೭೯೨. ಯಕ್ಷಗಾನ ಶ್ರೀ ಕೂಷ್ಮಾಂಡಿನೀ ದೇವೀ ಮಾಹಾತ್ಮ್ಯ

ಲೇ: ಎಂ. ಶ್ರೀಧರ ಪಾಂಡಿ, ಸಾಣೂರು; ಪ್ರ: ಅನೇಕಾಂತ ಪ್ರಕಾಶನ, ೨–೭೮/೧೯, ಶ್ರೀ ಧವಲಾ, ಕುಲಶೇಖರ, ಮಂಗಳೂರು–೫೭೫ ೦೦೫; ಮೊ.ಮು. ೨೦೧೨; ಪು: ೧೪೬; ಡಿಮೈ ೧/೮

ನಾಲ್ಕು ಭಾಗಗಳಲ್ಲಿ ಎಂಬ ಅಡಿಬರಹ ಇದೆ: ೧.ಯಕ್ಷಗಾನ ಶ್ರೀ ನೇಮಿನಾಥ ಚರಿತೆ ೨.ಯಕ್ಷಗಾನ ಜಿನಭಕ್ತೆ ಅಗ್ನಿಲೆ ೩.ಯಕ್ಷಗಾನ ಚಾವುಂಡರಾಯ ಚರಿತೆ ೪.ಯಕ್ಷಗಾನ ಅಡಗೂರು ಚರಿತೆ ಅಥವಾ ಚಕ್ರವರ್ತಿ ಹೊಯ್ಸಳೇಶ್ವರ. ಅನುಬಂಧದಲ್ಲಿ ನಾಲ್ಕೂ ಯಕ್ಷಗಾನ ಕಾವ್ಯಗಳ ಕಥಾ ಸಾರಾಂಶವನ್ನು ಗದ್ಯದಲ್ಲಿ ನೀಡಲಾಗಿದೆ. ಮುನಿರಾಜ ರೆಂಜಾಳ ಅವರ ಮುನ್ನುಡಿ ಇದೆ. ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ ಹಾಗೂ ಸ್ವಸ್ತಿಶ್ರೀ ಭಟ್ಟಾರಕ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಮಹಾಸ್ವಾಮೀಜಿ ಅವರುಗಳ ಶುಭ ಸಂದೇಶಗಳಿವೆ. ಎಂ. ಶ್ರೀಧರ ಪಾಂಡಿ ಎಂಬ ಯಕ್ಷಗಾನದ ಉಸಿರು ಎಂಬ ಶೀರ್ಷಿಕೆಯಲ್ಲಿ ಕೆ.ಎಂ. ರಾಘವ ನಂಬಿಯಾರ್ ಅವರು ಕವಿ ಪರಿಚಯ ಮಾಡಿಕೊಟ್ಟಿದ್ದಾರೆ.

೧೭೯೩. ಯಕ್ಷಗಾನ ಶ್ರೀಕೃಷ್ಣದಿನಾಶ್ವಮೇಧ

ಲೇ: ಉಡುಪಿ ಸೋದೇಮಠದ ರಾಜಗೋಪಾಲಾಚಾರ್ಯ; ಪ್ರ: ಶ್ರೀಮನ್ಮಧ್ವ ಸಿದ್ಧಾಂತ ಗ್ರಂಥಾಲಯ, ಉಡುಪಿ; ಮೊ.ಮು. ನಮೂದು ಇಲ್ಲ, ಎ.ಮು. ೧೯೨೮; ಪು:೨+೫೬=೫೮; ಕ್ರೌನ್ ೧/೮

ರಾಗ ತಾಳ ಛಂದೋಸಹಿತದ ಯಕ್ಷಗಾನ ಕಾವ್ಯ.

೧೭೯೪. ಯಕ್ಷಗಾನ ಶ್ರೀರಾಮ ಪಟ್ಟಾಭಿಷೇಕ

ಲೇ: ಕೀರಿಕ್ಕಾಡಿ ಮಾಸ್ತರ್ ವಿಷ್ಣು ಭಟ್; ಪ್ರ: ಶ್ರೀ ಗೋಪಾಲಕೃಷ್ಣ ಪ್ರಕಾಶನ, ದೇಲಂಪಾಡಿ, ಕಾಸರಗೋಡು ತಾಲೂಕು; ಮೊ.ಮು: ೧೯೮೬; ಪು: ೮+೧೨೨=೧೩೦; ಡಿಮ್ಮೈ ೧/೮

ರಾಗ ತಾಳ ಛಂದೋ ಸಹಿತದ ಯಕ್ಷಗಾನ ಕೃತಿ. ಅರ್ಥಸಹಿತ ಎಂಬ ಅಡಿಬರಹ ಇದೆ.

೧೭೯೫. ಯಕ್ಷಗಾನ ಸಂಪೂರ್ಣ ರಾಮಾಯಣ

೫೨ ಹಾಡುಗಳ ಸಂಕಲನ: ೧.ಕಿಂಚಿತ್ ರಾಮಾಯಣ ೨.ಅಷ್ಟೋತ್ತರ ರಾಮಾಯಣ ೩.ಪುತ್ರಕಾಮೇಷ್ಠಿ ಹಾಡು ೪.ರಾಮನ ಬಾಲ್ಯ ೫.ಲೆತ್ತದ ಸಂಧಿ ೬.ಲಕ್ಷ್ಮಣ ನಕ್ಕ ಹಾಡು ೭.ಸೀತಾ ವನವಾಸದ ಹಾಡು ೮.ಭಾಗವತ ರಾಮಾಯಣ ೯.ಸಂಕ್ಷಿಪ್ತ ಮಹಾಭಾರತ ೧೦.ದೂರ್ವಾಸ ಭಿಕ್ಷೆ ೧೧.ಕಿಂಚಿತ್ ಭಾಗವತ ೧೨.ಕೃಷ್ಣನ ಹುಟ್ಟು–೧, ೧೩.ಕೃಷ್ಣನ ಹುಟ್ಟು–೨ ೧೪.ಗೋಪಿದೇವಿ ಮೊಸರು ಕಡೆದ ಹಾಡು–೧ ೧೫.ಗೋಪಿದೇವಿ ಮೊಸರು ಕಡೆದ ಹಾಡು–೨ ೧೬.ಗೊಲ್ಲತಿ ಹಾಡು ೧೭.ಗೋಪಿಯರ ಜಲಕ್ರೀಡೆ ೧೮.ರುಕ್ಮಣೀ ಸ್ವಯಂವರ ೧೯.ಸತ್ಯಭಾಮೆ–ರುಕ್ಮಿಣಿ ಲೆತ್ತವಾಡಿದ್ದು ೨೦.ಸುಧಾಮ ಚರಿತ್ರೆ–೧.೨೧.ಸುಧಾಮ ಚರಿತ್ರೆ–೨.೨೨.ಗಜೇಂದ್ರ ಮೋಕ್ಷ ೨೩.ಪ್ರಹ್ಲಾದ ಚರಿತ್ರೆ ೨೪.ಕಿಂಚಿತ್ ಭಗವದ್ಗೀತೆ–೧ ೨೫.ಕಿಂಚಿತ್ ಭಗವದ್ಗೀತೆ–೨ ೨೬.ಗಿರಿಜಾ ಕಲ್ಯಾಣ–೧ ೨೭.ಗಿರಿಜಾ ಕಲ್ಯಾಣ–೨ ೨೮.ಹರಿಹರ ಲೀಲಾಮೃತ ೨೯.ಸಿದ್ಧಿವಿನಾಯಕ ವ್ರತ ೩೦.ಸ್ವರ್ಣಗೌರಿ ವ್ರತ ೩೧.ಮಂಗಳಗೌರೀ ವ್ರತ ೩೨.ಮಂಗಳಗೌರೀ ಧವಳ ೩೩.ಮಾಘದ ಗೌರೀ ವ್ರತ ೩೪.ಚೈತ್ರಗೌರೀ ವ್ರತ ೩೫.ಚಿಲುಕು ಕುಟ್ಟುವ ವ್ರತ ೩೬.ಶುಕ್ರವಾರದ ಲಕ್ಷ್ಮೀ ವ್ರತ ೩೭.ನಾಗರಪಂಚಮೀ ವ್ರತ ೩೮.ಭೀಮನಮಾವಾಸ್ಯೆ ವ್ರತ–೧ ೩೯.ಭೀಮನಮಾವಾಸ್ಯೆ ವ್ರತ ೪೦.ಸತ್ಯನಾರಾಯಣ ವ್ರತ ೪೧.ಅನಂತ ಪದ್ಮನಾಭ ವ್ರತ ೪೨.ಋಷಿ ಪಂಚಮೀ ವ್ರತ ೪೩.ನಾರದ ತೀರ್ಥಯಾತ್ರ ಮಾಡಿದ ಹಾಡು ೪೪.ವಾಮನನ ಹುಟ್ಟು ೪೫.ದತ್ತಾತ್ರೇಯನ ಹುಟ್ಟು ೪೬.ಅರುಂಧತಿ ಹಾಡು ೪೭.ವಟ ಸಾವಿತ್ರಿ ಹಾಡು ೪೮.ಧ್ರುವ ಚರಿತ್ರೆ ೪೯.ಶ್ರೀನಿವಾಸ ಕಲ್ಯಾಣ ೫೦.ವೆಂಕಟೇಶ ಮಹಾತ್ಮೆ ೫೧.ಲಕ್ಷ್ಮೀ ವಾಕ್ಯ ೫೨.ಧೂಮಪತ್ರೆ ಹಾಡು. ಕೊನೆಯಲ್ಲಿ ಆರು ಅನುಬಂಧಗಳಿವೆ. ೧.ಹಾಡುಗಾರ್ತಿಯರು–ಹಾಡುಗಳು ೨.ಪ್ರತಿಗಳ ವಿವರ ೩.ಸಂಪಾದನೆಯ ವಿವರ ೪.ಸಂಪ್ರದಾಯದ ಹಾಡುಗಳು–ದಾಸ ಸಾಹಿತ್ಯ ೫.ಸಂಪ್ರದಾಯದ ಹಾಡುಗಳು –ಕುಮಾರವ್ಯಾಸ ೬.ಟಿಪ್ಪಣಿಗಳು. ಪ್ರಾರಂಭದಲ್ಲಿ ಹಾ.ಮಾ.ನಾಯಕ ಅವರ ಮುನ್ನುಡಿ, ಜೀ.ಶಂ. ಪರಮಶಿವಯ್ಯ ಅವರ ವಿಭಾಗ ಸಂಪಾದಕರ ಮಾತು, ಇವೆ.

೨೦೨೦. ಸಂಪಿಗೆ ಅರಳಾವೆ

ಸಂ.ಕರಾಕೃ; ಪ್ರ: ಜನಪದ ಸಾಹಿತ್ಯ ಅಕಾಡೆಮಿ. ಮೈಸೂರು–೫; ಮೊ.ಮು: ೧೯೬೨; ಪು: ೧೪೩; ಕ್ರೌನ್ ೧/೮

ತುಮಕೂರು, ಮಂಡ್ಯ ಮತ್ತು ಚಿತ್ರದುರ್ಗ ಜಿಲ್ಲೆಗಳ ಹಳ್ಳಿಗಳಲ್ಲಿ ಸಂಗ್ರಹಿಸಿ ತಂದಿರುವ ಜನಪದ ಭಾವಗೀತೆಗಳ ಸಂಗ್ರಹ ಎಂಬ ಅಡಿಬರಹ ಇದೆ. ಅಂಥ ೭೧ ಹಾಡುಗಳಿವೆ.

೨೦೨೧. ಸಂಪೀಗೆ ಅರಳೀವೆ

ಸಂ: ಸ.ಚ.ಮಹದೇವ ನಾಯಕ್; ಪ್ರ: ಕಾವ್ಯಾಲಯ, ಮೈಸೂರು; ಮೊ.ಮು. ೧೯೬೧; ಪು: ೧೬+೧೦೦=೧೧೬; ಕ್ರೌನ್ ೧/೮

೫೨ ಹಾಡುಗಳು ಹಾಗೂ ಕೆಲವು ತ್ರಿಪದಿಗಳಿವೆ. ಆರು ಕಥನಗೀತೆಗಳಿವೆ: ೧.ಲಕ್ಷ್ಮೀದೇವಿ ಮತ್ತು ತೊಳಸಮ್ಮ ಇವರೊಡನೆ ಬಿಳಿಗಿರಿ ರಂಗನ ಸಂಭಾಷಣೆ ೨.ಸುವ್ವಲಾಲೆ ೩.ದೊಡ್ಡ ಬಸವಣ್ಣನವರು ೪.ಶ್ರೀರಂಗಸ್ವಾಮಿ ೫.ಉತ್ತರದೇವಿ ೬.ಶ್ರೀ ಚಿಕ್ಕಮ್ಮ ಚಿಕ್ಕದೇವಿ. ಜಿ. ವರದರಾಜರಾವ್ ಅವರ ಮುನ್ನುಡಿ ಇದೆ. ಕೊನೆಯಲ್ಲಿ ಕೆಲವು ಟಿಪ್ಪಣಿಗಳಿವೆ.

೨೦೨೨. ಸಂಪ್ರದಾಯದ ಗೀತೆಗಳು

ಸಂ: ಬಿ.ಎಸ್.ಸರೋಜ; ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು; ಮೊ.ಮು: ೧೯೮೪; ಪು: ೨೪+೧೨೨=೧೪೬; ಡಿಮ್ಮೈ ೧/೮

ಮದುವೆಯ ಸಂದರ್ಭದ ಎಲ್ಲ ಘಟ್ಟಗಳಲ್ಲೂ ಹಾಡುವ ೩೪ ಹಾಡುಗಳಿವೆ. ಹಂಪ ನಾಗರಾಜಯ್ಯ ಅವರ ಮುನ್ನುಡಿ, ಮೂರು ಅನುಬಂಧಗಳು: ೧.ಹಾಡುಗಳು–ಹಾಡುಗಾರ್ತಿಯರು. ೨.ಹಾಡುಗಾರ್ತಿಯರ ಪರಿಚಯ ೩.ಹಾಡುಗಳ ಅಕಾರಾದಿ ಸೂಚಿ, ಇವೆ.

೨೦೨೩. ಸಂಯೋಜನೆ

ಲೇ: ಸುಶೀಲಾ ಸೊಂಡೂರು; ಪ್ರ: ಸ್ನೇಹ ಪ್ರಕಾಶನ, ಶಿವಮೊಗ್ಗ; ಮೊ.ಮು.೧೯೮೦; ಪುಟ ೧೪+೧೫೮=೧೭೨; ಕ್ರೌನ್ ೧/೮

ಇಲ್ಲಿನ ೧೨ ಲೇಖನಗಳನ್ನು ಎರಡು ಭಾಗ ಮಾಡಿಕೊಳ್ಳಲಾಗಿದೆ. ಎರಡನೆಯ ಭಾಗದಲ್ಲಿ ಮಾತ್ರ ಜಾನಪದಕ್ಕೆ ಸಂಬಂಧಿಸಿದ ಆರು ಲೇಖನಗಳಿವೆ: ೧.ಜಾನಪದದಲ್ಲಿ ಹಾಸ್ಯ ವೈವಿಧ್ಯ ೨.ಕೆಲವು ಗ್ರಾಮೀಣ ಆಟಗಳು ೩.ಭಜನೆ ಮೇಳ–ಒಂದು ವಿವೇಚನೆ ೪.ತಾಯವ್ವನ್ಯಾರು ಹೋಲ್ಯಾರು ೫.ಮಸರೂರು ಮಾರಿಜಾತ್ರೆ ೬.ಬಸವಣ್ಣನವರ ವಚನಗಳಲ್ಲಿ ಜಾನಪದೀಯ ಅಂಶಗಳು. ಎಚ್. ತಿಪ್ಪೇರುದ್ರಸ್ವಾಮಿ ಅವರ ಮುನ್ನುಡಿ ಇದೆ.

೨೦೨೪. ಸಂವಹನಾತ್ಮಕ ಅಧ್ಯಯನದಲ್ಲಿ ಜನಪದ ಕಲೆಗಳು

ಲೇ: ಕುಂಟಲಗೆರೆ ಸಣ್ಣಹೊನ್ನಯ್ಯ; ಪ್ರ: ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು; ಮೊ.ಮು: ೨೦೧೧; ಪು: ೧೬+೨೦೮=೨೨೪; ಡಿಮ್ಮೈ ೧/೮

೨೪ ಅಧ್ಯಾಯಗಳಿವೆ: ೧.ತುಮಕೂರು ಜಿಲ್ಲೆಯ ಗ್ರಾಮೀಣ ಸಂಸ್ಕೃತಿ ಮತ್ತು ಮನರಂಜನೆ ಜನಪದ ಸಂವಹನ ಮಾಧ್ಯಮಗಳ ಪಾತ್ರ ೨.ತುಮಕೂರು ಸುತ್ತಿನ ಜನಪದ ಕಲೆಗಳು ೩.ಕಗ್ಗದ ಪದಗಳು ೪.ಸಂವಹನ ಸಂದೇಶಗಳಿಗೆ ಪೂರಕವಾದಂತಹ ತುಮಕೂರಿನ

ಜನಪದ ಕಲೆಗಳು ೫.ಗೊಲ್ಲ ಜನಾಂಗದ ಪಾರಂಪರಿಕ ಸಂವಹನ ರಚನೆಯ ಜುಂಜಪ್ಪನ ಕಾವ್ಯ ೬.ಸಂವಹನಾತ್ಮಕ ಅಧ್ಯಯನದಲ್ಲಿ ತುಮಕೂರು ಜಿಲ್ಲೆಯ ಭೌಗೋಳಿಕ ನೋಟ ೭.ಸಂವಹನಾತ್ಮಕ ಅಧ್ಯಯನದಲ್ಲಿ ಕಲಾತ್ಮಕ ರಂಗದ ಭಿತ್ತಿ ಚಿತ್ರಕಲೆಗಳು ೮.ಸಂವಹನಾತ್ಮಕ ಅಧ್ಯಯನಕ್ಕೆ ಕಣ್ಮರೆಯಾಗುತ್ತಿರುವ ಭಿತ್ತಿ ಚಿತ್ರಕಲೆ ಅಂದು ಇಂದು ೯.ಸಂವಹನಾತ್ಮಕ ಅಧ್ಯಯನದಲ್ಲಿ ದೃಶ್ಯಕಲೆ ವಿದ್ಯಮಾನಗಳು ೧೦.ಪರಿವರ್ತನೀಯ ಉಡುಗೊರೆಯಾಗಿ ಸಂವಹನಾತ್ಮಕ ದೃಶ್ಯ ಕಲಾಕೃತಿಗಳು ೧೧.ಸಂವಹನಾತ್ಮಕ ಸಮೂಹ ಮಾಧ್ಯಮ ಮತ್ತು ಯುವ ಪೀಳಿಗೆ ೧೨.ಸಂವಹನಾತ್ಮಕ ಅಧ್ಯಯನದಲ್ಲಿ ಆಧುನಿಕ ಚಿತ್ರಕಲೆ ೧೩.ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಸಂವಹನ ಗ್ರಂಥಾಲಯದ ಮಹತ್ವ ೧೪.ಸಂವಹನ ಸಮೂಹ ಮಾಧ್ಯಮ ಮತ್ತು ಜನತೆ ೧೫.ಸಮೂಹ ಮಾಧ್ಯಮ ಮತ್ತು ಸಂವಹನ ಚಿತ್ರಕಲೆ ಹಾಗೂ ಮಹಿಳೆ ೧೬.ಸಂವಹನಾತ್ಮಕ ಅಧ್ಯಯನದಲ್ಲಿ ಜನಪದ ಚಿತ್ರಕಲೆ ೧೭.ಸಂವಹನಾತ್ಮಕ ಅಧ್ಯಯನದಲ್ಲಿ ಯಕ್ಷಗಾನ, ದೊಡ್ಡಾಟಗಳಲ್ಲಿಯ ಚಿತ್ರಕಲೆ ೧೮.ಸಂವಹನಾತ್ಮಕ ಅಧ್ಯಯನದಲ್ಲಿ ಕರ್ನಾಟಕದ ಸಾಂಪ್ರದಾಯಿಕ ಶಿಲ್ಪಕಲೆ ೧೯.ಸಂವಹನಾತ್ಮಕ ಅಧ್ಯಯನದಲ್ಲಿ ರಾಷ್ಟ್ರಕೂಟರ ಶಿಲ್ಪಕಲೆ ೨೦.ಸಂವಹನಾತ್ಮಕ ಅಧ್ಯಯನ ಮತ್ತು ಚಿತ್ರಕಲೆ ೨೧.ಸಂವಹನಾತ್ಮಕ ಆಡಳಿತದಲ್ಲಿ ಕನ್ನಡ ೨೨.ಸಂವಹನಾತ್ಮಕ ಬದಲಾವಣೆಯಲ್ಲಿ ಜನಪದ ಲಾವಣಿಗಳು ೨೩.ಸಂವಹನಾತ್ಮಕ ಅಧ್ಯಯನದಲ್ಲಿ ರೇಡಿಯೊ ೨೪.ಸಂವಹನಾತ್ಮಕ ಅಧ್ಯಯನದಲ್ಲಿ ದೂರದರ್ಶನ.

೨೦೨೫. ಸಂಶೋಧನ ತರಂಗ (ಸಂಪುಟ೨)

ಲೇ: ಎಂ. ಚಿದಾನಂದಮೂರ್ತಿ; ಪ್ರ: ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು; ಮೊ.ಮು.೧೯೭೦; ಪು: ೧೬+೩೦೨=೩೧೮; ಡಿಮ್ಮೈ ೧/೮

ಈ ಗ್ರಂಥದಲ್ಲಿ ಭಾಷೆ ಸಾಹಿತ್ಯ ಸಂಸ್ಕೃತಿ ಎಂಬ ಮೂರು ಭಾಗಗಳಿವೆ. ಸಂಸ್ಕೃತಿ ಎಂಬ ಭಾಗದಲ್ಲಿ ಈ ಲೇಖನಗಳಿವೆ: ೧.ಕನ್ನಡ ಕಾವ್ಯ, ಶಾಸನಗಳಲ್ಲಿ ಮೈಲಾರ ಮತ್ತು ಮಾಳಚಿ ೨.ಎರಡು ವಾದ್ಯಗಳು–ರಾವಣಹಸ್ತ ಮತ್ತು ಪಂಚಮುಖ ೩.ಪಾಳಿಧ್ವಜ, ಮಹಾಧ್ವಜ ಮತ್ತು ಉಪಧ್ವಜ ೪.'ಕೊಟ್ಟಣ ಹಾಕಿಸು' ಎಂದರೇನು? ೫.ಮಧ್ಯಕಾಲೀನ ಕರ್ನಾಟಕದ ಕೆಲವು ರಹಸ್ಯ ತಾಂತ್ರಿಕ ಪಂಥಗಳು ೬.ಶಾಸನೋಕ್ತ ಕೆಲವು ಮಹಾದಾನಗಳು ೭.'ಭಗವ' ಮತ್ತು 'ಮಾಸಕಬ್ಬೆ'.

೨೦೨೬. ಸಂಸಾರಿ ಹೆಚ್ಚೋ ಸನ್ಯಾಸಿ ಹೆಚ್ಚೋ

ಸಂ.: ಎಂ.ಎ. ಜಯಚಂದ್ರ; ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜ ಪೇಟೆ, ಬೆಂಗಳೂರು ೫೬೦೦೧೮; ಮೊ.ಮು: ೧೯೮೧; ಪು: ೧೫+೨೬೭ = ೨೮೨; ಡಿಮ್ಮೈ ೧/೮

ನಲವತ್ತೈದು ಜಾನಪದ ಕಥೆಗಳು ಎಂಬ ಅಡಿಬರಹ ಇದೆ: ೧.ಸಂಸಾರಿ ಹೆಚ್ಚೋ ಸನ್ಯಾಸಿ ಹೆಚ್ಚೋ ೨.ಗುಣ ಪರೀಕ್ಷೆ ೩.ಬ್ಯಾಸಾಯ ನಡೆಸಿಲ್ಲ ೪.ರಾಜಕುಮಾರನ ಪ್ರಸ್ಥ

೫.ಅತ್ತೆ-ಅಳಿಯ (೧) ೬.ಪುಗಸಟ್ಟೆ ನಾಯ್ಕ ೭.ನೆಲಮಾಳಿಗೆಯಲ್ಲಿ ರಾಜಕುಮಾರಿ ೮.ಕೀಲು ಕುದುರೆ ೯.ಮೂರುಕಾಸಿನ ಸೊಸೆ ೧೦.ಪೋಲಿ ಹುಡುಗನಿಗೆ ಮೂರುಹೆಸರು ೧೧.ಹೇನಿನ ಸೇಡು ೧೨.ದೋಸೆ ಹೊಟ್ಟೆ ಟೊಳ್ ೧೩.ಹಾವು ಕೊಡಿಸಿದ ಮುದ್ರೆಯುಂಗುರ ೧೪.ಇವನು ಯಾರೋ ಭಾರಿ ರುಸ್ತುಂ ೧೫.ಅದೃಷ್ಟವಿಲ್ಲದ್ದು ಹೇಗೆ ತಾನೆ ಸಿಕ್ಕೀತು? ೧೬.ತಿಮ್ಮ ಸಾಯ್ಲಿ ತಿಮ್ಮ ಸಾಯ್ಲಿ ಅಂದ್ರೆ ಬೊಮ್ಮ ಸತ್ತನಂತೆ ೧೭.ಗುಟ್ಟು ಹೇಳಿದ ದೇವಕನ್ನಿಕೆ ೧೮.ಮಗನ ಸಾವು ಬಯಸಿದ ತಾಯಿ ೧೯ ಅತ್ತೆ-ಅಳಿಯ(೨) ೨೦.ಆಹಾರ ದಾನ ೨೧.ಮರಗೋಪಿ ೨೨.ಅಳಿಯ ಯಾರು? ೨೩.ಮೋಸಕ್ಕೆ ಮೋಸ ೨೪.ದೇವೇಂದ್ರರಾಯನ ಮಗ ಕುಪ್ಪನರಾಯ ೨೫.ಗಂಡ ಹೆಂಡಿರ ಮಾತು-ಕತೆ ೨೬.ಸೂರ್ಜಮುಖಿ ಮಗಳು ೨೭.ಅತ್ತೆ-ಅಳಿಯ (೩) ೧೮.ಚೆಲ್ವಿ ಕಷ್ಟ ೨೯.ದಾಸಪ್ಪ-ಜೋಗಯ್ಯ ೩೦.ತಲಾಗೊಂದು ಲೋಟ – ತಲೆಗೊಂದು ಏಟು ೩೧.ಅನಸೂರ್ಯಾದೇವಿ ೩೨.ಗಂಡಯಾರು? ೩೩.ಬೆಕ್ಕಿನ ಕಾಲು ೩೪.ಮಾರುದ್ದ ಮೂಗು ೩೫.ತಂದೆ ತಂಗಿ ಮಗಳು ೩೬.ಪಚ್ಚೆಕಡಗ ೩೭.ಹಿರಿಸೊಸೆ ೩೮.ಅಷ್ಟಕ್ಕೆ ಇಷ್ಟು ಇಷ್ಟಕ್ಕೆ ಇನ್ನೆಷ್ಟು ? ೩೯.ಸತ್ಯವಂತೆ ಚೆನ್ನಮ್ಮ ೪೦.ಆಕಳ ದಾನ-ತಂದೆ ಸ್ವರ್ಗ ೪೧.ಮದನರಾಜ ೪೨.ಮಗಳನ್ನೆ ಬಯಸಿದ ತಂದೆ ೪೩.ಸಾರಂಗರಾಯ ೪೪.ಬಳ್ಳಕ್ಕಿ ರಾಮ ೪೫.ಕಮಲಾದೇವಿ. ಹಂಪ ನಾಗರಾಜಯ್ಯ ಅವರ ಮುನ್ನುಡಿ, ಸಂಪಾದಕರ ಪೀಠಿಕೆ, ಇವೆ. ಹತ್ತು ಅನುಬಂಧಗಳಿವೆ: ೧.ಜಾನಪದ ಕಥಾ ವಿಭಜನೆ ೨.ಜಾನಪದ ಕಥೆಗಾರರು ೩.ಇಂಗ್ಲಿಷ್ ಪದ ಸೂಚಿ ೪.ಅಂಕಿತ ನಾಮ ಸೂಚಿ ೫.ಪ್ರಾಣಿ ಪದ ಸೂಚಿ ೬.ವಿಷಯ ಸೂಚಿ ೭.ಸಂಖ್ಯಾ ಸೂಚಿ ೮.ಜಾನಪದ ಶಬ್ದಕೋಶ ೯.ಮುಖ್ಯಾಶಯ ಸೂಚಿ ೧೦.ಗಾದೆಗಳು.

೨೦೨೭. ಸಂಸ್ಕೃತಿ ವಿಕಾಸ

ಲೇ: ನಂ.ತಪಸ್ವೀಕುಮಾರ್; ಪ್ರ: ಚೇತನ ಬುಕ್ ಹೌಸ್, ಅಂಜನಾದ್ರಿ, ರೇಣುಕಾಚಾರ್ಯ ದೇವಸ್ಥಾನದ ರಸ್ತೆ, ಲಕ್ಷ್ಮಿ ಟಾಕೀಸ್ ಹಿಂಭಾಗ, ಮೈಸೂರು-೫೭೦ ೦೨೪, ಮೊ.ಮು: ೨೦೦೦; ಪು: ೧೪+೩೦೪=೩೧೮; ಡಿಮ್ಮೈ ೧/೮

ಎರಡು ಭಾಗಗಳಲ್ಲಿ ಹನ್ನೆರಡು ಅಧ್ಯಾಯಗಳಿವೆ: **ಭಾಗ ಒಂದು: ಸಾಂಸ್ಕೃತಿಕ ಮಾನವಶಾಸ್ತ್ರ: ಅಧ್ಯಾಯ ೧: ಮಾನವಶಾಸ್ತ್ರ ಕ್ಷೇತ್ರ ಮಹತ್ವ:** ಪ್ರಸ್ತಾವನೆ, ಮಾನವಶಾಸ್ತ್ರ ಕ್ಷೇತ್ರದ ಮಹತ್ವ, ವಿವಿಧ ಮಾನವಿಕ ವಿಜ್ಞಾನಗಳಿಗೂ ಮಾನವಶಾಸ್ತ್ರಕ್ಕೂ ಇರುವ ಸಂಬಂಧ, ಮಾನವಶಾಸ್ತ್ರದ ವಿವಿಧ ಶಾಖೆಗಳು, ಮಾನವಶಾಸ್ತ್ರ ಮತ್ತು ಜಾನಪದಗಳಿಗಿರುವ ಭಾಂಧವ್ಯ. **ಅಧ್ಯಾಯ೨: ಸಂಸ್ಕೃತಿಯ ಪರಿಕಲ್ಪನೆ:** ಸಂಸ್ಕೃತಿಯ ಪರಿಕಲ್ಪನೆ, ಟೈಲರ್ ಮತ್ತು ಮ್ಯಾತ್ಯು ಆರ್ನಾಲ್ಡ್ ಪಂಥಗಳ ವ್ಯತ್ಯಾಸ, ಸಂಬಂಧ ವ್ಯಾಖ್ಯಾನ ಲೋಕರೂಢಿಗಳು, ಸಮಾಜ-ಸಂಸ್ಕೃತಿಗಳ ಸಂಬಂಧ, ಸಂಸ್ಕೃತಿ ಶಬ್ದಾರ್ಥ ಮೂಲದ ವ್ಯಾಖ್ಯಾನ, ವಿವರಣೆ, ಗುಸ್ಟಾವ್ ಕ್ಲೆಮ್ಮ್ ಕೊಡುಗೆ-ಈ ಎಲ್ಲಾ ಅಂಶಗಳ ಬಗೆಗೆ ಕ್ರೋಬರ್ ಮತ್ತು ಕ್ಲುಕ್ಹೊನ್ ಅವರ ವ್ಯಾಖ್ಯಾನ. **ಅಧ್ಯಾಯ೩:** ಸಂಸ್ಕೃತಿ ಪಂಥ ಪ್ರವರ್ತಕ ಟೈಲರ್‌ನ ಸಂಸ್ಕೃತಿ ಸೂತ್ರ ಮತ್ತು ಅದರ

ಅನನ್ಯ ಮಹತ್ವ, ಇತರ ಪ್ರಾಣಿವರ್ಗ ಮತ್ತು ಸಂಸ್ಕೃತಿ, ಸಾಂಸ್ಕೃತಿಕ ನಮೂನೆಗಳು, ದಾರ್ಶನಿಕ ಸಂಸ್ಕೃತಿ ಪಂಥ ಪ್ರವರ್ತಕ ಮ್ಯಾತ್ಯು ಆರ್ನಾಲ್ಡ್‌ನ ಸಂಸ್ಕೃತಿ ವಿವೇಚನೆ, ಡಿ.ವಿ.ಗುಂಡಪ್ಪನವರ ವ್ಯಾಖ್ಯಾನ, ಕೆಲವು ಆಂಗ್ಲ ಶಬ್ದಕೋಶಗಳಲ್ಲಿನ ಸಂಸ್ಕೃತಿ ಶಬ್ದಾರ್ಥ ವಿವೇಚನೆಯ ಸಾರ. **ಅಧ್ಯಾಯ೪: ಸಂಸ್ಕೃತಿಯ ಸ್ವರೂಪ (ನೇಚರ್ ಆಫ್ ಕಲ್ಚರ್):** ಸಂಸ್ಕೃತಿಯ ಸ್ವರೂಪ ವಿವರಣೆ, ಸಾಂಸ್ಕೃತಿಕ ವಿರೋಧಾಭಾಸಗುಣ ಲಕ್ಷಣಗಳು, ಸಾಂಸ್ಕೃತಿಕ ವೈವಿಧ್ಯ, ಸಾಮಾಜೀಕರಣ–ಸಂಸ್ಕೃತಿ ಶಿಕ್ಷಣ, ಸಾಂಸ್ಕೃತಿಕ ನಮೂನೆಗಳು, ಅಹಂ ಶ್ರೇಷ್ಠತಾ ಧೋರಣೆ; ಸಾಂಸ್ಕೃತಿಕ ಸಾಪೇಕ್ಷತೆ, ಸಾಪೇಕ್ಷ ಮೌಲ್ಯಗಳು, ೧೦೦% ಅಮೆರಿಕನ್ ಪ್ರಜೆ, ಸಂಸ್ಕೃತಿ ಪರಿವರ್ತನೆ, ಅನುಸಂಸ್ಕೃತೀಕರಣ, ಸಂಸ್ಕೃತಿ ಮತ್ತು ವ್ಯಕ್ತಿತ್ವ, ಸಂಸ್ಕೃತಿಯ ಒಟ್ಟು ನೋಟ. **ಅಧ್ಯಾಯ೫: ಸಂಸ್ಕೃತಿ ಮತ್ತು ನಾಗರೀಕತೆ:** ೧.ಸಂಸ್ಕೃತಿ ಮತ್ತು ನಾಗರೀಕತೆ, ಸಂಬಂಧ, ವ್ಯತ್ಯಾಸ, ನಾಗರೀಕತೆಯ ಇತಿಹಾಸ, ಬೇಟೆಗಾರಿಕೆ, ನಗರ ರಾಜ್ಯಗಳ ಹಿನ್ನೆಲೆ, ನಾಗರೀಕತೆಯ ಸ್ವರೂಪ, ಪ್ರಭಾವ, ಆಧುನೀಕರಣ ಇತ್ಯಾದಿ. ೨.ಜನಪದ ಹಾಗೂ ಶಿಷ್ಟ ಸಂಸ್ಕೃತಿ, ಸಂಬಂಧ ವ್ಯತ್ಯಾಸ, ಗ್ರಾಮೀಣ–ನಾಗರೀಕ ಸಾಮಾಜಿಕ ಸಾಂಸ್ಕೃತಿಕ ವ್ಯವಸ್ಥೆ, ಜನಪದ ಸಂಸ್ಕೃತಿಯ ಮುಖ್ಯ ಲಕ್ಷಣಗಳು, ಜಾನಪದರ ವಿಶ್ವಪರಿಕಲ್ಪನೆ. **ಅಧ್ಯಾಯ ೬: ಬಂಧುತ್ವ, ವಿವಾಹ ಮತ್ತು ಕುಟುಂಬ:** ಬಂಧುತ್ವ, ವಿವಾಹ ಮತ್ತು ಕುಟುಂಬ, ರಕ್ತಭಾಂಧವ್ಯ, ಬಂಧುತ್ವದ ಬಗೆಗಳು, ದೂರ ಇಡುವಿಕೆ, ಶಿಶುನಾಮ, ಸಂಬೋಧನೆ, ಸೋದರತ್ತೆ ಪ್ರಧಾನ ಬಾಂಧವ್ಯ ಇತ್ಯಾದಿ, ವಿವಾಹದ ಮುಖ್ಯ ಬಗೆಗಳು, ಒಳಬಾಂಧವ್ಯ–ಹೊರಬಾಂಧವ್ಯ, ವಿವಾಹಕ್ರಮ, ಮರುಮದುವೆ ಪದ್ಧತಿ, ಕುಟುಂಬದ ಸೂತ್ರ, ಲಕ್ಷಣಗಳು, ಅವಿಭಕ್ತ–ವಿಭಕ್ತ ಕುಟುಂಬ ಪದ್ಧತಿ, ಪಿತೃ ಪ್ರಧಾನ–ಮಾತೃ ಪ್ರಧಾನ ಕೌಟುಂಬಿಕ ವ್ಯವಸ್ಥೆ, ಇತ್ಯಾದಿ. **ಅಧ್ಯಾಯ೭: ಧರ್ಮ, ಮಂತ್ರ, ಮಾಟ, ವಿಜ್ಞಾನ:** ಧರ್ಮದ ಸ್ವರೂಪ, ಮಹತ್ವ, ಧಾರ್ಮಿಕ ನಂಬಿಕೆಯ ಬಗೆಗಳು, 'ಮನಶಕ್ತಿ' ಪುರಾಣಗಳು, ಧಾರ್ಮಿಕಾಚರಣೆಗಳು, ಕುಲಚಿಹ್ನಾರಾಧನೆ, ಭಾರತದಲ್ಲಿ ಕುಲಚಿಹ್ನಾರಾಧನೆಯ ವಿಜ್ಞಾನ. **ಭಾಗಎರಡು: ಭೌತಮಾನವಶಾಸ್ತ್ರ: ಮನುಕುಲದ ಜನಾಂಗಗಳು:** ಪ್ರಸ್ತಾವನೆ, ಜನಾಂಗಿಕ ಪರಿಕಲ್ಪನೆ, ಪಳೆಯುಳಿಕೆಗಳ ಸಾಕ್ಷ್ಯಾಧಾರ, ಜನಾಂಗ ಶಬ್ದದ ಅರ್ಥವ್ಯಾಪ್ತಿ, ಪರಿಮಿತಿ: ಜನಾಂಗದ ಸೂತ್ರಗಳು, ವರ್ಗೀಕರಣದ ಇತಿಹಾಸ, ವಿಶ್ವದ ಪಂಚ ಜಾನಾಂಗಿಕ ವರ್ಗಗಳು, ಕೂನ್ ವಿಶ್ಲೇಷಣೆ: ಕಕೇಷಿಯ ಜನಾಂಗದ ಮುಖ್ಯ ಲಕ್ಷಣಗಳು, ಮಂಗೋಲ ಜನಾಂಗಿಕರ ಮುಖ್ಯ ಲಕ್ಷಣಗಳು, ನೀಗ್ರೋ ಜನಾಂಗಿಕರ ಲಕ್ಷಣಗಳು, ಆಸ್ಟ್ರೇಲಿಯ ಜನಾಂಗಿಕರು ಇತ್ಯಾದಿ. **ಅಧ್ಯಾಯ೮: ಕಕೇಷಿಯ ಜನಾಂಗ:** ಕಕೇಷಿಯ ಜನಾಂಗ, ಅದರ ಮುಖ್ಯ ಲಕ್ಷಣ, ಉಪಜನಾಂಗಗಳು, ಭಾರತೀಯ ಉಪಜನಾಂಗ, ಭಾರತೀಯ ಆರ್ಯರು, ದ್ರಾವಿಡರು. **ಅಧ್ಯಾಯ೯: ಮಂಗೋಲ ಜನಾಂಗ:** ಮಂಗೋಲ ಜನಾಂಗ, ಅದರ ಜನಾಂಗಿಕ ಲಕ್ಷಣ, ಹಿನ್ನೆಲೆ, ದಾಕ್ಷಿಣಾತ್ಯ ಪಾಶ್ಚಾತ್ಯ ಮಂಗೋಲರ ಸ್ವರೂಪ ವಿವರಣೆ. **ಅಧ್ಯಾಯ೧೦: ನೀಗ್ರೋಯ್ಡ್ ಜನಾಂಗ:** ನೀಗ್ರೋ ಜನಾಂಗ, ಆಫ್ರಿಕೆಯ ಭೌಗೋಳಿಕ ಹಿನ್ನೆಲೆ, ಕಾಂಗೋ,

ಕಪೋ ಮತ್ತು ಬುಷ್ಮೆನ್‌ಗಳ ವಿವರಣೆ, ನೈಜ ನೀಗ್ರೋಗಳು. **ಅಧ್ಯಾಯ೧೧: ಆಸ್ಟ್ರಲಾಯ್ಡ್-ಆಸ್ಟ್ರೇಲಿಯ ಜನಾಂಗ:** ಆಸ್ಟ್ರೇಲಿಯ ಜನಾಂಗ, ಶಾರೀರಿಕ ಲಕ್ಷಣಗಳು, ಅಂಡಮಾನ್ ದ್ವೀಪವಾಸಿಗಳ ವರ್ಣನೆ ಇತ್ಯಾದಿ. ಅಧ್ಯಾಯ೧೨: ವಿಶ್ವೈಕ ಜನಾಂಗ: ವಿಶ್ವೈಕ ಜನಾಂಗ ತತ್ವ, 'ಜಾನಾಂಗಿಕ ಪರಿಶುದ್ಧತೆ'ಯ ಅಪಕಲ್ಪನೆ, ಮಾನವ ಜನಾಂಗಗಳ ಭವಿಷ್ಯ ಇತ್ಯಾದಿ ವಿಶ್ವಜನಾಂಗಗಳ ಕೋಷ್ಟಕಗಳು. ಅನುಬಂಧದಲ್ಲಿ ಎರಡು ಕೋಷ್ಟಕಗಳಿವೆ. ದೇಜಗೌ ಅವರ ಮುನ್ನುಡಿ ಇದೆ.

೨೦೨೮. ಸಂಸ್ಕೃತಿ ಸಿರಿ

ಲೇ: ಕೆ.ಚಿನ್ನಪ್ಪಗೌಡ; ಪ್ರ: ಮದಿಪು ಪ್ರಕಾಶನ, ಮಂಗಳಗಂಗೋತ್ರಿ; ಮೊ.ಮು. ೨೦೦೩; ಪು: ೩೮೪; ಡಿಮೈ ೧/೮

೨೨ ಲೇಖನಗಳ ಸಂಕಲನ: ೧.ಸಿರಿ–ಅನನ್ಯ ಆಯಾಮಗಳು ೨.ಭೂತಾರಾಧನೆಯ ಚಲನಶೀಲತೆ ೩.ಸಸ್ಯ ಮತ್ತು ಜನಪದ ಧರ್ಮ– ಸಂಬಂಧ ಮತ್ತು ತಾತ್ತ್ವಿಕತೆ ೪.ಕರ್‌ಂಗೋಲು ಕುಣಿತ –ಪಠ್ಯ, ಪ್ರದರ್ಶನ ಮತ್ತು ಅರ್ಥ ೫.ತುಳು ಜನಪದ ಮಾಹಾಕಾವ್ಯಗಳು –ಅಧ್ಯಯನದ ನೆಲೆಗಳು ಮತ್ತು ಪ್ರವೃತ್ತಿಗಳು ೬.ಜಾನಪದ ಕ್ಷೇತ್ರಕಾರ್ಯ –ಅಧ್ಯಯನದ ಒಲವುಗಳು ೮.ಜನಪ್ರಿಯ ಧರ್ಮ –ದೇಶೀಯ ಚಿಂತನೆಗಳು ೯.ಭೂತಾರಾಧನೆ –ವೇಷಭೂಷಣಗಳಲ್ಲಿ ಕರಕೌಶಲ್ಯ ೧೦.ತುಳುವಿನ ಚಾಲಾಟ – ಕನ್ನಡದ ಪಗರಣ ೧೧.ಮಲೆಕುಡಿಯ ಜನಾಂಗ: ಐತಿಹಾಸಿಕ – ಸಾಂಸ್ಕೃತಿಕ ವಿಶ್ಲೇಷಣೆ ೧೨.ಕರಾವಳಿ ಜಾನಪದ ಅಧ್ಯಯನದ ಆಶಯಗಳು ೧೩.ಪಾಡ್ದನಗಳ ಪಠ್ಯ ಪ್ರದರ್ಶನ –ಅಧ್ಯಯನಕಾರ್ತಿ ಡಾ. ಹೈಡ್ರೂನ್ ಬ್ರೂಕ್ನರ್ ೧೪.ಪ್ರದೇಶ ಜಾನಪದ: ಅಧ್ಯಯನ ಹೊಸ ಸಾಧ್ಯತೆಗಳು ೧೫.ಯಕ್ಷಗಾನ –ದೃಶ್ಯ ಮಾಧ್ಯಮಗಳು ೧೬.ಜನಪದ ಮಾಧ್ಯಮಗಳಾಗಿ ಕುಣಿತಗಳು ೧೭.ಅರಾಧನಾ ರಂಗಭೂಮಿ –ಅನ್ವಯಿಕತೆಯ ಸಾಧ್ಯತೆಗಳು ೧೮.ಪ್ರಾದೇಶಿಕ ಇತಿಹಾಸ ಮತ್ತು ಜಾನಪದ ೧೯.ಫಿನ್ನಿಷ್ –ಇಂಡಿಯಾ ಜಾನಪದ ದಾಖಲಾತಿ ಯೋಜನೆ ೨೦.ಪ್ರಾದೇಶಿಕ ಜಾನಪದ–ಸಾಂಸ್ಕೃತಿಕ ಅನನ್ಯತೆ ೨೧.ಜನಪದ ಕ್ರೀಡೆಗಳು, ಆಟಗಳು –ಪ್ರಾದೇಶಿಕ ಸಂಸ್ಕೃತಿಯ ಸಂಘರ್ಷ ಮತ್ತು ಸಮನ್ವಯದ ನೆಲೆಗಳು ೨೨.ಭಾವೈಕ್ಯದ ನೆಲೆ– ಕೆಲವು ಟಿಪ್ಪಣಿಗಳು.

೨೦೨೯. ಸಚಿತ್ರ ಗಿಳೀ ಹಾಡು ಮತ್ತು ಅರ್ಜುನನ ಜೋಗಿ ಹಾಡು

ಲೇ: ನಂಜುಂಡಪಂಡಿತರಿಂದ ರಚಿಸಲ್ಪಟ್ಟು ಪಿ.ಆರ್.ಕರಿಬಸವಶಾಸ್ತ್ರಿಗಳಿಂದ ಪರಿಶೋಧಿಸಲ್ಪಟ್ಟಿದೆ; ಪ್ರ: ಬಿ.ವಿ ಪಿನಾಕಪಾಣಿ, ಶ್ರೀ ವಾಣೀ ವಿಳಾಸ ಬುಕ್ ಡಿಪೋ, ಮೈಸೂರು; ಮೊ.ಮು: ೧೯೬೭; ಪು: ೧೨೪; ಕ್ರೌನ್ ೧/೮

ತಾತ್ಪರ್ಯಸಹಿತ ಎಂಬ ಅಡಿಬರಹವು ಒಳಗೆ ಗಿಳೀ ಹಾಡಿನೊಂದಿಗೇ ಸೇರಿದೆ. ಒಟ್ಟು ಆರು ಅಧ್ಯಾಯಗಳಿದ್ದು ಒಂದನೆಯ ಅಧ್ಯಾಯವು ಮಾತ್ರ ಗಿಳೀ ಹಾಡನ್ನು ಒಳಗೊಂಡಿದೆ.

ಎರಡನೆಯ ಅಧ್ಯಾಯದಿಂದ ಆರನೆಯ ಅಧ್ಯಾಯದವರೆಗೆ ಐದು ಅಧ್ಯಾಯಗಳೂ ತಾತ್ಪರ್ಯ ಸಹಿತ ಅರ್ಜುನನ ಜೋಗಿ ಹಾಡನ್ನು ಒಳಗೊಂಡಿವೆ.

೨೦೩೦. ಸಚಿತ್ರ ಗೋವಿನ ಕಥೆ

ಲಭ್ಯ ಪ್ರತಿಯಲ್ಲಿ ಯಾವ ವಿವರಗಳೂ ಇಲ್ಲ;

೧೩೫ ಪದ್ಯಗಳಿವೆ.

೨೦೩೧. ಸಣ್ಣಾಟಗಳು

ಸಂ: ಬಸವರಾಜ ಮಲಶೆಟ್ಟಿ; ಪ್ರ: ಕರ್ನಾಟಕ ಸರ್ಕಾರ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕನ್ನಡ ಭವನ, ಜೆ, ಸಿ.ರಸ್ತೆ, ಬೆಂಗಳೂರು-೫೬೦ ೦೦೨; ಮೊ.ಮು.೨೦೦೬; ಪು: ೪೦+೬೧೦=೬೫೦; ಡಿಮ್ಮೆ ೧/೮

ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಮಾಲೆಯ ೨೦ನೆಯ ಸಂಪುಟ. ಇದರಲ್ಲಿ ಎಂಟು ಸಣ್ಣಾಟಗಳಿವೆ. ೧.ಸಂಗ್ಯಾ ಬಾಳ್ಯಾ ೨.ಬಸವಂತ-ಬಲವಂತ ೩.ಕಟ್ಟಿ ಚೆನ್ನ ೪.ಅರಬರಾಟ ೫.ತಿರುನೀಲಕಂಠ ೬.ಅಲ್ಲಮಪ್ರಭು ೭.ಅಕ್ಕಮಹಾದೇವಿ ೮.ಚಂದ್ರಶಿರೋಣಿ. ಹೆಚ್.ಡಿ. ಕುಮಾರಸ್ವಾಮಿ ಅವರ ಹೊನ್ನುಡಿ, ಹಿ.ಶಿ. ರಾಮಚಂದ್ರೇಗೌಡ ಅವರ ಪೂರ್ವಾಪರ ಎಂಬ ಅಧ್ಯಕ್ಷರ ಮಾತು, ಸಂಪಾದಕರ ಪ್ರಸ್ತಾವನೆ, ಕೊನೆಯಲ್ಲಿ ಪದಕೋಶ ಇವೆ.

೨೦೩೨. ಸಣ್ಣಾಟಗಳು

ಸಂ: ಚೆನ್ನಣ್ಣ ವಾಲೀಕರ; ಪ್ರ: ಕರ್ನಾಟಕ ಸಾಹಿತ್ಯ ಅಕಾಡಿಮ್ಮೆ, ನೃಪತುಂಗ ರಸ್ತೆ ಬೆಂಗಳೂರು-೫೬೦ ೦೦೧; ಮೊ.ಮು: ೧೯೯೮; ಪು: ೧೬+೧೦೦=೧೧೬

ಏಳು ಸಣ್ಣಾಟಗಳ ಸಂಕಲನ: ೧.ಭೂಕೈಲಾಸ ೨.ಚಂದ್ರಶಿರೋಮಣಿ ೩.ಧರ್ಮದೇವತೆ ೪.ಸಂಗ್ಯಾ-ಬಾಳ್ಯಾ ೫.ಶ್ರೀಕೃಷ್ಣಪಾರಿಜಾತ ೬.ರಾಧಾನಾಟ ೭.ಅರಬರಾಟ. ಪ್ರಸ್ತಾವನೆ ಇದೆ. ಅನುಬಂಧದಲ್ಲಿ ಅಟ್ಟಹಾಕುವ ವಿಧಾನ, ವಾದ್ಯಗಳು, ಹಿಮ್ಮೇಳ-ಮುಮ್ಮೇಳ, ಪ್ರೇಕ್ಷಕರು, ವೇಷಭೂಷಣ ಮತ್ತು ಮಾತು, ಸಮಯ, ಆಡುವ ಕ್ರಮ, ಈ ವಿವರಗಳಿವೆ.

೨೦೩೩. ಸತ್ಯಭೋಜರಾಜ

ಸಂ: ರಾಜೇಗೌಡ ಹೊಸಹಳ್ಳಿ; ಪ್ರ: ಕಂಸಾಳೆ ಪ್ರಕಾಶನ, ಮೈಸೂರು; ಮೊ.ಮು: ೧೯೭೪; ಪು: ೧೬+೪೮=೬೪ ಕ್ರೌನ್ ೧/೮

ಒಂದು ಜನಪದ ಕಥನಗೀತೆ. ಈ ಕಾವ್ಯವನ್ನು ಹಾಡಿದ ದಿವಂಗತ ರಂಗಪ್ಪ ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲ್ಲೂಕಿನ ಕಡವಿನಕೋಟೆಯಲ್ಲಿ ವಾಸವಿದ್ದವನು ಎಂಬ

ಮಾತನ್ನು ಸಂಪಾದಕರು ತಮ್ಮ ಅರಿಕೆಯ ಪುಟದಲ್ಲಿ ಹೇಳಿದ್ದಾರೆ. ರಾಗೌ ಅವರ ಮುನ್ನುಡಿ ಇದೆ. ಲಭ್ಯ ಪ್ರತಿಯಲ್ಲಿ ಕೊನೆಯ ಕೆಲವು ಪುಟಗಳು ಇಲ್ಲ.

೨೦೩೪. ಸತ್ಯಮೇವ ಜಯತೆ ಮತ್ತು ಇತರ ಕಥೆಗಳು

ಲೇ: ನವಕಾನ ಶಂಕರನಾರಾಯಣ ಭಟ್; ಪ್ರ: ಗೀತಾ ಪ್ರಕಾಶನ, ಶ್ರೀರಾಮಪೇಟೆ, ಕಾಸರಗೋಡು, ದಕ್ಷಿಣ ಭಾರತ; ಮೊ.ಮು. ೧೯೭೩; ಪು: ೨+೪೨=೪೪; ಕ್ರೌನ್ ೧/೮

ಒಂಬತ್ತು ಕಥೆಗಳ ಸಂಕಲನ. "ಟೋಲ್‌ಸ್ಟಾಯಿಯ ಕಥೆಗಳನ್ನೂ ಇತರ ಹಲವು ಭಾಷೆಗಳಲ್ಲಿರುವ ಕೆಲವು ಜಾನಪದ ಕಥೆಗಳನ್ನೂ ಕನ್ನಡಿಸಿ" ಇಲ್ಲಿ ಕೊಟ್ಟಿರುವುದಾಗಿ ಲೇಖಕರು ಹೇಳಿಕೊಂಡಿದ್ದಾರೆ. ಗುಜರಾತ್, ಕರ್ನಾಟಕ, ಚೀನಾ, ಭಾಷೆಗಳ ಮೂರು ಜನಪದ ಕಥೆಗಳೂ ಇಲ್ಲಿವೆ.

೨೦೩೫. ಸಮಗ್ರ ಕನ್ನಡ ಗಾದೆಗಳು– ಸಂಪುಟ ಒಂದು

ಸಂ: ಎಂ.ನಂಜಯ್ಯ ಹೊಂಗನೂರು; ಪ್ರ: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–೫೭೦ ೦೦೬; ಮೊ.ಮು: ೨೦೧೨; ಪು:೩೪+೪೩೮=೪೭೨; ಡಿಮ್ಮೈ ೧/೮

೬೫೦೭ ಗಾದೆಗಳ ಸಂಕಲನ. ಕೆ.ಎನ್.ಗಂಗಾನಾಯಕ್ ಅವರ ಪ್ರಧಾನ ಸಂಪಾದಕರ ಮಾತು ಎಂಬ ಮುನ್ನುಡಿ, ಎಂ.ನಂಜಯ್ಯಹೊಂಗನೂರು ಅವರ ಸಂಪಾದಕರ ನುಡಿ ಎಂಬ ಪ್ರಸ್ತಾವನೆ, ಕೊನೆಯಲ್ಲಿ ಅರ್ಥಕೋಶ, ಸಂಪುಟಕ್ಕೆ ಬಳಸಿಕೊಂಡಿರುವ ಗಾದೆಗಳ ಸಂಗ್ರಹಗಳು, ಎಂಬ ಅನುಬಂಧಗಳು ಇವೆ.

೨೦೩೬. ಸಮಗ್ರ ಕನ್ನಡ ಗಾದೆಗಳು ಸಂಪುಟ ಎರಡು

ಸಂ.ಎಂ.ನಂಜಯ್ಯ ಹೊಂಗನೂರು; ಪ್ರ.ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–೫೭೦ ೦೦೬; ಮೊ.ಮು: ೨೦೧೨; ಪು:೩೪+೫೨೪=೫೫೮; ಡಿಮ್ಮೈ ೧/೮

೭೪೬೮ ಗಾದೆಗಳ ಸಂಕಲನ. ಕೆ.ಎನ್.ಗಂಗಾನಾಯಕ್ ಅವರ ಪ್ರಧಾನ ಸಂಪಾದಕರ ಮಾತು ಎಂಬ ಮುನ್ನುಡಿ, ಎಂ.ನಂಜಯ್ಯಹೊಂಗನೂರು ಅವರ ಸಂಪಾದಕರ ನುಡಿ ಎಂಬ ಪ್ರಸ್ತಾವನೆ, ಕೊನೆಯಲ್ಲಿ, ಅರ್ಥಕೋಶ, ಸಂಪುಟಕ್ಕೆ ಬಳಸಿಕೊಂಡಿರುವ ಗಾದೆಗಳ ಸಂಗ್ರಹಗಳು, ಎಂಬ ಅನುಬಂಧಗಳು ಇವೆ.

೨೦೩೭. ಸಮಗ್ರ ಕನ್ನಡ ಗಾದೆಗಳು ಸಂಪುಟ ಮೂರು

ಸಂ.ಜಯಲಕ್ಷ್ಮೀ ಸೀತಾಪುರ; ಪ್ರ.ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-೫೭೦ ೦೦೬; ಮೊ.ಮು: ೨೦೧೨; ಪು:೨೨+೫೧೦=೫೩೨ ಡಿಮ್ಮೈ ೧/೮

೭೮೯೬ ಗಾದೆಗಳ ಸಂಕಲನ. ಕೆ.ಎನ್.ಗಂಗಾನಾಯಕ್ ಅವರ ಪ್ರಧಾನ ಸಂಪಾದಕರ ಮಾತು ಎಂಬ ಮುನ್ನುಡಿ, ಜಯಲಕ್ಷ್ಮೀ ಸೀತಾಪುರ ಅವರ ಸಂಪಾದಕರ ನುಡಿ ಎಂಬ ಪ್ರಸ್ತಾವನೆ, ಕೊನೆಯಲ್ಲಿ ಅರ್ಥಕೋಶ, ಸಂಪುಟಕ್ಕೆ ಬಳಸಿಕೊಂಡಿರುವ ಗಾದೆಗಳ ಸಂಗ್ರಹಗಳು, ಎಂಬ ಅನುಬಂಧಗಳು ಇವೆ.

೨೦೩೮. ಸಮಗ್ರ ಕನ್ನಡ ಗಾದೆಗಳು ಸಂಪುಟ ನಾಲ್ಕು

ಸಂ.ಜಯಲಕ್ಷ್ಮೀ ಸೀತಾಪುರ; ಪ್ರ.ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-೫೭೦ ೦೦೬; ಮೊ.ಮು: ೨೦೧೨; ಪು: ೨೦+೪೨೦=೪೪೦ ಡಿಮ್ಮೈ ೧/೮

೬೪೪೫ ಗಾದೆಗಳ ಸಂಕಲನ. ಕೆ.ಎನ್.ಗಂಗಾನಾಯಕ್ ಅವರ ಪ್ರಧಾನ ಸಂಪಾದಕರ ಮಾತು ಎಂಬ ಮುನ್ನುಡಿ, ಜಯಲಕ್ಷ್ಮೀ ಸೀತಾಪುರ ಅವರ ಸಂಪಾದಕರ ನುಡಿ ಎಂಬ ಪ್ರಸ್ತಾವನೆ, ಕೊನೆಯಲ್ಲಿ ಅರ್ಥಕೋಶ, ಸಂಪುಟಕ್ಕೆ ಬಳಸಿಕೊಂಡಿರುವ ಗಾದೆಗಳ ಸಂಗ್ರಹಗಳು, ಎಂಬ ಅನುಬಂಧಗಳು ಇವೆ.

೨೦೩೯. ಸಮಗ್ರ ಡಪ್ಪಿನಾಟ ಸಂಪುಟ

ಲೇ/ಪ್ರ: ಚೆನ್ನಣ್ಣ ವಾಲೀಕಾರ; ಪ್ರ: ದಲಿತ ಬಂಡಾಯ ಸಾಹಿತ್ಯ ಪ್ರಕಾಶನ ಕೇಂದ್ರ, ಬಡೇಪೂರ ಕಾಲೋನಿ, ವಿಶ್ವವಿದ್ಯಾಲಯ ರಸ್ತೆ, ಗುಲಬರ್ಗಾ-೫೮೫ ೧೦೫; ಮೊ.ಮು: ೨೦೦೩; ಪು: ೬೮+೫೫೪=೬೨೨; ಡಿಮ್ಮೈ ೧/೮

ಡಪ್ಪನಾಟಗಳ ಗುಚ್ಛ: ೧.ಸೋಮ್ರಾಯ್ ಭೀಮ್ರಾಯ್ನ ಡಪ್ಪಿನಾಟ ೨.ಅಯ್ಯ ಮಾಡಿದ್ದು ಕಯ್ಯ ಮ್ಯಾಲೆಂಬ ಡಪ್ಪಿನಾಟ ೩.ಸಂಗ್ಯಾಬಾಳ್ಯಾ ಬರೆದ ಪತ್ತಾರ ಮಾಸ್ತರನ ಡಪ್ಪಿನಾಟ ೪.ಕಲೇವಾಲಾ ಡಪ್ಪಿನಾಟ ೫.ಇರುವೆ ಮತ್ತು ಹಾವಿನ ಡಪ್ಪಿನಾಟ ೬.ಸಮಗಾರ ಸಂಗಪ್ಪನ ಡಪ್ಪಿನಾಟ ೭.ಕುನ್ನೂರ ಲಾಡಲೆ ಪಟೇಲನ ಡಪ್ಪಿನಾಟ ೮.ಘತ್ತರಗಿ ಭೀಮಶಾ ಭಾಗಮ್ಮನ ಡಪ್ಪಿನಾಟ ೯.ದಿಗ್ಗಾಂವ ನಾಯ್ಕೋಡಿ ಮಹದೇವಪ್ಪನ ಡಪ್ಪಿನಾಟ ೧೦.ಆಂದೇಲಿ ಮೀನಗಾರ ಮಾಣಿಕನ ಡಪ್ಪಿನಾಟ ೧೧.ಕೋಳಕೂರ ಧೋಂಡಿಬಾನ ಡಪ್ಪಿನಾಟ. ಪ್ರಾರಂಭದಲ್ಲಿ ಹಾಗೂ ಅನುಬಂಧದಲ್ಲಿ ಹಲವರ ಬರಹಗಳಿವೆ. ಪ್ರಾರಂಭದಲ್ಲಿ, ಲಿಂಗದೇವರು ಹಳೆಮನೆ, ಸೋಮಶೇಖರ ಇಮ್ರಾಪುರ, ಆರ್. ಶೇಷಶಾಸ್ತ್ರೀ, ಶ್ರೀಕೃಷ್ಣಭಟ್ ಅರ್ತಿಕಜೆ, ಬಸವರಾಜ ನೆಲ್ಲೀಸರ, ತಾಳ್ತಜೆ ವಸಂತಕುಮಾರ್, ತೀ.ನಂ. ಶಂಕರನಾರಾಯಣ, ರಾಜಪ್ಪ ದಳವಾಯಿ, ಅನುಬಂಧದಲ್ಲಿ, ಮುದೇನೂರ ಸಂಗಣ್ಣ, ಬಿ. ಕೃಷ್ಣಮೂರ್ತಿ,

ರಹಮತ್ ತರೀಕೆರೆ. ಇವರ ಮಾತುಗಳೆಲ್ಲ ಮುಗಿದಮೇಲೆ, ಕೊನೆಯಲ್ಲಿ ಲೇಖಕರ ಪ್ರಸ್ತಾವನೆ ಇದೆ.

೨೦೪೦. ಸಮಗ್ರ ಲಾವಣಿಗಳು

ಸಂ: ಟಿ.ಎಸ್. ರಾಜಪ್ಪ; ಪ್ರ: ಸಾಗರ್ ಪ್ರಕಾಶನ, ೬೯೫, ೧೦ನೇ ಮುಖ್ಯರಸ್ತೆ, ೮೦ ಅಡಿ ರಸ್ತೆ, ವಿನಾಯಕ ಬಡಾವಣೆ, ನಾಗರಬಾವಿ ೨ನೇ ಹಂತ, ಬೆಂಗಳೂರು–೫೬೦ ೦೭೨; ಮೊ.ಮು.೨೦೧೨; ಪು: ೬೮೦; ಡೆಮ್ಮಿ ೧/೮

ಈ ಸಮಗ್ರ ಕೃತಿಯಲ್ಲಿ ಈ ಹಿಂದೆ ಪ್ರಕಟವಾಗಿದ್ದ ನಾಲ್ಕು ಸಂಕಲನಗಳಿವೆ: ೧.ಬೆಳಗಾಂ ಜಿಲ್ಲೆಯ ಲಾವಣಿಗಳು (೧೯೭೩): ಇದರಲ್ಲಿ ೨೧ ಲಾವಣಿಗಳಿವೆ. ೨.ಕೆರೆ ಹೊನ್ನಮ್ಮ ಮತ್ತು ಇತರ ಲಾವಣಿಗಳು (೧೮೭೪): ಇದರಲ್ಲಿ ೯ ಲಾವಣಿಗಳಿವೆ. ೩.ರಾಯಚೂರು ಜಿಲ್ಲೆಯ ಜನಪದ ಗೀತೆಗಳು (೧೯೭೬): ಇದರಲ್ಲಿ ೬ ಬಗೆಯ ಹಾಡುಗಳಿವೆ: ೧.ಎಲ್ಲಮ್ಮನ ಗೀತೆಗಳು ೨.ಡೊಳ್ಳಿನ ಪದಗಳು ೩.ಮೊಹರಂ ಪದಗಳು ೪.ಲಾವಣಿಗಳು ೫.ಹಂತಿ ಪದಗಳು ೬.ಹೆಣ್ಣು ಮಕ್ಕಳ ಪದಗಳು. ೪.ಬಳ್ಳಾರಿ ಜಿಲ್ಲೆಯ ಜನಪದ ಗೀತೆಗಳು (೧೯೮೬): ಇದರಲ್ಲಿ ನಾಲ್ಕು ಭಾಗಗಳಿವೆ: ೧ದೇವರುಗಳು ೨.ಸಂಬಂಧಗಳು ೩.ಶಿಶುಪ್ರಾಸಗಳು ೪.ಕಥನಗೀತೆಗಳು. ಪ್ರತಿಯೊಂದು ಸಂಕಲನಕ್ಕೂ ಹಾ.ಮಾ.ನಾಯಕ ಅವರ ಮುನ್ನುಡಿ, ಜೀ.ಶಂ. ಪರಮಶಿವಯ್ಯ ಅವರ ವಿಭಾಗ ಸಂಪಾದಕರ ಮಾತು, ಅರ್ಥಕೋಶ, ಸಂಗ್ರಹ ವಿವರ ಇವೆ.

೨೦೪೧. ಸಮಗ್ರ ಯಕ್ಷಗಾನ

ಸಂ: ಕು.ಶಿ. ಹರಿದಾಸ ಭಟ್ಟ; ಪ್ರ: ರಾಷ್ಟ್ರಕವಿ ಗೋವಿಂದ ಪೈ ಸ್ಮಾರಕ ಸಂಶೋಧನ ಕೇಂದ್ರ, ಉಡುಪಿ ಪರವಾಗಿ ಗೀತಾ ಬುಕ್ ಹೌಸ್, ಪ್ರಕಾಶಕರು, ಮೈಸೂರು; ಮೊ.ಮು. ೧೯೭೮; ಪು: ೨೦೮; ಡೆಮ್ಮಿ ೧/೮

ಇದೊಂದು ಸಾಂದರ್ಭಿಕ ಗ್ರಂಥ ಎಂಬ ಹೇಳಿಕೆ ಸಂಪಾದಕರ ಮಾತಿನಲ್ಲಿದೆ. ವಿವಿಧ ಲೇಖಕರು ಬರೆದಿರುವ ೨೧ ಲೇಖನಗಳನ್ನು ಎರಡು ಭಾಗಗಳಾಗಿ ವಿಂಗಡಿಸಲಾಗಿದೆ. **ಭಾಗ ಒಂದು: ಪರಂಪರೆ:** ೧.ಯಕ್ಷಗಾನ ಬಯಲಾಟ –ಶಿವರಾಮ ಕಾರಂತ ೨.ಬಯಲಾಟದ ವೇಷಭೂಷಣಗಳು – ಶಿವರಾಮ ಕಾರಂತ ೩.ಯಕ್ಷಗಾನ ಪರಂಪರೆ – ಬಡಗುತಿಟ್ಟು –ಬೈಕಾಡಿ ವೆಂಕಟಕೃಷ್ಣರಾವ್ ೪.ಉತ್ಕೃಷ್ಟ ಕಲೆ – ಗುಂಡ್ಮಿ ಚಂದ್ರಶೇಖರ ಐತಾಳ ೫.ಯಕ್ಷಗಾನ ಗೊಂಬೆ ಆಟ – ಕೆ.ಎಸ್.ಉಪಾಧ್ಯ ೬.ತಾಳಮದ್ದಲೆ: ಒಂದು ಅವಲೋಕನ – ಎಂ. ಪ್ರಭಾಕರ ಜೋಶಿ ೭.ಯಕ್ಷಗಾನ ರಂಗಸ್ಥಳ – ತೆಂಕುತಿಟ್ಟು – ಕೆ.ಎಂ. ರಾಘವನ್ ನಂಬಿಯಾರ್ ೮.ಯಕ್ಷಗಾನದಲ್ಲಿ ಔಚಿತ್ಯಪ್ರಜ್ಞೆ – ಕು.ಶಿ. ಹರಿದಾಸ ಭಟ್ಟ ೯.ಯಕ್ಷಗಾನ ನಡೆದು ಬಂದ ದಾರಿ – ಕು.ಶಿ. ಹರಿದಾಸ ಭಟ್ಟ ೧೦.ಯಕ್ಷಗಾನಕ್ಕೊಂದು ತರಬೇತಿ ಕೇಂದ್ರ – ಎನ್.ಎಸ್. ರಾಮಪ್ರಸಾದ ೧೧.ಯಕ್ಷಗಾನ: ಒಂದು ವಿವೇಚನೆ – ಕೆ. ಶ್ರೀನಿವಾಸ ಉಡುಪ ೧೨.ಒಂದು ಶ್ಲಾಘ್ಯ ಪ್ರಯತ್ನ – ದೇ.

ಜವರೇಗೌಡ ೧೩.ಗೋಷ್ಠಿ ಮತ್ತು ಕೇಂದ್ರಗಳ ಗೊತ್ತುಗುರಿ – ಶಿವರಾಮ ಕಾರಂತ. **ಭಾಗ ಎರಡು: ಪ್ರಯೋಗ:** ೧೪.ಯಕ್ಷಗಾನದಲ್ಲಿ ಸಂಪ್ರದಾಯದ ಇತಿ–ಮಿತಿ–ಶಿವರಾಮ ಕಾರಂತ. ೧೫.ಯಕ್ಷರಂಗದ ವೇಷಭೂಷಣಗಳು – ಶಿವರಾಮ ಕಾರಂತ ೧೬.ಯಕ್ಷಗಾನಕ್ಕೆ ಹೊಸ ಕಲ್ಪನೆ: ಯಕ್ಷರಂಗ –ವಕ್ವಾಡಿ ಶ್ರೀನಿವಾಸ ಭಟ್ಟ ೧೭.ಕಾರಂತ ಪ್ರಜ್ಞೆ ಮತ್ತು ಯಕ್ಷರಂಗ – ಜಿ.ಕೆ. ಐತಾಳ ೧೮.ವೈಶಿಷ್ಟ್ಯ ಪೂರ್ಣ ಯಕ್ಷರಂಗ – ಕೆ. ಈಶ್ವರಯ್ಯ ೧೯.ಮಕ್ಕಳ ಮೇಳ – ಕಾರ್ಕಡ ಶ್ರೀನಿವಾಸ ಉಡುಪ ೨೦.ಬದಲಿನ ಹುದಲಿನಲ್ಲಿ – ಕು.ಶಿ. ಹರಿದಾಸ ಭಟ್ಟ ೨೧.ಕಲೆ ಮತ್ತು ಕಸುಬು – ಕು.ಶಿ. ಹರಿದಾಸ ಭಟ್ಟ, ವಿ. ಸೀತಾರಾಮಯ್ಯ, ಅಮೃತ ಸೋಮೇಶ್ವರ, ಅವರುಗಳ ಉಲ್ಲೇಖಗಳಿವೆ.

೨೦೪೨. ಸಮನ್ವಯ

ಲೇ: ಶಿವರಾಮು ಕಾಡನಕುಪ್ಪೆ; ಪ್ರ: ಸಾಹಿತ್ಯ ಸುಮ, ಮೈಸೂರು–೯; ಮೊ.ಮು: ೧೯೭೬; ಪು: ೧೬+೮೦=೯೬; ಡಿಮ್ಮೈ ೧/೮

ಎಂಟು ಸಾಹಿತ್ಯ ವಿಮರ್ಶಾ ಲೇಖನಗಳ ಸಂಕಲನ. ಇವುಗಳಲ್ಲಿ ಜಾನಪದಕ್ಕೆ ಸಂಬಂಧಿಸಿದ ಮೂರು ಲೇಖನಗಳಿವೆ: ೧.ಪರಿಸರ ಬದ್ಧತೆ ಮತ್ತು ಜನಪದ ಸಾಹಿತ್ಯ ೨.'ಗೋವಿನ ಹಾಡು' ಒಂದು ಜನಪದ ಕಾವ್ಯವೇ? ೩.'ಚಿಕ್ಕೋಳು ಹಿರಿದಿಮ್ಮವ್ವ' ಒಂದು ಮನಶ್ಶಾಸ್ತ್ರೀಯ ವಿಶ್ಲೇಷಣೆ.

೨೦೪೩. ಸರ್ ಜೇಮ್ಸ್ ಜಾರ್ಜ್ ಫ್ರೇಜರ್

ಲೇ: ವಾಮನ ನಂದಾವರ; ಪ್ರ: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು–೫೬೦ ೦೦೧; ಮೊ.ಮು.೧೯೯೭; ಪುಟ ೬+೬೧=೬೭; ಡಿಮ್ಮೈ ೧/೮

ಫ್ರೇಜರ್ ಅವರ ಹುಟ್ಟು ಬೆಳವಣಿಗೆ ಹಾಗೂ ಸಾಧನೆಗಳನ್ನು ಪರಿಚಯಿಸಿಕೊಡುವ ಗ್ರಂಥ.

೨೦೪೪. ಸರದಾರ ನನ್ನೆತ್ತ

ಸಂ: ಮಲ್ಲಿಕಾರ್ಜುನ ಶಿ. ಲಠ್ಠೆ; ಪ್ರ: ಮೆ॥ ಬಿ.ಸಿ. ಹಿಡದುಗ್ಗಿ & ಬ್ರದರ್ಸ್ ಬೆಳಗಾವಿ; ಮೊ.ಮು: ೧೯೮೧; ಪು: ೧೪+೪೩ = ೫೭; ಕ್ರೌನ್ ೧/೮

ಹತ್ತು ಹಾಡುಗಳ ಸಂಕಲನ: ೧.ಸ್ತುತಿ ೨.ಬಾಲ ಬಸವನ ಹಡದಾಳೊ ೩.ಭಾದ್ದೂರ ನನ್ನೆತ್ತ ೪.ಗಳೆ ಹೊಡದರ ಹೊಲ ಚಂದ ೫.ಬಿಳಿ ಮುತ್ತಿನಂಥಾ ಬಿಳಿ ಜ್ವಾಳಾ ೬.ಮೇಟಿಯ ಪೂಜಿ ತೆನಿ ಪೂಜಿ ೭.ಸಂತೋಸ್ಲಿ ಹಂತಿ ಹೊಡಿಬೇಕೊ ೮.ಕಂಕಿ ಬಂದಾವ್ವೋ ಚಾತೂರ ೯.ಕಡಿ ಹಾಡಿ ಕೈಯ ಮುಗದೇವ್ರೊ ೧೦.ಸಾವ ಬೇಡ್ಯಾನ ಶಿವನಲ್ಯೊ. ಸಂಪಾದಕರ ಪ್ರಸ್ತಾವನೆ ಕೊನೆಯಲ್ಲಿ ಶಬ್ದಾರ್ಥ, ಇವೆ.

೨೦೪೫. ಸರ್ಪರಾಜ ಮತ್ತು ಇತರ ಕತೆಗಳು

ಸಂ: ವಾಸುದೇವ ಭಟ್ಟ; ಪ್ರ: ಗೋಕುಲ ಪ್ರಕಾಶನ, ಕೆಳಪೇಟೆ, ಸಿದ್ಧಾಪುರ-೫, ಉಡುಪಿ ಜಿಲ್ಲೆ; ಮೊ.ಮು.೧೯೯೭; ಪು: ೮+೫೧=೫೯; ಕ್ರೌನ್ ೧/೮

ಹತ್ತು ಕತೆಗಳಿವೆ: ೧.ನಾಗರಪಂಚಮಿ ೨.ಸತ್ವ ಪರೀಕ್ಷೆ ೩.ಮಾಂಗಲ್ಯದಾನ ೪.ನಾಗರತ್ನ ೫.ಸರ್ಪದ ಪೊರೆ ೬.ಉತ್ತರ ಕ್ರಿಯೆ ೭.ಸರ್ಪ ಮುಂಗುಸಿ ೮.ಸರ್ಪರಾಜನ ಕತೆ ೯.ವರರತ್ನ ೧೦.ನಾಗ ನಿಧಿ. ಯು.ಪಿ. ಉಪಾಧ್ಯಾಯ ಅವರ ಮುನ್ನುಡಿ ಇದೆ.

೨೦೪೬. ಸರ್ವಜ್ಞ ಮತ್ತು ಜಾನಪದ

ಲೇ: ಜಿ.ವಿ. ದಾಸೇಗೌಡ; ಪ್ರ: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು-೫೬೦ ೦೦೨; ಮೊ.ಮು.೧೯೯೭; ಪು: ೧೩+೬೩=೭೬; ಕ್ರೌನ್ ೧/೮

ಜಾನಪದವು ಸರ್ವಜ್ಞನ ಮೇಲೆ ಬೀರಿರುವ ಪ್ರಭಾವವನ್ನು ಸಂಕ್ಷಿಪ್ತವಾಗಿ ಸೋದಾಹರಣ ವಿವರಿಸಲಾಗಿರುವ ಕೃತಿ.

೨೦೪೭. ಸವದತ್ತಿ ಎಲ್ಲಮ್ಮ

ಲೇ: ಕಮಲಾ ಹೆಮ್ಮಿಗೆ; ಪ್ರ: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ೧೪/೩, ನೃಪತುಂಗರಸ್ತೆ, ಬೆಂಗಳೂರು-೫೬೦ ೦೦೨; ಮೊ.ಮು. ೧೯೯೫; ಪು:೭+೪೭=೫೪; ಡಿಮ್ಮೈ ೧/೮

ಮೂರು ಲೇಖನಗಳ ಸಂಕಲನ: ೧.ಏಳು ಮಂದ್ಯವರಕ್ಕ ತಂಗೇರು ೨.ಜೋಗುತಿಯರ ಸರ್ವಾಚರಣೆಗಳು ೩.ಹೆಣ್ಣುಮಕ್ಕಳ ಅರ್ಪಣೆಯ ಹಿನ್ನೆಲೆ. ಜೀ. ಶಂ. ಪರಮಶಿವಯ್ಯ ಅವರ ಪ್ರಧಾನ ಸಂಪಾದಕರ ಮಾತು ಇದೆ.

೨೦೪೮. ಸವಿ ಸವಿ ಗಾದೆಗಳು

ಸಂ: ಜಿ.ಎಸ್. ಪುಷ್ಪಲತಾ ಬಸವರಾಜು; ಪ್ರ: ಶ್ರೀ ಸಾಮೇಶ ಪಬ್ಲಿಕೇಷನ್, ಗೋಣಿಪುರ, ಮಂಗಳೂರು; ಮೊ.ಮು. ೨೦೧೧; ಪು: ೭೨; ಡಿಮ್ಮೈ ೧/೮

೨೧೮೪ ಗಾದೆಗಳ ಸಂಕಲನ.

೨೦೪೯. ಸಸ್ಯ ಜಾನಪದ

ಲೇ: ಬಿ. ಶಿವರಾಮ ಶೆಟ್ಟಿ; ಪ್ರ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ; ಮೊ.ಮು. ೨೦೦೦; ಪುಟ ೨+೩೬=೩೮; ಡಿಮ್ಮೈ ೧/೮

ಬಂಧುತ್ವ ಮತ್ತು ಆಹಾರತತ್ತ್ವ, ವೈದ್ಯ: ಸಾದೃಶ್ಯ ಹಾಗೂ ವಿರೋಧತತ್ತ್ವ ದೇಹ-ಪ್ರಕೃತಿ ಕಲ್ಪನೆ, ಎಂಬ ಉಪಶೀರ್ಷಿಕೆಗಳಿವೆ. ನಿರ್ದಿಷ್ಟ ಸಸ್ಯಗಳ ಅಧ್ಯಯನ ಎಂಬ

ಭಾಗದಲ್ಲಿ, ತೆಂಗು, ಅಡಿಕೆ–ವೀಳ್ಯ ಹಾಗೂ ಬಾಳೆ ಸಸ್ಯಗಳನ್ನು ಕುರಿತ ವಿಚಾರಗಳಿವೆ.

೨೦೫೦. ಸಹಸ್ರ ನವ್ಯಗಾದೆಗಳು

ಲೇ: ಪದ್ಮಾ ಸೀತಾರಾಮ್ ಪ್ರ: ಭವಾನಿ ಪ್ರಕಾಶನ, ಬೆಂಗಳೂರು–೩; ಮೊ.ಮು: ೧೯೮೮; ಪು: ೨೦+೧೦೦=೧೨೦; ಫೂಲ್ಸ್ ಕ್ಯಾಪ್ ೧/೮

ಶೀರ್ಷಿಕೆಯೇ ಹೇಳುವಂತೆ ಒಂದು ಸಾವಿರ ಗಾದೆಗಳಿವೆ. ಅರಳುಮಲ್ಲಿಗೆ ಪಾರ್ಥಸಾರಥಿ ಅವರ ಮುನ್ನುಡಿ ಇದೆ.

೨೦೫೧. ಸಾಂಸ್ಕೃತಿಕ ಅನನ್ಯತೆ ಮತ್ತು ಹಲಗಲಿ ಬಂಡಾಯ

ಸಂ: ಮಂಜುನಾಥ ಬೇವಿನಕಟ್ಟಿ; ಪ್ರ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ; ಮೊ.ಮು.೨೦೦೯; ಪುಟ ೧೪+೨೯೪=೩೦೮; ಡಿಮ್ಮೈ ೧/೮

ವಿಚಾರ ಸಂಕಿರಣದಲ್ಲಿ ಮಂಡಿತವಾದ ಪ್ರಬಂಧಗಳ ಸಂಕಲನ. ಉದ್ಘಾಟನೆ ಸಮಾರೋಪ ಎಲ್ಲವೂ ಸೇರಿ ಒಟ್ಟು ೪೮ ಲೇಖನಗಳಿವೆ: ೧.ವಿಚಾರ ಸಂಕಿರಣದ ಪ್ರಾಸ್ತಾವಿಕ ಮಾತು – ಮಂಜುನಾಥ ಬೇವಿನಕಟ್ಟಿ ೨.ಉದ್ಘಾಟನಾ ಭಾಷಣ– ಎ. ಮುರಿಗೆಪ್ಪ ೩.ವಾಧ್ ಚರಿತೆ: ಒಂದು ಅವಲೋಕನ– ಎಲ್. ಲಕ್ಷ್ಮೀದೇವಿ ೪.ಅಧ್ಯಕ್ಷೀಯ ಭಾಷಣ– ವೀರೇಶ ಬಡಿಗೇರ. **ಗೋಷ್ಠಿ ಒಂದು: ಸಾಂಸ್ಕೃತಿಕ ಅನನ್ಯತೆ ಮತ್ತು ಹಲಗಲಿ ಬಂಡಾಯ:** ೫.ನಿಶ್ಶಸ್ತ್ರೀಕರಣ ಕಾಯಿದೆ ಮತ್ತು ಹಲಗಲಿ ಬಂಡಾಯ– ವೀರೇಂದ್ರ ಶಿಲವಂತ ೬.ಭಾರತದ ರಾಜಕೀಯ ಸ್ವಾತಂತ್ರ್ಯ ಹಾಗೂ ಹಲಗಲಿ ಬಂಡಾಯ–ಎಚ್.ಬಿ. ಧರ್ಮಣ್ಣವರ ೭.ನಿಶ್ಶಸ್ತ್ರೀಕರಣ ಕಾಯಿದೆ ಹಾಗೂ ಸ್ಥಳಿಯ ಪ್ರತಿಭಟನೆಗಳು–ವೀರೇಶ ಬಡಿಗೇರ. **ಗೋಷ್ಠಿ ಎರಡು: ಬಾಗಲಕೋಟೆ ಪರಿಸರದ ವಾಲ್ಮೀಕಿ ಸಮುದಾಯದ ಸ್ಥಿತಿಗತಿಗಳು:** ೮.ಚಾರಿತ್ರಿಕ ನೆಲೆಗಳು – ಮುತ್ತು ನಾಯ್ಕರ ೯.ಆರ್ಥಿಕ ಹಾಗೂ ಶೈಕ್ಷಣಿಕ ಜೀವನ– ಮೀನಾಕ್ಷಿ ಡಿ. ಪಲ್ಲಾಗಟ್ಟಿ ೧೦.ರಾಜಕೀಯ ಸ್ಥಿತಿಗತಿಗಳು– ಸಂಗಮೇಶ ಕಲ್ಯಾಣಿ ೧೧.ಜನಪದ ಸಾಹಿತ್ಯ ಮತ್ತು ಕಲೆಗಳು–ಬಿ.ಆರ್. ಪೋಲೀಸ್ ಪಾಟೀಲ ೧೨.ಮಹಿಳಾ ಸಂವೇದನೆಗಳು–ಲಕ್ಷ್ಮೀದೇವಿ ಎಲ್. ೧೩.ಲೋಕೋಪಯೋಗಿ ಕೊಡುಗೆಗಳು– ಕಂಠಿ ಹನುಮಂತರಾಯ. **ಗೋಷ್ಠಿ ಮೂರು: ಆಚರಣಾತ್ಮಕ ನೆಲೆಗಳು:** ೧೪.ನಂಬಿಕೆ, ವಿಧಿ–ನಿಷೇಧಗಳು–ಜಿ.ಕೆ. ತಳವಾರ ೧೫.ದೈವಗಳ ಲೋಕ–ಉಮೇಶ ತಿಮ್ಮಾಪುರ ೧೬.ಜಾತ್ರೆ–ಉತ್ಸವಗಳು–ಶಂಖರ ಬೈಚಬಾಳ ೧೭.ಸಾಂಸ್ಕೃತಿಕ ಯೋಗಿಗಳು ಮತ್ತು ಶೂರರು–ವಿ.ಎಸ್. ಶೀರಹಟ್ಟಿಮಠ. **ಗೋಷ್ಠಿ ನಾಲ್ಕು: ಆಧುನಿಕ ಜಗತ್ತು ಹಾಗೂ ತಳಸಮುದಾಯಗಳು:** ೧೮.ಆಧುನಿಕ ಜಗತ್ತು ಮತ್ತು ತಳಸಮುದಾಯಗಳು–ತಾರಾಮತಿ ಬಿ. ೧೯.ಆಧುನಿಕ ಜಗತ್ತು ಮತ್ತು ತಳಸಮುದಾಯಗಳು–ಕೆ.ಪ್ರೇಮ ೨೦.ಆಧುನಿಕ ಜಗತ್ತು ಮತ್ತು ತಳಸಮುದಾಯಗಳು–ಎಸ್.ಎಂ. ಸಾವಿತ್ರಿ ೨೧.ಆಧುನಿಕ ಜಗತ್ತು ಮತ್ತು ತಳಸಮುದಾಯಗಳು–ಕೃಷ್ಣವೇಣಿ ಆರ್. ೨೨.ಆಧುನಿಕ ಜಗತ್ತು ಮತ್ತು

ತಳಸಮುದಾಯಗಳು-ಜಗದೀಶಕುಮಾರ ಚ. ನಾಯಕ ೨೩.ಆಧುನಿಕ ಜಗತ್ತು ಮತ್ತು ತಳಸಮುದಾಯಗಳು-ಎ.ಡಿ.ಬಸವರಾಜ ೨೪.ಆಧುನಿಕ ಜಗತ್ತು ಮತ್ತು ತಳಸಮುದಾಯಗಳು-ಯಮನೂರಪ್ಪ ಅಣ್ಣಿಗೇರಿ ೨೫.ಆಧುನಿಕ ಜಗತ್ತು ಮತ್ತು ತಳಸಮುದಾಯಗಳು-ಹಿರೇಬಿದ್ರಿ ಹೊಳಿಬಸಪ್ಪ ೨೬.ಆಧುನಿಕ ಜಗತ್ತು ಮತ್ತು ತಳಸಮುದಾಯಗಳು-ಗುರುಪ್ರಸಾದ್ ಎಸ್. ಹವಲ್ದಾರ್ ೨೭.ಆಧುನಿಕ ಜಗತ್ತು ಮತ್ತು ತಳಸಮುದಾಯಗಳು-ಸಣ್ಣ ಪಾಪಯ್ಯ ೨೮.ಆಧುನಿಕ ಜಗತ್ತು ಮತ್ತು ತಳಸಮುದಾಯಗಳು-ಹಂದ್ರಾಳ ಗವಿಸಿದ್ದಪ್ಪ ೨೯.ಆಧುನಿಕ ಜಗತ್ತು ಮತ್ತು ತಳಸಮುದಾಯಗಳು-ಬಿ.ಬಾಬು ೩೦.ಆಧುನಿಕ ಜಗತ್ತು ಮತ್ತು ತಳಸಮುದಾಯಗಳು-ಕೇಶವಮೂರ್ತಿ೩೧.ಆಧುನಿಕ ಜಗತ್ತು ಮತ್ತು ತಳಸಮುದಾಯಗಳು-ಯಮನೂರಪ್ಪ ಅಣ್ಣಿಗೇರಿ. **ಗೋಷ್ಠಿ ಐದು: ಸಿಂಧೂರ ಲಕ್ಷ್ಮಣ ಹಾಗೂ ಸಂಘರ್ಷದ ಸಂಕಥನ:** ಆಶಯ ನುಡಿ-ಮಂಜುನಾಥ ಬೇವಿನಕಟ್ಟಿ ೩೨.ಬಯಲಾಟ ಮತ್ತು ಕ್ರಾಂತಿಕಾರಿ ನಾಟಕ-ಭೀಮನಗೌಡ ಪಾಟೀಲ ೩೩.ಹೋರಾಟಗಾರ-ರಾಜೇಶ್ವರಿ ವೀ. ಶೀಲವಂತ ೩೪.ಅವಮಾನ ಹಾಗೂ ಅಭಿಮಾನದ ನೆಲೆ-ಮಲ್ಲಿಕಾರ್ಜುನ ಬನ್ನಿ ೩೫.ಪರೋಪಕಾರಿ-ಆರ್.ಎಸ್. ಪಾಟೀಲ ೩೬.ದಾರ್ಶನಿಕ ನೆಲೆ-ಮುರಳೀಧರ ದೇಶಪಾಂಡೆ ೩೭.ಧೈರ್ಯ ಸಾಹಸ-ದೊಡ್ಡಣ್ಣ ಗದ್ದನಕೇರಿ ೩೮.ಜನಪದ ಸಾಹಿತ್ಯ-ಡಾ. ಪ್ರಕಾಶ ಗ.ಖಾಡೆ ೩೯.ರೈತನ ಮಗ-ಶಿವಾನಂದ ಶೆಲ್ಲಿಕೇರಿ ೪.ಊರ ತಳವಾರ- ಸೋಮಲಿಂಗ ಬೇಡರ, ಆಲೂರ ೪೧.ದುರಂತ ನಾಯಕ-ಗೋವಿಂದ ಮಾ. ಕೆಳಗಳಹಟ್ಟಿ ೪೨.ಕಪ್ಪರ ಪಡಿಯವ್ವ-ವಿಜಯಶ್ರೀ ಇಟ್ಟಣ್ಣನವರ ೪೩.ಅಳಿಯಗಳ ಹಿನ್ನೆಲೆ-ಗಂಗಾಧರ ಎಮ್. ಬಡಿಗೇರ. **ಪ್ರತಿಕ್ರಿಯೆ:** ೪೪.ಸಾಂಸ್ಕೃತಿಕ ಅನನ್ಯತೆ ಮತ್ತು ಹಲಗಲಿ ಬಂಡಾಯ-ನಿಂಗಪ್ಪ ಎಸ್. ಮಾದಣ್ಣವರ ೪೫.ಸಾಂಸ್ಕೃತಿಕ ಅನನ್ಯತೆ ಮತ್ತು ಹಲಗಲಿ ಬಂಡಾಯ -ನವಲಗುಂದ ಗುರುರಾಜ ೪೬.ಸಾಂಸ್ಕೃತಿಕ ಅನನ್ಯತೆ ಮತ್ತು ಹಲಗಲಿ ಬಂಡಾಯ-ಚಿದಾನಂದಪ್ಪ ಕೆ. ೪೭.ಸಾಂಸ್ಕೃತಿಕ ಅನನ್ಯತೆ ಮತ್ತು ಹಲಗಲಿ ಬಂಡಾಯ -ಮಹಾಂತಗೌಡ. ವೀರೇಶ ಬಡಿಗೇರ ಅವರ ಸಮಾರೋಪ ಭಾಷಣ ಇದೆ. ಪ್ರಾರಂಭದಲ್ಲಿ ಶಬ್ದಪಾರಮಾರ್ಗಮಶಕ್ಯಂ ಎಂಬ ಎ.ಮುರಿಗೆಪ್ಪ ಅವರ ಮುನ್ನುಡಿ, ಮಂಜುನಾಥ ಬೇವಿನಕಟ್ಟಿ ಅವರ ಪ್ರಾಸ್ತಾವಿಕ ಮಾತು. ಎ.ಮುರಿಗೆಪ್ಪ ಅವರ ಉದ್ಘಾಟನಾ ಭಾಷಣ, ಎಲ್.ಲಕ್ಷ್ಮೀದೇವಿ ಅವರ ವ್ಯಾಧ ಚರಿತೆ: ಒಂದು ಅವಲೋಕನ, ವೀರೇಶ ಬಡಿಗೇರ ಅವರ ಅಧ್ಯಕ್ಷೀಯ ಭಾಷಣ, ಇವೆ. ಕೊನೆಯಲ್ಲಿ ವೀರೇಶ ಬಡಿಗೇರ ಅವರ ಸಮಾರೋಪ ಭಾಷಣ ಇದೆ.

೨೦೫೨. ಸಾಂಸ್ಕೃತಿಕ ಪದಕೋಶ - ೧ ಮೈಲಾರಲಿಂಗ

ಲೇ: ಮಂಜುನಾಥ ಬೇವಿನಕಟ್ಟಿ; ಪ್ರ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ; ಮೊ.ಮು.: ೨೦೦೦; ಪು: ೧೦+೮೬ = ೯೬; ಡಿಮೈ

೧೯೦ ಸಾಂಸ್ಕೃತಿಕ ಪದಗಳಿಗೆ ವಿವರಗಳನ್ನು ಒದಗಿಸಲಾಗಿದೆ. [illegible]ಯಲ್ಲಿ ೫೪ ನಂಬಿಕೆಗಳು ೧೯೦೦ ರಿಂದ ೧೯೯೮ ರ ವರೆಗೆ ಪ್ರತಿವರ್ಷದ ಜಾತ್ರೆಯಲ್ಲಿ ಲಭ್ಯವಾದ ೯೯ ಕಾರ್ಣೀಕಗಳು, ಮೈಲಾರಲಿಂಗನ ಕ್ಷೇತ್ರಗಳು, ಪದಸೂಚಿ. ರೇಖಾ ಚಿತ್ರಗಳು, ಫೋಟೋಗಳು, ಇವೆ. ಎಂ.ಎಂ. ಕಲಬುರ್ಗಿ ಅವರ ದೇಸಿಯೊಳ್ ಪುಗುವುದು ಪೊಕ್ಕು ಮಾರ್ಗದೊಳೆ ತಳ್ವುದು ಎಂಬ ಮುನ್ನುಡಿ ಇದೆ.

೨೦೫೩. ಸಾಕ್ಷಿಕಲ್ಲು

ಲೇ: ಗೊ.ರು.ಚನ್ನಬಸಪ್ಪ: ಪ್ರ: ಕರ್ನಾಟಕ ಜಾನಪದ ಪ್ರಸಾರ ನಿಧಿ, ೧೪೫೩, ಗ್ರಾಮಜ್ಯೋತಿ, ಸೌತ್ ಎಂಡ್ 'ಎ' ರಸ್ತೆ, ೯ನೆಯ ಬ್ಲಕ್, ಜಯನಗರ, ಬೆಂಗಳೂರು-೫೬೦ ೦೬೯: ಮೊಮು-೧೯೮೦, ಪು: ೮+೯೨=೧೦೦, ಕ್ರೌನ್೧/೮.

ಐದು ಜಾನಪದ ರೂಪಕಗಳು ಎಂಬ ಅಡಿಬರಹ ಇದೆ: ೧, ನಾನೆದ್ದು ಕೈಯ ಮುಗಿದೇನ ೨.ಸಾಕ್ಷಿಕಲ್ಲು ೩.ಸೆರಗ ಕಟ್ಟುವನೆ ದುಡಿಯಾಕೆ ೪.ಮುಖತೋರೆ ಬಂದು ಸೊಪನಾಕೆ ೫.ಮಾತು ಮನೆ ಕೆಡಿಸ್ತು ತೂತು ಒಲೆ ಕೆಡಿಸ್ತು. ಎಚ್.ಕೆ.ರಂಗನಾಥ್ ಅವರ ಎರಡು ನುಡಿ ಎಂಬ ಮುನ್ನುಡಿ ಇದೆ.

೨೦೫೪. ಸಾಗರದ ಶ್ರೀ ಮಾರಿಕಾಂಬಾ ದೇವಿ ಮತ್ತು ಉಪ್ಪಾರರು

ಲೇ: ಯು.ಎಲ್. ಮಂಜಪ್ಪ; ಪ್ರ: ಉಪ್ಪಾರ ಸಮಾಜ, ಶ್ರೀ ವೀರಾಂಜನೇಯಸ್ವಾಮಿ, ದೇವಸ್ಥಾನ, ಅಶೋಕರಸ್ತೆ, ಸಾಗರ-೫೭೭ ೪೦೧; ಮೊ.ಮು.೨೦೦೨; ಪುಟ ೨೨+೧೪+೨೨=೫೮; ಡಿಮ್ಮೈ ೧/೮

ಗ್ರಂಥದ ಶೀರ್ಷಿಕೆಯನ್ನೇ ಉಳ್ಳ ಹದಿನಾಲ್ಕು ಪುಟಗಳ ಒಂದೇ ಒಂದು ಲೇಖನ ಇದೆ. ಉಳಿದಂತೆ ಫೋಟೋಗಳು ಹಾಗೂ ಇತರರ ಮಾತುಗಳು.

೨೦೫೫. ಸಾಗರ ಸಿಂಪಿ

ಸಂ: ಎಂ.ಜಿ. ಬಿರಾದಾರ; ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಮಗಳೂರು- ೫೬೦ ೦೧೮; ಮೊ.ಮು: ೧೯೯೦; ಪು:೧೨+೨೯೬ = ೩೦೮; ಡಿಮ್ಮೈ ೧/೮

ಸಿಂಪಿ ಲಿಂಗಣ್ಣ ವಾಚಿಕೆ ಎಂಬ ಅಡಿಬರ್ ಇದೆ. ಒಂಬತ್ತು ಭಾಗಗಳಿವೆ. ಒಂದು ಭಾಗ ಮಾತ್ರ ಜಾನಪದಕ್ಕೆ ಸಂಬಂಧಿಸಿದೆ. ಇದರಲ್ಲಿ ಆರು ಲೇಖನಗಳಿವೆ : ೧.ಬಾಳೆ-ಕೈಪಿಡಿ ೨.ತಮ್ಮಕ್ಕ ಲೆಕ್ಕಲೆ ೩.ಸಮರಸದತ್ತ ೪.ಗಾದೆಗಳ ಗಾರುಡಿ ೫.ಒಗಟಿನ ಅಂದ ೬.ಬಸರಿದ್ದೀನ್ನೆ ಸರಿನ್ನೇನಿಡೂನ. ಜಿ. ಎಸ್. ಸಿದ್ಧಲಿಂಗಯ್ಯ ಅವರ ಮುನ್ನುಡಿ ಇದೆ.

೨೦೫೬. ಸಾತು ಕ್ಯಾಮಣ್ಣನ ಲಾವಣಿಗಳು

ಸಂ: ನಿಂಗಣ್ಣ ಸಣ್ಣಕ್ಕಿ; ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು-೫೬೦ ೦೧೮; ಮೊ.ಮು: ೧೯೮೧; ಪು: ೨೧+೯೬=೧೧೭; ಡಿಮ್ಮೈ ೧/೮

ಹದಿನೈದು ಕಾವ್ಯಗಳ ಸಂಕಲನ: ೧.ಗಣಪತಿ ಸ್ತುತಿ ೨.ಶಿವಸ್ತುತಿ ಲಾವಣಿ ೩.ಕುಂಡಾಳಿ ಲಾವಣಿ ೪.ಅನುಭಾವಿ ಮತ್ತು ಪ್ರಪಂಚಿಕನ ವಾದ ೫.ಸತ್ಯವತಿ ಲಾವಣಿ ೬.ಬ್ರಹ್ಮ ಅಕಲ ಲಾವಣಿ ೭.ಹೆಂಗಸಿನ ಪ್ರೀತಿ ಲಾವಣಿ ೮.ನಾವ ಮುಳುಗಿದ ಲಾವಣಿ ೯.ಕೊಣ್ಣೂರ ಕಾಡಸಿದ್ಧೇಶ್ವರ ಲಾವಣಿ ೧೦.ದಶಾವತಾರ ಲಾವಣಿ ೧೧.ಪತಿವೃತಾ ನೀಲಾವತಿ ಲಾವಣಿ ೧೨.ವಿಚಿತ್ರ ಹೆಣ್ಣ ಮಾಯಾ ತಮ್ಮಾ! ಲಾವಣಿ ೧೩.ರುಕ್ಮಿಣಿ ಗರ್ವಹರಣ ಲಾವಣಿ ೧೪.ಕಬೀರದಾಸ ಲಾವಣಿ ೧೫.ಈಗಿನವರ ಸೋಗಿನ ಬಸರಾ. ಹಂಪ ನಾಗರಾಜಯ್ಯ ಅವರ ಮುನ್ನುಡಿ, ಸಂಪಾದಕರ ಪ್ರಸ್ತಾವನೆ, ಕೊನೆಯಲ್ಲಿ, ಕಠಿಣ ಪದಗಳ ಅರ್ಥ, ಸಂಗ್ರಹ ವಿವರ, ಇವೆ.

೨೦೫೭. ಸಾಮಾಜಿಕ ನೆಲೆ

ಲೇ: ಶಿವರಾಮು ಕಾಡನಕುಪ್ಪೆ; ಪ್ರ: ಸಂವಹನ, ೧೨/೧ಎ, ಈವ್ನಿಂಗ್ ಬಜಾರ್ ಹಿಂಭಾಗ, ಶಿವರಾಂಪೇಟೆ, ಮೈಸೂರು ೫೭೦ ೦೦೧; ಮೊ.ಮು: ೨೦೦೨; ಪು: ೨೩೬; ಡಿಮ್ಮೈ ೧/೮

ಇಪ್ಪತ್ತೇಳು ಸಾಹಿತ್ಯ ವಿಮರ್ಶಾ ಲೇಖನಗಳ ಸಂಕಲನ. ಇವುಗಳಲ್ಲಿ ಜಾನಪದಕ್ಕೆ ಸಂಬಂಧಿಸಿದ ನಾಲ್ಕು ಲೇಖನಗಳಿವೆ: ೧.ಗಾದೆಗಳಲ್ಲಿ 'ಅಶ್ಲೀಲತೆ'ಯ ಚಿಪ್ಪು-ಒಂದು ವಿಶ್ಲೇಷಣೆ ೨.'ಗೋವಿನ ಹಾಡು: ಒಂದು ಜನಪದ ಕಾವ್ಯವೇ? ೩.'ಚಿಕ್ಕೋಳು ಹಿರಿದಿಮ್ಮವ್ವ': ಒಂದು ಮನಶ್ಶಾಸ್ತ್ರೀಯ ವಿಶ್ಲೇಷಣೆ ೪.ಕೆರೆಗೆ ಹಾರ: ಒಂದು ಸಾಂಸ್ಕೃತಿಕ ವಿಶ್ಲೇಷಣೆ.

೨೦೫೮. ಸಾಮಾನ್ಯ ಜಾನಪದ ಪದಕೋಶ

ಸಂ: ವೃಷಭಕುಮಾರ್; ಪ್ರ: ಉಷಾ ಪ್ರಕಾಶನ, ೨೫೪೨, ಹೆಬ್ಬಾಳ್ ೨ನೇ ಹಂತ, ರೇಣುಕ ಎಲ್ಲಮ್ಮ ದೇವಸ್ಥಾನದ ಹತ್ತಿರ, ಮೈಸೂರು-೫೭೦ ೦೧೭; ಮೊ.ಮು: ೨೦೧೨; ಪು: ೮+೧೫೨=೧೬೦; ಡಿಮ್ಮೈ ೧/೮

ಇಂಗ್ಲಿಷ್-ಕನ್ನಡ ಎಂಬ ಅಡಿಬರಹ ಇದೆ. "ಕೃತಿಯಲ್ಲಿ ಜಾನಪದಕ್ಕೆ ಸಂಬಂಧಿಸಿದ ಸುಮಾರು ೨೫೦೦ ಆಂಗ್ಲ ಪದಗಳಿಗೆ ಕನ್ನಡದಲ್ಲಿ ಅರ್ಥ ಕೊಡಲಾಗಿದೆ. ಈ ಪದಗಳಲ್ಲಿ ಕೆಲವು ನೇರವಾಗಿ ಜಾನಪದಕ್ಕೆ ಸಂಬಂಧಿಸಿಲ್ಲದಿದ್ದರೂ, ಜಾನಪದ ಅಭ್ಯಾಸಿಗೆ ಈ ಪದಗಳು ಆಗಾಗ ಎದುರಾಗುತ್ತವೆ. ಇದನ್ನು ದೃಷ್ಟಿಯಲ್ಲಿಟ್ಟುಕೊಂಡು 'ಸಾಮಾನ್ಯ ಜಾನಪದ ಪದಕೋಶ' ರೂಪಿಸಿದ್ದು, ಅದಕ್ಕೆ ಪೂರಕವಾಗಿ ಅನುಬಂಧ ರಚಿತಗೊಂಡಿದೆ" ಎಂಬುದಾಗಿ ಮುನ್ನುಡಿಯಲ್ಲಿ ಸ.ಚಿ. ರಮೇಶ್ ಅವರು ಹೇಳಿದ್ದಾರೆ. ಅನುಬಂಧದಲ್ಲಿ ಈ ಶೀರ್ಷಿಕೆಗಳಿವೆ: ನಕ್ಷತ್ರಗಳು, ಹಿಂದೂ ಸಂವತ್ಸರಗಳು, ದ್ವಾದಶ ರಾಶಿಗಳು, ಹಿಂದೂ

ಪಂಚಾಂಗದ ನವಗ್ರಹಗಳು, ಆಧುನಿಕ ಖಗೋಳ ವಿಜ್ಞಾನದ ಒಂಬತ್ತು ಗ್ರಹಗಳು, (ಮಾಸ-ತಿಂಗಳು), ಕಾಲಮಾನ, ಮೋಜಣಿದಾರರ ಅಳತೆ, ಪ್ರಮುಖ ಜನಪದ ಮಹಾಕಾವ್ಯಗಳು/ಕಾವ್ಯಗಳು, ಮೌಖಿಕ ರಾಮಾಯಣ/ಮಹಾಭಾರತಗಳು, ದ್ರಾವಿಡ ಭಾಷೆ ಬಳಕೆ ಮಾಡುವ ಬುಡಕಟ್ಟು ಪ್ರದೇಶಗಳ ಪಟ್ಟಿ, ಹಬ್ಬಗಳು/ಮೇಳಗಳನ್ನು ಆಚರಣೆ ಮಾಡುವ ರಾಜ್ಯಗಳ ಪಟ್ಟಿ ಜನಪದ ಕಲೆ ಮತ್ತು ಪ್ರಕಾರ, ಆಚರಣೆಯಲ್ಲಿರುವ ರಾಜ್ಯಗಳ ಪಟ್ಟಿ.

೨೦೫೯. ಸಾರೂಪ್ಯ

ಲೇ: ಪಾ.ಶ. ಶ್ರೀನಿವಾಸ; ಪ್ರ: ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು-೪೦; ಮೊ.ಮು: ೧೯೯೯; ಪು: ೧೧+೩೦೭=೩೧೮; ಡಿಮ್ಮೈ೧/೮

ತಮಿಳು ಕನ್ನಡ ಸಾಹಿತ್ಯ ಸಂಬಂಧಗಳ ತೌಲನಿಕ ಅಧ್ಯಯನ ಎಂಬ ಅಡಿಬರಹ ಇದೆ. ಹದಿನೈದು ಲೇಖನಗಳಿವೆ. ಅವುಗಳಲ್ಲಿ ಒಂದು ಲೇಖನ ಮಾತ್ರ ಜಾನಪದಕ್ಕೆ ಸಂಬಂಧಿಸಿದೆ: ೧.ದ್ರಾವಿಡ ಜಾನಪದ ಬಗೆಗಳು.

೨೦೬೦. ಸಾಂಸ್ಕೃತಿಕ ವೀರರು ಮತ್ತು ಮಹಾಸತಿಯರ ಲಾವಣಿಗಳು

ಸಂ: ಕೆಂಕೆರೆ ಹನುಮಂತೇಗೌಡ; ಪ್ರ: ತುಮಕೂರು ವಿಶ್ವವಿದ್ಯಾಲಯ, ತುಮಕೂರು; ಮೊ.ಮು. ೨೦೧೧; ಪು: ೧೬+೪೬೪=೪೮೦; ಡಿಮ್ಮೈ ೧/೮

ಎಂಟು ಕಾವ್ಯಗಳ ಸಂಕಲನ: ೧.ವೀರ ಬಂಡಣ್ಣ ಸ್ವಾಮಿ ಜನಪದ ಗೀತೆಗಳು (ಸಂಗ್ರಹಗಾರರು: ಮನ್ಮಥ, ಹೊಸಯಳನಡು) ೨.ದಿಬ್ಬದ ವೀರಬೊಮ್ಮಣ್ಣನ ಕಾವ್ಯ (ಸಂಗ್ರಹಗಾರರು: ಕೆ.ವಿ. ಮುದ್ದವೀರಪ್ಪ) ೩.ವೀರನಾಗಪ್ಪನ ಪದ (ಸಂ: ಕೆ.ವಿ. ಮುದ್ದವೀರಪ್ಪ) ೪.ನಿಡಗಲ್ಲು ಶೂಲದ ಈರಣ್ಣ (ಸಂಗ್ರಹಕಾರರು: ಸಣ್ಣನಾಗಪ್ಪ) ೫.ಹುಳಿಯಾರು ಕೆಂಚಮ್ಮ (ಸಂಗ್ರಹಕಾರರು: ಲಕ್ಷ್ಮಣಯ್ಯ) ೬.ಮದ್ದೇದ ಸ್ವಾರಮ್ಮನ ಪದನೂರು (ಸಂಗ್ರಹಕಾರರು: ಸಣ್ಣನಾಗಪ್ಪ) ೭.ವಡ್ಡಗೆರೆ ನಾಗಮ್ಮನ ಗೀತೆಗಳು (ಸಂಗ್ರಹಕಾರರು: ವಡ್ಡಗೆರೆ ನಾಗರಾಜಯ್ಯ) ೮.ಬರಗೂರು ವೀರಮ್ಮನ ಗೀತೆಗಳು (ಸಂಗ್ರಹಕಾರರು: ಕೆ.ವಿ. ಮುದ್ದವೀರಪ್ಪ). ಪಠ್ಯದ ನಡುವೆ, ಕಥಾನಾಯಕರ ಹಾಗೂ ಹಾಡುಗಾರ್ತಿಯರ ಕೆಲವು ಫೋಟೋಗಳಿವೆ.

೨೦೬೧. ಸಾಲಿ ವೆಂಕಣ್ಣಯ್ಯ ಕೃತ ಗಿರಿಜಾ ಕಲ್ಯಾಣ ಬಯಲಾಟ

ಸಂ: ಕೆ.ಆರ್. ದುರ್ಗಾದಾಸ್, ಎಚ್.ಎಸ್. ನಾಗರಾಳ; ಪ್ರ: ಸಮತಾ ಪ್ರಕಾಶನ ೧೬೫೬, ಚಂದ್ರಾನಿವಾಸ, ಅಂಚೆ ಕಛೇರಿ ಹತ್ತಿರ, ೧೨ ನೇ ಸೆಕ್ಟರ್, ಮಹಾಂತೇಶ ನಗರ, ಬೆಳಗಾವಿ – ೧೬; ಮೊ.ಮು: ೧೯೯೫; ಪು: ೪+೨೬+೯೦ = ೧೨೦; ಕ್ರೌನ್ ೧/೮

ಲಭ್ಯ ಹಸ್ತ ಪ್ರತಿಯೊಂದರಿಂದ ಸಂಪಾದಿತವಾದ ಬಯಲಾಟವಿದೆಂಬ ಸೂಚನೆಯು ಪ್ರಸ್ತಾವನೆಯಲ್ಲಿದೆ.

೨೦೬೨. ಸಾಲು ಸಂಪಿಗೆ ನೆರಳು

ಸಂ: ಕಾಳೇಗೌಡ ನಾಗವಾರ, ಜಿ.ವಿ. ಆನಂದ ಮೂರ್ತಿ; ಪ್ರ: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–೫೬೦ ೦೦೨; ಮೊ.ಮು. ೨೦೦೦; ಪು: ೨೫೦; ಡಿಮೈ ೧/೮

ಪ್ರಾತಿನಿಧಿಕ ಜನಪದ ಸಾಹಿತ್ಯ ಎಂಬ ಅಡಿಬರಹ ಇದೆ. ಈ ಗ್ರಂಥದ ಸಾಹಿತ್ಯವನ್ನು ಐದು ಭಾಗಗಳಲ್ಲಿ ವಿಂಗಡಿಸಲಾಗಿದೆ: **ಭಾಗ ೧: ಮಕ್ಕಳ ಪದಗಳು. ಭಾಗ ಎರಡು: ಒಗಟುಗಳು. ಭಾಗ ಮೂರು: ಗೀತೆಗಳು:** ನೆನೆ ನೆನೆ ಮನವೆ, ಭೂಮಿತಾಯಿ, ತಾಯಿ, ಒಡಹುಟ್ಟು, ರಾಗಿಕಲ್ಲು, ಬಾಸಿಂಗ ತರುವಾಗ, ಆಡಿ ಬಾ ನನಕಂದ, ಬದುಕು, ಸಂಗಾತಿ, ಗಣನಾಯ್ಕ, ಸರಸ್ವತಿ, ಸೀತೆ, ಆರತಿ ಬೆಳಗಿರೆ, ಮಳಿ ಹಾಡು, ಭಾಗ್ಯದ ಬಳೆಗಾರ, ಹೋಗಿ ನನ್ನ ತವರಿಗೆ, ಕಿನ್ನೂರಿ ನುಡಿಸೋನು, ಚೆಲ್ಲಿದರು ಮಲ್ಲಿಗೆಯಾ, ಬಿದಿರು, ಬಾಡಬೇಡ ಮಲ್ಲಿಗೆ, ಸಣ್ಣ ಮಲ್ಲಿಗೆ ಉದುರಲಯ್ಯ, ರಾಗವ ಪಾಡಿತು ನವ್ವಾಲೆ, ಕೋಗಿಲೆ, ಮಳೆರಾಯ, ಜವರಾಯ, ಕೊರವಂಜಿ, ಚೆಂಡನಾಡೋಣ ಬನ್ನಿರೇ, ತನುವಿನೊಳಗೆ ಅನುದಿನವಿದ್ದು, ಅಚ್ಚಚ್ಚಬೆಳದಿಂಗಳೇ, ದೀಪಾಳೆನ್ನಿರೋ ದೀಪಾಳೆನ್ನಿರೋ, ನಂಜುಂಡನ ತೇರು, ಚಂದಕ್ಕಿ ಮಾಮ, ಗೋವಿನ ಹಾಡು, ಕೆರೆಗೆ ಹಾರ, ಮದುವೆಯ ಹಾಡು. **ಭಾಗ ನಾಲ್ಕು: ಗಾದೆಗಳು. ಭಾಗ ಐದು: ಜನಪದ ಕಥೆಗಳು:** ಒಟ್ಟಿಗೆ ಬಾಳುವ ಆನಂದ, ನಾಮದ ಮಹಿಮೆ, ಕೋತಿ ತಂದ ಭಾಗ್ಯ, ಮಾದಯ್ಯ, ಚೆಲುವಯ್ಯನ ಸಾಹಸಗಳು, ಹೂವಾದ ಹುಡುಗಿ, ಸಂಸಾರಿ ಸೈ, ಮುದ್ದು ಗಣದೇವ.

೨೦೬೩. ಸಾವಿರದ ಸಿರಿ ಬೆಳಗು

ಸಂ: ಕೃಷ್ಣಮೂರ್ತಿ ಹನೂರು; ಪ್ರ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ; ಮೊ.ಮು. ೨೦೦೫; ಪು: ೮+೪೮೦=೪೮೮; ಡಿಮೈ ೧/೮

ಸಿರಿಯಜ್ಜಿ ಹಾಡಿದ ೨೧ ಜನಪದ ಕಥನಗೀತೆಗಳು ಎಂಬ ಅಡಿಬರಹ ಇದೆ: ೧.ಕೊಂಡದ ಕಾಟವ್ವ ೨.ಸಿರಿಯಣ್ಣ ೩.ಕರಡಿ ಬುಳ್ಳಪ್ಪ ೪.ಎತ್ತಪ್ಪ ೫.ತಿರುಪತಿ ತಿಮ್ಮಪ್ಪ ೬.ಹನುಮಂತರಾಯ ೭.ಚನ್ನಕ್ಯಾಸಯ್ಯ ೮.ಕಲ್ಲೇಶ್ವರ ೯.ಗುಹೇಶ್ವರಸ್ವಾಮಿ ೧೦.ನಾಯಕನಹಟ್ಟಿ ತಿಪ್ಪೇಸ್ವಾಮಿ ೧೧.ಬೋಸೇದೇವರು ೧೨.ಬೋರೇದೇವರು ೧೩.ದೇವರು ಹೊಳೆಗೆ ಹೋಗುವುದು ೧೪.ಕುಲಗುರು ರಾಮಾಚಾರಿ ೧೫.ಗಿರಿಜಾ ಕಲ್ಯಾಣ ೧೬.ಅರ್ಜುಣ ದ್ರೋಪದಿ ೧೭.ಕಟ್ಟೆ ಮಾರವ್ವ ೧೮.ಜೋಕುಮಾರ ೧೯.ಸೋಬಾನೆ ಪದಗಳು ೨೦.ಗೊಲ್ಲರ ಹೆಣ್ಣುಮಕ್ಕಳು ಮೈ ನೆರೆದಾಗ ಹಾಡುವ ಗೀತೆ ೨೧.ಮಳೆರಾಯ. ಬಯಲನು ತುಂಬುವ ಆಲಯದ ಬೆಳಕಿನ ಬೀಜಗಳು ಎಂಬ ಬಿ.ಎ.ವಿವೇಕ ರೈ ಅವರ ಮುನ್ನುಡಿ, ಸಂಪಾದಕರ ಪ್ರಸ್ತಾವನೆ, ಕೊನೆಯಲ್ಲಿ ಪದ–ಅರ್ಥ, ಸಿರಿಯಜ್ಜಿಯನ್ನು ಕಂಡದ್ದು ಎಂಬ ಸಂಪಾದಕರ ಲೇಖನ, ಇವೆ.

೨೦೬೪. ಸಾವಿರಾರು ಗಾದೆಗಳ ಭಂಡಾರ

ಸಂ: ತಾ.ರಾ. ನಾಗರಾಜ್; ಪ್ರ: ಶಕುಂತಲಾ ನಾಗರಾಜ್, ೧೭, ೧ನೇ ಡಿ ಮುಖ್ಯರಸ್ತೆ, ೩ನೇ ಘಟ್ಟ, ೫ನೇ ಬ್ಲಾಕ್, ಬನಶಂಕರಿ, ಬೆಂಗಳೂರು-೫೬೦ ೦೮೫; ಮೊ.ಮು.೨೦೦೦, ಎ.ಮು.೨೦೦೨; ಪು: ೭೪; ಕ್ರೌನ್ ೧/೮

ನವನವೀನ ಗಾದೆಗಳು ಎಂಬ ಅಡಿಬರಹ ಇದೆ. ೧೧೧೭ ಕಟ್ಟುಗಾದೆಗಳಿವೆ. ಕೊನೆಗೊಂದು ಚೌಪದಿ ಇದೆ.

೨೦೬೫. ಸಾವಿರಾರು ಗಾದೆಗಳು

ಸಂ: ಸು. ರುದ್ರಮೂರ್ತಿ ಶಾಸ್ತ್ರಿ; ಪ್ರ: ಭಾಗ್ಯಲಕ್ಷ್ಮೀ ಪ್ರಕಾಶನ, ೮೭, ೩ನೇ ಕ್ರಾಸ್, ೪ನೇ ಬ್ಲಾಕ್, ಬನಶಂಕರಿ ೩ನೇ ಸ್ಟೇಜ್, ೩ನೇ ಫೇಸ್, ಬೆಂಗಳೂರು-೫೬೦ ೦೮೫; ಮೊ.ಮು: ೧೯೯೧, ವಿಸ್ತರಿತ ಎ.ಮು: ೧೯೯೬; ಪು: ೬೪; ಕ್ರೌನ್ ೧/೮

೧೩೪೦ ಗಾದೆಗಳ ಸಂಕಲನ

೨೦೬೬. ಸಾವಿರಾರು ಗಾದೆಗಳು

ಸಂ: ಎ.ಜಿ. ರತ್ನಾ ಕಾಳೇಗೌಡ; ಪ್ರ: ಶ್ರೀ ಅನ್ನಪೂರ್ಣ ಪ್ರಕಾಶನ, ೧೭೬, ೧೨ನೇ ಕ್ರಾಸ್, ಮಾಗಡಿರಸ್ತೆ, ಅಗ್ರಹಾರ ದಾಸರಹಳ್ಳಿ, ಬೆಂಗಳೂರು-೭೯; ಮೊ.ಮು.೨೦೧೦; ಪು:೪+೨೧೬=೨೨೦; ಡಿಮ್ಮೈ ೧/೮

೫೪೫೨ ಗಾದೆಗಳ ಸಂಕಲನ. ಅಕಾರಾದಿ ಇಲ್ಲ.

೨೦೬೭. ಸಾಹಸ ಕಥೆಯ ರಸಯಾತ್ರೆ

ಲೇ: ಕರಾಕೃ, ಪಿ.ಆರ್. ತಿಪ್ಪೇಸ್ವಾಮಿ; ಪ್ರ: ಜನಪದ ಸಾಹಿತ್ಯ ಅಕಾಡೆಮಿ, ಮೈಸೂರು-೫; ಮೊ.ಮು. ೧೯೬೨; ಪು: ೨+೫೦=೫೨; ಕ್ರೌನ್ ೧/೮

ಜನಪದ ಸಾಹಿತ್ಯ ಸಂಗ್ರಹಣೆಯಲ್ಲಿ ಎಂಬ ಅಡಿಬರಹ ಇದೆ. ಐದು ಅಧ್ಯಾಯಗಳಿವೆ: ೧.ವ್ಯಕ್ತಿಯಲ್ಲ ಶಕ್ತಿ -ಪಿ.ಆರ್. ತಿಪ್ಪೇಸ್ವಾಮಿ ೨.ಸಾಹಸದ ಕಥೆ -ಕರಾಕೃ ೩.ಬಂದ ದಾರಿಗೆ ಸುಂಕವಿಲ್ಲ -ಪಿ.ಆರ್. ತಿಪ್ಪೇಸ್ವಾಮಿ ೪.ಕೊರಮ ಕೈಕೊಟ್ಟರೂ ಬಿಡೆವು -ಪಿ.ಆರ್. ತಿಪ್ಪೇಸ್ವಾಮಿ ೫.ಪೆಟ್ಟಿಗೆಯಲ್ಲಿ ಜಾಗವಿಲ್ಲ -ಪಿ.ಆರ್. ತಿಪ್ಪೇಸ್ವಾಮಿ.

೨೦೬೮. ಸಾಹಸಯಾತ್ರಿ

ಲೇ: ಜೀ.ಶಂ. ಪರಮಶಿವಯ್ಯ; ಪ್ರ: ಕಲಾಕ್ಷೇತ್ರ, ೧೭೩, ರಮಾವಿಲಾಸ ಅಗ್ರಹಾರ, ಮೈಸೂರು; ಮೊ.ಮು.೧೯೬೫; ಪುಟ ೪೭; ಕ್ರೌನ್ ೧/೮

ಕನ್ನಡ ಜಾನಪದ ಸಾಹಿತ್ಯದ ಸಾಹಸಯಾತ್ರಿ ಕರಾಕೃ ಅವರನ್ನು ಕುರಿತ ಗ್ರಂಥವಿದು.

೨೦೬೯. ಸಾಹಿತ್ಯ ಸಿರಿ

ಲೇ: ಗವಿಸಿದ್ಧಪ್ಪ ಎಚ್. ಪಾಟೀಲ; ಪ್ರ: ಅಮರ ಪ್ರಕಾಶನ, ಕಲಬುರ್ಗಿ; ಮೊ.ಮು: ೨೦೦೩; ಪು: ೬+೧೨೬=೧೩೨; ಡಿಮ್ಮೈ೧/೮

ಲೇಖನಗಳ ಸಂಪುಟ ಎಂಬ ಅಡಿಬರಹ ಇದೆ. ಹತ್ತು ಲೇಖನಗಳಿವೆ. ಒಂದು ಲೇಖನ ಮಾತ್ರ ಜಾನಪದಕ್ಕೆ ಸಂಬಂಧಿಸಿದೆ: ೧.ಹೈದ್ರಾಬಾದ ಕರ್ನಾಟಕ ಪ್ರದೇಶದ ಜಾನಪದ ಸಾಹಿತ್ಯ-ಒಂದು ವಿವೇಚನೆ.

೨೦೭೦. ಸಾಹಿತ್ಯ-ಸಂಸ್ಕೃತಿ

ಲೇ: ತಳವಾರ ವಾಮದೇವ; ಪ್ರ: ಸೃಷ್ಟಿ ಪಬ್ಲಿಕೇಷನ್ಸ್, ಬೆಂಗಳೂರು-೫೬೦ ೦೪೦; ಮೊ.ಮು: ೨೦೧೧; ಪು: ೧೦+೧೫೦=೧೬೦

ವಿಮರ್ಶಾ ಲೇಖನಗಳು ಎಂಬ ಅಡಿಬರಹ ಇದೆ. ಇಪ್ಪತ್ತು ಲೇಖನಗಳ ಈ ಸಂಕಲನದಲ್ಲಿ ಜಾನಪದಕ್ಕೆ ಸಂಬಂಧಿಸಿದ ಮೂರು ಲೇಖನಗಳಿವೆ: ೧.ಜೋಗ್ಯೋರ ಅಂಜಪ್ಪನ ಸಂಸ್ಕೃತಿಯ ಚಿತ್ರಣ ೨.ಜಾನಪದ ಐತಿಹ್ಯ: ಒಂದು ವಿಶ್ಲೇಷಣೆ ೩.ಕನ್ನಡ ಜನಪದ ಕತೆಗಳ ಆಶಯಗಳು.

೨೦೭೫. ಸಿಂಗದನ

ಲೇ: ವಾಮನ ನಂದಾವರ; ಪ್ರ: ಹೇಮಾಂಶು ಪ್ರಕಾಶನ, ೫/೧೯೦, ಕೃಷ್ಣಾಪುರ, ಕಾಟಿಪಳ್ಳ-೫೭೪ ೧೪೯, ದ.ಕ; ಮೊ.ಮು: ೧೯೮೭; ಪು: ೧೦+೬೬=೭೬; ಡಿಮ್ಮೈ ೧/೮

ನಾಲ್ಕು ಲೇಖನಗಳ ಸಂಕಲನ: ೧.ಪಾಡ್ದನಗಳೂ ಕಬಿತಗಳೂ ಚಿತ್ರಿಸುವ ತುಳು ಜನಪದ ವಿನೋದಕಲೆಗಳೂ ೨.ಭೂತಾರಾಧನೆಯಲ್ಲಿ ಸಾಹಿತ್ಯಿಕ ಅಂಶಗಳು ೩.ತುಳುವ ಸಂಸ್ಕೃತಿಯಲ್ಲಿ ಮಡಿವಾಳರ ಪಾತ್ರ ೪.ತುಳುನಾಡಿನ ಜಾನಪದ ಹಬ್ಬಗಳು. ಸಿಂಗದನಕ್ಕೊಂದು ಸಿಂಗಾರ ಎಂಬ ಅಮೃತ ಸೋಮೇಶ್ವರ ಅವರ ಮುನ್ನುಡಿ, ಕೊನೆಯಲ್ಲಿ, ಸಾಂಸ್ಕೃತಿಕ ಪದಕೋಶ, ಇವೆ.

೨೦೭೬. ಸಿಂಗಾರ ಗಾದೆಗಳು

ಸಂ: ಅಮೃತ ಸೋಮೇಶ್ವರ; ಪ್ರ: ಪ್ರಕೃತಿ ಪ್ರಕಾಶನ, ಕೋಟೆಕಾರ್, ದ.ಕ; ಮೊ.ಮು: ೧೯೮೭; ಪು: ೪+೧೨=೧೬; ಕ್ರೌನ್ ೧/೮

೨೫೩ ಗಾದೆಗಳ ಸಂಗ್ರಹ

೨೦೭೭. ಸಿಕ್ಕಿಕೊಳ್ಳದವರು

ಲೇ: ಪಿ.ಕೆ. ರಾಜಶೇಖರ; ಪ್ರ: ಸಂವಹನ, ೧೨/೧ಎ, ಈವನಿಂಗ್ ಬಜಾರ್ ಹಿಂಭಾಗ, ಶಿವರಾಂಪೇಟೆ; ಮೈಸೂರು-೫೭೦ ೦೦೧; ಮೊ.ಮು.೨೦೦೬; ಪು: ೧೨; ಕ್ರೌನ್ ೧/೪

ಸರಳ ಭಾಷೆಯಲ್ಲಿ ನಿರೂಪಿತವಾಗಿರುವ ಒಂದು ಜನಪದ ಕಥೆ. ಹಲವು ರೇಖಾಚಿತ್ರಗಳಿವೆ.

೨೦೭೮. ಸಿಕ್ಲಿಗರ

ಲೇ: ಚಲವಾದಿ ಬಸವರಾಜ, ಶೇಖರಸಿಂಗ್. ಎಸ್.; ಪ್ರ: ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-೫೬೦ ೦೦೨; ಮೊ.ಮು.೨೦೦೮; ಪು:೩೪+೭೮=೧೧೨; ಡಿಮ್ಮೈ ೧/೮

ಒಂಬತ್ತು ಅಧ್ಯಾಯಗಳಿವೆ: ೧.ಪ್ರವೇಶ ೨.ಮೂಲ ಮತ್ತು ಪ್ರಸಾರ ೩.ಸ್ಥಳಾವರಣ ೪.ಬಂಧುತ್ವ ಮತ್ತು ವಿವಾಹ ೫.ಆರಾಧನೆ ಆಚರಣೆ ನಂಬಿಕೆ ೬.ಒಳಾಡಳಿತ ವ್ಯವಸ್ಥೆ ೭.ಆರ್ಥಿಕ ಜೀವನ ೮.ಸಾಹಿತ್ಯ ಮತ್ತು ಭಾಷೆ ೯.ಸಮಸ್ಯೆ ಸಂಘಟನೆ ಪರಿಹಾರ. ಕೆ.ಎಂ. ಮೇತ್ರಿ ಅವರ ಪ್ರಸ್ತಾವನೆ ಇದೆ.

೨೦೭೯. ಸಿಡಿ

ಲೇ: ಮುಳ್ಳೂರು ನಾಗರಾಜು; ಪ್ರ: ರಾಜ್ಯಸಂಪನ್ಮೂಲ ಕೇಂದ್ರ, ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಕುವೆಂಪು ನಗರ, ಮೈಸೂರು-೫೭೦೧ ೦೨೩; ಮೊ.ಮು: ೧೯೮೯; ಫೂಲ್ಸ್ ಕ್ಯಾಪ್ ೧/೪

ಜನಪದ ಆಚರಣೆಯೊಂದರ ಚಿತ್ರಣ ಉಳ್ಳ ಕೃತಿ. ಒಳಪುಟಗಳಲ್ಲಿ ಈ ಶೀರ್ಷಿಕೆಗಳಿವೆ: ನಮ್ಮ ಮೂಢನಂಬಿಕೆಗಳು, ಸಿಡಿ ಮರ, ಸಿಡಿಗಾರನ ನಿಯಮಗಳು, ಸಿಡಿಹಬ್ಬ, ಸಿಡಿಯ ಬಗೆಗಳು; ೧.ಕೊಕ್ಕೆ ಸಿಡಿ ೨.ತೊಟ್ಟಿಲು ಸಿಡಿ ೩.ಹಗ್ಗದ ಸಿಡಿ ೪.ಗೊಂಬೆ ಸಿಡಿ. ಒಂದು ಮಾತುಕತೆ, ಸಿಡಿಗಾರನ ಮರಣ, ಉಪಸಂಹಾರ. ಲಿಂಗದೇವರು ಹಳೆಮನೆ ಅವರ ಮುನ್ನುಡಿ ಇದೆ. ರೇಖಾಚಿತ್ರಗಳಿವೆ.

೨೦೮೦. ಸಿದ್ಧರ ಭಂಡಾರ

ಲೇ: ಭೀರಪ್ಪ ತಿ. ಮೋಟೆ; ಪ್ರ: ದಾಂಗುಡಿ ಪ್ರಕಾಶನ, ಮಹಾಂತೇಶ ನಗರ, ರಾಮದುರ್ಗ; ಮೊ.ಮು.೨೦೦೦; ಪು: ೧೩+೫೧=೬೪; ಕ್ರೌನ್ ೧/೮

ಡೊಳ್ಳಿನ ಹಾಡುಗಳು ಎಂಬ ಅಡಿಬರಹ ಇದೆ. ೩೩ ಡೊಳ್ಳಿನ ಪದಗಳಿವೆ. ಎಲ್ಲವೂ ಸ್ವರಚಿತ. ರಾಜೇಂದ್ರ ಅಣ್ಣಾನವರ ಅವರ ಮುನ್ನುಡಿ ಇದೆ.

೨೦೮೧. ಸಿದ್ದಿಯರ ಕಥೆಗಳು

ಸಂ: ಎಲ್.ಆರ್. ಹೆಗಡೆ; ಪ್ರ: ಜ್ಞಾನ ಸಾಧನ ಗ್ರಂಥಮಾಲೆ, ಕುಮಟಾ(ಉ.ಕ); ಮೊ.ಮು.೧೯೭೮; ಪು: ೨೫೪; ಕ್ರೌನ್ ೧/೮

ಹನ್ನೊಂದು ಭಾಗಗಳಲ್ಲಿ ೩೪ ಕಥೆಗಳಿವೆ: **ಭಾಗ ಒಂದು: ಅತಿಮಾನುಷ ಸಹಾಯಕರು:** ೧.ಪಡೆದು ಬಂದದ್ದು. **ಭಾಗ ಎರಡು: ಅತಿಮಾನುಷ ಪತ್ನಿಯರು:** ೨.ಮರಾಟಿ ಹುಡುಗ. **ಭಾಗ ಮೂರು: ಅತಿಮಾನುಷ ಪತಿಗಳು:** ೩.ರಾಕ್ಷಸನ ಬಳಗ. **ಭಾಗ ನಾಲ್ಕು: ರಮ್ಯ ಕಥೆಗಳು:** ೪.ರಾಗಮಲ್ಲಿಗೆ ಹೂ ೫.ಮೀನದ ಆಶೆ ೬.ಹರಕೆಯ ಹುಡುಗ ೭.ಯಾರ್ ಬಂದ್ರೆ ಹೊತ್‌ಹಾಕೇನು ೮.ಅಕ್ಕ ತಮ್ಮ ೯.ಬಹದ್ದೂರ ಕನ್ಯೆ ೧೦.ಸವತಿ ಮತ್ಸರ. **ಭಾಗ ಐದು: ವಾಸ್ತವಿಕ ಕಥೆಗಳು:** ೧೧.ಪರರ ಕೇಡು ೧೨.ಲಗ್ನದ ಪಣ ೧೩.ಹುಲಿ ರಾಜ. **ಭಾಗ ಆರು: ಬುದ್ಧಿವಂತಿಕೆಯ ಕಥೆಗಳು:** ೧೪.ಕಳ್ಳ ಮಾವ ೧೫.ಅಡವಿಟ್ಟ ಸಾಮಾನು ೧೬.ಕಿಶ್‌ಮೆಂಟೆ. **ಭಾಗ ಏಳು: ಹಾಸ್ಯ ಕಥೆಗಳು:** ೧೭.ಜೈನಿಯ ಅತಿಥಿಗಳು ೧೮.ನನಗೆರಡು ನಿನಗೊಂದು: **ಭಾಗ ಎಂಟು: ಐತಿಹ್ಯ:** ೧೯.ಸಿದ್ದಿರಿಮ್ ಶಹಾ. **ಭಾಗ ಒಂಬತ್ತು: ಒಗಟಿನ ಕಥೆ:** ೨೦.ಜೀವದ ಹೆಂಡತಿ. **ಭಾಗ ಹತ್ತು: ಮನುಷ್ಯರು ಮತ್ತು ಪ್ರಾಣಿಗಳು:** ೨೧.ಪದ ಹೇಳಿದ ನರಿ ೨೨.ನರಿಯ ಹರಕೆ ೨೩.ಹುಲಿರಾಣಿ ೨೪.ನರಿಯೂ ವ್ಯಾಪಾರಿಯೂ ೨೫.ಹುಲಿ ಬೇಟೆ ೨೬.ಠಕ್ಕನರಿ ೨೭.ನರಿಯ ಪಾಲು ೨೮.ಒಂದು ಗಳೆಯಕ್ಕೆ ಹನ್ನೆರಡು ಗಳೆಯ ೨೯.ಹುರ್ಸಾನಕ್ಕಿ ತುಂಡು ೩೦.ಕಪ್ಪೆ ಒಯ್ದ ಹುಡುಗಿ ೩೧.ಪುಗಡಿ ಹಾಕುವ ಹುಡುಗಿ. **ಭಾಗ ಹನ್ನೊಂದು: ಪ್ರಾಣಿ ಕಥೆಗಳು:** ೩೨.ನರಿಗಂಡನ ಉಪಾಯ ೩೩.ಹವಾಲದಾರ ೩೪.ಬುದ್ಧಿಬಲವೇ ಬಲ. ೫೭ ಪುಟಗಳಷ್ಟು ವಿಸ್ತಾರವಾದ ಪೀಠಿಕೆ, ನಿರೂಪಕರು, ಅರ್ಥಕೋಶ, ಇವೆ.

೨೦೮೨. ಸಿದ್ಧಿಯರ ಸಂಸ್ಕೃತಿ

ಲೇ: ಹಿ.ಚಿ. ಬೋರಲಿಂಗಯ್ಯ; ಪ್ರ: ಕರ್ನಾಟಕ ಸಾಹಿತ್ಯ ಅಕಾಡೆಮಿ, ನೃಪತುಂಗ ರಸ್ತೆ, ಬೆಂಗಳೂರು-೫೬೦ ೦೦೨; ಮೊ.ಮು: ೧೯೯೩; ಪು: ೪೮+೧೧೬=೧೬೪; ಕ್ರೌನ್ ೧/೮

ಆರು ಅಧ್ಯಾಯಗಳಿವೆ: ೧.ಹಿನ್ನೆಲೆ: ಸ್ವಚ್ಛಂದತೆಯಿಂದ ಗುಲಾಮಗಿರಿಗೆ ೨.ಗೋವಾ ಕಂಡ ನೀಗ್ರೋ ಬದುಕು ೩.ನಮ್ಮೊಳಗೊಂದು ಪುಟ್ಟ ಆಫ್ರಿಕಾ ನಿರ್ಮಾಣಗೊಂಡ ಬಗೆ ೪.ಸಿದ್ಧಿಯರ ಮೂಲ ೫., ಸಿದ್ಧಿಯರ ಸಾಮಾಜಿಕ ಮತ್ತು ಆರ್ಥಿಕ ಬದುಕು ೬.ಸಿದ್ಧಿಯರ ಸಾಂಸ್ಕೃತಿಕ ಬದುಕು. ಅನುಬಂಧದಲ್ಲಿ, ಸಿದ್ಧಿಯರ ಕಥೆಗಳು, ಒಗಟುಗಳು, ಹಾಡುಗಳು ಇವೆ. ಎಲ್ಲವೂ ಮೂಲ ಸಿದ್ದಿ ಭಾಷೆಯಲ್ಲೂ ಜೊತೆಯಲ್ಲೆ ಕನ್ನಡದಲ್ಲೂ ಇವೆ. **ಕಥೆಗಳು:** ೧.ಸಿಕಾರ (ಬೇಟೆಗಾರ) ೨.ಕೌಡೋ ಅನಿಕಿಡೋ (ಹಕ್ಕಿ ಮತ್ತು ಹುಳ) ೩.ಗರಾಚೋ ಆಳ (ಮನೆಯ ಆಳು) ೪.ಕೋಲೋ ಅನಿ ಯುವರಾಜ (ನರಿ ಮತ್ತು ಯುವರಾಜ) ೫.ಜಾಗಳಿ ಅನಿ ವಾಗ (ದನಕಾಯುವವ ಮತ್ತು ಹುಲಿ)

೬.ರಾಜಾ ಅನೀ ಋಷಿ (ರಾಜಾ ಮತ್ತು ಋಷಿ) ೭.ಆವಯ್ಯೆ ಅನಿ ಪುತ (ತಾಯಿ ಮತ್ತು ಮಗ) ೮.ಕೊಲೊ ಅನಿ ಕೋಲ್ನಿ (ಗಂಡು ನರಿ ಮತ್ತು ಹೆಣ್ಣು ನರಿ) ೯.ರಾಜಾ ಅನಿ ಮಂತ್ರಿ (ರಾಜಾ ಮತ್ತು ಮಂತ್ರಿ) ೧೦.ಗವಾ ಅನಿ ಬಾಯಿಲ್ (ಗಂಡ ಮತ್ತು ಹೆಂಡತಿ) ೧೧.ಅಣ್ಣಾ ಅನಿ ತಮ್ಮ (ಅಣ್ಣ ಮತ್ತು ತಮ್ಮ) ೧೨.ರಾಜ ಅನಿ ಕುತರೆ (ರಾಜಾ ಮತ್ತು ಕುದುರೆ) ೧೩.ಸೋಸೊ ಅನಿ ಸಿಂಹ (ಮೊಲ ಮತ್ತು ಸಿಂಹ). ೨೮ ಒಗಟುಗಳಿವೆ. **ಹಾಡುಗಳು:** ೧.ಸಾರಾಯಿ ಹಂಬಲ ೨.ಮೇರಿ ೩.ವಿಯಾನ ೪.ಮದುವೆ ಹಾಡು ೫.ಹೆಂಡತಿಯನ್ನು ಮರೆಯಬೇಡ ೬.ಮದುವೆಯಲ್ಲಿ ಹಾಸ್ಯದ ಹಾಡು ೭.ಜೋಡಿ ಸರದಾರ ೮.ನೇರಳೆ ಹಣ್ಣು ೯.ನಾರಾಯಣ ಭಜನೆ ೧೦.ಕಳ್ಳಕೃಷ್ಣ. ಬರಗೂರು ರಾಮಚಂದ್ರಪ್ಪ ಅವರ ಸಂಸ್ಕೃತಿ–ಉಪಸಂಸ್ಕೃತಿ ಎಂಬ ಪ್ರಸ್ತಾವನೆ ಇದೆ.

೨೦೮೩. ಸೀಮೊಗೆ

ಸಂ: ಸಂಪಾದಕ ಮಂಡಳಿ; ಪ್ರ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಶಿವಮೊಗ್ಗ; ಮೊ.ಮು.೨೦೦೦; ಪು: ೧೦+೬೫೪=೬೬೪; ಡಿಮ್ಮೈ ೧/೮

ಶಿವಮೊಗ್ಗ ಜಿಲ್ಲೆಯ ಆಕರ ಗ್ರಂಥ ಎಂಬ ಅಡಿಬರಹ ಇದೆ. ಈ ಗ್ರಂಥದಲ್ಲಿ ಹದಿಮೂರು ಭಾಗಗಳಿದ್ದು ಅವುಗಳಲ್ಲಿ ಸಾಹಿತ್ಯ ಎಂಬ ಭಾಗವೊಂದಿದೆ. ಈ ಭಾಗದಲ್ಲಿ ಜಾನಪದಕ್ಕೆ ಸಂಬಂಧಿಸಿದ ಒಂದು ಲೇಖನವಿದೆ: ೧.ಶಿವಮೊಗ್ಗ ಜಿಲ್ಲೆಯ ಜಾನಪದ – ಸಣ್ಣರಾಮ.

೨೦೮೪. ಸಿರಗಾಪುರ ನಾಗೇಂದ್ರಪ್ಪ ಕವಿಯ ಭಜನೆ ಹಾಡುಗಳು

ಸಂ: ಸಂಗಮೇಶ ಸವದತ್ತಿಮಠ; ಪ್ರ: ಶ್ರೀ ಚನ್ನಬಸವೇಶ್ವರ ಸಂಸ್ಥಾನ ಹಿರೇಮಠ, ಸುಕ್ಷೇತ್ರ ಹಾರಕೂಡ–೫೮೫ ೪೩೭, ಬಸವಕಲ್ಯಾಣ ತಾಲ್ಲೂಕು, ಬೀದರ ಜಿಲ್ಲೆ; ಮೊ.ಮು: ೨೦೧೦; ಪು: ೨೦+೧೬೪=೧೮೪; ಡಿಮ್ಮೈ ೧/೮

ಆರು ಅಧ್ಯಾಯಗಳಿ ಒಟ್ಟು ೧೨೦ ಹಾಡುಗಳನ್ನು ಮೂರು ಭಾಗಗಳಾಗಿ ವಿಂಗಡಿಸಲಾಗಿದೆ: **ಭಾಗ ೧:** ಸುಕ್ಷೇತ್ರ ಹಾರಕೂಡ ಮತ್ತು ಹಾರಕೂಡ ಶ್ರೀಗಳನ್ನು ಕುರಿತ ಪದಗಳು. **ಭಾಗ ೨:** ಭಕ್ತಿ ಪದಗಳು–ಧಾರ್ಮಿಕ. **ಭಾಗ ೩: ನೀತಿಬೋಧಕ ಪದಗಳು (ಸಾಮಾಜಿಕ).** ಮಹಾದೇವಿ ಕವಿರಾಜ ಪಾಟೀಲ ಅವರ ಹಿತನುಡಿ, ಕವಿರಾಜ ಪಾಟೀಲ ಮೈಸಲಗಿ ಅವರ ವರಕವಿ ಸಿಂಗಾಪುರ ನಾಗೇಂದ್ರಪ್ಪ ಎಂಬ ಲೇಖನ, ಕೊನೆಯಲ್ಲಿ, ಪ್ರಾದೇಶಿಕ ವಿಶಿಷ್ಟ ಪದಗಳ ಅರ್ಥ, ಇವೆ.

೨೦೮೫. ಸಿರಿ ಸಂಪಿಗೆ

ಸಂ & ಪ್ರ: ಬೆಸೂರು ಮೋಹನ್ ಪಾಳೇಗಾರ್; ೧೪೫೫, ೩ನೇ ಕ್ರಾಸ್, ಚಾಮುಂಡೇಶ್ವರಿ ರಸ್ತೆ, ಮಹಾದೇವಪುರ, ಜೆ.ಪಿ.ನಗರ, ಮೈಸೂರು–೫೭೦ ೦೦೮; ಮೊ.ಮು. ೨೦೧೦; ಪು: ೬+೪೦೪=೪೧೦; ಡಿಮ್ಮೈ ೧/೮

ಜನಪದ ಕಥೆಗಳು ಎಂಬ ಅಡಿಬರಹ ಇದೆ. ೧೧೮ ಕಥೆಗಳಿವೆ. "ಕಿನಿ ಕಥೆಗಳು, ನೀತಿ ಕಥೆಗಳು, ಅತಿಮಾನುಷ ಕಥೆಗಳು, ವಿನೋದ ಕಥೆಗಳು, ಪ್ರಾಣಿ-ಪಕ್ಷಿಗಳ ಕಥೆಗಳು, ರಾಮಾಯಣ-ಮಹಾಭಾರತ ಕಥೆಗಳು ಎಂಬುದಾಗಿ ವಿಂಗಡಿಸಿದ್ದೇನೆ" ಎಂಬುದಾಗಿ ಸಂಪಾದಕರು ಹೇಳಿಕೊಂಡಿದೆ. ಆದರೆ ಇವೆಲ್ಲ ಮತ್ತೆ ಹೇಳಿದ ಕಥೆಗಳು ಎನ್ನಿಸಿಕೊಳ್ಳುತ್ತವೆ. ಸ್ವಂತ ಕಥೆಗಳೂ ಇರುವಂತೆ ತೋರುತ್ತದೆ.

೨೦೮೬. ಸಿರಿಗಂಧ ಸೂಸ್ಯಾವೆ

ಸಂ: ಜಿ.ಎಸ್. ಭಟ್ಟ ಉಬರಡ್ಕ; ಪ್ರ: ವಸಂತ ಸಾಹಿತ್ಯ, ಚೊಕ್ಕಾಡಿ, ದ.ಕ; ಮೊ.ಮು: ೧೯೬೮; ಪು: ೭೬; ಕ್ರೌನ್ ೧/೮

ಜಾನಪದ ಗೀತೆಗಳು ಎಂಬ ಅಡಿಬರಹ ಇದೆ. ಬಗೆಯಾಗಿ ಇಲ್ಲಿನ ಹಾಡುಗಳನ್ನು ವಿಭಾಗಿಸಲಾಗಿದೆ: **ಬಗೆ ಒಂದು: ಭಕ್ತಿ ಗೀತೆಗಳು:** ೧.ಸುಂಡ್ಹಳ್ಳಿ ಬೆನಕಾ ಕೊಡುಮತಿಯ ೨.ಶಿವನಿಗೆ ಆರತಿ ಬೆಳಗಿದೆವು ೩.ತಾಯಿ ಗೌರಮ್ಮನನ್ನು ನೆನೆದು. **ಬಗೆ ಎರಡು: ಭಾವಗೀತೆಗಳು:** ೧.ಕುಣಿಗಲೇರಿಯ ಮ್ಯಾಲೆ (ತಿಂಗಳು ಮಾವನ ಪೂಜೆ ಹಾಡು) ೨.ಬೋರು ಬೋರೆಂಬ ಮಳೆ ಬರಲಿ ೩.ಕಲ್ಲೀನಂಥ ಮಳೆಯು ಬಂತಯ್ಯ ೪.ಮತಿಗೆಡದಿರು ಮಧ್ಯದಲ್ಲಿ ೫.ಹನುಮಗರುಡ ಜಗಳ ೬.ಅಟ್ಟುಂಡೋಗ್ಯವ್ರೆ ವನದೇಶ ಪಾಂಡವರು ೭.ಹೂವಕುಯ್ಯಲೊ ೮.ಪ್ರಶ್ನೆ-ಉತ್ತರ ೯.ಮಾದನ ಹಾಡು. **ಬಗೆ ಮೂರು: ಪ್ರೇಮಗೀತೆಗಳು:** ೧.ನೆನಪಿದ್ದಂಗೆ ಬಾರೋ ಜಾಣ ೨.ನಿಲ್ಲಲೆ ಬಾಲೆ ಬರುತೀನಿ ೩.ಆತನ್ ಮನಸೇನೆ ೪.ಗೆಣತಿ ಮಾತ ಗೆಣೆಯ ಕೇಳಿ ೫.ಜಲತಾರದೋಲೆ ಕಿವಿಯೋಳೆ ೬.ಕೊಟ್ಟೋಯ್ತು ಮೊನ್ನೆ ಶಿವನೀಗೆ ೭.ಭಾವ ತಂದಾನೆ ಬಣ್ಣದ್ಸೀರ್‍ಯೋ ೮.ಸೀಳಿ ಮಾರ್‍ಯಾವೆ ಸಿರಿಗಂಧ ೯.ದೊಂಬರಗೌರಿ ೧೦.ದಂಡಿಗೆ ಹೋದ ವ್ಯಾಳಿಯ ನೋಡಿ ೧೧.ಹೋಯ್ತೀನಿ ಹೊನ್ನೇ ತವರೀಗೆ ೧೨.ಮಾತಿನರಗಿಣಿಯ ಮುಖತೋರೆ ೧೩.ನೋಡೋಕೆ ಬಂದವರು ಬೆದರ್‍ಯಾರೊ ೧೪.ನಾನೋಗತೀನೊ ೧೫.ಮುಂದಾಲೂರಿಗೆ ಹೋಗುವಣಾ ಬಾರೆ. ಬಗೆ ನಾಲ್ಕು: ಕೋಲು ಗೀತೆಗಳು: ೧.ಚಾಮುಂಡಿ ಕದವ ತೆಗಿ ಎಂದ ೨.ವೀರಾ ಜಂಪಣ್ಣ ಬರುವ್ಹೊತ್ತಿಗೆ ೩.ಮೇಲುಕೋಟೆ ಚೆಲುವರಾಯ ೪.ಮಾದಯ್ಯ ಹೆಬ್ಲೂಲಿ ಬೇಟೆಗ್ಹೊರಟಾನು ೫.ಬಾಲೆ ಕೋಲಾಟಕೆ ಹೊರಟಾಳೆ ೬.ನೂತಳಜ್ಜಿ ನೂಲನ್ನ ೭.ಕೋಲು ಕೋಲನ್ನ ಕೋಲೆ. ಹಾಡಿನ ಕೊನೆಯಲ್ಲಿ ಎಡೆ ಉಳಿದರೆ ಅಂಥ ಎಡೆಯನ್ನು ತುಂಬುವ ಸಲುವಾಗಿಯೋ ಏನೋ ಅಲ್ಲಲ್ಲಿ ಮಾಸ್ತಿ ವೆಂಕಟೇಶ ಅಯ್ಯಂಗಾರ್, ಕೆ.ವಿ. ಸುಬ್ಬಣ್ಣ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಯು.ಆರ್.ಅನಂತಮೂರ್ತಿ, ಎಚ್.ಎಲ್. ನಾಗೇಗೌಡ ಅವರುಗಳ ಮಾತುಗಳನ್ನು ಬಳಸಲಾಗಿದೆ. ಕೊನೆಯಲ್ಲಿ, (ಪದ್ಯಗಳಿಗೆ ಅನುಸಾರವಾಗಿ) ಅರ್ಥಸೂಚಿ, ಕುಣಿಗಲೇರಿಯ ಮ್ಯಾಲೆ. ಎಂಬ ತಿಂಗಳು ಮಾವನ ಪೂಜೆಯ ಹಾಡಿಗೆ ಟಿಪ್ಪಣಿ, ಇವೆ.

೧.(ಅಸಂಪೂರ್ಣವಾಗಿದೆ) ೨.(ಉತ್ತರದೇವಿ ಹಾಡು)

೨೦೮೭. ಸಿರಿಗನ್ನಡ ಒಡಪುಗಳು

ಸಂ: ಎಂ.ಎನ್. ವಾಲಿ; ಪ್ರ: ಭುವನೇಶ್ವರಿ ಪ್ರಕಾಶನ ವಿಜಾಪುರ; ಮೊ.ಮು. ೧೯೮೫; ಪು: ೨೮+೬೮ = ೯೬; ಕ್ರೌನ್ ೧/೮

ಎರಡು ಭಾಗಗಳಲ್ಲಿರುವ ಸಂಗ್ರಹ: **೧.ಹೆಂಗಸರ ಒಡಪುಗಳು:** ಉಪಶೀರ್ಷಿಕೆಗಳು ಹೀಗಿವೆ: ಗಂಡನ ಗುಣಗಾನ ಗಂಡನ ಮೊಂಡತನ–ದೋಷ ಆಭರಣಗಳ ವ್ಯಾಮೋಹ ದೇವ–ಧರ್ಮ–ನ್ಯಾಯ–ನೀತಿ–ಸಂಬಂಧ ಹಾಸ–ಪರಿಹಾಸ ಆತ್ಮಪ್ರಶಂಸೆ–ಮುಗ್ಧತೆ–ಕ್ಷಮಾಪಣೆ ಆಧುನಿಕತೆ ಶುಭ–ಶೋಭನ ಕಾರ್ಯವಿಧಾನಗಳು. **೨.ಗಂಡಸರ ಒಡಪುಗಳು.** ಸಿಂಪಿ ಲಿಂಗಣ್ಣ ಅವರ ಮುನ್ನುಡಿ, ಸಂಪಾದಕರ ಪ್ರಸ್ತಾವನೆ, ಕೊನೆಯಲ್ಲಿ ಶಬ್ದಕೋಶ, ಕೆಲವು ಊರ ಹೆಸರುಗಳು ಮತ್ತು ಆಭರಣಗಳ ಹೆಸರುಗಳು, ಇವೆ.

೨೦೮೮. ಸಿರಿ ಚುಂಚನಗಿರಿ

ಲೇ: ಡಾ. ಪಿ. ಕೆ. ರಾಜಶೇಖರ; ಪ್ರ: ಹೊನ್ನಾರು ಜನಪದ ಗಾಯಕರು, ಮೈಸೂರು; ಮೊ.ಮು.೧೯೯೫; ಪು: ೦೮+೮೮ =೯೬ ಕ್ರೌನ್ ೧/೮

ಜನಪದ ಕಾವ್ಯದ ವಚನರೂಪ. ಅಡಿಬರಹ ಇದೆ. ಗ್ರಂಥವನ್ನು ಐದು ಭಾಗಗಳಾಗಿ ವಿಂಗಡಿಸಲಾಗಿದೆ. ೧.ಇದು ಚುಂಚನಗಿರಿ ೨.ಭೂಮಿಗೆ ಬಂದ ಭೈರವೇಶ್ವರ ೩.ಕಾಲಭೈರವನೋ? ಕಳ್ಳ ಭೈರವನೋ? ೪.ಆದಿಚುಂಚನಗಿರಿ ಅರ್ಜುನಸ್ವಾಮಿ ೫.ಜ್ಯೋತಿ ಭೈರವಗೆ ಶರಣು ಶರಣಾರ್ತಿ. ಏಳು ಗ್ರಂಥಗಳ 'ಆಕರಗಳು' ವಕ್ತೃಗಳು, ಗಾಯಕರು – ಈ ವಿವರಗಳನ್ನು ಪರಿವಿಡಿಯ ಹಿಂಬದಿಯ ಪುಟದಲ್ಲಿ ನೀಡಲಾಗಿದೆ. 'ರಾಸಿ ಅಳದೇನು ರವಿಚಿನ್ನ' ಎಂಬ ಶೀರ್ಷಿಕೆಯ ಲೇಖಕರ ಮಾತುಗಳಿವೆ.

೨೦೮೯. ಚುಂಚನಗಿರಿ ಭೈರವೇಶ್ವರ

ಸಂ: ಪಿ.ಕೆ. ರಾಜಶೇಖರ; ಪ್ರ: ಹೊನ್ನಾರು ಜನಪದ ಗಾಯಕರು, ಮೈಸೂರು; ಮೊ.ಮು. ೧೯೮೩; ಪು: ೧೬+೪೮=೬೪; ಕ್ರೌನ್ ೧/೮

ಚುಂಚನಗಿರಿ ಭೈರವೇಶ್ವರ ಹಾಗೂ ಆದಿಚುಂಚನಗಿರಿ ಅರ್ಜುನಸ್ವಾಮಿ ಎಂಬ ಎರಡು ಕಾವ್ಯಗಳ ಸಂಕಲನವಿದು. ಪ್ರಸ್ತಾವನೆ, ಅರ್ಥಕೋಶ, ಇವೆ.

೨೦೯೦. ಸುಂದರ ಕೃತಿ ಸಂಪುಟ–೧: ಪುಸ್ತಕಗಳು

ಲೇ: ಆರ್ವಿಯಸ್. ಸುಂದರಂ; ಪ್ರರಿಶಿ ಏಜೆನ್ಸೀಸ್, ೮೨೫, ೪/೬, ಈ ಮತ್ತು ಎಫ್ ಬ್ಲಾಕ್, ರಾಮಕೃಷ್ಣ ನಗರ, ಮೈಸೂರು–೨೨ ಮೊ.ಮು: ೨೦೦೯; ಪು: ೧೦+೭೧೬=೭೨೬; ಡೆಮ್ಮಿ ೧/೮

ಈ ಗ್ರಂಥದಲ್ಲಿ ಮೂರು ಭಾಗಗಳಿವೆ. ಅವುಗಳಲ್ಲಿ ಜಾನಪದಕ್ಕೆ ಸಂಬಂಧಪಟ್ಟದ್ದು **ಭಾಗ ಒಂದು: ಜಾನಪದ–ದೇಶಿ.** ಇದರಲ್ಲಿ ಮೂರು ಭಾಗಗಳು: ೧.ಜನಪದ ಸಾಹಿತ್ಯದ ಮೂಲತತ್ವಗಳು ೨.ಕರ್ನಾಟಕಾಂಧ್ರ ಯಕ್ಷಗಾನ ಸಮೀಕ್ಷೆ ೩.ದೇಶಿ–ದೇಶಿಯತೆ–ದೇಶೀವಾದ. ಒಂದನೆಯದರಲ್ಲಿ ಆರು ಅಧ್ಯಾಯಗಳಿವೆ: ೧.ಪ್ರವೇಶ ೨.ಜನಪದ ಗೀತೆ ೩.ಕಥನಗೀತೆ ೪.ಜನಪದ ಕಥೆ ೫.ಗಾದೆ ೬.ಒಗಟು. ಎರಡನೆಯದರಲ್ಲಿ, ಯಕ್ಷಗಾನದ ಉಗಮ, ಯಕ್ಷಗಾನದ ವಸ್ತು, ರಚನೆ–ಪ್ರಯೋಗ, ಪಾತ್ರಗಳು–ವೇಷಭೂಷಣಗಳು, ತೌಲನಿಕ ಸಿಂಹಾವಲೋಕನ ಎಂಬ ಐದು ಅಧ್ಯಾಯಗಳಿವೆ. ಮೂರನೆಯದರಲ್ಲಿ, ಮಾರ್ಗ ಮತ್ತು ದೇಶಿ; 'ದೇಶಿ'ಯ ಸ್ವರೂಪ; ಸಾಹಿತ್ಯದಲ್ಲಿ ದೇಶಿ: ಕನ್ನಡ ಸಾಹಿತ್ಯದಲ್ಲಿ ದೇಶಿ, ತಮಿಳು ಸಾಹಿತ್ಯದಲ್ಲಿ ದೇಶಿ, ತೆಲುಗು ಸಾಹಿತ್ಯ, ಮಲಯಾಳಂ ಸಾಹಿತ್ಯ; ದೇಶೀಯತೆ; ದೇಶೀವಾದ: ಪ್ರಾದೇಶಿಕತೆ, ದೇಶೀವಾದದ ಲಕ್ಷಣಗಳು, ನೆಮಾಡೆ–ದೇಶೀವಾದ, ದೇಶೀವಾದ–ಆಧುನಿಕತೆ, ದೇಶಿ–ಮಾರ್ಗ–ಜಾನಪದ–ಶಿಷ್ಟ

೨೮೯೧. ಸುಂದರ ಕೃತಿ ಸಂಪುಟ–೨: ಲೇಖನಗಳು

ಲೇ: ಆರ್ವಿಯಸ್. ಸುಂದರಂ; ಪ್ರ: ಶಾರದಾ ಮಂದಿರ, ೧೦೬೩/೯೩ಬಿ, ೧ನೇ ಮುಖ್ಯ ರಸ್ತೆ, ೭ನೇ ಕ್ರಾಸ್, ವಿದ್ಯಾರಣ್ಯ ಪುರಂ, ಮೈಸೂರು–೦೮, ಮೊ.ಮು: ೨೦೦೯; ಪು:೧೨+೫೮೪=೫೯೬; ಡಿಮ್ಮೈ ೧/೮

ಮೂರು ಭಾಗಗಳನ್ನುಳ್ಳ ಗ್ರಂಥ. ಇವುಗಳಲ್ಲಿ ಒಂದನೆಯ ಭಾಗದಲ್ಲಿ ಜಾನಪದಕ್ಕೆ ಸಂಬಂಧಿಸಿದ ಇಪ್ಪತ್ತು ಲೇಖನಗಳಿವೆ: ೧.ಜಾನಪದ ಸ್ವರೂಪ–ಮರು ವಿವೇಚನೆ ೨.ಅಲೆಮಾರಿಗಳು ೩.ಜನಪದ ಕಥೆಗಳು–ಮಾನವಶಾಸ್ತ್ರ ೪.ಜಾನಪದ ಮತ್ತು ರಚನಾವಾದ ೫.ಜನಪದ ವೈದ್ಯ: ಉಗಮ–ವಿಕಾಸ–ಸ್ವರೂಪ–ಲಕ್ಷಣಗಳು ೬.ಕನಸುಗಳು ೭.ಕಣಿ–ಭವಿಷ್ಯ–ಮಾಟ–ಮಂತ್ರ ೮.ದೇವರ ಗುಡ್ಡರು ೯.ಯಕ್ಷಗಾನ ಯಾರದು? ೧೦.ಕೇಳಿಕೆ ೧೧.ಜಾನಪದ ಅಧ್ಯಯನ ೧೨.ದಕ್ಷಿಣ ಭಾರತೀಯ ಅಧ್ಯಯನ ೧೩.ದ್ರಾವಿಡ ಜನಪದ ರಂಗಭೂಮಿ ೧೪.ಆಂಧ್ರ ಪ್ರದೇಶ ಮತ್ತು ಜಾನಪದ ೧೫.ತೆಲುಗು ಜನಪದ ಸಂಸ್ಕೃತಿ ೧೬.ತೆಲುಗುನಾಡಿನ ಜನಪದ ರಂಗಭೂಮಿ ೧೮.ತೆಲುಗು ಯಕ್ಷಗಾನಗಳು ೧೯.ತೆಲುಗು ಜಾನಪದ–ವೈಜ್ಞಾನಿಕ ಬಗೆ ೨೦.ಕೇರಳ ಜಾನಪದ

೨೮೯೨. ಸುಕ್ರಿ ಬೊಮ್ಮಗೌಡ

ಲೇ: ಶಾಂತಿ ನಾಯಕ; ಪ್ರ: ಕರ್ನಾಟಕ ಜಾನಪದ ಪರಿಷತ್ತು, ೧, ಜಲದರ್ಶಿನಿ ಬಡಾವಣೆ, ಎಂ.ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ, ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು–೫೬೦ ೦೫೪; ಮೊ.ಮು.೨೦೧೧; ಪು: ೪೧; ಕ್ರೌನ್ ೧/೮

ವ್ಯಕ್ತಿ ಪರಿಚಯ ಎಂಬ ಅಡಿಬರಹ ಇದೆ. ಜಿ. ನಾರಾಯಣ ಅವರ ಅಧ್ಯಕ್ಷರ ಮಾತು ಎಂಬ ಮುನ್ನುಡಿ ಇದೆ.

೨೧೯೩. ಸುಗ್ಗಿಯ ಪದಗಳು

ಸಂ: ಎನ್.ಆರ್. ನಾಯಕ; ಪ್ರ: ಜಾನಪದ ಪ್ರಕಾಶನ, ಪ್ರಭಾತನಗರ, ಹೊನ್ನಾವರ, ಉತ್ತರಕನ್ನಡ; ಮೊ.ಮು. ೧೯೮೬; ಪು: ೬+೧೧೨=೧೧೮; ಕ್ರೌನ್ ೧/೮

೫೭ ಹಾಡುಗಳನ್ನು ಹತ್ತು ಭಾಗಗಳನ್ನಾಗಿ ವಿಂಗಡಿಸಲಾಗಿದೆ: ೧.ಸುಗ್ಗಿಪೀಠಿಕೆ ೨.ದೇವತಾ ಸ್ತುತಿ ೩.ಪ್ರೀತಿ ಹಾಸ ೪.ಒಗಟು ೫.ಏಕಾವಳಿ ೬.ಬಿಡಿಪದಗಳು ೭.ಬಿಡಿ ದ್ವಿಪದಿಗಳು ೮.ಅಲಾವಿ ಪದಗಳು ೯.ಮುಕ್ತಾಯ ೧೦.ಕಾಮದಹನ. ಸಂಪಾದಕರ ಪ್ರಸ್ತಾವನೆ ಇದೆ.

೨೧೯೪. ಸುಡಗಾಡು ಸಿದ್ಧರ ಸಂಸ್ಕೃತಿ

ಲೇ: ಡಾ. ಪಿ.ಕೆ. ಖಂಡೋಬಾ; ಪ್ರ: ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು; ಮೊ.ಮು.: ೧೯೯೩, ಪು: ೪೮+೧೭೨=೨೨೦, ಕ್ರೌನ್ ೧/೮

ಈ ಗ್ರಂಥದಲ್ಲಿ ಒಂಬತ್ತು ಅಧ್ಯಾಯಗಳಿವೆ. ೧.ಹಿನ್ನೆಲೆ ೨.ಜೀವನ ವಿಧಾನ ಮತ್ತು ಸಾಮಾಜಿಕ ವ್ಯವಸ್ಥೆ ೩.ಭಾಷೆ ಮತ್ತು ಸಾಹಿತ್ಯ ೪.ಆಚರಣೆ ಮತ್ತು ಕಲೆ ೫.ಪ್ರದರ್ಶನಾತ್ಮಕ ಕಲೆಗಳು ೬.ಕ್ರೀಡೆಗಳು ೭.ಸಾಮಾಜಿಕ ಪರಿವರ್ತನೆಯ ಹಿನ್ನೆಲೆಯಲ್ಲಿ ೮.ಸಮಾರೋಪ ೯.ಅನುಬಂಧ. ಈ ಒಂಭತ್ತನೆಯ ಅಧ್ಯಾಯದಲ್ಲಿ ಮೂರು ಭಾಗಗಳಿವೆ. ೧.ಸುಡುಗಾಡು ಸಿದ್ಧರ ಸಾಹಿತ್ಯ ೨.ಗ್ರಂಥಸೂಚಿ ೩.ಪ್ರಮುಖ ನಿರೂಪಕರು. ಪ್ರಾರಂಭದಲ್ಲಿ ಬರಗೂರು ರಾಮಚಂದ್ರಪ್ಪ ಅವರ 'ಸಂಸ್ಕೃತಿ–ಉಪಸಂಸ್ಕೃತಿ'ಎಂಬ ಸಂಶೋಧನಾತ್ಮಕ ಪ್ರಸ್ತಾವನೆ ಇದೆ. ಗ್ರಂಥಸೂಚಿ ಎಂಬ ಭಾಗದಲ್ಲಿ ಗ್ರಂಥ ರಚನೆಗೆ ನೆರವಾಗಿರುವ ೬ ಇಂಗ್ಲಿಷ್, ೫ ಕನ್ನಡ ಹಾಗೂ ೭ ನಿಯತಕಾಲಿಕೆ ಪತ್ರಿಕೆಗಳ ಪಟ್ಟಿ ಇದೆ. ೮ ಛಾಯಾಚಿತ್ರಗಳಿವೆ.

೨೧೯೫. ಸುಪ್ರಸಿದ್ಧ ಗಾದೆಗಳು ಮತ್ತು ವಿಸ್ತರಣೆ

ನಿರೂಪಣೆ: ನಾಗರತ್ನ ಹೆಮ್ಮಿಗೆ; ಪ್ರ: ದಿವ್ಯಚಂದ್ರ ಪ್ರಕಾಶನ, ೪೫, ೧ನೇ ಮುಖ್ಯ ರಸ್ತೆ, ೨ನೇ ಅಡ್ಡ ರಸ್ತೆ, ಪಾಪಣ್ಣನ ತೋಟ, ಕರ್ನಾಟಕ ಹೌಸಿಂಗ್ ಬೋರ್ಡ್ ಕಾಲೋನಿ, ೨ನೇ ಹಂತ, ಬಸವೇಶ್ವರ ನಗರ, ಬೆಂಗಳೂರು–೫೬೦ ೦೭೯; ಮೊ.ಮು: ೨೦೦೦; ಪು: ೬೦; ಕ್ರೌನ್ ೧/೮

ಗಾದೆಗಳು ಹುಟ್ಟುವ ಸಂದರ್ಭ ಉದ್ದೇಶ ಇತ್ಯಾದಿಗಳನ್ನು ಒಳಗೊಂಡು ವಿವರಣೆಗಳು ಇಲ್ಲಿವೆ. ರಾಗೌ ಅವರ ಮುನ್ನುಡಿ ಇದೆ. ಎಸ್.ಮಂಗಳಾ ಸತ್ಯನ್ ಅವರ ಹಿನ್ನುಡಿ ಹಿಂಬಂದಿಯ ರಕ್ಷಾಪುಟದಲ್ಲಿದೆ.

೨೦೯೬. ಸುಪ್ರಸಿದ್ಧ ಸಾವಿರಾರು ಒಗಟುಗಳು

ಸಂ: ಮಾನಸ, ಮಂಜುಳಾ ಮಾನಸ; ಪ್ರ: ತುನುಮನು ಪ್ರಕಾಶನ, ೪೨, ಜಿ ಬ್ಲಾಕ್, ೩ನೇ ತಿರುವು, ರಾಮಕೃಷ್ಣನಗರ, ಮೈಸೂರು – ೨೩; ಮೊ.ಮು: ೧೯೯೯; ಪು: ೮೮; ಕ್ರೌನ್ ೧/೮.

೧೦೦೬ ಒಗಟುಗಳ ಸಂಕಲನ, ಉತ್ತರ ಸಹಿತ.

೨೦೯೭. ಸುಬ್ಬಕ್ಕ ಹಾಡಿದ ನಂಜುಂಡೇಶ್ವರ ಕಾವ್ಯ

ಸಂ: ಕ್ಯಾತನಹಳ್ಳಿ ರಾಮಣ್ಣ; ಪ್ರ: ದಿನಕರ ಪ್ರಕಾಶನ, ೧೪೭, ೬ನೇ ಕ್ರಾಸ್, ಆಜಾದ್‌ನಗರ, ಬೆಂಗಳೂರು–೫೬೦ ೦೧೮; ಮೊ.ಮು. ೧೯೮೦; ಪು: ೧೨+೧೧೬=೧೨೮; ಡಿಮ್ಮೈ ೧/೧೨

ನಂಜುಂಡೇಶ್ವರನ ಬಾಲ್ಯವನ್ನು ಹೇಳುವ ದ್ವಿಪದಿ ರೂಪದಲ್ಲಿ ಹಾಡಲ್ಪಟ್ಟಿರುವ ಖಂಡಕಾವ್ಯ. ಪಿ.ಕೆ. ರಾಜಶೇಖರ ಅವರ ಮುನ್ನುಡಿ, ಕೊನೆಯಲ್ಲಿ ಜನಪದ ಶಬ್ದರೂಪಗಳು, ಇವೆ.

೨೦೯೮. ಸುಮಯ್ಯಾ

ಲೇ: ಸಾರಾ ಅಬೂಬಕ್ಕರ್; ಪ್ರ: ಚಂದ್ರಗಿರಿ ಪ್ರಕಾಶನ, ೨–೨೧–೧೬೩೧/೨, ಮೈಕ್ರೊವೇವ್ ಸ್ಟೇಶನ್ ರಸ್ತೆ, ಮಂಗಳೂರು–೫೭೫ ೦೦೬; ಮೊ.ಮು.೨೦೦೪; ಪು: ೪+೧೦೬=೧೧೦; ಕ್ರೌನ್ ೧/೮

ನವ ಸಾಕ್ಷರರಿಗಾಗಿ ಜಾನಪದ ಕತೆಗಳು ಎಂಬ ಅಡಿಬರಹ ಇದೆ. ಎರಡು ಕತೆಗಳಿವೆ: ೧.ಸುಮಯ್ಯಾ ೨.ಹುಸುನುಲ್ ಜಮಾಲ್.

೨೦೯೯. ಸುರಿಗಿ ಸುವ್ವಾಲಿ

ಸಂ: ಸುಜಾತ ಅಕ್ಕಿ; ಪ್ರ: ರಚನಾ ಪ್ರಕಾಶನ, ಕೇರಾಫ್ ರಚನಾ ಕನ್ಸಲ್ಟಂಟ್ಸ್, ರಾಮನಗರ, ಹಗರಿಬೊಮ್ಮನಹಳ್ಳಿ–೫೮೩ ೨೧೨; ಮೊ.ಮು.೧೯೯೮; ಪು: ೨೨೪; ಡಿಮ್ಮೈ ೧/೮

ಜನಪದ ಮುಕ್ತಕಗಳು ಎಂಬ ಅಡಿಬರಹ ಇದೆ. ೬೫ ಹಾಡುಗಳ ಸಂಕಲನ. ನಡುವೆ ಅಲ್ಲಲ್ಲಿ ಬಿಟ್ಟುಹೋದದ್ದುಳಿದರೆ ಬಹುಪಾಲು ಎಲ್ಲ ಹಾಡುಗಳ ಅಂತ್ಯದಲ್ಲಿಯೂ ಗದ್ಯದ ವಿವರಣೆಯಿದೆ – ಫೋಟೋದೊಂದಿಗೆ. ಕೊನೆಯಲ್ಲಿ ಪುರುಷರು ಹೇಳುವ ಹಾಗೂ ಸ್ತ್ರೀಯರು ಹೇಳುವ ತಲಾ ಹದಿನೈದು ಒಡುಪುಗಳಿವೆ. ಮತ್ತೆ ಒಡುಪುಗಳ ಕೊನೆಯಲ್ಲಿ ಗದ್ಯದ ವಿವರಣೆ ಇದೆ. ಅರ್ಥಕೋಶವು ಪ್ರತಿಯೊಂದು ಹಾಡಿಗೂ ಪ್ರತ್ಯೇಕವಾಗಿ ರೂಪಿಸಲ್ಪಟ್ಟಿದೆ. ಸಾ.ಶಿ. ಮರುಳಯ್ಯ ಅವರ ಮುನ್ನುಡಿ ಇದೆ.

೨೧೦೦. ಸುಲಭ ಸಂಜೀವಿನಿ: ಮನೆ ಮದ್ದಿನ ಕೈಪಿಡಿ

ಲೇ: ಸತ್ಯನಾರಾಯಣ ಭಟ್ ಪಿ.; ಪ್ರ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ; ಮೊ.ಮು.೨೦೧೧; ಪು: ೮+೧೧೪=೧೨೨; ಡಿಮ್ಮೈ ೧/೮

೧೦೬ ಬಗೆಯ ಗಿಡಮೂಲಿಕೆಗಳನ್ನೂ ಅವುಗಳ ಚಿಕಿತ್ಸಾಪರಿಹಾರಗಳನ್ನೂ ವಿವರಿಸುವ ಗ್ರಂಥ. ಅಲ್ಲಲ್ಲಿ ಹಲವಾರು ರೇಖಾಚಿತ್ರಗಳಿವೆ. ಎ.ಮುರಿಗೆಪ್ಪ ಅವರ ಶಬ್ದಪಾರಮಾರ್ಗಮಶಕ್ಯಂ ಎಂಬ ಮುನ್ನುಡಿ, ಇದೆ.

೨೧೦೧. ಸುವರ್ಣ ಜನಪದ ಕಾವ್ಯ

ಸಂ: ಎಸ್.ಜಿ ಸಿದ್ದರಾಮಯ್ಯ ಕೆ.ಆರ್, ಸಂಧ್ಯಾರೆಡ್ಡಿ; ಪ್ರ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-೫೬೦೦೦೨; ಮೊ.ಮು.೨೦೦೬ ಪು:೧೪+೯೧೬=೯೩೦; ಡಿಮ್ಮೈ ೧/೮

ಇಲ್ಲಿನ ಹಾಡುಗಳನ್ನು ಒಂಬತ್ತು ಭಾಗಗಳನ್ನಾಗಿ ವಿಂಗಡಿಸಲಾಗಿದೆ: ೧.ಸ್ತುತಿ ಪದಗಳು ೨.ಆಚರಣೆ ಪದಗಳು ೩.ಮದುವೆ ಮತ್ತು ಒಸಗೆಯ ಹಾಡುಗಳು ೪.ದಾಂಪತ್ಯ ಗೀತೆಗಳು (ಸರಸ-ವಿರಸ-ಸಂತಾನ-ಅಣಕ-ಹಾಸ್ಯ) ೫.ಪ್ರಣಯ ಮತ್ತು ಹಾಸ್ಯ ೬.ಸಂಬಂಧ ಗೀತೆಗಳು ೭.ಬಿತ್ತನೆ, ಮಳೆ, ಕೆಲಸದ ಹಾಡು ೮.ಪೌರಾಣಿಕ ಗೀತೆಗಳು ೯.ಕಥನ ಗೀತೆ, ಲಾವಣಿ, ಪಾಡ್ದನ. ಎರಡು ಅನುಬಂಧಗಳಿವೆ: ೧.ಸಂಪಾದಕರು/ ಸಂಗ್ರಹಕಾರರ ಹೆಸರು, ಕೃತಿಯ ವಿವರ, ಆಯ್ದ ಗೀತೆಗಳು ೨.ಟಿಪ್ಪಣಿಗಳು. ಎಚ್.ಡಿ. ಕುಮಾರಸ್ವಾಮಿ ಅವರ ಮುನ್ನುಡಿ ಇದೆ.

೨೧೦೨. ಸುವರ್ಣ ಜಾನಪದ (ಸಂಪುಟ ೧)

ಸಂ: ಹಿ.ಶಿ. ರಾಮಚಂದ್ರೇಗೌಡ, ಕೃಷ್ಣಮೂರ್ತಿ ಹನೂರು; ಪ್ರ: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು; ಮೊ.ಮು.೧೯೯೮, ಪು.೧೮+೫೮೯=೬೦೭; ಡಿಮ್ಮೈ ೧/೮

ಐವತ್ತು ಲೇಖನಗಳ ಸಂಕಲನ: ೧.ಜನವಾಣಿ ಬೇರು ಕವಿವಾಣಿ ಹೂವು-ಬಿ.ಎಂ.ಶ್ರೀ ೨.ಜೀವನವೇ ಕಾವ್ಯ-ದ.ರಾ.ಬೇಂದ್ರೆ ೩.ಗರತಿಯ ಹಾಡು-ಸಿಂಪಿ ಲಿಂಗಣ್ಣ ೪.ಜನತೆಯ ಸಂಸ್ಕೃತಿ-ಮಾಸ್ತಿ ವೆಂಕಟೇಶ ಅಯ್ಯಂಗಾರ್ ೫.ಬೆಳೆಯು ಬೇಕಾದಷ್ಟಿದೆ - ಅರ್ಚಕ ಬಿ. ರಂಗಸ್ವಾಮಿ ೬.ಕರ್ನಾಟಕ ಸಂಸ್ಕೃತಿ-ದೇವುಡು ೭.ಅನ್ನ, ನೀರು, ಕಾವ್ಯ-ಗೊರೂರು ರಾಮಸ್ವಾಮಿ ಅಯ್ಯಂಗಾರ್ ೮.ಕನ್ನಡ ಜನಪದ ಸಾಹಿತ್ಯ - ಬೆಟಗೇರಿ ಕೃಷ್ಣ ಶರ್ಮ ೯.ಮಕ್ಕಳಿಗೆ ಹೇಳುವ ಕಥೆಗಳು - ತೀ.ನಂ.ಶ್ರೀ ೧೦.ಸರಳ ಜೀವನದ ತಿರುಳು - ಬಿ.ಎಸ್. ಗದ್ದಿಗೆಮಠ ೧೧.ರಾಷ್ಟ್ರೀಯ ಸಂಸ್ಕೃತಿಯ ತಾಯಿಬೇರು - ದೇಜಗೌ ೧೨.ಯಕ್ಷಗಾನ ಬಯಲಾಟ: ಸಮಷ್ಟಿ ಕಲೆ-ಸ್ಥೂಲ ಹಿನ್ನೆಲೆ - ಶಿವರಾಮ ಕಾರಂತ

೧೩.ಜನಪದ ಸಾಹಿತ್ಯ, ಅದರ ಸ್ವರೂಪ–ಹಾ.ಮಾ.ನಾಯಕ ೧೪.ಕನ್ನಡ ಜನಪದ ಸಾಹಿತ್ಯದ ಇತಿಹಾಸ – ಆರ್.ಸಿ. ಹಿರೇಮಠ ೧೫.ಜನಪದ ಪದ್ಯ ಸಾಹಿತ್ಯ – ಜೀ.ಶಂ. ಪರಮಶಿವಯ್ಯ ೧೬.'ಪಗರಣ' (ಹಗರಣ) – ಎಂ. ಚಿದಾನಂದ ಮೂರ್ತಿ ೧೭.ಜನಪದ ಸಾಹಿತ್ಯದ ಪುನರುಜ್ಜೀವನ–ಎಚ್. ಎಲ್. ನಾಗೇಗೌಡ ೧೮.ಜನಪದ ಚಿತ್ರ ಮತ್ತು ಶಿಲ್ಪಕಲೆ–ಪಿ.ಆರ್.ತಿಪ್ಪೇಸ್ವಾಮಿ ೧೯.ಜೀವಂತ ಇತಿಹಾಸ ಜಾನಪದ ಕಲೆ – ಮುದೇನೂರ ಸಂಗಣ್ಣ ೨೦.ಆಧುನಿಕ ನಾಟಕಕಾರ ಮತ್ತು ಪರಂಪರೆ – ಜನಪದ ರಂಗಭೂಮಿ – ಚಂದ್ರಶೇಖರ ಕಂಬಾರ ೨೧.ಭೂಮಿ ತಾಯಿಯ ಮೀಹದ ಹಬ್ಬ – ಅಮೃತ ಸೋಮೇಶ್ವರ ೨೨.ಜನಪದ ಪ್ರದರ್ಶನಾತ್ಮಕ ಕಲೆಗಳು – ದೇವೇಂದ್ರಕುಮಾರ ಹಕಾರಿ ೨೩.ಕವಲೆತ್ತಿನವರು – ಮಲ್ಲಿಕಾರ್ಜುನ ಶಿ. ಲಠ್ಠೆ ೨೪.ಒಗಟು – ಸಿ.ಪಿ. ಕೃಷ್ಣಕುಮಾರ್ ೨೫.ಜಾನಪದದಲ್ಲಿ ಹಣದ ಪರಿಕಲ್ಪನೆ–ಹಂಪ ನಾಗರಾಜಯ್ಯ ೨೬.ಸಂಸ್ಕೃತಿಯ ಅಧ್ಯಯನದಲ್ಲಿ ಜಾನಪದದ ಪಾತ್ರ – ರಾಗೌ ೨೭.ಡೊಳ್ಳಿನ ಹಾಡು – ಬಿ.ಬಿ.ಹೆಂಡಿ ೨೮.ಜನಪದ ವೈದ್ಯ – ಎಲ್. ಆರ್. ಹೆಗಡೆ ೨೯.ಗಾದೆಗಳು – ಎ.ಕೆ. ರಾಮಾನುಜನ್ ೩೦.ಮಾರ್ಗಸಾಹಿತ್ಯ ಮತ್ತು ಜನಪದ ಸಾಹಿತ್ಯ – ಎಂ.ಎಂ. ಕಲಬುರ್ಗಿ ೩೧.ಗಾದೆ, ಒಗಟು, ಒಡಬು, ಒಡಪು: ಸಂಬಂಧ – ಸೋಮಶೇಖರ ಇಮ್ರಾಪುರ ೩೨.ಕನ್ನಡ ನಾಡು, ನುಡಿ, ಜನತೆ – ಎಚ್. ಜೆ. ಲಕ್ಕಪ್ಪಗೌಡ ೩೩.ಆನ್ವಯಿಕ ಜಾನಪದ – ಬಿ.ಎ. ವಿವೇಕ ರೈ ೩೪.ಬುಡಕಟ್ಟು ಜನಾಂಗಗಳ ಸಾಮಾಜಿಕ ವ್ಯವಸ್ಥೆಯಲ್ಲಿ ಜಾನಪದದ ಪಾತ್ರ–ಎನ್.ಆರ್. ನಾಯಕ ೩೫.ಜನಪದ ಕಾವ್ಯ–ಗಿರಡ್ಡಿ ಗೋವಿಂದರಾಜ ೩೬.ಕನ್ನಡ ಜನಪದ ಸಾಹಿತ್ಯ: ಶೈಲಿ–ಭಾಷಾ ವೈಜ್ಞಾನಿಕ ವಿವೇಚನೆ–ವಿಲ್ಯಂ ಮಾಡ್ತಾ ೩೭.ಪ್ರಧಾನ ಲೇಖನ –ಡಿ. ಲಿಂಗಯ್ಯ ೩೮.ಕಥೆಗಾರ–ಹಿಮ್ಮೇಳ–ಡಿ.ಕೆ.ರಾಜೇಂದ್ರ ೩೯.ಸ್ವಾತಂತ್ರ್ಯ ಸಮರದ ಜನಪದ ಸಾಹಿತ್ಯ–ಮ.ಗು.ಬಿರಾದಾರ ೪೦.ಜಾನಪದದಲ್ಲಿ ಕಲಬೆರಕೆ–ಸುಧಾಕರ ೪೧.ಜಾನಪದ ವೈಜ್ಞಾನಿಕ ಕ್ಷೇತ್ರಕಾರ್ಯ–ಸಿ.ಸಿ.ಎ.ಪೈ ೪೨.ಜನಪದ ಸಂಗೀತ–ಎಲ್.ಜಿ. ಸುಮಿತ್ರ ೪೩.ಬಯಲಾಟ ಸಂಗೀತ (ಉತ್ತರ ಕರ್ನಾಟಕಕ್ಕೆ ಅನ್ವಯಿಸಿ) – ಬಸವರಾಜ ಮಲಶೆಟ್ಟಿ ೪೪.ಎಲ್ಲಮ್ಮನ ಐತಿಹ್ಯಗಳು – ಎಂ.ಬಿ. ನೇಗಿನಹಾಳ ೪೫.ಜನಪದ ಸಾಹಿತ್ಯದಲ್ಲಿ ಮೊಹರಂ ಹಾಡುಗಳು – ಬಿ.ಎ. ಸನದಿ ೪೬.ಸಮಾಜವಾದಿ ದೃಷ್ಟಿಯಲ್ಲಿ ಜಾನಪದ–ಹಿ.ಶಿ. ರಾಮಚಂದ್ರಗೌಡ ೪೭.ರಾಜಕೀಯ ಭಾಷಣಗಳು ಜಾನಪದದ ಒಂದು ಪ್ರಕಾರವೆ? – ತೀ.ನಂ. ಶಂಕರನಾರಾಯಣ ೪೮.ಜನಪದ ಗೀತೆ–ಕಾಳೇಗೌಡ ನಾಗವಾರ, ೪೯.ಮೂಲ ಸ್ವರೂಪ ಮತ್ತು ಅಂಟಿಕೊಂಡ ಕಥೆಗಳು – ಕೃಷ್ಣಮೂರ್ತಿ ಹನೂರು ೫೦.ಸಿದ್ಧವೇಶ: ಪ್ರತಿಭಟನೆ ಮತ್ತು ನಿರಶನ – ಪುರೋಷತ್ತಮ ಬಿಳಿಮಲೆ. ಎಚ್.ಜೆ.ಲಕ್ಕಪ್ಪ ಗೌಡ ಅವರ 'ಪ್ರಧಾನ ಸಂಪಾದಕರ ಮಾತು', ಸಂಪಾದಕರ 'ಪ್ರಸ್ತಾವನೆ', ಅನುಬಂಧದಲ್ಲಿ, ಸಿದ್ಧವೇಶದ ಹಾಡು, ಲೇಖನಗಳ ಆಕರ, ಇವೆ.

೨೧೦೨. ಸುವರ್ಣ ಜಾನಪದ (ಸಂಪುಟ ೨)

ಸಂ: ಹಿ.ಶಿ ರಾಮಚಂದ್ರೇಗೌಡ, ಕೃಷ್ಣಮೂರ್ತಿ ಹನೂರು; ಪ್ರ: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು; ಮೊ.ಮು.೧೯೯೮; ಪು:೧೮+೬೭೩=೬೯೧; ಡಿಮ್ಮೈ೧/೮

ಐವತ್ತು ಲೇಖನಗಳ ಸಂಕಲನ: ೧.ಭೂತಾರಾಧನೆಯ ಪ್ರಭೇದ–ಜಾಲಾಟ–ಕೆ.ಚಿನ್ನಪ್ಪಗೌಡ ೨.ಕನ್ನಡ ಜಾನಪದ ವರ್ಗೀಕರಣ ಒಂದು ಸಲಹೆ –ಟಿ.ಎಸ್.ಸತ್ಯನಾಥ್ ೩.ಹಚ್ಚೆ: ಒಂದು ಜಾನಪದ ಕಲೆ –ಎಚ್.ಎಂ.ಮಹೇಶ್ವರಯ್ಯ ೪.ಕೃಷಿ ಜಾನಪದ –ಎಂ.ಜಿ.ಈಶ್ವರಪ್ಪ ೫.ಪ್ರಥಮ ವಿಮರ್ಶೆ–ಸತ್ವ ಮತ್ತು ಸ್ವರೂಪ –ವೀರಣ್ಣ ದಂಡೆ ೬.ಜನಪದ ಆಟಗಳು: ಒಂದು ಸಮಾಜಶಾಸ್ತ್ರೀಯ ಅಧ್ಯಯನ– ಶಾಂತಿನಾಯಕ ೭.ಜಾನಪದ ಮತ್ತು ಅರ್ಥ – ಕಿಕ್ಕೇರಿ ನಾರಾಯಣ ೮.ಕನ್ನಡ ಜಾನಪದ ಸಾಹಿತ್ಯದ ವಿಮರ್ಶಾಕೃಷಿ –ಜ್ಯೋತಿ ಹೊಸೂರ ೯.ಜನಪದ ಆರಾಧನೆಗಳು ಮತ್ತು ಆಚರಣೆಗಳು–ಸಿದ್ಧಲಿಂಗಯ್ಯ ೧೦.ದೇಶೀವಾದದ ನೆಲೆಗಳು – ಅರವಿಂದ ಮಾಲಗತ್ತಿ ೧೧.ಕನ್ನಡ ಜಾನಪದ ಅಧ್ಯಯನಕ್ಕೆ ಸ್ವಾತಂತ್ರ್ಯಪೂರ್ವ ಆಂಗ್ಲರ ಕೊಡುಗೆ–ಶ್ರೀರಾಮ ಇಟ್ಟಣ್ಣನವರ ೧೨.ನಂಬಿಕೆಗಳು –ರಾಮಲಿಂಗಯ್ಯ ಉಪ್ಪಿನ ಕೆರೆ ೧೩.ಲಾವಣಿಗಳು ಮತ್ತು ಸಾಹಿತ್ಯಿಕ ಕಥನ ಕವನಗಳು –ಶ್ರೀಕಂಠ ಕೂಡಿಗೆ ೧೪.ಜಾನಪದ ಮುನ್ನೋಟ –ಪಿ.ಕೆ.ಖಂಡೋಬ ೧೫.ಅರ್ಥಗಾರಿಕೆ: ಸೃಜನಶೀಲ ದೃಷ್ಟಿ–ಪ್ರಭಾಕರ ಜೋಷಿ ೧೬.ದ್ರಾವಿಡ ಜನಪದ ರಂಗಭೂಮಿ –ಆರ್ವೀಯಸ್ ಸುಂದರಂ ೧೭.ಕೆಲವು ಊರ ಹೆಸರುಗಳು ಮತ್ತು ಅವುಗಳ ಹಿನ್ನೆಲೆ –ಹ.ಕ.ರಾಜೇಗೌಡ ೧೮.ಕನ್ನಡ ಸಣ್ಣಾಟಗಳು –ನಿಂಗಣ್ಣ ಸಣ್ಣಕ್ಕಿ ೧೯.ಕನ್ನಡ ಜನಪದ ಸಾಹಿತ್ಯ ನಾಟಕದಲ್ಲಿ ನೃತ್ಯ –ನಂ.ತಪಸ್ವಿಕುಮಾರ್ ೨೦.ಜನಪದ ಸಾಹಿತ್ಯ–ಶಿಷ್ಟ ಸಾಹಿತ್ಯ ಕೊಳುಕೊಡುಗೆಗಳ ಅಧ್ಯಯನ ವಿಧಾನ– ಚನ್ನಣ್ಣ ವಾಲೀಕಾರ ೨೧.ಸೂರ್ಯ–ಅಂಬಳಿಕೆ ಹಿರಿಯಣ್ಣ ೨೨.ಪಿರಿಯಾಪಟ್ಟಣದ ಕಾಳಗ–ಪಿ.ಕೆ.ರಾಜಶೇಖರ ೨೩.ಖನಿಜ ಜಾನಪದ– ಕೆ.ಆರ್.ಸಂಧ್ಯಾರೆಡ್ಡಿ ೨೪.ಕೆರೆಗೆ ಹಾರ: ಒಂದು ಅಧ್ಯಯನ –ಎಸ್.ಜಿ.ಸಿದ್ಧರಾಮಯ್ಯ ೨೫.ಕನ್ನಡ ಜನಪದ ಗೀತೆಗಳಲ್ಲಿ ಮಳೆ–ಎಸ್.ಪಿ.ಪದ್ಮಪ್ರಸಾದ್ ೨೬.ಚಿತ್ರದುರ್ಗದ ಒನಕೆ ಓಬವ್ವೆಯ ಘಟನೆ –ಚಾರಿತ್ರಿಕ ವಿಮರ್ಶೆ –ಲಕ್ಷ್ಮಣ್ ತೆಲಗಾವಿ ೨೭.ಕರ್ನಾಟಕ ಜಾನಪದ ಅಧ್ಯಯನಕ್ಕೆ ವಿದೇಶಿ ವಿದ್ವಾಂಸರ ಕೊಡುಗೆ– ಎ.ವಿ.ನಾವಡ, ಗಾಯತ್ರಿ ನಾವಡ. ೨೮.ಜನಪದ ಮತ್ತು ನಗರ ಜಾನಪದ –ಚಂದ್ರು ಕಾಳೇನಹಳ್ಳಿ ೨೯.ಕಕ್ಕಸಿನ ಗೋಡೆಬರಹಗಳು – ರಂಗಾರೆಡ್ಡಿ ಕೋಡಿರಾಂಪುರ ೩೦.ಯಕ್ಷಗಾನದಲ್ಲಿ ತಾತ್ವಿಕ ಸಂಘರ್ಷ–ಕೆ.ಎಂ. ರಾಘವ ನಂಬಿಯಾರ್ ೩೧.ಯಕ್ಷಗಾನ–ಪರಂಪರೆ ಪ್ರಯೋಗ–ಮುಳಿಯ ಮಹಾಬಲ ಭಟ್ಟ ೩೨.ಭೂತೇರ ಪದಗಳು–ಕ್ಯಾತನಹಳ್ಳಿ ರಾಮಣ್ಣ ೩೩.ಕಲ್ಗಿ–ತುರಾ ಲಾವಣಿಗಳು–ಟಿ.ಎಸ್. ರಾಜಪ್ಪ ೩೪.ಬೆಂಕಿ ಮತ್ತು ವಿದ್ಯುತ್ ಯುಗಗಳ ನಡುವೆ–ಹಿ.ಚಿ. ಬೋರಲಿಂಗಯ್ಯ ೩೫.ಹೆಣ್ಣು ಹೀಗೇಕೆ? – ಬಿ.ಎಸ್.ನಾಗರತ್ನ ೩೬.ದಕ್ಷಿಣ ಕರ್ನಾಟಕದ ಗ್ರಾಮ ವಿನ್ಯಾಸಗಳು–ಟಿ.ಗೋವಿಂದರಾಜು ೩೭.ಜನಪದ ವೈದ್ಯದ ಸ್ವರೂಪ:

ಪ್ರಕೃತಿ–ಸಂಸ್ಕೃತಿ–ಬಿ.ಶಿವರಾಮ ಶೆಟ್ಟಿ ೩೮.ಜನಪದ ಸಾಹಿತ್ಯ: ಐತಿಹಾಸಿಕ ಮೂಲ ಸಾಮಗ್ರಿಯಾಗಿ–ಜಿ.ಆರ್.ತಿಪ್ಪೇಸ್ವಾಮಿ ೩೯.ಜಾನಪದದಲ್ಲಿ ನವರತ್ನಗಳು–ವಿ.ಎನ್.ಶಿವರಾಮು ೪೦.ಪ್ರಾಣಿ–ಆಹಾರ– ಕೆ.ಆರ್. ದುರ್ಗಾದಾಸ್ ೪೧.ಜನಪದ ಸಾಹಿತ್ಯದಲ್ಲಿ ಕನ್ನಡ ನೆಲದ ಸಂಸ್ಕೃತಿ–ಚಕ್ಕೆರೆ ಶಿವಶಂಕರ್ ೪೨.ಕರ್ನಾಟಕ ಜನಪದ ಅಡುಗೆ ಸಂಪ್ರದಾಯಗಳು – ಪದ್ಮಾಶೇಖರ್ ೪೩.ಕೆರಳದ ನಾಗಾರಾಧನೆ–ಎಸ್.ಎ. ಕೃಷ್ಣಯ್ಯ ೪೪.ಸಸ್ಯ ಜಾನಪದ ಮತ್ತು ಪ್ರಾಣಿ ಜಾನಪದ – ಕುಮಾರ ಚಲ್ಯ ೪೫.ಯಕ್ಷಗಾನದಲ್ಲಿ ಪರಿವರ್ತನೆ: ವೇಗ ಮತ್ತು ವಿಸ್ತಾರ–ಚಂದ್ರಶೇಖರ ದಾಮ್ಲೆ ೪೬.ರಂಗಪರಂಪರೆಯ ಹಿನ್ನೆಲೆಯಲ್ಲಿ ಒಂದು ಬಯಲಾಟ–ಡಿ. ಆರ್. ನಾಗರಾಜ್ ೪೭.ಜನಪದ ಸಾಹಿತ್ಯದ ಅಧ್ಯಯನ ಮತ್ತು ಭಾಷಾಶಾಸ್ತ್ರ–ಕೆ.ವಿ. ನಾರಾಯಣ ೪೮.ಪಾಡ್ದನಗಳೂ ಕಬಿತಗಳೂ ಚಿತ್ರಿಸುವ ತುಳು ಜನಪದ ವಿನೋದಗಳು ಮತ್ತು ಕಲೆಗಳು–ವಾಮನ ನಂದಾವರ ೪೯.ಅಡಿಪೂಜೆ–ವೀರೇಶ ಬಡಿಗೇರ ೫೦.ಜನಪದ ಗಣಿತ–ಚಮತ್ಕಾರ–ಜೀನಹಳ್ಳಿ ಸಿದ್ಧಲಿಂಗಪ್ಪ. ಎಚ್.ಜೆ. ಲಕ್ಕಪ್ಪಗೌಡ ಅವರ 'ಪ್ರಧಾನ ಸಂಪಾದಕರ ಮಾತು', ಸಂಪಾದಕರ ಪ್ರಸ್ತಾವನೆ, ಕೊನೆಯಲ್ಲಿ ಲೇಖನಗಳ ಆಕರ, ಇವೆ.

೨೧೦೩. ಸುವರ್ಣ ಜನಪದ ಲೇಖನಗಳು

ಸಂ: ವೀರಣ್ಣ ದಂಡೆ, ಶ್ರೀಪಾದ ಶೆಟ್ಟಿ; ಪ್ರ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಜೆ.ಸಿ ರಸ್ತೆ, ಬೆಂಗಳೂರು–೫೬೦೦೦೨; ಮೊ.ಮು.೨೦೦೬; ಪು: ೧೨+೫೧೬=೫೨೮, ಡಿಮ್ಮೈ ೧/೮.

ಕನ್ನಡ ಜನಪದ ಸಾಹಿತ್ಯ ರೂಪಗಳು ಎಂಬ ಅಡಿಬರಹ ಇದೆ. ಇದರಲ್ಲಿ ಇರುವ ೪೭ ಲೇಖನಗಳನ್ನು ಆರು ಭಾಗಗಳಾಗಿ ವಿಂಗಡಿಸಲಾಗಿದೆ: **ಭಾಗ ಒಂದು: ಗದ್ಯ ಸಾಹಿತ್ಯ ರೂಪಗಳು:** ೧.ಜನಪದ ಕಥೆಗಳು –ರಾಗೌ ೨.ಪುರಾಣ ಕಥೆಗಳು–ಎಲ್.ಆರ್.ಹೆಗಡೆ ೩.ಐತಿಹ್ಯಗಳು –ಪುರುಷೋತ್ತಮ ಬಿಳಿಮಲೆ. **ಭಾಗ ಎರಡು: ವಿಶೇಷ ಗದ್ಯ ಸಾಹಿತ್ಯ ರೂಪಗಳು:** ೧.ಗಾದೆಗಳು–ಒಗಟುಗಳು– ವೀರಣ್ಣ ದಂಡೆ ೨.ಒಡಪುಗಳು – ವಿ.ಎನ್.ಶಿವರಾಮು. **ಭಾಗ ಮೂರು: ಮಕ್ಕಳ ಹಾಡುಗಳು:** ೧.ಮಕ್ಕಳ ಜನಪದ ಹಾಡುಗಳು –ಈಶ್ವರಚಂದ್ರ ಚಿಂತಾಮಣಿ ೨.ಆಣೀಪೀಣಿ ಹಾಡುಗಳು –ಅರವಿಂದ ಮಾಲಗತ್ತಿ. **ಭಾಗ ನಾಲ್ಕು: ಗಂಡಸರ ಹಾಡುಗಳು:** ೧.ಜನಪದ ಕಾವ್ಯಗಳು–ಶ್ರೀಕಂಠ ಕೂಡಿಗೆ ೨.ಜನಪದ ಮಹಾಕಾವ್ಯಗಳು – ಅಂಬಳಿಕೆ ಹಿರಿಯಣ್ಣ ೩.ಲಾವಣಿಗಳು – ಬಸವರಾಜ ಮಲಶೆಟ್ಟಿ ೪.ಹೋಳಿಯ ಹಾಡುಗಳು–ಎಂ.ಜಿ ಬಿರಾದಾರ ೫.ಮೊಹರಂ ಹಾಡುಗಳು – ದಸ್ತಗೀರ ಅಲ್ಲೀಬಾಯಿ ೬.ಡೊಳ್ಳಿನ ಹಾಡುಗಳು– ಬಿ.ಬಿ.ಹೆಂಡಿ ೭.ಭಜನೆಯ ಹಾಡುಗಳು–ಸುಶೀಲಾ ನೆಲ್ಲಿಸರ ೮.ಹಂತಿಯ ಹಾಡುಗಳು –ಎಂ.ಎಸ್.ಲಠ್ಠೆ ೯.ಕೋಲಾಟದ ಹಾಡುಗಳು –ಮಳಲಿ ವಸಂತ ಕುಮಾರ್ ೧೦.ಗುಮಟೆಯ ಹಾಡುಗಳು –ಕೆ.ಜಿ.ಶಾಸ್ತ್ರಿ. **ಭಾಗ ಐದು: ಹೆಣ್ಣು ಮಕ್ಕಳ ಹಾಡುಗಳು:** ೧.ಬೀಸುವ ಹಾಡುಗಳು–

ಬಿ.ಎಸ್. ಗದ್ದಗಿಮಠ ೨.ಕುಟ್ಟುವ ಹಾಡುಗಳು–ದೇವೇಂದ್ರಕುಮಾರ ಹಕಾರಿ ೩.ಗುಳ್ಳವ್ವನ ಹಾಡುಗಳು– ಚೆನ್ನಕ್ಕ ಪಾವಟೆ ೪.ಬುಲಾಯಿ ಹಾಡುಗಳು –ಜಗನ್ನಾಥ ಹೆಬ್ಬಾಳೆ ೫.ಸೀಗಿ ಹಾಡುಗಳು–ಜಯಶ್ರೀ ದಂಡೆ ೬.ಗೌರಿ ಹಾಡುಗಳು –ಶಶಿಕಲಾ ವಸ್ತ್ರದ ೭.ಮದುವೆಯ ಹಾಡುಗಳು–ಸಿಂಪಿ ಲಿಂಗಣ್ಣ ೮.ಬೀಗರ ಹಾಡುಗಳು –ಶಶಿಕಲಾ ಮೋಳ್ದಿ ೯.ಕುಬ್ಬಸದ ಹಾಡುಗಳು –ಯಶೋಧರಾ ಶಾಸ್ತ್ರಿ ೧೦.ಜೋಗುಳ ಹಾಡುಗಳು–ಮೃತ್ಯುಂಜಯ ಹೊರಕೇರಿ. **ಭಾಗ ಆರು: ವೃತ್ತಿಗಾಯಕರ ಹಾಡುಗಳು:** ೧.ನೀಲಗಾರರು –ಮಂಟೇಸ್ವಾಮಿ ಕಾವ್ಯ –ಜೀ.ಶಂ ಪರಮಶಿವಯ್ಯ ೨.ಕಂಸಾಳೆ, ಕರಪಾಲ ಸಂಪ್ರದಾಯ ಸಾಹಿತ್ಯ –ಜೀ.ಶಂ. ಪರಮಶಿವಯ್ಯ ೩.ಕಾಡುಗೊಲ್ಲರ ಜನಪದ ಕಾವ್ಯ – ಜುಂಜಪ್ಪನ ಹಾಡು – ಕಾಳೇಗೌಡ ನಾಗವಾರ ೪.ಕಿನ್ನರಿ ಜೋಗಿಯರು – ಹಿ.ಚಿ.ಬೋರಲಿಂಗಯ್ಯ ೫.ಆಸಾದಿ ವೃತ್ತಿಗಾಯಕರು –ಬಸವರಾಜ ನೆಲ್ಲಿಸರ ೬.ಮೈಲಾರಲಿಂಗನ ಪದಗಳು – ಶಿವಾನಂದ ಗುಬ್ಬಣ್ಣವರ ೭.ಚೌಡಿಕೆ ಹಾಡುಗಳು –ಎಂ.ಬಿ.ಕೊಟ್ರಶೆಟ್ಟಿ ೮.ಭೂತೇರ ಪದಗಳು–ಕ್ಯಾತನಹಳ್ಳಿ ರಾಮಣ್ಣ ೯.ಗೊಂದಲಿಗರು –ನಿಂಗಣ್ಣ ಸಣ್ಣಕ್ಕಿ ೧೦.ಬುರ್ರಕಥಾ –ರಂಗಾರೆಡ್ಡಿ ಕೋಡಿರಾಂಪುರ. ಎಚ್.ಡಿ.ಕುಮಾರಸ್ವಾಮಿ ಅವರ ಮುನ್ನುಡಿ ಇದೆ.

೨೧೦೪. ಸುವರ್ಣ ಪಕ್ಷಿ

ಸಂ: ವನಮಾಲಾ ಆಚಾರ; ಪ್ರ: ಲಿಪಿ ಪ್ರಕಾಶನ ಬೆಂಗಳೂರು–೪; ಮೊ.ಮು.: ೧೯೮೨; ಪು: ೪+೧೦೮ = ೧೧೨; ಕ್ರೌನ್

ವಿಯೆಟ್ನಾಂ ದೇಶದ ಜಾನಪದ ಕತೆಗಳ ಸಂಕಲನ ಎಂಬ ಅಡಿಬರಹ ಇದೆ. ೨೩ ಕತೆಗಳಿವೆ: ೧.ಚಿನ್ನದ ಕೊಡ ೨.ಶ್ವೇತವರ್ಣದ ಬಕಪಕ್ಷಿ ೩.ಸಮಯಾತೀತ ಜಗತ್ತು ೪.ಸೋಮಾರಿ ಬಡಿಗರು ೫.ಮುಳುಗಿಹೋದ ಮಣಿ ೬.ಸುವರ್ಣ ಪಕ್ಷಿ ೭.ಕಾಗೆ ಕೊಟ್ಟ ಮುತ್ತು ೮.ನೊಣಗಳ ಒಡೆಯ ೯.ಟ್ಯಾಮ್ ಸುಂದರಿ ೧೦.ಗೃಹ ದೇವತೆ: ಟಾವ್ರೋಕ್ವಾನ್ ೧೧.ಮೋಹದ ಉಂಗುರ ೧೨.ವಾತ್ಸಲ್ಯಮಯಿ ೧೩.ಇಬ್ಬರು ಗೆಳೆಯರು ೧೪.ಚಿತ್ರದ ಚೆಲುವೆ ೧೫.ಸಂಶಯದ ಕಪ್ಪು ನೆರಳು ೧೬.ಎಲೆ–ಅಡಿಕೆ–ಸುಣ್ಣ ೧೭.ಗಿರಿರಾಜ ವರುಣದೇವರ ದ್ವಂದ್ವ ೧೮.ದನಗಾಹಿ ೧೯.ಬಾನ್ಹಾಗಿಯಾ ಬಾನ್ಹ್ ಚುಂಗ್ ೨೦.ಜಲಸುಂದರಿ ೨೧.ಸ್ವರ್ಗದ ಸೋದರಮಾವ ೨೨.ಬಿಳಿಯ ಕುದುರೆ ೨೩.ಚಿನ್ನದ ಆಮೆಯ ಉಗುರು.

೨೧೦೫. ಸುವ್ವಿ ಸುವ್ವಮ್ಮಲಾಲಿ ಸುವ್ವಲಾಲೆ

ಸಂ: ಸುಶೀಲಾ ಸೊಂಡೂರ್.ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು–೧೮; ಮೊ.ಮು.೧೯೮೧; ಪು: ೪+೧೨೮=೧೩೨; ಡೆಮ್ಮೈ ೧/೮

ಇದು ೧೭ ಕಾವ್ಯಗಳ ಸಂಕಲನ: ೧.ಮದಗದ ಕೆಂಚವ್ವ ೨.ಸುಲವಾಲರಾಯನ ಕಥೆ ೩.ಅಣ್ಣ–ತಂಗಿ ೪.ಅತ್ತೆ–ಸೊಸೆ ೫.ಪಾಂಡವ ಕೌರವರು ಜೂಜಾಡಿದರು ೬.ದ್ರೌಪದಿ ದೇವಿ ೭.ಅಭಿಮನ್ಯು ೮.ಶಿವ ಕನ್ನ ಕೊರೆಯುವುದು ೯.ಶಿವಗಂಗೆಯರ ಕಥೆ

೧೦.ಮಧುರಂಬೆ ೧೧.ಆಳು ಕೂಗಿನ ಹಕ್ಕಿ ೧೨.ಮಲ್ಲಾಡ ಮೋಜುಮ ೧೩.ಅತ್ತೆವ್ವ ಅತ್ತೆವ್ವ ಮಡಿಗೂಳು ಮಾಸಿದವೆ ೧೪.ಹೆಣ್ಣಿನ ಬಾಳು ೧೫.ರುದ್ದರ ಗೌಡನ ವಿಸ್ತಾರ ೧೬.ಮೌಲಾಲಿ ಮಕಬೂಲ ೧೭.ಭಂಡು ಬಾಲೆರ್ರೆಚ್ಚಿಬಿಟ್ರು ಮರ್ತ್ಯದೊಳಗೆ. ಸಂಕ್ಷಿಪ್ತ ವಕ್ತೃವಿಚಾರ ಮತ್ತು ಅರ್ಥಕೋಶ ಇವೆ. ಹಂಪ ನಾಗರಾಜಯ್ಯ ಅವರ ಮುನ್ನುಡಿ ಇದೆ.

೨೧೦೬. ಸುವ್ವೀ ಸುವ್ವೀ ಸುವ್ವಾಲೆ

ಸಂ: ಎಲ್.ಆರ್. ಹೆಗಡೆ; ಪ್ರ: ಸಮಾಜ ಪುಸ್ತಕಾಲಯ, ಶಿವಾಜಿ ಬೀದಿ, ಧಾರವಾಡ – ೧; ಮೊ.ಮು. ೧೯೭೧; ಪು: ೪+೧೪೪=೧೪೮; ಕ್ರೌನ್ ೧/೮

ಸಂಬಂಧಗಳನ್ನು ಚಿತ್ರಿಸುವ ೨೩ ಹಾಡುಗಳಿವೆ: ತಾಯಿ–ತಂದೆ–ದೇವರು, ದೇವರ ಭಕ್ತಿ, ತಂದೆ–ತಾಯಿ–ಮಗಳು, ತವರು ಮನೆ, ಅತ್ತೆ–ಮಾವ, ಅಣ್ಣ, ತಮ್ಮ, ಅಕ್ಕ–ತಂಗಿ, ಅತ್ತಿಗೆ, ಮೈದುನಿ, ಸೊಸೆ, ಹಾದಿ ತಪ್ಪಿದ ಒಲುಮೆ, ಗಂಡನ ಮನೆ, ಬಸುರಿ, ಮಕ್ಕಳು, ಬಾಲಯ್ಯ, ಭಾವ–ನೆಂಟ–ಮೈದುನ, ಬಾಲವ್ವಿ, ಅತ್ತೆಯಮಗ–ಮಾವನ ಮಗಳು, ಹಾಸ್ಯ, ಹಾಡು, ಭತ್ತ ಕುಟ್ಟುವುದು, ಸಂಕೀರ್ಣ ತ್ರಿಪದಿಗಳು. ಇವಲ್ಲದೆ, ಆರು ಕಥನ ಕವನಗಳಿವೆ. ಕಥನ ಕವನಗಳಲ್ಲಿಯ ಕೆಲವು ಬಳಕೆ ಮಾತುಗಳ ಅರ್ಥಗಳನ್ನು ಕೊನೆಯಲ್ಲಿ ನೀಡಲಾಗಿದೆ.

೨೧೦೭. ಸುಳಿ

ಲೇ: ಮಂಜುನಾಥ ಬೇವಿನಕಟ್ಟಿ; ಪ್ರ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ; ಮೊ.ಮು. ೨೦೦೦; ಪು: ೨+೩೫=೩೭; ಡಿಮ್ಮೈ ೧/೮

ಸುಳಿ ಎಂಬ ಶಬ್ದಕ್ಕೆ ಅರ್ಥಕೋಶಗಳಲ್ಲಿ ಏನು ವಿವರಣೆ ಇದೆ ಎಂಬಲ್ಲಿಂದ ಪ್ರಾರಂಭವಾಗಿ, ಸುಳಿಯ ಗುಣ ಲಕ್ಷಣಗಳು, ಭೌತಿಕ ವಸ್ತುಗಳಲ್ಲಿ ಸುಳಿ, ಜೀವಜಗತ್ತಿನಲ್ಲಿ ಸುಳಿ, ಕುದುರೆ ಎತ್ತು ಹೆಣ್ಣು ಮುಂತಾದುವುಗಳ ಸುಳಿಗಳು ಮತ್ತು ಗುಣಲಕ್ಷಣಗಳು, ಹೀಗೆ ಸವಿವರವಾದ ಮಾಹಿತಿಗಳು ಇಲ್ಲಿ ಪ್ರಸ್ತಾಪಿಸಲ್ಪಟ್ಟಿವೆ.

೨೧೦೮. ಸುಳ್ಳಾಗದ ಗಾದೆಗಳು

ಸಂ: ಕೆ. ಭೈರಪ್ಪ; ಪ್ರ: ಸಿ.ವಿ.ಜಿ. ಪಬ್ಲಿಕೇಷನ್ಸ್, ೭೦, ೨ನೇ ಮುಖ್ಯ ರಸ್ತೆ, ವೈಯಾಲಿ ಕಾವಲ್, ಬೆಂಗಳೂರು–೫೬೦ ೦೦೩; ಮೊ.ಮು: ೧೯೯೫; ಪು: ೧೨೮; ಕ್ರೌನ್ ೧/೮

೨೬೨೭ ಗಾದೆಗಳ ಸಂಕಲನ. ಕೊನೆಯಲ್ಲಿ ಒಂಬತ್ತು ಆಕರ ಗ್ರಂಥಗಳ ಪಟ್ಟಿ ಇದೆ.

೨೧೦೯. ಸೂಕ್ತಿಗಳಲ್ಲಿ ಜಾನಪದ

ಸಂ/ಪ್ರ: ಟಿ.ವಿ. ವೆಂಕಟರಮಣಯ್ಯ; ಮೊ.ಮು: ೨೦೦೪; ಪು: ೪+೪೪=೪೮; ಕ್ರೌನ್ ೧/೮

ಜಾನಪದದ ಬಗ್ಗೆ, ಕಥೆ, ಕಾವ್ಯ, ಗಾದೆ, ಒಗಟು, ಯಕ್ಷಗಾನಗಳ ಬಗ್ಗೆ, ದೇಶೀಯ ಹಾಗೂ ವಿದೇಶಿ ವಿದ್ವಾಂಸರು ಬರೆದಿರುವ ಸೂಕ್ತಿಯಂಥ ಮಾತುಗಳ ಸಂಕಲನ. ಗಾದೆಗಳ ಬಗ್ಗೆ ಗಾದೆಗಳು (೪೦), ವಿದೇಶೀಗಾದೆಗಳು (೨೧) ಉದ್ಧೃತ ಲೇಖಕ ಸೂಚಿ, ಉದ್ಧೃತ ಕೃತಿ ಸೂಚಿ, ಇವೆ.

೨೧೧೦. ಸೂಸಿ ಹರಿದಾಳೆ ಶಿವಶಂಗೆ

ಸಂ: ಕರಾಕೃ; ಪ್ರ: ಜನಪದ ಸಾಹಿತ್ಯ ಅಕಾಡೆಮಿ, ಮೈಸೂರು-೫; ಮೊ.ಮು.೧೯೬೨; ಪು: ೧೪೦; ಕ್ರೌನ್ ೧/೮

ಆರು ಹಾಡುಗಳ ಸಂಕಲನ: ೧.ಶಾನಯ್ಯ ೨.ಮಹಾದೇವಿ ೩.ಸೀಗಣ್ಣ ೪.ಮಡಿವಾಳ ಮಾಚಯ್ಯ ೫.ಭೈರುವ –ಸ್ವಾತಿ ೬.ಶಿವಗಂಗೆ ಮತ್ತು ಶಿವ–ಗೌರಿ. ಪಿ.ಆರ್. ತಿಪ್ಪೇಸ್ವಾಮಿ ಅವರ ರೇಖಾ ಚಿತ್ರಗಳಿವೆ.

೨೧೧೧. ಸೂಸಿ ಹರಿದಾಳೆ ಶಿವಗಂಗೆ

ಲೇ: ಕೆ. ಎಂ. ರೇವಣ್ಣ; ಪ್ರ: ಅಕ್ಕ ನಾಗಲಾಂಬಿಕ ಪ್ರಕಾಶನ, ತರೀಕೆರೆ-೫೭೭ ೨೨೮; ಮೊ.ಮು.೧೯೯೦; ಪು: ೮+೮೦=೮೮; ಕ್ರೌನ್ ೧/೮

ಜನಪದ ಜೀವನ ಎಂಬ ಅಡಿಬರಹ ಇದೆ. ೧೯ ಲೇಖನಗಳಿವೆ: ೧.ಜನಪದ ಸಾಹಿತ್ಯದಲ್ಲಿ ಸಾಮಾಜಿಕ ಪ್ರಜ್ಞೆ ೨.ಜನಪದರ ಬದುಕಿನಲ್ಲಿ ನೀತಿ ೩.ಜನಪದ ಸಂಪ್ರದಾಯ ೪.ಒಸಗೆ ೫.ಮದುವೆ ೬.ಜನಪದ ಸಂಸ್ಕೃತಿ ೭.ಜನಪದ ಭಾಷೆ ೮.ಜನಪದ ಕಥೆಗಳು ೯.ಜನಪದ ಅತಿಮಾನುಷ ಕಥೆಗಳು ೧೦.ಜನಪದ ಕಥನ ಗೀತೆಗಳು ೧೧.ಜನಪದ ರಂಗಭೂಮಿ ೧೨.ಜನ ಜೀವನದಲ್ಲಿ ಜಾನಪದ ನಾಟಕಗಳು ೧೩.ಜಾನಪದ ರಂಗಭೂಮಿಯ ಬೆಳವಣಿಗೆ ೧೪.ವೀರಗಲ್ಲುಗಳು ೧೫.ಕ್ರೈಸ್ತ ಜಾನಪದ ಗೀತೆಗಳು ೧೬.ಜನಪದ ಸಾಹಿತ್ಯದಲ್ಲಿ ಮಕ್ಕಳು ೧೭.ಜನಪದ ನಂಬಿಕೆಗಳು ೧೮.ಗೌಡ್ಲು ಜನಾಂಗ ಒಂದು ಟಿಪ್ಪಣಿ ೧೯.ಸೂಸಿ ಹರಿದಾಳೆ ಶಿವಗಂಗೆ. ಗೊ.ರು.ಚನ್ನಬಸಪ್ಪ ಅವರ ಮುನ್ನುಡಿ, ಕೆ.ಆರ್. ಲಿಂಗಪ್ಪ ಅವರ ಹಾರೈಕೆ, ಇವೆ.

೨೧೧೨. ಸೆರಗು ಕಣ್ಣೊತ್ತಿ ಅಳುತಾಳೆ

ಲೇ: ಜಿ.ಅಬ್ದುಲ್ ಬಷೀರ್; ಪ್ರ: ಸನಾ ಪ್ರಕಾಶನ, ೨೭, ೭ನೆಯ ಮುಖ್ಯರಸ್ತೆ, ಬನ್ನೇರುಘಟ್ಟ ರಸ್ತೆ, ಹೊಸಗುರಪ್ಪನ ಪಾಳ್ಯ, ಬೆಂಗಳೂರು-೫೬೦ ೦೨೯; ಮೊ.ಮು..೧೯೯೮; ಪು: ೧೪೨; ಕ್ರೌನ್ ೧/೮

ಜನಪದ ಸಾಹಿತ್ಯ ಸಂಗ್ರಹ, ಸಂಪಾದನೆ ಮತ್ತು ಲೇಖನಗಳು ಎಂಬ ಅಡಿಬರಹ ಇದೆ. ೩೫ ಜನಪದ ಗೀತೆಗಳ ಸಂಕಲನ. ಇವುಗಳಲ್ಲಿ ಕೆಲವು ಕಥನಗೀತೆಗಳೂ ಇವೆ: ಹೊನ್ನಮ್ಮ, ನೀಲವೇಣಿ, ಬಿಚ್ಚಿದ ಸೀರೆ ಉಡ್ಲಿಲ್ಲ, ನೀರಿಗ್ಹೋಗಿ ಮಿಂಡನ್ನ ಕರೆದಾಳೊ,

ಉತ್ತರದೇವಿ. ಅನುಬಂಧದಲ್ಲಿ, ನಮ್ಮೂರಿನ ಆಟಗಳು, ನಮ್ಮ ಕುಟುಂಬದ ಕೆಲವು ನಂಬಿಕೆಗಳು, ಪ್ರಾದೇಶಿಕ ಪದಗಳ ಗ್ರಾಂಥಿಕ ರೂಪ ಮತ್ತು ಕೆಲವು ಪದಗಳ ಅರ್ಥ, ಇವೆ.

೨೧೧೩. ಸೇರಿಗೆ

ಸಂ: ಕೆ. ಚಿನ್ನಪ್ಪಗೌಡ; ಪ್ರ: ಮದಿಪು ಪ್ರಕಾಶನ, ಮಂಗಳಗಂಗೋತ್ರಿ; ಮೊ.ಮು. ೨೦೦೦; ಪು: ೩೮೮; ಡಿಮ್ಮೈ ೧/೮

ತುಳು ಜಾನಪದ ಅಧ್ಯಯನ ಲೇಖನಗಳ ಸಂಪುಟ ಎಂಬ ಅಡಿ ಬರಹ ಇದೆ. ೨೩ ಲೇಖನಗಳ ಸಂಕಲನವಿದು: ೧.'ಚೆನ್ನು ಕುಣಿತ' ಸಾಹಿತ್ಯ ಮತ್ತು ರಂಗ ಪ್ರಯೋಗ – ಸದಾನಂದ ಟಿ. ೨.ಮುಗೇರ ಕೋಲ – ಒಂದು ಅಧ್ಯಯನ–ಸುಮಂಗಲ ೩.The Devil Worship of the Tuluvas ಪಾಡ್ದನದ ಸಂಪುಟದ ಸಮೀಕ್ಷೆ – ರಾಜಶ್ರೀ ೪.ತುಳುನಾಡ ಗರೊಡಿಗಳ ಸಾಂಸ್ಕೃತಿಕ ಅಧ್ಯಯನ – ಕೃತಿ ಸಮೀಕ್ಷೆ – ಶಶಿಕಲಾ ಎಂ. ೫.ಜಗಲಿ ಜಾನಪದ –ಹರಿಣಾಕ್ಷಿ ಎಂ.ಡಿ. ೬.ಕಳ್ಳು ಜಾನಪದ – ಸುಮನ ಸುವರ್ಣ ೭.ಕಾಸರಕನ ಮರ – ಜನಪದರು ಕಂಡಂತೆ – ವಿಶ್ವನಾಥ ಬದಿಕಾನ ೮.ಬಾಳೆ –ಒಂದು ವಸ್ತುನಿಷ್ಠ ಅಧ್ಯಯನ – ಆನಂದ ಕೋಡಿಂಬಳ ೯.ಉಪ್ಪು–ಒಂದು ಅಧ್ಯಯನ–ಸುಲೋಚನಾ ಕೆ. ೧೦.ತೆಂಗಿನ ಮರ –ವಿಷಯನಿಷ್ಠ ಅಧ್ಯಯನ – ಶ್ರೀಧರ ರೈ. ಕೆ. ೧೧.ಪಿಂಗಾರ–ಬಳಕೆಯಾಗುವ ಸಂದರ್ಭ ಮತ್ತು ವ್ಯಕ್ತವಾಗುವ ತಾತ್ತ್ವಿಕತೆ –ವೀರಪ್ಪ ಮೂಲ್ಯ ೧೨.ದಕ್ಷಿಣ ದಿಕ್ಕು –ಪರಿಕಲ್ಪನಾತ್ಮಕ ಅಧ್ಯಯನ – ಪ್ರಸನ್ನ ಪಿ.ಬಿ. ೧೩.ಮದರಂಗಿ–ಸಾಂಸ್ಕೃತಿಕ ಅಧ್ಯಯನ–ಶುಭಲಕ್ಷ್ಮೀ ಪಿ.ಎನ್. ೧೪.ಕೆಲಿಂಜ ಪರಿಸರ: ಐತಿಹ್ಯಗಳಿಂದ ತಿಳಿದು ಬರುವಂತೆ – ನಿರ್ಮಲಾ ಕಾವ ೧೫.ಕಾರಿಂಜ–ಪ್ರಾದೇಶಿಕ ಅಧ್ಯಯನ–ಕೆ. ಉದಯಕುಮಾರ್ ೧೬.ಮಕ್ಕಳ ಕೆಲವು ಆಟಗಳು: ವಿಶ್ಲೇಷಣೆ–ಪ್ರಕಾಶ್ಚಂದ್ರ ಶಿಶಿಲ ೧೭.ತುಳುನಾಡಿನ ಕೋಳಿ ಅಂಕ– ವೆಂಕಪ್ಪ ಎಂ. ೧೮.ತುಳುವರ ಪರ್ಬ–ಜಾನಪದೀಯ ಅಧ್ಯಯನ –ಶ್ರೀಧರ ಟಿ.ಎನ್. ೧೯.ಅಮಾವಾಸ್ಯೆ–ಸಾಂಸ್ಕೃತಿಕ ವಿವೇಚನೆ–ದಯಾಮಣಿ ಕೆ. ೨೦.ಹವ್ಯಕರಲ್ಲಿ ಕೋಡಿ ಸಂಪ್ರದಾಯ–ಶಕುಂತಳಾ ಎಂ.ಎಸ್. ೨೧.ಶಿವಳ್ಳಿ ಬ್ರಾಹ್ಮಣರ ಮರಣೋತ್ತರ ಆಚರಣೆಗಳು–ಕೆಮ್ಮೂರು ರಮೇಶ ಭಟ್ ೨೨.ಬಾಕುಡರು: ಜನಾಂಗಿಕ ಅಧ್ಯಯನ– ಜಯಪ್ರಕಾಶ ಶೆಟ್ಟಿ ೨೩.ಮಂಗಳೂರು ಪರಿಸರದ ಕರೆಕುಡುಬಿಯರು –ನಿಕೇತನ್. ಕೆ.ಚಿನ್ನಪ್ಪಗೌಡ ಅವರ ಸೇರಿಗೆಯ ಮಾತು, ಬಿ.ಎ. ವಿವೇಕ ರೈ ಅವರ ಸೇರಿಗೆಗೊಂದು ಮದಿಮು, ಇವೆ.

೨೧೧೪. ಸೈದ್ಧಾಂತಿಕ ಜಾನಪದ

ಲೇ: ಅಂಬಳಿಕೆ ಹಿರಿಯಣ್ಣ; ಪ್ರ: ಪ್ರಜ್ವಲ ಪ್ರಕಾಶನ, ಮೈಸೂರು–೫೭೦ ೦೨೩; ಮೊ.ಮು. ೧೯೯೨, ಪು: ೮+೧೮೪= ೧೯೨, ಡಿಮ್ಮೈ ೧/೮

ಎಂಟು ಅಧ್ಯಯನಾತ್ಮಕ ಲೇಖನಗಳ ಸಂಕಲನ: ೧.ಸಾಂಸ್ಕೃತಿಕ ಅನನ್ಯತೆ ೨.ಮಾನವಿಕಗಳು ಮತ್ತು ಮಾನವ ನಿಷ್ಠ ಜಾನಪದ ೩.ಜನಪದ ಸಾಹಿತ್ಯ ಸಂಶೋಧನೆ: ಕೆಲವು ಸಮಸ್ಯೆಗಳು ೪.ಗಾದೆಗಳ ರಾಚನಿಕ ಅಧ್ಯಯನ: ಡಂಡೆಸ್ ವಿಚಾರಗಳು ೫.ಜಾನಪದ ಸಿದ್ಧಾಂತಗಳು: ಒಂದು ನೋಟ ೬.ಜಾನಪದ ವಿಜ್ಞಾನ: ಇತ್ತೀಚಿನ ಪ್ರವೃತ್ತಿಗಳು ೭.ಜಾನಪದ ಸಿದ್ಧಾಂತಗಳು ಮತ್ತು ಕ್ಷೇತ್ರಕಾರ್ಯ ೮.ಸಾಹಿತ್ಯೇತರ ಜಾನಪದ ರೂಪಗಳ ಕ್ಷೇತ್ರಕಾರ್ಯ. ಪ್ರಾರಂಭದಲ್ಲಿ ಲೇಖಕರ ಅರಿಕೆ, ಬರಹಗಳನ್ನು ಬರೆದ ಸಂದರ್ಭ, ಹಿನ್ನೆಲೆ, ಇವೆ.

೨೧೧೫. ಸೊಂಡೂರು ಶ್ರೀ ಕುಮಾರಸ್ವಾಮಿಯ ಜಾನಪದ ಹಾಡುಗಳು

ಸಂ: ಬಸವರಾಜ ಮಲಶೆಟ್ಟಿ; ಪ್ರ: ಕರ್ನಾಟಕ ಪತ್ರಿಕಾ ಪ್ರೈವೇಟ್ ಲಿಮಿಟೆಡ್, ಸೊಂಡೂರು –೫೮೩ ೧೧೯; ಮೊ.ಮು. ೧೯೮೮, ಪು: ೬+೫೨= ೫೮, ಡಿಮ್ಮೈ ೧/೮

ಸ್ವರ ಪ್ರಸ್ತಾರ ಸಹಿತ ೧೯ ಹಾಡುಗಳ ಸಂಕಲನವಿದು. ಗ್ರಾಂಥಿಕ ಭಾಷೆಯ ದಟ್ಟ ಪ್ರಭಾವ ಎದ್ದು ಕಾಣುತ್ತದೆ. ಹೀಗಾಗಿ ಈ ಹಾಡುಗಳನ್ನು ಅರೆ ಜಾನಪದವೆಂದು ಕರೆಯಬಹುದು ಎಂಬುದಾಗಿ ಸಂಪಾದಕರು ತಮ್ಮ ಮುನ್ನುಡಿಯಲ್ಲಿ ಅಭಿಪ್ರಾಯಪಟ್ಟಿದ್ದಾರೆ. ಕೊನೆಯಲ್ಲಿ ಹಾಡಿದವರ ೯ ಹೆಸರುಗಳನ್ನು ನೀಡಲಾಗಿದೆ.

೨೧೧೬. ಸೋ ಅನ್ನ ಸೋಬಾನವನ್ನ

ಸಂ. ಶಿವಾನಂದ ಗುಬ್ಬಣ್ಣವರ; ಪ್ರ: ಅಕ್ಷಯ ಪ್ರಕಾಶನ, ಧಾರವಾಡ; ಮೊ.ಮು. ೧೯೯೪, ಪು: ೮+೨೨ +೯೦ =೧೨೦, ಡಿಮ್ಮೈ ೧/೮

'ಸೋಬಾನೆ ಪದಗಳ ಸಂಗ್ರಹ' ಎಂಬ ಅಡಿಬರಹ ಇದೆ. ಇಲ್ಲಿನ ಸೋಬಾನೆ ಪದಗಳನ್ನು ಆರು ಭಾಗಗಳನ್ನಾಗಿ ವಿಂಗಡಿಸಿಕೊಳ್ಳಲಾಗಿದೆ. ಮದುವೆಯ ಹಾಡು, ಮೈನೆರೆ ಹಾಡು, ಹೂ ಮುಡಿಸುವ ಹಾಡು, ಉಡಿ ತುಂಬುವ ಹಾಡು, ಆರತಿ ಹಾಡು, ಅವಶಿಷ್ಟ ಹಾಡು. ೨೨ ಪುಟಗಳ ಪ್ರಸ್ತಾವನೆಯಲ್ಲಿ, ಸೋಬಾನ ಪದ ಉತ್ಪತ್ತಿ, ಸೋಬಾನ ಪದ ಹಳಮೆ, ಸೋಬಾನ ಪದ ಲಕ್ಷಣ ಇತ್ಯಾದಿ ಚರ್ಚಿಸಲಾಗಿದೆ ಮತ್ತು ವಿಭಾಗಿಸಲ್ಪಟ್ಟಿರುವ ಸಂದರ್ಭಗಳನ್ನು ವಿವರಿಸಲಾಗಿದೆ.

೨೧೧೭. ಸೋಜುಗಾದ ಸೂಜುಮಲ್ಲಿಗೆ

ಸಂ: ಪಿ.ಕೆ. ರಾಜಶೇಖರ, ಅ.ಕೆ. ಪ್ರಕಾಶ, ಬೆಳ್ಳಾಳೆ ರಾಜು, ಬಿ.ಸಿ.ಬೆಟ್ಟೇಗೌಡ, ಕೆ.ಶಂಭುಲಿಂಗಶೆಟ್ಟಿ; ಪ್ರ: ರಕ್ಷಿತ್ ಪ್ರಕಾಶನ, ಹೊನ್ನಾರು ಜನಪದ ಗಾಯಕರು, ೯೬೮, ಮೈಸೂರು ನಿರ್ಮಿತಿ ಕೇಂದ್ರ ರಸ್ತೆ, ಭೋಗಾದಿ ೨ನೇ ಹಂತ (ಉತ್ತರ), ಮೈಸೂರು–೫೭೦ ೦೨೬; ಮೊ.ಮು.೨೦೦೭; ಪು: ೧೦೪; ಡಿಮ್ಮೈ ೧/೮

"ಈ ಸಂಕಲನದ ಗೀತೆಗಳು ಮೂಲತಃ ಹೊನ್ನಾರು ಜನಪದ ಗಾಯಕರು ಹಾಡಿ ಪ್ರಚಾರಪಡಿಸಿದ ಧ್ವನಿಸುರುಳಿಗಳಲ್ಲಿ ಬಿತ್ತರಗೊಂಡಂಥವು" ಎಂಬ ವಿವರಣೆ ಸಂಪಾದಕರ

ನುಡಿಯಲ್ಲಿದೆ. ಇಲ್ಲಿರುವ ಧ್ವನಿಸುರುಳಿಗಳು ಇವು. ೧.ಮಲೆಯ ಮಾದೇಶ್ವರ ೨.ಶರಣು ಶರಣು ಮಾದೇಶ್ವರಗೆ ((ಹಿಂಡುಲಿಯೊಡೆಯ ದುಂಡು ಮಾದಯ್ಯ) ೩.ಎದ್ದು ಬಾರೊ ಮುದ್ದು ಭೈರೂವ ೪.ಹಾಡೋ ಮುತ್ತಿನರಗಿಣಿ ೫.ಕೋಗಿಲಾಗಿ ಕೂಗುತೀಯಲ್ಲೋ ೬.ನಕ್ಕರೆ ನಗಲೇಳು.

೨೧೧೮. ಸೋಬಾನೆ ಕೃಷ್ಣೇಗೌಡ

ಲೇ: ಪ್ರೊ. ಡಿ. ಲಿಂಗಯ್ಯ; ಪ್ರ: ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು; ಮೊ.ಮು.: ೨೦೧೦; ಪು: ೩೨; ಕ್ರೌನ್ ೧/೮

ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನ ಲಕ್ಷ್ಮೀಸಾಗರ ಎಂಬ ಹಳ್ಳಿಯ ಒಬ್ಬ ಅಪರೂಪದ ಹಾಡಗಾರನು ತಾನು ಯಾರು ಯಾರಿಂದ ಎಂಥೆಂಥ ಹಾಡುಗಳನ್ನು ಕಲಿತ ಎಂಬ ವಿವರಗಳನ್ನೊಳಗೊಂಡ ಗ್ರಂಥ. ಕೇವಲ ಹೆಣ್ಣುಮಕ್ಕಳು ಮಾತ್ರ ಹಾಡುವ ಸೋಬಾನೆ ಪದಗಳನ್ನು ಹಾಡುತ್ತಿದ್ದಂಥ ಅಪರೂಪದ ಕಲಾವಿದ.

೨೧೧೯. ಸೋಬಾನೆ ಚಿಕ್ಕಮ್ಮನ ಪದಗಳು

ಸಂ: ಎಚ್.ಎಲ್. ನಾಗೇಗೌಡ; ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು; ಮೊ.ಮು.೧೯೭೨; ಪು: ೨೪+೩೧೪=೩೩೮; ಕ್ರೌನ್ ೧/೮

ಆರು ದಳಗಳಿವೆ: ೧.ಸೋಬಾನೆ ಪದಗಳು ೨.ಒಸಗೆಯ ಪದಗಳು ೩.ರಾಗಿ ಬೀಸುವ ಪದಗಳು ೪.ತಿಂಗಳುಮಾವನ ಪೂಜೆ ಪದಗಳು ೫.ದೇವರ ಪದಗಳು ೬.ಹಾಡ್ಗತೆಗಳು: ನಂಜನಗೂಡು ನಂಜಯ್ಯ, ಮೇಲುಕೋಟೆ ಚೆಲುವಯ್ಯ, ಗಂಗೆಗೌರಿ, ರವಿಕಣ್ಣ, ಈರೋಬಿ, ಜವರಾಯ, ಮಾದೇವಿ, ನಾಗರಗನ್ನೆ (ಒಟ್ಟು ೮ ಕಥನಗೀತೆಗಳು). ದೇಶಹಳ್ಳಿ ಜಿ. ನಾರಾಯಣ ಅವರ ಪ್ರಸ್ತಾವನೆ, ರಂ.ಶ್ರೀ ಮುಗಳಿ ಅವರ ಮುನ್ನುಡಿ, ಸೋಬಾನೆ ಚಿಕ್ಕಮ್ಮ ಎಂಬ ಲೇಖನ, ಕೆಲವು ಫೋಟೋಗಳು, ಕೊನೆಯಲ್ಲಿ ಮೂರು ಅನುಬಂಧಗಳಿವೆ: ೧.ವಿವರಣೆ, ಅರ್ಥ, ಇತ್ಯಾದಿ. ೨.ಸ್ವರ ಪ್ರಸ್ತಾರ ೩.ಶಬ್ದಸೂಚಿ.

೨೧೨೦. ಸೋಬಾನೆ ಪದಗಳು

ಸಂ: ಸ್ವಾಮಿಗೌಡ; ಪ್ರ: ಶ್ರೀ ಶಾರದಾ ಪುಸ್ತಕ ಭಂಡಾರ, ದಾಸೇಗೌಡನ ಕೊಪ್ಪಲು, ಪೊನ್ನಾಥಪುರ ಪೋಸ್ಟ್, ಆಲೂರು ತಾಲೂಕು; ಮೊ.ಮು: ೧೯೭೨; ಪು:೬+೧೦+೯೭+೧೪=೧೨೭; ಕ್ರೌನ್ ೧/೮

ನಾಲ್ಕು ಪ್ರಕರಣಗಳಿವೆ: ಸೋಬಾನೆ ಪದಗಳು ೨.ಮೈನೆರೆದ ಹೆಣ್ಣನ್ನು ಹಸೆಗೆ ಕರೆವ ಪದಗಳು ೩.ಕರುವಿನ ಮದುವೆ ಪದಗಳು ೪.ಮಕ್ಕಳ ಪದಗಳು. ಡಿ.ಆರ್. ಚನ್ನೇಗೌಡ ಅವರ ಮುನ್ನುಡಿ, ಕೊನೆಯಲ್ಲಿ, ಅರ್ಥಕೋಶ (ಆಯಾ ಪ್ರಕರಣಕ್ಕೆ ಪ್ರತ್ಯೇಕವಾಗಿ), ಅನುಬಂಧಗಳಲ್ಲಿ: ೧.ವಿವಾಹ ಪದ್ಧತಿಗಳು ೨.ಹೊಗಳಿಕೆ ಪದಗಳು ಇವೆ.

೨೧೨೧. ಸೋಬಾನೆ ಬೆಳ್ಳುಳ್ಳಮ್ಮ

ಸಂ: ಎಚ್.ಎನ್.ರಾಧ; ಪ್ರ: ತಳಗವಾದಿ ಪ್ರಕಾಶನ, ೨೨, ವಿಜಯಶ್ರೀ, ಕುವೆಂಪುನಗರ, ಮೈಸೂರು–೫೭೦ ೦೦೯; ಮೊ.ಮು.೨೦೦೩; ಪು: ೨೪+೮+೨೦೭=೨೩೯; ಕ್ರೌನ್ ೧/೮

ಈ ಗ್ರಂಥವನ್ನು ಆರು ಭಾಗಗಳಾಗಿ ವಿಂಗಡಿಸಲಾಗಿದೆ: **ಭಾಗ ಒಂದು: ಸೋಬಾನೆ** ಬೆಳ್ಳುಳ್ಳಮ್ಮ – ಆತ್ಮಕಥನ. **ಭಾಗ ಎರಡು: ಪರಸಂಗಗಳು:** ೧.ಅಣ್ಣ ತಂಗಿ ಪರಸಂಗ ೨.ಸೋರೇಕಾಯಿ ಪರಸಂಗ ೩.ದೊರೆಮಗಳ ಪರಸಂಗ ೪.ಕೋಳಿಮೊಟ್ಟೆಯೊಳಗೆ ಹುಟ್ಟಿದ ಹೈದ ೫.ಬಂಜೆ ಪರಸಂಗ ೬.ನರಳಿಕುಮಾರನ ಪರಸಂಗ. **ಭಾಗ ಮೂರು: ಜನಪದ ಗೀತೆಗಳು–ಸಾಂಸಾರಿಕ:** ಇಲ್ಲಿನ ಹಾಡುಗಳನ್ನು ನಾಲ್ಕು ದಳಗಳನ್ನಾಗಿ ವಿಂಗಡಿಸಲಾಗಿದೆ. **ಭಾಗ ನಾಲ್ಕು: ಜನಪದ ಗೀತೆಗಳು–ದೈವಿಕ. ಭಾಗ ಐದು: ಜಾನಪದ:** ವ್ಯಾವಹಾರಿಕ. **ಭಾಗ ಆರು:** ಟಿಪ್ಪಣಿ, ಅರ್ಥಕೋಶ ಇತರೆ. ರಾಗೌ ಅವರ ಮುನ್ನುಡಿ, ದೇಜಗೌ ಅವರ ನಲ್ನುಡಿ, ಇವೆ.

೨೧೨೨. ಸೋಮಶೇಖರ ಚಿತ್ರಶೇಖರ ಯಕ್ಷಗಾನ

ಸಂ: ಎಸ್. ಉಮಾಪತಿ; ಪ್ರ: ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು; ಮೊ.ಮು. ೧೯೮೦; ಪು: ೨೫+೧೯೨=೨೧೭; ಡಿಮ್ಮೈ ೧/೮

ರಾಗ ತಾಳ ಛಂದೋ ಸಹಿತದ ಯಕ್ಷಗಾನ ಕಾವ್ಯ. ಸಂಪಾದಕರ ಪ್ರಸ್ತಾವನೆ, ಅನುಬಂಧಗಳಲ್ಲಿ ಪಾಠಾಂತರಗಳ ನಮೂದುಗಳು, ಅರ್ಥಕೋಶ, ಇವೆ.

೨೧೨೩. ಸೋಮ್ರಾಯ್ ಭೀಮ್ರಾಯ್ನ ಡಪ್ಪಿನಾಟ

ಲೇ: ಚೆನ್ನಣ್ಣ ವಾಲೀಕಾರ; ಪ್ರ: ಅಕ್ಷರ ಪ್ರಕಾಶನ, ಸಾಗರ, ಕರ್ನಾಟಕ ರಾಜ್ಯ ಮೊ.ಮು: ೧೯೭೯; ಪು: ೯೨; ಡಿಮ್ಮೈ ೧/೮

"ನಮ್ಮ ಭಾಗದ ಮೊಹರ್‍ರಂ ಮತ್ತು ದಾಸಯ್ಯಗಳ ಹಾಡಿನಲ್ಲಿ ಹರಡಿಕೊಂಡಿರುವ ಸೋಮ್ರಾಯ್ ಭೀಮ್ರಾಯ್ನ ಕಥೆಯನ್ನಾರಿಸಿಕೊಂಡು ಆವಶ್ಯಕವಾದ ಕಡೆಗಳಲ್ಲಿ ಬದಲಾವಣೆಗಳನ್ನು ಮಾಡಿಕೊಂಡು ಕಥೆಗೆ ಧಕ್ಕೆ ಬರದಂತೆ ಆಧುನಿಕತೆಯನ್ನು ಸಂಧಿಸುವ ಸಣ್ಣ ಪ್ರಯತ್ನ ಮಾಡಿದ್ದೇನೆ" ಎಂಬುದಾಗಿ ಲೇಖಕರು ಹೇಳಿಕೊಂಡಿದ್ದಾರೆ. ಅನುಬಂಧದಲ್ಲಿ, ಸೋಮ್ರಾಯ್ ಭೀಮ್ರಾಯ್ನ ಮೊಹರ್‍ರಂ ಪದ, ಪ್ರಾದೇಶಿಕ ಶಬ್ದಾರ್ಥಗಳು, ಇವೆ.

೨೧೨೪. ಸೋರೇಬುರುಡೆ

ಲೇ: ಎಂ. ಬೈರೇಗೌಡ; ಪ್ರ: ಸಿ.ವಿ.ಜಿ. ಪಬ್ಲಿಕೇಷನ್ಸ್, ೭೦, ೨ನೆಯ ಮುಖ್ಯರಸ್ತೆ, ಜಬ್ಬಾರ್ ಬ್ಲಾಕ್, ವೈಯಾಲಿ ಕಾವಲ್, ಬೆಂಗಳೂರು–೫೬೦ ೦೦೩; ಮೊ.ಮು.೨೦೦೦; ಪು:೨೦+೬೪=೮೪; ಕ್ರೌನ್ ೧/೮

"ಮೂಲತಃ ಈ ಹಾಡ್ಗತೆ ಇರುಳಿಗರ ಸೃಷ್ಟಿಪುರಾಣದ ಕಥೆ. ನನ್ನ ಅಧ್ಯಯನ ಕಾಲದಲ್ಲಿ ಇರುಳಿಗರ ಸೃಷ್ಟಿ ಪುರಾಣಕ್ಕೆ ಸಂಬಂಧಿಸಿದಂತೆ ಹಲವರು ಹೇಳಿದ ಕಥೆಯನ್ನೇ ಬಳಸಿಕೊಂಡು ನನ್ನದೇ ಮಾತುಗಳಲ್ಲಿ ಹಿಡಿದಿಡುವ ಪ್ರಾಮಾಣಿಕ ಪ್ರಯತ್ನವನ್ನಷ್ಟೆ ಕೃತಿಯಲ್ಲಿ ನಡೆಸಿದ್ದೇನೆ" ಎಂಬುದಾಗಿ ಲೇಖಕರು ಹೇಳಿದ್ದಾರೆ.

೨೧೨೫. ಸೋಲಿಗರು ಹಾಡಿದ ಬಿಳಿಗಿರಿ ರಂಗನ ಕಾವ್ಯ

ಸಂ: ಕೆ. ಕೇಶವನ್ ಪ್ರಸಾದ್; ಪ್ರ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ; ಮೊ.ಮು.೨೦೦೫; ಪು: ೮+೧೪೨=೧೫೦; ಡಿಮ್ಮೆ ೧/೮

ಇಲ್ಲಿನ ಅಧ್ಯಾಯಗಳು ಹೀಗಿವೆ: ೧.ಹೇಳಲೇ ಬೇಕಾದ್ದು ಬೇಡದ್ದು ೨.ಸೋಲಿಗ ಸಮುದಾಯದ ಪರಿಚಯ ೩.ಕಾವ್ಯವನ್ನು ಕುರಿತು ೪.ಕಾವ್ಯ ಓದುವ ಮೊದಲು ೫.ನೆನೆವಾರ್ತೆ ೬.ಬಿಳಿಗಿರಿರಂಗನ ಕಾವ್ಯ. ಅನುಬಂಧದಲ್ಲಿ, ಕಲಾವಿದನ ಸಂದರ್ಶನ, ವಕ್ತೃ ವಿವರ, ಅರ್ಥಸೂಚಿ, ಇವೆ.

೨೧೨೬. ಸ್ಕಾಂದಪುರಾಣಾಂತರ್ಗತ ಯಕ್ಷಗಾನ ಯೋಗೀನೀ ಕಲ್ಯಾಣ

ಲೇ: ದಿ. ಕುಂಜಾಲು ರಾಮಕೃಷ್ಣಯ್ಯ; ಪ್ರ: ಶ್ರೀಮನ್ಮಧ್ವ ಸಿದ್ಧಾಂತ ಗ್ರಂಥಾಲಯ, ಉಡುಪಿ; ಮೊ.ಮು. ೧೯೫೫; ಪು: ೨+೩೬=೩೮; ಕ್ರೌನ್ ೧/೮

ರಾಗ ತಾಳ ಛಂದೋ ಸಹಿತದ ಕಾವ್ಯ. ಪಾತ್ರಗಳ ವಿವರ ಇದೆ.

೨೧೨೭. ಸ್ವಾತಂತ್ರ್ಯ ಸಮರದ ಲಾವಣಿಗಳು

ಲೇ: ಎನ್. ವಿಷಕಂಠರಾವ್ ಡಬೇಕರ್; ಪ್ರ: ಕರ್ನಾಟಕ ಜಾನಪದ ಪರಿಷತ್ತು, ೧, ಜಲದರ್ಶಿನಿ ಬಡಾವಣೆ, ಎಂ.ಎಸ್.ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ, ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು–೫೬೦ ೦೫೪; ಮೊ.ಮು: ೨೦೦೮; ಪು: ೩೨; ಕ್ರೌನ್ ೧/೮

ಪ್ರಸಿದ್ಧ ಲಾವಣಿ ಕಲಾವಿದರಾದ ಎನ್.ವಿಷಕಂಠರಾವ್ ಅವರು ರಚಿಸಿ ಹಾಡಿ ಪ್ರಸಿದ್ಧಿಗೆ ತಂದಿರುವ ಈ ಲಾವಣಿಗಳು ಇಲ್ಲಿವೆ: ಹೈದರ್ ಮತ್ತು ಟಿಪ್ಪು ಸುಲ್ತಾನ್ ಲಾವಣಿ, ಝಾನ್ಸಿ ಲಕ್ಷ್ಮೀಬಾಯಿ ಲಾವಣಿ, ಮಹಾತ್ಮಾಗಾಂಧೀಜಿ ಲಾವಣಿ, ನೇತಾಜಿ ಲಾವಣಿ, ಜವಹರಲಾಲ್ ನೆಹರು ಲಾವಣಿ ಮುಂತಾದವು.

೨೧೨೮. ಸ್ಟಿಥ್ ಥಾಮ್ಸನ್ –ಜಾನಪದ ವಿಜ್ಞಾನದ ಪಿತಾಮಹ

ಲೇ: ಸಿ.ಸಿ.ಎ. ಪೈ; ಪ್ರ: ವಿವೇಕ ಪ್ರಗತಿ ಪ್ರಕಾಶನ, ವಿರಕ್ತಾಶ್ರಮ, ಕಲ್ಯಾಣ ನಗರ, ಧಾರವಾಡ–೫೮೦೦೦೭; ಮೊ.ಮು: ೧೯೭೮; ಪು: ೭೬; ಫೂಲ್ಸ್‌ಕ್ಯಾಪ್ ೧/೪ ಅಗಲ; ಕ್ರೌನ್ ೧/೮ ಉದ್ದ(ಚಚ್ಚೌಕಾಕಾರ ಇದೆ.)

ಟೈಪ್‌ರೈಟರ್‌ನಲ್ಲಿ ಟೈಪ್ ಆಗಿರುವ ಪ್ರತಿ(ಅಚ್ಚಾದ ಪ್ರತಿಯಂತೆ ತೋರುತ್ತಿಲ್ಲ) ಒಳನೋಟ ಹೀಗಿದೆ: ೧.ಡಾಕ್ಟರ್ ಥಾಮ್ಸನನ ಜೀವನ ಕಥೆ ೨.ಡಾಕ್ಟರ್ ಥಾಮ್ಸನನ ವಿದ್ವತ್ ಕೃಷಿಯ ಫಲಗಳು ೩.ಡಾ.ಥಾಮ್ಸನನ ಜಾನಪದ ಕೃತಿಗಳ ಪರಿಚಯ: ಅ. ದಿ ಫೋಕ್ ಆ. ದಿ ಟೇಲ್ ಟೈಪ್ಸ್ ಆಫ್ ಫೋಕ್‌ಟೇಲ್ ಇ. ಮೋಟಿಫ್ ಇಂಡೆಕ್ಸ್ ಆಫ್ ಫೋಕ್ ಲಿಟರೇಚರ್ ಈ. ಫೋರ್ ಸಿಂಪೊಸಿಯಾ ಆನ್ ಫೋಕ್‌ಲೋರ್ ಉ. ಥಾಮ್ಸನನ ಲೇಖನಗಳು ೪.ಮೌಲ್ಯಮಾಪನ. ಎರಡನೆಯ ಅಧ್ಯಾಯದ ಪ್ರಾರಂಭದಲ್ಲಿ "ತನ್ನ ಸುದೀರ್ಘವಾದ ಜೀವಮಾನದಲ್ಲಿ ಈತನು (ಥಾಮ್ಸನ್) ರಚಿಸಿ ಪ್ರಕಟಿಸಿದ ಗ್ರಂಥಗಳ ಪಟ್ಟಿ ಈ ಕೆಳಗಿನಂತಿರುವುದು. ಇವುಗಳನ್ನು ಇಲ್ಲಿ ಕಾಲಾನುಕ್ರಮಕ್ಕನುಗುಣವಾಗಿ ಕೊಡಲಾಗಿದೆ. ನಮ್ಮ ಪ್ರಯತ್ನಕ್ಕೆ ಎಟುಕಲಾಗದ ಕೃತಿಗಳೆಷ್ಟೋ ಎಂಬ ವಿಷಯವನ್ನು ನಾವು ಊಹಿಸಲಾರೆವು. ಆದ್ದರಿಂದ ನಮಗೆ ತಿಳಿದುಬಂದಷ್ಟನ್ನು ಮಾತ್ರ ಇಲ್ಲಿ ಸೇರಿಸಿರುವೆವು"ಎಂಬುದಾಗಿ ಲೇಖಕಕರು ತಿಳಿಸಿ, ೧೯೧೨ ರಿಂದ ೧೯೬೮ರ ವರೆಗೆ ಥಾಮ್ಸನ್ ಅವರು ಪ್ರಕಟಿಸಿರುವ ೨೨ ಕೃತಿಗಳನ್ನು ಪಟ್ಟಿ ಮಾಡಿದ್ದಾರೆ. ಅಲ್ಲದೆ ವಿವಿಧ ಪ್ರತಿಕೆಗಳಲ್ಲಿ ಪ್ರಕಟವಾಗಿರುವ ಮೂರು ಮಹತ್ವದ ಲೇಖನಗಳನ್ನೂ ನಮೂದಿಸಿದ್ದಾರೆ. ಆ ಲೇಖನಗಳು ಪ್ರಕಟವಾದದ್ದು ೧.೧೯೩೮ ೨.೧೯೫೮ ೩.೧೯೬೫ Thompson at his Desk ಎಂಬ, ಹಾಗೂ ಕನ್ನಡದಲ್ಲಿ ಲೇಖನಿ ಕೃಷಿಗಾರ ಥಾಮ್ಸನ ಎಂಬ ಥಾಮ್ಸನ್ ಅವರ ರೇಖಾಚಿತ್ರವನ್ನು ಪೈ ಅವರೇ ರಚಿಸಿ, ಅದನ್ನೂ ಈ ಗ್ರಂಥದಲ್ಲಿ ನೀಡಿದ್ದಾರೆ.

೨೧೨೯. ಸ್ತ್ರೀ ಕಥನ

ಲೇ: ಶೈಲಜಾ ಹಿರೇಮಠ; ಪ್ರ: ಪ್ರಾರಂಭದ ಪುಟಗಳು ಲಭ್ಯ ಪ್ರತಿಯಲ್ಲಿ ಇಲ್ಲ; ಪು: ೧೨೮ (ಕೊನೆಯ ಪುಟ ಅಲ್ಲ); ಡಿಮ್ಮೈ೧/೮

ಹತ್ತು ಸಂಶೋಧನ ಲೇಖನಗಳ ಸಂಕಲನ. ಇವುಗಳಲ್ಲಿ ಎರಡು ಲೇಖನಗಳು ಜಾನಪದಕ್ಕೆ ಸಂಬಂಧಿಸಿವೆ: ೧.ಸ್ವಾತಂತ್ರ್ಯ ಯುದ್ಧ: ಮಹಿಳಾ ಜನಪದ ಸಾಹಿತ್ಯ ೨.ಮಹಿಳಾ ಜನಪದ ಕಲೆಗಳು: ಹೊಸ ಹುಡುಕಾಟ. ಕನ್ನಡ ಮಹಿಳಾ ಚಿಂತನೆಯ ವಿಸ್ತರಣೆ ಎಂಬ ಮೊಗಳ್ಳಿ ಗಣೇಶ್ ಅವರ ಮುನ್ನುಡಿ ಇದೆ.

೨೧೩೦. ಸ್ತ್ರೀ ನೀತಿ ಮಂಗಳ ಹಾಡುಗಳು

ಸಂ.ಟಿ.ಎಮ್.ಚಂದ್ರಶೇಖರ ಶಾಸ್ತ್ರಿ; ಪ್ರ: ವೀರೇಶ್ವರ ಪುಣ್ಯಾಶ್ರಮ, ಗದಗ; ಮೊ.ಮು: ೧೯೭೨; ಪು: ೮+೭೨=೮೦; ಕ್ರೌನ್೧/೮.

“ಇದರಲ್ಲಿ ಕೆಲವು ಪದಗಳನ್ನು ಸ್ವತಃ ಕವಿಗಳು ರಚಿಸಿಯೂ, ಮತ್ತೆ ಕೆಲವನ್ನು ತಮ್ಮ ಸಹಪಾಠಿ ವಿದ್ವನ್ಮಣಿಳಿಂದ ಸಂಪಾದಿಸಿಯೂ, ಇನ್ನೂ ಕೆಲವನ್ನು ಜಾನಪದದಿಂದ ಸಂಗ್ರಹಿಸಿಯೂ...” ಇತ್ಯಾದಿಯಾಗಿ ಪ್ರಸ್ತಾವನೆ ಎಂಬುದಾಗಿ ಮುನ್ನುಡಿಯಲ್ಲಿ ವಿರುಪಾಕ್ಷ ಶಾಸ್ತ್ರಿ ಹೇಳಿದ್ದಾರೆ. ಒಟ್ಟು ೪೮ ಹಾಡುಗಳಿವೆ.

೨೧೩೧. ಸ್ತ್ರೀವಾದಿ ಜನಪದ ಕಥೆಗಳು

ಸಂ: ಜೀನಹಳ್ಳಿ ಸಿದ್ಧಲಿಂಗಪ್ಪ; ಪ್ರ: ಪ್ರೇಮ ಪ್ರಕಾಶನ, ಜೀನಹಳ್ಳಿ ಅಂಚೆ, ನ್ಯಾಮತಿ ಮಾರ್ಗ, ದಾವಣಗೆರೆ ಜಿಲ್ಲೆ –೫೭೭ ೨೨೩; ಮೊ.ಮು: ಎ.ಮು: ನಮೂದು ಇಲ್ಲ, ಮೂ.ಮು: ೨೦೦೭; ಪು: ೪೦+೮೦=೧೨೦; ಡಿಮ್ಮೈ೧/೮

೧೭ ಕಥೆಗಳಿವೆ: ೧.ಕಥೆ ಕೇಳೇ ಗುಬಲಾಡಿ ೨.ಹಾವಿನ ಕಥೆ ೩.ಚಾಪಿ ಕಡಿಲೊ? ಬಾನಿ ಒಡಿಲೊ? ೪.ಆಸೆಗಾತಿ ಅಕ್ಕ ೫.ಸಣಗಿ ಹುಗ್ಗಿಯ ಕಥೆ ೬.ಇಲಿಯೆ ಇಲಿಯೆ ಇರ್ತಾವ್ ಸೂಳೆ ೭.ಕಾಲು ಕಟ್ಟಂಗಿಲ್ಲ ಅಡ್ಡೆ ಹಾಕಂಗಿಲ್ಲ ೮.ಕಳ್ಳನ್ನ ಹಿಡಿಯೋದ್ಹೆಂಗೆ? ೯.ಅರೀದ್ ಮನೆ ಮರದ ಮುಚುಣ ೧೦.ನಾ ಅಂತಾ ಸತ್ಯುಳ್ಳಾಕೆ ಆದೆ? ೧೧.ತಟ್ಟೆಮಲ್ಲಿ ಕಥೆ ೧೨.ನಾನ್ಹೆಂಗೆ ರಂಡೆ ಆಗಲೊ ಶಿವನೆ–ಮಾತಿನರಗಿಣಿಯೆ ೧೩.ಹೂಗಾರ ಮಲ್ಲಣ್ಣನ ಮಗಳ ಕಥೆ ೧೪.ಬಸುಕುಮಾರ ಲಲಿತ ಕುಮಾರರ ಕಥೆ ೧೫.ಶಿವುಗೊನ್ನಿ ಕಥೆ ೧೬.ಆರು ಜನ ಅಣ್ಣಂದಿರು ಮತ್ತು ಒಬ್ಬ ತಂಗಿ ೧೭.ಅಡಕರಾಜನ ಮಗಳು ಅರಮಜೋತಿ ಕಥೆ. ಎಸ್. ಶಿವಾನಂದ ಸಾಸ್ವೆಹಳ್ಳಿ ಅವರ ಮಾತಾಡುವ ಗಿಣಿಗಳು ಎಂಬ ಮುನ್ನುಡಿ, ಸಂಪಾದಕರ ಪ್ರಸ್ತಾವನೆ, ವಿವಿಧ ವಿದ್ವಾಂಸರ ಅಭಿಪ್ರಾಯಗಳು, ಇವೆ. ಕೊನೆಯಲ್ಲಿ ಆರು ಅನುಬಂಧಗಳಿವೆ: ೧.ಜನಪದ ಕಥನಗಾರರ ಪರಿಚಯ ೨.ಅಂಕಿತನಾಮ ಸೂಚಿ ೩.ವಿಶಿಷ್ಟಪದಸೂಚಿ ೪.ವಿಶಿಷ್ಟಪದಪುಂಜಗಳು ೫.ಶಬ್ದಾರ್ಥಸೂಚಿ ೬.ಆಶಯಸೂಚಿ.

೨೧೩೨. ಸ್ಥಳನಾಮ ಅಧ್ಯಯನಗಳು

ಲೇ: ವಿ. ಗೋಪಾಲಕೃಷ್ಣ; ಪ್ರ: ವಿದ್ಯಾಗಿರಿ ಪ್ರಕಾಶನ, ದಾರಿನಾಯಕನ ಪಾಳ್ಯ, ಗೌರೀಬಿದನೂರು ತಾಲ್ಲೂಕು, ಕೋಲಾರ ಜಿಲ್ಲೆ; ಮೊ.ಮು. ೧೯೮೭; ಪು: ೧೨+೭೬=೮೮; ಡಿಮ್ಮೈ ೧/೮

ಎಂಟು ಅಧ್ಯಾಯಗಳಿವೆ: ೧.ಸ್ಥಳನಾಮ ಅಧ್ಯಯನ –ಸಮಸ್ಯೆಗಳು ಹಾಗೂ ನಿವಾರಣೆ ೨.ಕೋಲಾರದ ಸ್ಥಳನಾಮಗಳು – ಒಂದು ಸಮೀಕ್ಷೆ ೩.ಸ್ಥಳನಾಮಗಳ ಪುನರ್ನಾಮಕರಣ (ಕೆಲವು ಮಾದರಿಗಳ ಅಧ್ಯಯನ) ೪.ಕೋಲಾರ ಜಿಲ್ಲೆಯ

ಸ್ಥಳನಾಮಗಳು–ಕೆಲವು ಸ್ವಾರಸ್ಯಗಳು ೫.ಕೋಲಾರ ಜಿಲ್ಲೆಯ ಸ್ಥಳನಾಮಗಳಲ್ಲಿ ಜಲಸೂಚಿ ಅಂಶಗಳು ೬.ಚಿತ್ರದುರ್ಗ ಜಿಲ್ಲೆಯ ಸ್ಥಳನಾಮಗಳು – ಒಂದು ಅವಲೋಕನ ೭.ಕೋಲಾರ ಜಿಲ್ಲೆಯ ಸ್ಥಳನಾಮಗಳಲ್ಲಿ ಜಾನಾಂಗಿಕ ಅಂಶಗಳು ೮.ಸ್ಥಳನಾಮಗಳ ಸಂಸ್ಕೃತೀಕರಣ. ಹಂಪ. ನಾಗರಾಜಯ್ಯ ಅವರ ಮುನ್ನುಡಿ ಇದೆ.

೨೧೩೩. ಸ್ಥಳನಾಮ ವೀರರು

ಲೇ: ಕೂಡ್ಲೂರು ವೆಂಕಟಪ್ಪ; ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–೫೬೦ ೦೧೮; ಮೊ.ಮು: ೨೦೦೭; ಪು:೭+೧೦೧=೧೦೮; ಡಿಮ್ಮೈ ೧/೮

೧೨ ಲೇಖನಗಳ ಸಂಕಲನ: ೧.ಸ್ಥಳನಾಮ ವೀರರು ೨.ಜನಪದರ ಒಗಟುಗಳಲ್ಲಿ ಹಾಸ್ಯ ೩.ಜಾನಪದ ನಂಬಿಕೆಗಳು ಒಂದು ವಿಶ್ಲೇಷಣೆ ೪.ಮಳವಳ್ಳಿ ತಾಲ್ಲೂಕಿನ ಜನಪದ ಕಲೆಗಳು ೫.ಮಳವಳ್ಳಿ ಗ್ರಾಮದೇವತೆ ಸಿಡಿಹಬ್ಬ ೬.ಜನಪದ ಗೀತೆಗಳಲ್ಲಿ ತವರು ೭.ಜನಪದ ಗೀತೆಗಳಲ್ಲಿ 'ಹಡೆದವ್ವ' ೮.ಜನಪದ ಗೀತೆಗಳಲ್ಲಿ ತಾಯಿ–ಮಗಳು ೯.ಜನಪದ ಗೀತೆಗಳಲ್ಲಿ ದಾಂಪತ್ಯ ಚಿತ್ರಣ ೧೦.ಜನಪದ ಗೀತೆಗಳಲ್ಲಿ ಒಡಹುಟ್ಟು ೧೧.ಜನಪದ ತ್ರಿಪದಿಗಳಲ್ಲಿ ಚನ್ನಪಟ್ಟಣದ ಚಿತ್ರಣ ೧೨.ಜನಪದದಲ್ಲಿ ಹಿತವಚನಗಳು. ಸಿಸಿರಾ ಅವರ ಮುನ್ನುಡಿ ಇದೆ.

೨೧೩೪. ಸ್ಥಳನಾಮ ವ್ಯಾಸಂಗ

ಲೇ: ದೇಜಗೌ; ಪ್ರ: ಸಹ್ಯಾದ್ರಿ ಪ್ರಕಾಶನ, ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಮೈಸೂರು; ಮೊ.ಮು: ೧೯೯೦; ಪು: ೮+೧೬೮=೧೭೬; ಕ್ರೌನ್ ೧/೮

ಈ ಗ್ರಂಥದಲ್ಲಿ ಹತ್ತು ಅಧ್ಯಾಯಗಳೂ ಮೂರು ಅನುಬಂಧಗಳೂ ಇವೆ. **ಅಧ್ಯಾಯಗಳು:** ೧.ಪ್ರವೇಶ ೨.ಸ್ಥಳನಾಮಗಳ ಉಗಮ ೩.ಸ್ಥಳನಾಮ ವಿಜ್ಞಾನದ ವ್ಯಾಪ್ತಿ, ಪ್ರಭಾವ ೪.ಸ್ಥಳನಾಮ ವಿಜ್ಞಾನದ ಇತಿಹಾಸ ೫.ಸಂಶೋಧನಾ ವಿಧಾನ – ಸಾಧನ ೬.ವರ್ಗೀಕರಣ ೭.ಸ್ಥಳನಾಮಗಳ ಜಾಯಮಾನ ಹಾಗೂ ಬದಲಾವಣೆ ೮.ಕ್ಷೇತ್ರಕಾರ್ಯ ೯.ಗ್ರಾಮನಾಮ ಜಾನಪದ ೧೦.ಮೈಸೂರು ನಗರದ ಬೀದಿ ಹೆಸರುಗಳು. **ಅನುಬಂಧಗಳು:** ೧.ಕೊಡವರ ಕುಟುಂಬ ನಾಮಗಳು ೨.ರಾಷ್ಟ್ರೀಯ ಸ್ಥಳನಾಮ ನಿಘಂಟಿನ ಜರೂರು ಅಗತ್ಯ ೩.ಹೆಸರು ಬದಲಾವಣೆಯ ಬಗೆಗೊಂದು ಟಿಪ್ಪಣಿ.

೨೧೩೫. ಸ್ಥಳನಾಮಗಳು

ಲೇ: ವಿಶ್ವನಾಥ; ಪ್ರ: ಸಂವಹನ ಪ್ರಕಾಶನ, ೧೨/ಎ, ಈವನಿಂಗ್ ಬಜಾರ್ ಹಿಂಭಾಗ, ಶಿವರಾಂ ಪೇಟೆ, ಮೈಸೂರು–೫೭೦ ೦೦೧; ಮೊ.ಮು: ೧೯೯೬; ಪು: ೮+೯೫=೧೦೩; ಡಿಮ್ಮೈ ೧/೮

ಏಳು ಅಧ್ಯಾಯಗಳಿವೆ: ೧.ಸ್ಥಳನಾಮಗಳ ಸ್ವರೂಪ ಮತ್ತು ಅಧ್ಯಯನ ೨.ಸ್ಥಳನಾಮಗಳ ವರ್ಗೀಕರಣ ಮತ್ತು ಸ್ಥಳನಾಮಗಳ ಅಧ್ಯಯನದ ಇತಿಹಾಸ ೩.ಸ್ಥಳನಾಮ ಅಧ್ಯಯನದಿಂದಾಗುವ ಪ್ರಯೋಜನ ೪.ಸ್ಥಳನಾಮಗಳ ಐತಿಹಾಸಿಕ, ಸಾಂಸ್ಕೃತಿಕ, ಸಾಮಾಜಿಕ ಮತ್ತು ಜಾನಪದೀಯ ಅಧ್ಯಯನದ ಇತಿಮಿತಿಗಳು ೫.ಅರ್ಥಪೂರ್ಣ ಸ್ಥಳನಾಮಗಳು ೬.ಜಿಲ್ಲಾ ಕೇಂದ್ರಗಳ ಸ್ಥಳನಾಮಗಳು ೭.ಸ್ಥಳನಾಮಗಳ ಭಾಷೆ. ಬಿ.ಶಾಮಸುಂದರ ಅವರ ಮುನ್ನುಡಿ ಇದೆ.

೨೧೩೬. ಸ್ಯಾಸಿ ಚಿನ್ನಮ್ಮನ ಕಾವ್ಯ

ಸಂ: ಸ.ಚಿ. ರಮೇಶ್; ಪ್ರ: ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ; ಮೊ.ಮು: ೧೯೯೯; ಪು: ೧೨+೧೭೪ = ೧೮೬; ಡಿಮ್ಮೈ ೧/೮

೨೪ ಅಧ್ಯಾಯಗಳಲ್ಲಿ ನಿರೂಪಿತವಾಗಿರುವ ಕಾವ್ಯ ಇದು: ೧.ವೆಂಕಟೇಶ ಸ್ವಾಮಿ ವರಪ್ರಸಾದ ೨.ಏಳು ಮಂದಿ ಗಂಡು ಮಕ್ಕಳ ಜನನ ೩.ಸ್ವಾಮಿಯಿಂದ ಹೆಣ್ಣುಮಗುವಿನ ವರಪ್ರಸಾದ ೪.ಚಿನ್ನಮ್ಮನ ಜನನ ೫.ಗೌಡ ನಾಗಮ್ಮನಿಗೆ ನಾಮಕರಣದ ಕರೆ ೬.ನರಸಿಂಹ ರೆಡ್ಡಿಯಿಂದ ಗೌಡ ನಾಗಮ್ಮ ಭಾಷೆ ತೆಗೆದುಕೊಂಡಿದ್ದು ೭.ನಾಮಕರಣ ೮.ದಾಸಿಂಗ ಅರ್ಪಣೆ ೯.ಶ್ಯಾನುಭೋಗರಿಂದ ವಿದ್ಯಾಭ್ಯಾಸ ೧೦.ಯಂಗಳರೆಡ್ಡಿ ಜೊತೆ ಮದುವೆ ೧೧.ತಿರುಪತಿ ಸ್ವಾಮಿಯಿಂದ ಮುಡಿಪು ನಿರಾಕರಣೆ ೧೨.ಅತ್ತೆ ಮನೆಯಲ್ಲಿ ಚಿನ್ನಮ್ಮನ ಬದುಕು ೧೩.ತಾಳನ ಗುಡಿಸಿಲಿನಲ್ಲಿ ಚಿನ್ನಮ್ಮನ ದುಸ್ತರ ಬದುಕು ೧೪.ದಾಸಪ್ಪನ ವೇಷದಲ್ಲಿ ವಾರೆಂಕಟೇಶ್ವರ ೧೫.ಕುಂಬಾರನಿಂದ ಪಡಗ ಮಾಡಿಸಿದ್ದು ೧೬.ಚಿನ್ನಮ್ಮನ ಸತ್ವಪರೀಕ್ಷೆ ೧೭.ದಾಸಪ್ಪನಿಂದ ಎಂಟು ಮಂದಿ ಹಳ್ಳ ದಾಟಿದ್ದು ೧೮.ಚಿನ್ನಮ್ಮನಿಂದ ಸ್ವಾಮಿ ಮುಗ್ಗಲ ಮುದ್ದೆ ಉಂಡಿದ್ದು ೧೯.ಗೌಡ ನಾಗಮ್ಮನ ಸೀರೆಗೆ ಬೆಂಕಿ ೨೦.ಗೌಡ ನಾಗಮ್ಮ ತಿರುಪತಿ ಗುಡ್ಡಕ್ಕೆ ಬರಲು ಒಪ್ಪಿದ್ದು ೨೧.ಕೊರವಂಜಿ ವೇಷದಲ್ಲಿ ವಾರೆಂಕಟೇಶ ಸ್ವಾಮಿ ೨೨.ಕಾಡಿನಿಂದ ಕಟ್ಟಿಗೆ ಹಾಗೂ ಹುಲ್ಲನ್ನು ತರಿಸಿದ್ದು ೨೩.ಗಿಳಿಬಂಡಿ ಮೆರವಣಿಗೆಯಲ್ಲಿ ಪಡಗ ಹೊತ್ತ ಚಿನ್ನಮ್ಮ ೨೪.ತಿರುಪತಿಯಲ್ಲಿ ಚಿನ್ನಮ್ಮನ ಐಕ್ಯ. ಎಂ.ಎಂ. ಕಲಬುರ್ಗಿ ಅವರ ದೇಸಿಯೊಳ್ ಪುಗುವುದು ಎಂಬ ಮುನ್ನುಡಿ, ಹಾಡುಗಾರ್ತಿ ಈರಮ್ಮ, ಪ್ರಸ್ತಾವನೆ, ಅನುಬಂಧದಲ್ಲಿ, ಸಂಬಂಧಸೂಚಿ, ಪ್ರಾದೇಶಿಕ ಶಬ್ದಕೋಶ, ಕಲಾವಿದೆ ಬುಡುಗ ಜಂಗಮರ ಈರಮ್ಮ ಮತ್ತು ಸಂಗಡಿಗರೊಡನೆ ಸಂದರ್ಶನ, ಇವೆ.

೨೧೩೭. ಸ್ವರಚಿತ ಡೊಳ್ಳಿನ ಹಾಡುಗಳು

ಲೇ: ಭೀರಪ್ಪ ತಿ. ಮೋಟೆ; ಪ್ರ: ದಾಂಗುಡಿ ಪ್ರಕಾಶನ, ಮಹಾಂತೇಶ ನಗರ, ರಾಮದುರ್ಗ; ಮೊ.ಮು.೧೯೯೮; ಪು: ೧೬+೧೨೬=೧೪೨; ಕ್ರೌನ್ ೧/೮

೬೩ ಹಾಡುಗಳಿವೆ. ನಿಂಗಣ್ಣ ಸಣ್ಣಕ್ಕಿ ಅವರ ಪ್ರಸ್ತಾವನೆ ಎಂಬ ಮುನ್ನುಡಿ ಇದೆ.

೨೧೩೮. ಸ್ವಾತಂತ್ರ್ಯೋತ್ತರ ಕನ್ನಡ ನಾಟಕಗಳಲ್ಲಿ ಜಾನಪದ ಒಳನೋಟಗಳು

ಲೇ: ವಸಂತಕುಮಾರ ಪೆರ್ಲ; ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಚಾಮರಾಜ ಪೇಟೆ, ಬೆಂಗಳೂರು-೫೬೦೦೧೮; ಮೊ.ಮು: ೨೦೦೮; ಪು:೮+೨೪೭=೨೫೫; ಡಿಮ್ಮೈ ೧/೮

ಮೈಸೂರು ವಿಶ್ವವಿದ್ಯಾಲಯಕ್ಕೆ ಪಿ.ಎಚ್.ಡಿ. ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ ಎಂಬ ಅಡಿಬರಹ ಇದೆ.ಐದು ಅಧ್ಯಾಯಗಳಿದ್ದು ಐದನೆಯ ಅಧ್ಯಾಯಲ್ಲಿ ಮಾತ್ರ ಜಾನಪದ ಪ್ರಸ್ತಾಪವಾಗಿದೆ: ಜನಪದ ನಾಟಕಗಳು ಮತ್ತು ಅವುಗಳ ಯಶಸ್ಸು: ೧.ವಸ್ತು ವಿಷಯದಲ್ಲಿ ಜಾನಪದ ಅಂಶಗಳು ೨.ನಿರೂಪಣೆಯಲ್ಲಿ ಜಾನಪದ ಅಂಶಗಳು ೩.ಪಾತ್ರಚಿತ್ರಣದಲ್ಲಿ ಜಾನಪದ ಅಂಶಗಳು ೪.ಭಾಷೆಯಲ್ಲಿ ಜಾನಪದ ಅಂಶಗಳು ೫.ತಾಂತ್ರಿಕತೆಯಲ್ಲಿ ಜಾನಪದ ಅಂಶಗಳು.

೨೧೩೯. ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ

ಸಂ: ಎಂ.ಎಚ್.ಕೃಷ್ಣಯ್ಯ, ವಿಜಯಾ; ಪ್ರ: ಉದಯಭಾನು ಕಲಾ ಸಂಘ, ಕೆಂಪೇಗೌಡನಗರ, ಬೆಂಗಳೂರು-೧೯; ಮೊ.ಮು.೧೯೯೩; ಪು: ೨೪+೬೫೨=೬೭೬; ಕ್ರೌನ್ ೧/೪

ಈ ಗ್ರಂಥದಲ್ಲಿ ೨೪ ಭಾಗಗಳಿವೆ. ಅವುಗಳಲ್ಲಿ ಒಂಬತ್ತನೆಯ ಭಾಗವು ಜಾನಪದವನ್ನು ಕುರಿತದ್ದಾಗಿದೆ. ಅದರಲ್ಲಿ ಬೇರೆಬೇರೆಯವರು ಬರೆದ ಕೆಲವು ಲೇಖನಗಳಿವೆ: ೧.ಜನಪದ-ಜಾನಪದ, ಬದಲಾದ ಪರಿಕಲ್ಪನೆ-ಕೆ.ಆರ್. ಸಂಧ್ಯಾರೆಡ್ಡಿ ೨.ಜನಪದ ದೃಶ್ಯಕಲೆಗಳು-ಗೊ.ರು.ಚನ್ನಬಸಪ್ಪ ೩.ಜನಪದ ದೃಶ್ಯಕಲೆ - ಎಂ.ಎಚ್.ಕೆ ೪.ಜನಪದ ಕಾವ್ಯ-ದೇವೇಂದ್ರಕುಮಾರ ಹಕಾರಿ. ರಂಗಭೂಮಿ ಎಂಬ ಹದಿನ್ಯೆದನೆಯ ಭಾಗದಲ್ಲಿ ಒಂದು ಲೇಖನವಿದೆ: ೧.ಜಾನಪದ ರಂಗಭೂಮಿ - ಬಿ.ಎ.ವಿವೇಕ ರೈ. ಎಲ್.ಎಸ್. ಶೇಷಗಿರಿರಾವ್ ಅವರ ಪ್ರಸ್ತಾವನೆ ಇದೆ.

ಹ

೨೧೪೦. ಹಂಡಿಗನಾಳ ಶ್ರೀ ವೀರಣ್ಣ ಸ್ವಾಮಿ ಕೆಂಪಣ್ಣ ಸ್ವಾಮಿ ಕಥಾಮೃತ

ಲೇ: ಗೋಪಾಲಗೌಡ ಕಲ್ವಮಂಜಲಿ; ಪ್ರ: ಶ್ರೀ ವೀರಣ್ಣದೇವರ ದೇವಾಲಯ ಟ್ರಸ್ಟ್ (ರಿ), ಶ್ರೀ ವೀರಣ್ಣ ಕೆಂಪಣ್ಣಸ್ವಾಮಿ ದೇವಾಲಯ, ಹಂಡಿಗನಾಳ, ಶಿಡ್ಲಘಟ್ಟ ತಾಲ್ಲೂಕು, ಕೋಲಾರ ಜಿಲ್ಲೆ; ಮೊ.ಮು.೨೦೦೭; ಪು: ೧೭+೪೩=೬೦; ಡಿಮ್ಮೈ ೧/೮

ಶೀರ್ಷಿಕೆಯೇ ಹೇಳುವಂತೆ ಇದೊಂದು ಜನಪದ ಕತೆ. ಐತಿಹ್ಯದಂತೆಯೂ ಇದೆ. ಕೆಲವು ಫೋಟೋಗಳಿವೆ. ರಂಗಾರೆಡ್ಡಿ ಕೋಡಿರಾಂಪುರ ಅವರ ಮುನ್ನುಡಿ ಇದೆ.

೨೧೪೧. ಹಂತಿ ಗೀಗೀ ಹಾಗೂ ಲಾವಣಿ ಸಂಪ್ರದಾಯಗಳು

ಲೇ: ಸೋಮಶೇಖರ ಇಮ್ರಾಪುರ; ಪ್ರ: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ; ಮೊ.ಮು.೧೯೮೬; ಪು: ೮+೫೪=೬೨; ಫೂಲ್ಸ್‌ಕ್ಯಾಪ್ ೧/೮

ಐದು ಅಧ್ಯಾಯಗಳಿವೆ: ೧.ಪ್ರವೇಶ ೨.ಹಂತಿ ಹಾಡಿನ ಸಂಪ್ರದಾಯ ೩.ಗೀಗೀ ಹಾಡಿನ ಸಂಪ್ರದಾಯ ೪.ಲಾವಣಿ ಹಾಡಿನ ಸಂಪ್ರದಾಯ ೫.ಉಪಸಂಹಾರ. ಎಸ್.ಜಿ. ದೇಸಾಯಿ ಅವರ ಮುನ್ನುಡಿ ಇದೆ.

೨೧೪೨. ಹಂತಿಯ ಹಾಡುಗಳು

ಸಂ: ರಾಜೇಂದ್ರ ಯರನಾಳೆ; ಪ್ರ: ಕರ್ನಾಟಕ ಸರ್ಕಾರ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು; ಮೊ, ಮು: ೨೦೦೬; ಪು: ೫೬+೬೩೭=೬೯೩; ಡೆಮ್ಮೆ ೧/೮

ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಮಾಲೆಯ ೬ನೆಯ ಸಂಪುಟ, ಇದರ ಭಾಗಗಳ ವಿವರಗಳು ಹೀಗಿವೆ: ಈ ಸಂಕಲನದಲ್ಲಿ ನಾಲ್ಕು ಭಾಗಗಳಿದ್ದು ಒಟ್ಟು ಎಂಬತ್ಮೂರು ಹಾಡುಗಳಿವೆ. **ಭಾಗ ಒಂದು: ಪ್ರಾರ್ಥನೆ (ದೇವ-ದೇವತೆಗಳ ಸ್ತುತಿ):** ೧.ಪೀಠಿಕೆ ೨.ಗಣಪತಿ ಸ್ತುತಿ ೩.ಶಿವಸ್ತುತಿ ೪.ಭೂಮಿತಾಯಿಸ್ತುತಿ ೫.ಲಕ್ಷ್ಮಿ ಸ್ತುತಿ ೬.ಜಗದಂಬೆ (ಭವಾನಿ)ಸ್ತುತಿ ೭.ನಾಗನೂರ ಸಿದ್ಧರಾಮೇಶ ಸ್ತುತಿ ೮.ನಾಗನೂರ ಮಠದಜ್ಜನ ಸ್ತುತಿ ೯.ಗ್ರಾಮದೇವತೆ ದ್ಯಾಮವ್ವನ ಸ್ತುತಿ ೧೦.ಗ್ರಾಮದೇವತೆ ಯಲ್ಲವ್ವನ ಸ್ತುತಿ ೧೧.ಗ್ರಾಮದೇವತೆ ಮರೆಮ್ಮ -ಜಕ್ಕವ್ವರ ಸ್ತುತಿ ೧೨.ವಿವಿಧ ದೇವ-ದೇವತೆಗಳು ಹಾಗೂ ಶಿವಶರಣರ ಸ್ತುತಿ. **ಭಾಗ ಎರಡು: ವ್ಯಕ್ತಿ ಸಂಬಂಧಿತ ಹಾಡುಗಳು: ಪೌರಾಣಿಕ ವ್ಯಕ್ತಿಗಳು:** ೧.ಹುಮನಾಬಾದಿ ವೀರಭದ್ರ ೨.ಶ್ರೀರಾಮ ೩.ಹನುಮಂತ ೪.ಮಹಾಭಾರತ ೫.ಅರ್ಜುನ ಜೋಗಿಯ ಹಾಡುಗಬ್ಬ. **ಶರಣರು-ಸತ್ಪುರುಷರು:** ೧.ಅವತಾರಿ ಬಸವೇಸೂರ ೨.ಕಲ್ಯಾಣ ಬಸವಯ್ಯ ೩.ಹರಳಯ್ಯ ೪.ಮಡಿವಾಳ ಮಾಚಯ್ಯ ೫.ಕಿನ್ನರಿ ಬೊಮ್ಮಯ್ಯ ೬.ಮೇದರ ಕೇತಯ್ಯ ೭.ಇಳಿಹಾಳ ಬೊಮ್ಮಯ್ಯ ೮.ಹೂಗಾರ ಮಾದಯ್ಯ ೯.ಜಾತಿಗರ ಚೌಡಯ್ಯ ೧೦.ನೇಗಿಲ ಅಮುಗಯ್ಯ ೧೧.ಕುಂಬರ ಗುಂಡಯ್ಯ ೧೨.ಮಾದಾರ ಚೆನ್ನಯ್ಯ ೧೩.ಚೆನ್ನಬಸವಣ್ಣ ೧೪.ಸೊನ್ನಲಾಪುರ ಸಿದ್ಧರಾಮ ೧೫.ಪುರಂದರ ದಾಸರು ೧೬.ಕಲಬುರ್ಗಿ ಶರಣಬಸವೇಶ್ವರ ೧೭.ಕಲಬುರ್ಗಿ ಬಂದೇನವಾಜ ೧೮.ಮೈಲಾಪುರ ಮಲ್ಲಯ್ಯ ೧೯.ಕೊಡೆಕಲ್ಲ ಬಸವಣ್ಣ ೨೦.ತಿಂಥಿಣಿ ಮೌನಪ್ಪ ೨೧.ಕಡಗಂಚು ಶಾಂತಪ್ಪ ೨೨.ಗ್ವಾಲಗೇರಿ ಲಿಂಗಯ್ಯ ೨೩.ಸಲಗರ ಮದಾರಸಾಬ ೨೪.ಯಮನೂರ ಪೀರ. **ಐತಿಹಾಸಿಕ: ವೀರ ಸ್ತ್ರೀ-ಪುರುಷರು:** ೧.ಕಿತ್ತೂರ ಚೆನ್ನಮ್ಮ ೨.ಹೇಮರೆಡ್ಡಿ ಮಲ್ಲಮ್ಮ

೩.ನರಗುಂದ ಬಾಬುಸಾಬ ೪.ಪುಲಕೇಶಿ ೫.ವಿದ್ಯಾರಣ್ಯ ೬.ಚಾಣಕ್ಯ ೭.ಭೀಮ್ರಾಯ ೮.ನಾರಾಯಣಪ್ಪ ೯.ಲಿಂಗರಾಜ ೧೦.ಸಿರಸಂಗಿ ಲಿಂಗಪ್ಪ ೧೧.ಸಂಗೊಳ್ಳಿ ರಾಯಣ್ಣ ೧೨.ಟಿಪ್ಪು ಸುಲ್ತಾನ ೧೩.ಸುಭಾಶ್ಚಂದ್ರ ಬೋಸ್ ೧೪.ಮಹಾತ್ಮಾ ಗಾಂಧೀಜಿ ೧೫.ಜವಾಹರಲಾಲ ನೆಹರು ೧೬.ಲಾಲಬಹಾದ್ದೂರ್ ಶಾಸ್ತ್ರೀ ೧೭.ಇಂದಿರಾ ಗಾಂಧಿ ೧೮.ಸರ್.ಎಂ. ವಿಶ್ವೇಶ್ವರಯ್ಯ. **ಭಾಗ ಮೂರು: ಎತ್ತುಗಳ (ಬಸವನ) ಕುರಿತು ಹಾಡುಗಳು:** ೧.ಬಂಟ ಹುಟ್ಯಾನ ಬಸವಣ್ಣ ೨.ಪುಂಡಾನ ಎತಗೋಳು ೩.ಸಾಗಿ ಬಾರಣ್ಣ ಸಾವಕಾಸ ೪.ಸತ್ತರು ದುಡದೆಲ್ಲೊ ಇದ್ದರು ದುಡದೆಲ್ಲೊ ೫.ಬೆಳ್ಳನ ಬಿಳಿ ಎತ್ತು ೬.ಹಾದು ಹೋಗ್ಯಾವೋ ನಮ್ಮೆತ್ತು ೭.ಸತ್ಯುಳ್ಳ ಬಸವ ೮.ನನ್ನೆತ್ತು ಶಿವರಾಮ ೯.ಮೆರೆದಾವೋ ನಮ್ಮೆತ್ತು. **ಭಾಗ ನಾಲ್ಕು: ರೈತನ ರಾಬ: ಭಾಗ ಒಂದು:** ೧.ಮುಹೂರ್ತ ಪದಗಳು ೨.ರೈತ ನಿನರಾಬ ಸುರುವಾಯ್ತು ೩.ಬಿಳಿಮುತ್ತಿನಂಥಾ ಬಿಳಿಜ್ವಾಳ ೪.ಮೇಟಿಯ ಪೂಜಿ ತೆನಿಪೂಜಿ ೫.ತೂರ್ಯಾಲೊ ಮುತ್ತು ಹೊಲದಾಗ. **ರೈತನ ರಾಬ ಭಾಗ ಎರಡು:** ೧.ಕೂರಿಗಿ–ಕುಂಟಿ–ತಾಳದ ಪದ ೨.ಬಿತ್ತುಣಕಿ ಪದ ೩.ಮಳೆ–ಗಾಳಿಯ ಪದ ೪.ಬೆಳೆಯ ಪದ ೫.ರಾಗೋಲು–ಕುಡಗೋಲು–ಬ್ಯಾಕೋಲು ಪದ ೬.ಮೇಟಿ–ಮಳಿಯ ಪದ ೭.ಕಣದ ಪದ ೮.ಹಂತಿ (ಹೆಸರುಳ್ಳ) ಪದ ೯.ರಾಶಿಯ ಪದ ೧೦.ಬೂದ–ಬನದಮ್ಮ–ಕರಿಬಂಟ ಚರಗದ ಪದ. ಹೆಚ್.ಡಿ.ಕುಮಾರಸ್ವಾಮಿ ಅವರ ಹೊನ್ನುಡಿ, ಹಿ.ಶಿ.ರಾಮಚಂದ್ರೇಗೌಡ ಅವರ ಪೂರ್ವಾಪರ ಎಂಬ ಅಧ್ಯಕ್ಷರ ಮಾತು, ಸಂಪಾದಕರ ಪ್ರಸ್ತಾವನೆ, ಇವೆ.

೨೧೪೩. ಹಂಪಕ್ಕನ ಹಾಡುಗಳು

ಸಂ: ಶ್ರೀರಾಮ ಬಿದರಿ; ಪ್ರ: ಜಾನಪದ ಸಾಹಿತ್ಯ ಸಂಘ, ಬಿಲಹಳ್ಳಿ, ಧಾರವಾಡ ಜಿಲ್ಲಾ; ಮೊ.ಮು.೧೯೭೪; ಪು: ೧೪+೬೮(ಕೊನೆಯ ಪುಟ ಅಲ್ಲ)=೮೨; ಕ್ರೌನ್ ೧/೮

ಹತ್ತು ಭಾಗಗಳಲ್ಲಿ ೪೧ ಹಾಡುಗಳಿವೆ. ಭಾಗಗಳು: ೧.ಒಸಗೆ ಹಾಡುಗಳು ೨.ಹಸೆಗೆ ಕರೆಯುವ ಹಾಡುಗಳು ೩.ಸರಿಬ್ಯಾಸ ಆಡುವ ಹಾಡುಗಳು ೪.ಉಡಿತುಂಬುವ ಹಾಡುಗಳು ೫.ಆರುತಿ ಹಾಡುಗಳು ೬.ಸೋಬಾನದ ಹಾಡುಗಳು ೭.ಜೋಗುಳದ ಹಾಡುಗಳು ೮.ದೇವರ ಹಾಡುಗಳು ೯.ಬಿಡಿ ಪದ್ಯಗಳು ೧೦.ಕಥನಗೀತೆ: ಅಂದವಾದವೆರಡು ಗಿಳಿಗಳು. ಕೊನೆಯ, ಟಿಪ್ಪಣಿ ಎಂಬ ಭಾಗವು ಲಭ್ಯ ಪ್ರತಿಯಲ್ಲಿ ಇಲ್ಲ. ಕೆ.ಆರ್. ಲಿಂಗಪ್ಪ ಅವರ ಮುನ್ನುಡಿ, ಬಿ. ಕೆಂಚವೀರಯ್ಯ ಅವರ ಗುರುನುಡಿ, ಇವೆ.

೨೧೪೪. ಹಂಪಿ ಜಾನಪದ

ಲೇ: ಪುರಷೋತ್ತಮ ಬಿಳಿಮಲೆ, ಚಲುವರಾಜು; ಪ್ರ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ; ಮೊ.ಮು.೧೯೯೬; ಪು: ೧೨+೧೯೮=೨೧೦; ಡೆಮ್ಮೈ ೧/೮

ಇದೊಂದು ಅಧ್ಯಯನ ವರದಿ ಎಂಬ ಸಂಗತಿಯು ಲೇಖಕರ ಮಾತಿನಲ್ಲಿ ಪ್ರಸ್ತಾಪವಾಗಿದೆ. ಆರು ಅಧ್ಯಾಯಗಳಿವೆ: ೧.ಹಿನ್ನೆಲೆ ೨.ಮೌಖಿಕ ಸಾಹಿತ್ಯ ೩.ಭೌತಿಕ ಜಾನಪದ

೪.ಸಾಮಾಜಿಕ ಧಾರ್ಮಿಕ ಆಚರಣೆಗಳು ೫.ಕಲೆಗಳು ೬.ಅಧ್ಯಯನದ ಮುಖ್ಯಾಂಶಗಳು. ಅನುಬಂಧದಲ್ಲಿ, ಕೆಲವು ರೇಖಾಚಿತ್ರಗಳು, ಕೆಲವು ಫೋಟೋಗಳು, ಮುಖ್ಯ ನಿರೂಪಕರು, ಇವೆ.

೨೧೪೫. ಹಂಪಿ ಜೀವಜಾಲ ಜಾನಪದ

ಲೇ: ಮೊಗಳ್ಳಿ ಗಣೇಶ; ಪ್ರ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ; ಮೊ.ಮು: ೨೦೧೦; ಪು: ೧೦+೨೦೮=೨೧೮; ಡೆಮ್ಮೈ ೧/೮

ಹತ್ತು ಅಧ್ಯಾಯಗಳಿವೆ: ೧.ಜೈವಿಕ ಅನುಸಂಧಾನ ೨.ಹಂಪಿ ಜೀವಜಾಲ ಜಾನಪದ ೩.ಹಂಪಿ ಪ್ರಾಣಿ ಜಾನಪದ ೪.ಹಂಪಿ ಜಲಚರ ಜಾನಪದ ೫.ಹಂಪಿ ಪಕ್ಷಿ ಜಾನಪದ ೬.ಹಂಪಿ ಸಸ್ಯ ಜಾನಪದ ೭.ಹಂಪಿ ಕೀಟ ಜಾನಪದ ೮.ಹಂಪಿ ಜಲ ಜಾನಪದ ೯.ಹಂಪಿ ಭೌಗೋಳಿಕ ಜಾನಪದ ೧೦.ಅಳಿವಿನ ಅಂಚಿನ ಜಾನಪದ. ಎ. ಮುರಿಗೆಪ್ಪ ಅವರ ಶಬ್ದಪಾರಮಾರ್ಗಮಶಕ್ಯಂ ಎಂಬ ಮುನ್ನುಡಿ ಇದೆ.

೨೧೪೬. ಹಂಪಿಯ ಸ್ಮಾರಕಗಳಲ್ಲಿ ಜಾನಪದೀಯ ಅಂಶಗಳು

ಲೇ: ಚೆಲುವರಾಜು; ಪ್ರ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ; ಮೊ.ಮು.೨೦೦೦; ಪು: ೧೨+೧೨೬=೧೩೮; ಡೆಮ್ಮೈ ೧/೮

ಹನ್ನೊಂದು ಅಧ್ಯಾಯಗಳಿವೆ: ೧.ಹಂಪಿಯ ಭೌಗೋಳಿಕ ಪರಿಸರ ೨.ಅಧ್ಯಯನದ ಸ್ವರೂಪ ಮತ್ತು ಉದ್ದೇಶ ೩.ಹಂಪಿಯ ಸ್ಮಾರಕಗಳು ೪.ಜನಪದ ವೃತ್ತಿಗಳು ೫.ಜನಪದ ಯುದ್ಧಕಲೆಗಳು ೬.ಜನಪದ ಪ್ರದರ್ಶನಾತ್ಮಕ ಕಲೆಗಳು ೭.ಜನಪದ ವಾದ್ಯಗಳು ೮.ಜನಪದ ಉಡುಗೆ ತೊಡುಗೆಗಳು ೯.ಜನಪದ ದಿನಬಳಕೆಯ ವಸ್ತುಗಳು ೧೦.ಜನಪದ ಆಟಗಳು ೧೧.ಮಿಥುನ ಶಿಲ್ಪಗಳು. ಕೆಲವು ಫೋಟೋಗಳೂ, ರೇಖಾಚಿತ್ರಗಳೂ ಇವೆ. ದೆಸಿಯೊಳ್ ಪುಗುವುದು ಪೊಕ್ಕು ಮಾರ್ಗದೊಳೆ ತಳ್ವುದು ಎಂಬ ಎಂ.ಎಂ.ಕಲಬುರ್ಗಿ ಅವರ ಮುನ್ನುಡಿ, ಲೇಖಕರ ಪ್ರಸ್ತಾವನೆ, ಇದೆ.

೨೧೪೭. ಹಕ್ಕಿಪಿಕ್ಕಿಯರ ಸಂಸ್ಕೃತಿ

ಲೇ: ಆರ್.ರಾಜಪ್ಪ ದಳವಾಯಿ; ಪ್ರ: ಕರ್ನಾಟಕ ಸಾಹಿತ್ಯ ಅಕಾಡೆಮಿ, ನೃಪತುಂಗ ರಸ್ತೆ, ಬೆಂಗಳೂರು–೫೬೦ ೦೦೨; ಮೊ.ಮು: ೧೯೯೩; ಪು: ೪೮+೧೨೮=೧೭೬; ಕ್ರೌನ್ ೧/೮

ಆರು ಅಧ್ಯಾಯಗಳಿವೆ: ೧.ಅಧ್ಯಯನದ ವ್ಯಾಪ್ತಿ ೨.ಜೀವನವಿಧಾನ ಮತ್ತು ಸಾಮಾಜಿಕ ವ್ಯವಸ್ಥೆ ೩.ಭಾಷೆ ಮತ್ತು ಸಾಹಿತ್ಯ ೪.ಆಚರಣೆಗಳು ೫.ಕ್ರೀಡೆಗಳು ೬.ಬದಲಾವಣೆಯ ಹಾದಿಯಲ್ಲಿ. ಅನುಬಂಧದಲ್ಲಿ, ಹಕ್ಕಿಪಿಕ್ಕಿಯರ ಸಾಹಿತ್ಯ ಇದೆ: **ಕತೆಗಳು:** ೧.ಚಾಮುಂಡಿ ಕತೆ ೨.ನರಿಕತೆ ೩.ಹುಲಿ ಮತ್ತು ಕುದುರೆ ಕತೆ ೪.ಮತ್ತೊಂದು ಕತೆ– ಇದು ಹಕ್ಕಿಪಿಕ್ಕಿ

ಭಾಷೆಯಲ್ಲಿದ್ದು ಇದರ ಜೊತೆಗೇ ಕನ್ನಡಾನುವಾದವನ್ನೂ ನೀಡಲಾಗಿದೆ. **ಹಾಡುಗಳು:** ಶೀರ್ಷಿಕೆ ಇಲ್ಲದ ಸಂಖ್ಯಾಸೂಚಕ ೧೦೨ ಹಾಡುಗಳಿವೆ. ಅನುವಾದ ಸಹಿತ ಎರಡು ಗಾದೆಗಳು. ಅನುವಾದ ಸಹಿತ ೩೭ ಒಗಟುಗಳು ಹಾಗೂ ಕೊನೆಯಲ್ಲಿ ಉತ್ತರಗಳು. ಹನ್ನೆರಡು ಬಯ್ಗುಳಗಳಿವೆ, ಕೆಲವಕ್ಕೆ ಮಾತ್ರ ಅನವಾದ ಇದೆ. ಕೊನೆಯಲ್ಲಿ ಕೆಲವು ಫೋಟೋಗಳೂ ಕೆಲವು ರೇಖಾಚಿತ್ರಗಳೂ ಇವೆ.

೨೧೪೮. ಹಕ್ಕಿ ಹಾರ್‍ಯಾವೆ ಗಿಡದಾಗ

ಲೇ: ಜಯಲಕ್ಷ್ಮೀ ಸೀತಾಪುರ; ಪ್ರ: ಪವನ್ ನವೀನ್ ಉದ್ಯಮ ಕೇಂದ್ರ, ಮೈಸೂರು; ಮೊ.ಮು. ೧೯೯೮; ಪು: ೧೦+೧೪೦ = ೧೫೦; ಕ್ರೌನ್ ೧/೮

ಈ ಗ್ರಂಥದಲ್ಲಿ ಹತ್ತು ಸಂಶೋಧನ ಲೇಖನಗಳಿವೆ. ೧.ನಿರ್ಲಕ್ಷಿತ ಜಾನಪದ ಪ್ರಕಾರಗಳು ೨.ಕಥನ ಗೀತೆಗಳು ೩.ಜನಪದ ನಂಬಿಕೆಗಳು ೪.ಬೈಗುಳಗಳು ೫.ಟಿಪ್ಪು ಸುಲ್ತಾನ್ ಹಾಗೂ ಸರ್ಜಪ್ಪನಾಯಕ ೬.ಕುಸ್ತಿ ೭.ಪಾಂಡವಪುರ ತಾಲೂಕಿನ ಜಾನಪದ ಸಂಪತ್ತು ೮.ನಾಗಮಂಗಲ ತಾಲೂಕಿನ ಅಡುಗೆ ಸಂಪ್ರದಾಯಗಳು ೯.ಬೇಂದ್ರೆ ಕಾವ್ಯದಲ್ಲಿ ಜಾನಪದ ೧೦.ಹರಕೆಯ ಹುಟ್ಟು ಮತ್ತು ಬೆಳವಣಿಗೆ. ಬೇರೆಬೇರೆ ವೇದಿಕೆಗಳಲ್ಲಿ, ವಿಚಾರ ಸಂಕಿರಣಗಳಲ್ಲಿ, ಆಕಾಶವಾಣಿಯಲ್ಲಿ, ಹೀಗೆ ವಿವಿಧ ಸಂದರ್ಭಗಳಲ್ಲಿ ರಚಿತವಾದ ಲೇಖನಗಳೆಂದು ಲೇಖಕಿ ಹೇಳಿಕೊಂಡಿದ್ದಾರೆ.

೨೧೪೯. ಹಗರಣ

ಸಂ: ಪಿ. ನಿಂಗಪ್ಪ; ಪ್ರ: ಶ್ರೀಲೋಲ ಪ್ರಕಾಶನ, ೧೫೩೫, ಕಾಂತರಾಜೆ ಅರಸ್ ರಸ್ತೆ, ಕೆ.ಜಿ. ಕೊಪ್ಪಲು, ಮೈಸೂರು-೫೭೦ ೦೦೯, ಮೊ.ಮು: ೧೯೮೦; ಪು: ೧೦+೬೬=೭೬; ಕ್ರೌನ್ ೧/೮

ಜನಪದ ಕಥನಗೀತೆ ಎಂಬ ಅಡಿಬರಹ ಇದೆ. ೩೦ ಪುಟಗಳ ಕಾವ್ಯ. ಹಾಡಿದವರ ವಿವರ, ಎಂ. ಚಿದಾನಂದ ಮೂರ್ತಿ ಅವರ ಮುನ್ನುಡಿ, ಜೀ.ಶಂ. ಪರಮಶಿವಯ್ಯ ಅವರ ಅಭಿಪ್ರಾಯ, ಸಂಪಾದಕರ ೩೦ ಪುಟಗಳ ಪ್ರಸ್ತಾವನೆ, ಅನುಬಂಧದಲ್ಲಿ ಕೆಲವು ಟಿಪ್ಪಣಿಗಳು, ಅರ್ಥಕೋಶ, ಇವೆ.

೨೧೫೦. ಹಗಲು ವೇಷದವರ ಸಂಸ್ಕೃತಿ

ಲೇ: ಯಳನಾಡು ಅಂಜನಪ್ಪ; ಪ್ರ: ಕರ್ನಾಟಕ ಸಾಹಿತ್ಯ ಅಕಾಡಿಮೈ, ನೃಪತುಂಗ ರಸ್ತೆ, ಬೆಂಗಳೂರು-೫೬೦೦೦೨; ಮೊ.ಮು: ೧೯೯೩, ಪು: ೪೮+೧೭೬=೨೨೪; ಕ್ರೌನ್ ೧/೮

ಒಂಬತ್ತು ಅಧ್ಯಾಯಗಳಿವೆ; ೧.ಸಂಸ್ಕೃತಿಯ ಅರ್ಥ ಮತ್ತು ವ್ಯಾಪ್ತಿ ೨.ಹಿನ್ನೆಲೆ ೩.ಜೀವನ ವಿಧಾನ ಮತ್ತು ಸಾಮಾಜಿಕ ವ್ಯವಸ್ಥೆ ೪.ಭಾಷೆ ಸಾಹಿತ್ಯ ೫.ಆಚರಣೆ ಮತ್ತು ಕಲೆ

೬.ಪ್ರದರ್ಶನಾತ್ಮಕ ಕಲೆಗಳು ೭.ಕ್ರೀಡೆಗಳು ೮.ಸಾಮಾಜಿಕ ಪರಿವರ್ತನೆಯ ಹಿನ್ನೆಲೆಯಲ್ಲಿ ೯.ಉಪಸಂಹಾರ. ಅನುಭಂಧದಲ್ಲಿ, ಹಗಲು ವೇಷದವರ ಸಾಹಿತ್ಯ ಎಂಬ ವಿಭಾಗವಿದ್ದು, ಈ ವಿಭಾಗದಲ್ಲಿ ಏಳು ಹಾಡುಗಳು, ಮೂರು ಕಥನಗೀಥೆಗಳು; ಗಂಗಮ್ಮ ಗೌರಮ್ಮ, ಕೋಳಿ ಹಾಡು, ನರಿಯ ಹಾಡು (ತಮ್ಮ ಕ್ಷೇತ್ರಕಾರ್ಯದ ಅವಧಿಯಲ್ಲಿ ಪಟ್ಟಿ ಮಾಡಿಕೊಂಡ ಇತರ ಕಥನಗೀತೆಗಳನ್ನು ಹೆಸರಿಸುತ್ತ, ಲೇಖಕರು ಇಲ್ಲಿ ೩೧ ಕಥನಗೀತೆಗಳ ಶೀರ್ಷಿಕೆಗಳನ್ನು ಒದಗಿಸಿದ್ದಾರೆ.) ಹತ್ತು ಗದ್ಯ ಕಥೆಗಳು: ಸೂರ್ಯನ ಸಂತತಿ, ಯುಗಧರ್ಮ, ಬ್ರಾಹಣರ ವೇಷ, ಮಜ್ಜಿಗೆಗೆ ಪೂರ್ತಿರಾಮಾಯಣ, ಮೋಹಿನಿ ಭಸ್ಮಾಸುರ, ಚಿನ್ನಮ್ಮನ ಕತೆ, ಲಕ್ಷ್ಮಮ್ಮನ ಕತೆ, ಎಂಟು ಗಾದೆಗಳು, ಹದಿಮೂರು ಒಗಟುಗಳು, ಇವೆ. ಬರಗೂರು ರಾಮಚಂದ್ರಪ್ಪ ಅವರ ಸಂಸ್ಕ್ರತಿ–ಉಪಸಂಸ್ಕೃತಿ ಎಂಬ ಸುದೀರ್ಘ ಪ್ರಸ್ತಾವನೆ ಇದೆ. ಪ್ರಮುಖ ನಿರೂಪಕರ ಪಟ್ಟಿ ಹಾಗೂ ಕೆಲವು ಫೋಟೋಗಳು ಇವೆ.

೨೧೫೧. ಹಗೇವು ತುಂಬ್ಯಾವೆ ಹದಿನಾರು

ಸಂ: ವ.ನಂ. ಶಿವರಾಮು; ಪ್ರ: ಸ್ವಾಗತ ಸಮಿತಿ, ಮಂಡ್ಯ ಜಿಲ್ಲಾ ಜನಪದ ಕಲಾ ಮೇಳ, ಹನುಮಂತನಗರ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ; ಮೊ.ಮು. ೧೯೯೭, ಪು:೩೫೪; ಡಿಮ್ಮೈ ೧/೮

ಹದಿನೆಂಟು ಲೇಖನಗಳ ಸಂಕಲನ: ೧.ಮಂಡ್ಯ ಜಿಲ್ಲೆಯ ಜನಜೀವನ–ಕ್ಯಾತನಹಳ್ಳಿ ರಾಮಣ್ಣ ೨.ಮಂಡ್ಯ ಜಿಲ್ಲೆಯ ಜಾನಪದ ಸಂಪತ್ತು–ಜಿ.ವಿ. ದಾಸೇಗೌಡ ೩.ಜನಪದ ಗದ್ಯ ಸಾಹಿತ್ಯ–ಸೋಮಣ್ಣ ಹೊಂಗಳ್ಳಿ ೪.ವ್ಯವಸಾಯ ಜಾನಪದ–ವೈ. ನ. ಸರ್ವಮಂಗಳ ೫.ತಿಂಗಳು ಮಾವ ಮತ್ತು ಕೊಂತಿಪೂಜೆ–ಸೋಮಣ್ಣ ಹೊಂಗಳ್ಳಿ ೬.ಜನಪದ ಆಟಗಳು–ಸುಶೀಲ ಹೊನ್ನೇಗೌಡ ೭.ಜನಪದ ಕಲೆಗಳು–ಕೂಡ್ಲೂರು ವೆಂಕಟಪ್ಪ ೮.ಗ್ರಾಮೀಣ ನ್ಯಾಯ ವಿಧಾನಗಳು–ಎನ್.ಎಚ್. ಶಿವಲಿಂಗೇಗೌಡ ೯.ಉಡುಗೆ ತೊಡುಗೆಗಳು–ಜಯಲಕ್ಷ್ಮೀ ಸೀತಾಪುರ ೧೦.ಮಂಡ್ಯ ತಾಲ್ಲೂಕಿನ ಸ್ಥಳನಾಮಗಳು–ಡಿ.ಎ. ಗಿರಿಜಮ್ಮ ೧೧.ಜನಪದ ಸಂಪ್ರದಾಯಗಳು– ಡಿ.ಶಿವಣ್ಣ ಆಲಕೆರೆ ೧೨.ತಿಥಿ ಬಿಡಿ ಸಸಿ ನೆಡಿ–ಸುನಂದ ಜಯರಾಂ ೧೩.ಜನಪದ ದೈವಗಳು–ಡಿ.ಎ.ಗಿರಿಜಮ್ಮ ೧೪.ಹಬ್ಬಗಳು–ಆಚರಣೆಗಳು–ಜಾತ್ರೆಗಳು–ಸಿ.ನೀಲಕಂಠೇಗೌಡ ೧೫.ಜನಪದ ಅಡುಗೆ ವೈವಿಧ್ಯ–ಸರೋಜಹಳ್ಳಿ ಶಿಶಿರಾ ೧೬.ಮಂಡ್ಯ ಜಿಲ್ಲೆಯ ಕನ್ನಡ –ಸೋಮಶೇಖರಗೌಡ ೧೭.ಮಂಡ್ಯ ಜಿಲ್ಲೆಯ ಸ್ಥಳನಾಮಗಳು – ತೈಲೂರು ವೆಂಕಟಕೃಷ್ಣ ೧೮.ಮಂಡ್ಯ ಜಿಲ್ಲೆಯ ಜಾನಪದ ತೇರು ಎಳೆದವರು – ವ.ನಂ. ಶಿವರಾಮು. ೧೯ನೆಯ ಕಲಾಮೇಳದ ವರದಿ ಇದೆ. ಪ್ರಾರಂಭದಲ್ಲಿ ಎಚ್. ಬಿಳೀಗೌಡ ಅವರ 'ಆದವರ ನೆನೆದೇನು', ವ.ನಂ. ಶಿವರಾಮು ಅವರ 'ಹಗೇವು ತೆರೆಯುವ ಮುನ್ನ' ಇವೆ. ಹಲವಾರು ಫೋಟೋಗಳಿವೆ.

೨೧೫೨. ಹಗೇವು

ಸಂ: ಕೂಡ್ಲೂರು ವೆಂಕಟಪ್ಪ; ಪ್ರ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ರಾಮನಗರ; ಮೊ.ಮು: ೨೦೧೧; ಪು: ೮+೧೬೮=೧೭೬; ಡಿಮ್ಮೈ ೧/೮

ರಾಮನಗರ ಜಿಲ್ಲಾ ಜಾನಪದ ಕೃತಿ ಎಂಬ ಅಡಿಬರಹ ಇದೆ. ಹತ್ತೊಂಬತ್ತು ಲೇಖನಗಳಿವೆ: ೧.ಕುಲಪುರಾಣಗಳು ೨.ಚಕ್ಕೆರೆ ಪಟಲದಮ್ಮ–ಒಂದು ನೋಟ ೩.ಹುಣಸನಹಳ್ಳಿ ಬಿಸಿಲಮ್ಮ ಗ್ರಾಮದೇವತೆ ೪.ಕೂಡ್ಲೂರಿನ ಶೂಲದ ಹಬ್ಬದ ವೈಶಿಷ್ಟ್ಯತೆ ೫.ರಾಮನಗರ ಜಿಲ್ಲೆ ಗ್ರಾಮದೇವತೆಗಳು ಹಾಗೂ ಚಾರಿತ್ರಿಕ ಹಿನ್ನೆಲೆ ೬.ಬಿಳಿಕಲ್ ಬೆಟ್ಟದ ಜಾತ್ರೆ: ಒಂದು ವಿಶ್ಲೇಷಣೆ ೭.ಕನಕಪುರ ತಾಲೂಕಿನ ಬುಡಕಟ್ಟುಗಳು ೮.ಬುಡಕಟ್ಟುಗಳವರ ಹಾಡು–ಪಾಡು ೯.ಗ್ರಾಮ ಜನಪದೀಯ ೧೦.ಘನಶರಣ ಚನ್ನಪ್ಪಸ್ವಾಮಿಯವರ ಪವಾಡಗಳು ೧೧.ತಮ್ಮನಾಯಕನಹಳ್ಳಿಯ ಮಾಸ್ತಮ್ಮನ ಬಗೆಗಿನ ಐತಿಹ್ಯ ೧೨.ಕೂನಗಲ್ ಗ್ರಾಮದ ಕೂನಿಕಲ್ ಬೆಟ್ಟದ ಐತಿಹ್ಯ ೧೩.ಎತ್ತರಾಯನ ಬೆಟ್ಟದ ಐತಿಹ್ಯ ೧೪.ಅಗಲಕೋಟೆಯ ಚಾರಿತ್ರಿಕ ಸಲಾಖೆ ಗೊಂಬೆ ಕಲೆ ೧೫.ರಾಮನಗರ ಜಿಲ್ಲಾ ಜನಪದ ಕಲೆಗಳು ೧೬.ರಾಮನಗರ ಜಿಲ್ಲೆಯ "ಜನಪದ ಆಟಗಳು" ೧೭.ಗಾದೆಗಳಲ್ಲಿ ರಾಮನಗರ ಜಿಲ್ಲಾ ಸ್ಥಳನಾಮಗಳು ೧೮.ಜಾನಪದ ಮತ್ತು ದೇಜಗೌ ೧೯.ಜಾನಪದ ಕ್ಷೇತ್ರಕ್ಕೆ ಪ್ರೊ. ಕಾಳೇಗೌಡನಾಗವಾರ ಅವರ ಕೊಡುಗೆ.

೨೧೫೩. ಹಗೇವು

ಲೇ: ಸಿ.ಟಿ. ಗುರುಪ್ರಸಾದ್; ಪ್ರ: ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು; ಮೊ.ಮು. ೨೦೦೩; ಪು: ೧೪+೧೧೪=೧೨೮; ಡಿಮ್ಮೈ ೧/೮

ಹನ್ನೆರಡು ಲೇಖನಗಳ ಸಂಕಲನ: ೧.ಜನಪದ ದೈವ ಸಂಬಂಧಿ ಕಾವ್ಯಗಳು ಮತ್ತು ಪುರಾಣಗಳು ೨.ದಕ್ಷಿಣ ಕರ್ನಾಟಕದ ಮಾಟ–ಮಂತ್ರ ಮೋಡಿ ೩.ಮಂಟೇಸ್ವಾಮಿ ೪.ನೀಲಗಾರ ಸಮುದಾಯ ಮತ್ತು ಪರ್ಯಾಯ ಸಂಸ್ಕೃತಿಯಾಗಿ ಮಂಟೇಸ್ವಾಮಿ ಕಾವ್ಯ ೫.ಜಾನಪದ ಮತ್ತು ಆಧುನಿಕತೆ ೬.ಅಲೆಮಾರಿ ಸಮುದಾಯ: ಸ್ಥಿರ ಸಮುದಾಯ–ವಾಸ್ತವ ಮತ್ತು ವೈರುಧ್ಯ ೭.ಜನಪದ ವೈದ್ಯ ೮.ದಾಸಪ್ಪ–ದಾಸಯ್ಯ ೯.ಕರಪಾಲ ಮೇಳ ೧೦.ಪಂಜಿನ ಸೇವೆ ೧೧.ಉಕ್ಕಡ ಮಾರಮ್ಮ ೧೨.ನಮ್ಮ ಸುತ್ತಿನ ಕೆಲವು ಹಬ್ಬ–ಹರಿದಿನಗಳು. ಲಕ್ಷ್ಮಣ್ ತೆಲಗಾವಿ ಅವರ ಮುನ್ನುಡಿ ಇದೆ.

೨೧೫೪. ಹಚ್ಚ ಹೊಂಬಾಳೆ ಕುಣಿದಾವೆ

ಸಂ: ಕರಾಕೃ; ಪ್ರ: ಜನಪದ ಸಾಹಿತ್ಯ ಅಕಾಡೆಮಿ, ಸರಸ್ವತಿಪುರಂ, ಮೈಸೂರು–೫; ಮೊ.ಮು. ೧೯೬೩, ಎ.ಮು. ೧೯೬೪; ಪು: ೬೦; ಕ್ರೌನ್ ೧/೮

ಗ್ರಾಮದೇವತೆಗಳನ್ನು ಕುರಿತ ಭಕ್ತಿಗೀತೆಗಳು ಎಂಬ ಅಡಿಬರಹ ಇದೆ. ಏಳು ದೇವತೆಗಳನ್ನು ಕುರಿತ ಏಳು ಹಾಡುಗಳಿವೆ: ೧.ಕಬ್ಬಾಳ ದುರ್ಗದ ಕಬ್ಬಾಳಮ್ಮ ೨.ಹೆರಗನಹಳ್ಳಿ ದೊಡ್ಡಮ್ಮ

೩.ತಡಕಲೂರು ನೀಲಮ್ಮ ೪.ಬಾಗೂರ ಓರುಗಲ್ಲವ್ವ ೫.ಬೀರನಹಳ್ಳಿ ಮುದ್ದಮ್ಮ ೬.ಮಾರಿ ಕಣಿವಕ್ಕ ೭.ಕೋಡಿಹಳ್ಳಿ ದೊಡ್ಡಮ್ಮ. ವಕ್ತೃಗಳ ವಿವರ, ಎಸ್.ವಿ. ಪರಮೇಶ್ವರ ಭಟ್ಟ ಅವರ ಮುನ್ನುಡಿ, ಜೀ.ಶಂ.ಪ. ಅವರ ನಿವೇದನೆ ಇವೆ. ಕೆಲವು ರೇಖಾ ಚಿತ್ರಗಳಿವೆ.

೨೧೫೫. ಹಚ್ಚೆ–ಒಂದು ಜಾನಪದ ಕಲೆ

ಲೇ: ಹೆಚ್.ಎಂ. ಮಹೇಶ್ವರಯ್ಯ; ಪ್ರ: ಐಬಿಎಚ್ ಪ್ರಕಾಶನ, ಗಾಂಧಿನಗರ, ಬೆಂಗಳೂರು– ೫೬೦ ೦೦೯; ಮೊ.ಮು. ೧೯೮೮; ಪು: ೮+೭೨=೮೦; ಡಿಮ್ಮೈ ೧/೧೨

ಹತ್ತು ಅಧ್ಯಾಯಗಳಿವೆ: ೧.ಹಚ್ಚೆ ೨.ಹಚ್ಚೆ ಸಂಪ್ರದಾಯದ ಉಗಮ ೩.ಹಚ್ಚೆ ಹಾಕುವವರು ೪.ಹಚ್ಚೆಯ ಬಣ್ಣ ೫.ಹಚ್ಚೆ ಹಾಕುವ ವಿಧಾನ ೬.ಹಚ್ಚೆ ಹಾಕುವವರಿಗೆ ಸಂಭಾವನೆ ೭.ನಂಬಿಕೆಗಳು ೮.ಹಚ್ಚೆ ಹಾಕುವ ದೇಹದ ಭಾಗಗಳು ೯.ಹಚ್ಚೆ ಚಿತ್ರಗಳು ೧೦.ಹಚ್ಚೆ ಹಾಡುಗಳು. ಕೊನೆಯಲ್ಲಿ ಹಾಡಿನ ಕೆಲವು ಶಬ್ದಗಳ ಅರ್ಥ ಇದೆ. ಹಲವು ಪುಟಗಳಲ್ಲಿ ರೇಖಾಚಿತ್ರಗಳಿವೆ.

೨೧೫೬. ಹಠಮಾರಿ ಹೆಣ್ಣು ಮತ್ತು ಇತರ ಜನಪದ ಕಥೆಗಳು

ಸಂ: ಬಸವರಾಜ್ ನೆಲ್ಲಿಸರ; ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು – ೧೮; ಮೊ.ಮು: ೧೯೮೨; ಪು: ೧೧೮; ಡಿಮ್ಮೈ ೧/೮

೨೯ ಕಥೆಗಳ ಸಂಕಲನ: ೧.ಮಲತಾಯಿ ೨.ಏಳುಜನ ಸೊಸೆಯರು ೩.ಬಿಟ್ಟಿ ಹಿಟ್ಟಿನವಳು ೪.ರಾಜ ಕಂಡ ಕನಸು ೫.ಬಂಜೆರಾಣಿ ೬.ಪದ್ಮಾವತಿ ೭.ಉಗುರು ಚಿಗುರಿನ ಮರ ೮.ಅಡಕರಾಜನ ಮಗಳು ಅರಮಜ್ಯೋತಿ ೯.ನನ್ನ ಹೊಟ್ಟೆಗೆ ಒಂದು ಹಾಕಿದ್ರೆ ೧೦.ಸೀ ನೀರು ಉಪ್ಪು ನೀರು ಚೌಳು ನೀರು ೧೧.ಅತಿ ಆಸೆಗೆ ಸಿಕ್ಕಿದ್ದು ೧೨.ಇಕ್ಕೋ ಚಿಟ್ಟಿ ೧೩.ಅತ್ತರೆ ಮುತ್ತು ಸುರಿತಂತೆ ೧೪.ಮುದ್ದಿನ ತಂಗಿ ೧೫.ನಾಯಿ ಕೊಂದೆಯೋ ತಾಯಿ ಕೊಂದೆಯೋ ೧೬.ಹಣೇಲಿ ಬರೆದದ್ದು ೧೭.ಅಪ್ಪ ಕೊಟ್ಟ ಆಸ್ತಿ ೧೮.ಬುದ್ಧಿ ಕಲಿಸಿದ ಹೆಂಡತಿ ೧೯.ಅಸಾಮಾನ್ಯ ಕುಳ್ಳ ೨೦.ಗುರು ಶಿಷ್ಯ ೨೧.ಎಮ್ಮೆ ಬಸವ ೨೨.ಬುದ್ಧಿವಂತ ಕಳ್ಳ ೨೩.ಹಾಳು ಕೆರೆಯೋ ಬೀಳು ಕೆರೆಯೋ ೨೪.ಸೋಲಿಸಿದವರಿಗೆ ಸಾವಿರ ೨೫.ಪೆದ್ದ ಬ್ರಾಹ್ಮಣ ೨೬.ಜಾಣ ಇರುವೆ ೨೭.ಪೆದ್ದ ಹುಡುಗ ೨೯.ಏಳು ಜನ ಅಣ್ಣ ತಮ್ಮಂದಿರು ಹಂಪ ನಾಗರಾಜಯ್ಯ ಅವರ ಮುನ್ನುಡಿ, ಕೊನೆಯಲ್ಲಿ, ವಕ್ತೃಗಳ ಪರಿಚಯ, ಕಠಿಣ ಪದಗಳ ಅರ್ಥ, ಇವೆ.

೨೧೫೭. ಹಡದವ್ವ ಹಾಡ್ಯಾಳ

ಸಂ: ಡಿ.ಎನ್. ಅಕ್ಕಿ; ಪ್ರ: ಕವಿಕುಂಚ ಪ್ರಕಾಶನ, ಗೋಗಿ (ಪೇಠ)– ೫೮೫೩೦೯ ಶಹಾಪುರ ತಾಲೂಕು, ಕಲಬುರ್ಗಿ ಜಿಲ್ಲೆ; ಮೊ.ಮು: ೧೯೯೯; ಪು: ೧೨+೧೫+೧೨೨ = ೧೪೯; ಡಿಮ್ಮೈ ೧/೮

ಜನಪದ ಗೀತೆಗಳ ಸಂಗ್ರಹ ಎಂಬ ಅಡಿಬರಹ ಇದೆ. ೨೭ ಬಗೆಯಾಗಿ ಇಲ್ಲಿನ ತ್ರಿಪದಿಗಳನ್ನು ವಿಂಗಡಿಸಲಾಗಿದೆ: ೧.ಜೈನಪರ ಹಾಡುಗಳು ೨.ಇತರ ದೈವಸ್ತುತಿ ೩.ತಾತ್ವಿಕ ಪದಗಳು ೪.ಪೌರಾಣಿಕ ೫.ನೆಂಟಸ್ತಿಕೆಯ ಹಾಡುಗಳು ೬.ಸಂವಾದ ೭.ಗರ್ಭಿಣಿಯರ ಹಾಡುಗಳು ೮.ರಸಿಕತೆಯ ಹಾಡುಗಳು ೯.ಲೇವಡಿ ಪದಗಳು ೧೦.ಕುಟ್ಟುವ ಹಾಡುಗಳು ೧೧.ಸೋದರರು ಮತ್ತು ಮಕ್ಕಳ ಬಗ್ಗೆ ೧೨.ಪೌರುಷ ೧೩ಅಭಿಮಾನ ೧೪.ಶುಭದ ಹರಕೆ ೧೫.ವಿದ್ಯೆಯ ಕುರಿತು ೧೬.ಕಂದನನ್ನು ಕುರಿತು ೧೭.ಅಣ್ಣ-ತಮ್ಮರ ಕುರಿತು ೧೮.ಮಧುರ ಬಾಂಧವ್ಯ ೧೯.ಹೆಣ್ಣುಮಕ್ಕಳ ಕುರಿತು ೨೦.ತಂದೆ-ತಾಯಿ ಕುರಿತು ೨೧.ತವರಿನ ಹಂಬಲ ೨೨.ಪ್ರಾದೇಶಿಕತೆ ಕುರಿತು ೨೩.ಹೊಲದ ಬಗ್ಗೆ ೨೪.ಕಲ್ಲು ನಿಲ್ಲಿಸುವಾಗ ೨೫.ಶೀಗಮ್ಮ-ಗೌರಮ್ಮನ ಹಾಡುಗಳು ೨೬.ನಾಗರಪಂಚಮಿಯ ಮಾಯಮಕ್ಕಳ ಹಾಡುಗಳು ೨೭.ಸುರಪುರ ದೊರಿಯ ಹಾಡು. ದೇವೇಂದ್ರಕುಮಾರ ಹಕಾರಿ ಅವರ ಮೊದಲ ನುಡಿ ಇದೆ.

೨೧೫೮. ಹಣಚಿ ಬಟ್ಟಿನ ಕೈ

ಲೇ: ಎ.ಕೆ. ರಾಮೇಶ್ವರ; ಪ್ರ: ಕವಿರಾಜ ಮಾರ್ಗ ಪ್ರಕಾಶನ, ಮಾತೋಶ್ರೀ ಗೋದುತಾಯಿನಗರ, ಕಲಬುರ್ಗಿ; ಮೊ.ಮು.೧೯೮೮೪; ಪು: ೮+೬೩=೭೧; ಕ್ರೌನ್ ೧/೮

ಎಂಟು ಲೇಖನಗಳ ಸಂಕಲನ: ೧.ಜಾನಪದರು ಕಂಡ ಸಾಕ್ಷರತೆ ೨.ಜಾನಪದ ಸಾಹಿತ್ಯದಲ್ಲಿ ಕೌಟುಂಬಿಕ ಕಲ್ಪನೆ ೩.ಜಾನಪದ ವಾದ್ಯಗಳು ೪.ಜಾನಪದ ವೇಷ-ಭೂಷಣಗಳು ೫.ಒಗಟುಗಳು ೬.ದಡಂ ದುಡುಕಿ ೭.ಜಾನಪದ ಖುಷಿಯೊಡನೆ ಕಳೆದ ದಿನಗಳು ೮.ಹಣಚಿ ಬಟ್ಟಿನ ಕೈ.

೨೧೫೯. ಹಣತಿ ಉರಿಯುತಿದೆ

ಸಂ: ಕರಾಕೃ; ಪ್ರ: ಜನಪದ ಸಾಹಿತ್ಯ ಅಕಾಡಿಮೈ; ಮೊ.ಮು. ೧೯೬೩; ಪು:೩೮+೫೨೦=೫೫೮; ಡಿಮೈ ೧/೮

ಜನಪದ ಗೀತ ಸಂಗ್ರಹ ಎಂಬ ಅಡಿಬರಹ ಇದೆ. ಮಂಡ್ಯ, ಹಾಸನ, ಶಿವಮೊಗ್ಗ, ಚಿತ್ರದುರ್ಗ, ಬಳ್ಳಾರಿ ಮುಂತಾದ ಜಿಲ್ಲೆಗಳಿಂದ ಸಂಗ್ರಹವಾಗಿರುವ ಜನಪದ ಗೀತೆಗಳು ಇಲ್ಲಿವೆ ಎಂಬ ನಮೂದು ಇದೆ. ಇಲ್ಲಿನ ಸಂಗ್ರಹವನ್ನು ನಾಲ್ಕು ಭಾಗಗಳನ್ನಾಗಿ ವಿಂಗಡಿಸಲಾಗಿದೆ: ೧.ಜನಪದ ಕಥನಗೀತೆಗಳು ೨.ಇತರ ಬಿಡಿ ಗೀತೆಗಳು ೩.ಮದ್ವೆಯಲ್ಲಿ ಹೇಳುವ ಗೀತೆಗಳು ೪.ಪಾಳಯಗಾರರ ಕುರಿತ ಪದಗಳು. ನಾಲ್ಕು ಭಾಗಗಳಲ್ಲಿ ೧೦೬ ಹಾಡುಗಳಿವೆ. **ಭಾಗ ಒಂದು: ಜನಪದ ಕಥನಗೀತೆಗಳು:** ೧.ಪಂಚೈವರು ಹಂಚಾಳಿರೋ ೨.ಓಲೆಯ ಓದಿ ಬೆರಗಾದರು ೩.ಆಡದಿರು ಅಡಿಕೆ ಜೂಜ ೪.ಪಾಂಡವರು ಹೋದಾರೆ ವನವಾಸ ೫.ಯಂತೋರಿಗೆ ಬಂತು ಬಡತಾನ ೬.ಕತೆಯ ಬಲ್ಲಾ ಅಣ್ಣ

ಕತೆಯ ಹೇಳಿ ೭.ಬಂದ ಕಾರ್ಯವನ್ನು ನಮಗೇಳಿ ೮.ಕೊಳ್ಳಪ್ಪ ಕೊಳ್ಳೋ ಜೋಗಿ ೯.ಚಿತ್ತಾರ ಬರೆಸ್ಯಾರು ಅರ್ಜುನನ ಕಂಡಾರು ೧೦.ದಕ್ಕೀತು ಹೆಣ್ಣು ಅಭಿಮನ್ಯುಗೆ ೧೧.ನಾಂಟ್ಯವನಾಡ್ಯಾರೆ ಜೋಗಿದೇವ ೧೨.ಧರುಮರ ರಾಜ್ಯ ಬೆಳೆಯಾಲೀ ೧೩.ಬಂತು ಪಾಂಡವರಿಗೆ ವನವಾಸ ೧೪.ಚಂದ್ರ-ಹುಟ್ಟಿದ ಜುಂಜಪ್ಪ ೧೫.ನೀ ಗಂಗೆ ಬಂದೇರೆ ಜಡೆಗಳ ೧೬.ಎಲ್ಲಾರ ಸೀರೆ ಮಲ್ಲಾನೆ ಕುಂಡೋದ ೧೭.ಗೊಲ್ಲತೀರ -ಶ್ರೀಕೃಷ್ಣ ಬಿಡನೆಂದ ೧೮.ಈರೋಬಿ ಕೊಂಡಾಕೆ ಮುಂದಾಗಿ ನಡೆದಾಳೆ ೧೯.ರೂಪೀಯ - ನನ್ನ ಕಿಚ್ಚೀಗೆ ಬೆಳಸಿದ್ದೆ ನಿನ ಮಂಡೆ ೨೦.ಕರಿಯಲ್ಲ ನಿನಗೊಬ್ಬರು ಮುಂದೆ ಎದುರಿಲ್ಲಾ ೨೧.ದೊರೆ ಮಗನ ಹಿಂಡ ತಡೆದಾಳೆ ೨೨.ಶಿವ ಕೊಟ್ಟ ನುಡಿಯ ನುಡಿದೇನು ೨೩.ಉಂಗೂರ ಬಂದಾವೆ ಉಡುಗೊರೆ ೨೪.ದಂಡಣ್ಣನ ಕತೆಯ ತೆಗಿಸ್ಯಾರೆ ೨೫.ಹೊಸಹಳ್ಳಿ ತನುವೀಗೆ ಕೆಂಚಮ್ಮ ನೆಲಗೊಂಡಳು ೨೬.ಕಾವಲಮ್ಮ ಸಿರಿಕ ಗೊಲ್ಲರಿಗೆ ಒಲಿದಾಳೆ ೨೭.ತೆಂಗೀನ ಹೊಂಬಾಳೆ ತವರಲ್ಲಿ ಬೆಳೆದವಳೆ. **ಭಾಗ ಎರಡು:** ಇತರ ಬಿಡಿ ಗೀತೆಗಳು: ೪೯ **ಭಾಗ ಮೂರು: ಮದ್ವೆಯಲ್ಲಿ ಹೇಳುವ ಗೀತೆಗಳು ೨೧.ಭಾಗ ನಾಲ್ಕು: ಪಾಳಯಗಾರರ ಕುರಿತ ಪದಗಳು** ೯.ಜಾನಪದ ಅಧ್ಯಯನದ ಸಂದರ್ಭ ಮಹತ್ವ ಎಂಬ ಬಿ. ಪುಟ್ಟಸ್ವಾಮಯ್ಯ ಅವರ ಮುನ್ನುಡಿ ಇದೆ. ಆರ್.ಎಸ್. ನಾಯ್ಡು, ಎಸ್.ನಂಜುಂಡಸ್ವಾಮಿ ಅವರುಗಳ ರೇಖಾಚಿತ್ರಗಳಿವೆ.

೨೧೬೦. ಹತ್ತು ಮಂದ್ಯಾಗ ಹಾಡೇನ

ಸಂ: ಚೆನ್ನಬಸವ ನಾವಲಗಿ, ಶಕುಂತಲಾ ಚೆನ್ನಬಸವ, ಮಹಾದೇವ ಶಂಕನಪುರ, ಯಲ್ಲಪ್ಪ ಕೆ.ಕೆ.ಪುರ, ಶೈಲಜ ಪವಾಡ ಶೆಟ್ರ ; ಪ್ರ: ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು; ಪ್ರ: ೨೦೧೧; ಪು: ೬+೩೪೯=೩೫೫; ಡಿಮ್ಮೈ ೧/೮

ನಾಲ್ಕು ಭಾಗಗಳಿವೆ: ೧.ಮದುವೆಯ ಹಾಡುಗಳು ೨.ಗಿರಿಜಾ ಕಲ್ಯಾಣ ೩.ಕಾಳಿಂಗರಾಯ್ನ ಕತೆ ೪.ಮೈಲಾರಲಿಂಗನ ಹಾಡು

೨೧೬೧. ಹದಿನಾಡಿನ ಗಾದೆಗಳು

ಸಂ: ಕ್ಯಾತನಹಳ್ಳಿ ಬಸವರಾಜು; ಪ್ರ: ಅಕ್ಷರ ಪ್ರಕಾಶನ, ೩೨, ಕಾಮಾಕ್ಷಿ ಆಸ್ಪತ್ರೆ ಹಿಂಭಾಗ, ಮಾರುತಿ ದೇವಸ್ಥಾನದ ರಸ್ತೆ, ಕುವೆಂಪು ನಗರ, ಮೈಸೂರು-೫೭೦ ೦೦೯; ಮೊ.ಮು.: ೧೯೯೭; ಪು: ೪೩; ಕ್ರೌನ್ ೧/೮

೪೦೧ ಗಾದೆಗಳ ಸಂಕಲನ, ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನಲ್ಲಿ "ಹದಿನಾರು" ಗ್ರಾಮವಿದೆ. ಈ ಗ್ರಾಮಕ್ಕೆ ಹಿಂದೆ "ಹದಿನಾಡು" ಎಂಬ ಹೆಸರಿತ್ತು- ಎಂಬುದಾಗಿ ಸಂಪಾದಕರು ತಮ್ಮ ಪ್ರಸ್ತಾವನೆಯಲ್ಲಿ ಹೇಳಿದ್ದಾರೆ. ಅದಕ್ಕೂ ಹಿಂದೆ ಈ ಗ್ರಾಮಕ್ಕೆ ಯದುನಾಡು ಎಂದು ಹೆಸರಿದ್ದುದಾಗಿ ಹೇಳಿದ್ದಾರೆ. ಆ ಗ್ರಾಮದಲ್ಲಿ ಸಂಗ್ರಹಿತವಾದ ಗಾದೆಗಳಿವು.

೨೧೬೨. ಹನುಮಂತನ ಲಿಂಗಧಾರಣ

ಸಂ: ಸೋಮಶೇಖರ ಇಮ್ರಾಪುರ; ಪ್ರ: ಚೇತನಾ ಪ್ರಕಾಶನ, ಧಾರವಾಡ; ಮೊ.ಮು. ೧೯೭೭; ಪು: ೧೦೪; ಡಿಮ್ಮೈ ೧/೮

ಕನ್ನಡ ಬಯಲಾಟ / ಪ್ರಸಂಗ ಎಂಬ ಅಡಿಬರಹಗಳಿವೆ. ಸಂಪಾದಕರ ಪ್ರಸ್ತಾವನೆ ಇದೆ.

೨೧೬೨. ಹಬ್ಬಗಳ ಜಾನಪದ ಹಾಡುಗಳು

ಲೇ: ಎಂ.ಎಸ್. ವಾಲಿ; ಪ್ರ: ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ; ಮೊ.ಮು: ೧೯೮೬; ಪು: ೮+೫೪=೬೨; ಫೂಲ್ಸ್ ಕ್ಯಾಪ್ ೧/೮

ಐದು ಅಧ್ಯಾಯಗಳಿವೆ: ೧.ಮೊದಲ ಮಾತು ೨.ಗಂಡಸರ ಹಾಡುಗಳು ೩.ಹೆಂಗಸರ ಹಾಡುಗಳು ೪.ಮಕ್ಕಳ ಹಾಡುಗಳು ೫.ಉಪಸಂಹಾರ. ಎಸ್.ಜಿ. ದೇಸಾಯಿ ಅವರ ಮುನ್ನುಡಿ ಇದೆ.

೨೧೬೩. ಹಬ್ಬದ ದಿನವೂ ಹಳೇ ಗಂಡನೆ?

ಲೇ: ಸುಧಾರ್ಥಿ; ಪ್ರ: ವಿಜಯ ಪುಸ್ತಕ ಭಂಡಾರ, ೫೭, 'ವೇದನಿಲಯ', ಐ.ಟಿ.ಐ. ಬಡಾವಣೆ, ಬನಶಂಕರಿ ೩ನೇ ಹಂತ, ಬೆಂಗಳೂರು-೫೬೦ ೦೮೫; ಮೊ.ಮು.೧೯೮೩; ಪು: ೮+೧೬೮=೧೭೬; ಕ್ರೌನ್ ೧/೮

ಜನಪ್ರಿಯವಾದ ಕೆಲವು ಕನ್ನಡ ನಾಣ್ಣುಡಿಗಳ ಕೈಪಿಡಿ ಎಂಬ ಅಡಿಬರಹ ಇದೆ. ರಾಮಸ್ವಾಮಿ ಅವರ ಮುನ್ನುಡಿ ಇದೆ.

೨೧೬೪. ಹಬ್ಬದ ಹಾಡುಗಳು (ಭಾಗ-೧)

ಸಂ: ಡಿ.ಬಿ. ನಾಯಕ; ಪ್ರ: ಕರ್ನಾಟಕ ಸರ್ಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು-೫೬೦ ೦೦೨; ಮೊ.ಮು. ೨೦೦೯; ಪು: ೬೬+೪೬೪=೫೩೦; ಡಿಮ್ಮೈ ೧/೮

ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಮಾಲೆಯ ೨೯ನೆಯ ಸಂಪುಟ. ಇದರಲ್ಲಿ ೧೫ ಬಗೆಯ ಹಾಡುಗಳಿವೆ: **೧.ಕಾರಹುಣ್ಣಿಮೆಯ ಹಾಡುಗಳು:** ಕಾರ ಹುಣ್ಣಿಮೆ ಹುಟ್ಟಿದ ಹಾಡು, ೧.ಮಣ್ಣೆತ್ತಿನ ಹಾಡು. **೨.ಗುಳ್ಳವ್ವನ ಹಾಡುಗಳು:** ಗುಳ್ಳವ್ವನ ಹಾಡು, ಬಸವನ ಕೋಲು ಹಾಡು, ಗೊಗ್ಗವ್ವನ ಹಾಡು, ತವರಿನ ಹಂಬಲದ ಹಾಡು **೩.ನಾಗರ ಪಂಚಮಿ ಹಾಡುಗಳು:** ಬಿಡಿ ಹಾಡುಗಳು, ತವರಿನ ಬಯಕೆ ಹಾಡು (ಎರಡು), ಪಂಚಮಿ ಹಾಡು (ಮೂರು), ಜೋಕಾಲಿ ಹಾಡು, ನಾಗರ ಪಂಚಮಿ ಹಾಡು, ಮಾಯ ಮಕ್ಕಳ ಹಾಡು, ಸುರಪುರ ದೊರಿಯ ಹಾಡು. **೪.ಐತಿಹಾಸಿಕ ಹಾಡುಗಳು:**

ರಜಾಕಾರರ ಹಾಡು (ಮೂರು) **೫.ಧಾರ್ಮಿಕ ಹಾಡುಗಳು:** ಕಲಬುರಗಿ ಶರಣ ಬಸವೇಶ್ವರನ ಹಾಡು, ಚನ್ನಬಸವಣ್ಣನ ಹಾಡು, ಚೆಂಗಾಳ್ವೆಯ ಹಾಡು, ಹೇಮರೆಡ್ಡಿ ಮಲ್ಲಮ್ಮನ ಹಾಡು, ಬಸವಣ್ಣನಹಾಡು, ನಾಗಾಲಾಂಬಿಕೆಯ ಹಾಡು, ತತ್ವಪದ. **೬.ಸಾಮಾಜಿಕ ಹಾಡುಗಳು:** ಚಂದ್ರುಣಿಯ ಹಾಡು, ಶಂಕರ ಸಾಹುಕಾರನ ಹಾಡು, ತಾಳಿಕೋಟೆ ಕಿಲ್ಲ್ಯಾದ ಹಾಡು, ವಿಠ್ಠಲದಾಸನ ಹಾಡು, ಸಂಗಮ್ಮಳ ಹಾಡು(ಎರಡು), ಅಣ್ಣ ತಮ್ಮಂದಿರ ಹಾಡು, ನೀಲಕಂಠರಾಜನ ಹಾಡು, ಗಂಗಮ್ಮಳ ಹಾಡು, ಮಲರೆಡ್ಡಿ ಸಾಹುಕಾರನ ಪದ, ಧರಣೆವ್ವನ ಹಾಡು, ಕುಸುಮಲ್ಲಿಯ ಹಾಡು, ಕಾಶಮ್ಮಳ ಹಾಡು. **೭.ಸಂಕೀರ್ಣ ಹಾಡುಗಳು:** ಆಕಳ ಹಾಡು, ನಾಗರಹಾವಿನ ಹಾಡು, ನಾಗರಪಂಚಮಿ ಹಾಡು, ಮಗಳ ಹಾಡು, ನಾಗರಪಂಚಮಿ ಹಾಡು, ಪಂಚಮಿಯ ಹಾಡು **೮.ಜೋಕುಮಾರನ ಹಾಡುಗಳು:** ಜೋಕುಮಾರನ ಹುಟ್ಟಿನ ಹಾಡು, ಜೋಕುಮಾರನ ಮಹಿಮೆಯ ಹಾಡು (ಎರಡು) **೯.ಮಹಾನವಮಿಯ ಹಾಡುಗಳು:** ಬನ್ನಿ ಮುಡಿಯುವ ಹಾಡು, ಬನ್ನಿ ಹಾಡು(ಎರಡು) **೧೦.ಶೀಗಿ ಹಾಡುಗಳು:** ೧.ಶೀಗಮ್ಮನಿಗೆ ಆಮಂತ್ರಣ ೨.ಗಂಗಮ್ಮನ ಥಡಿ ೩.ವೀರೇಶನಿಗೆ ಆಮಂತ್ರಣ ೪.ದಸರಿಯ ಸೌಭಾಗ್ಯ ೫.ಏಳು ಸುತ್ತಿನ ಕೋಟೆ ೬.ಗವರಮ್ಮ(ಶೀಗಮ್ಮ)ನಿಗೆ ಬೀಳ್ಕೋಡುಗೆ ೭.ಸೀಗೀ ಹುಣ್ಣಿಮೆಯ ಹಾಡು **೧೧.ದೀಪಾವಳಿಯ ಹಾಡುಗಳು:** ೧.ನಿತ್ಯುಳ್ಳ ಜ್ಯೋತಿ ನಡೆ ಮುಂದೆ (ಅಂಟಿಕೆ-ಪಂಟಿಕೆ ಪದಗಳು) ೨.ಸಂಪ್ರಾದಾಯದ ಪದಗಳು ೩.ಜ್ಯೋತಿಪದ-೧.೪.ಜ್ಯೋತಿಪದ-೨ ೫.ಬಾಗಿಲುಪದ-೧ ೬.ಬಾಗಿಲು ಪದ-೨ ೭.ಬಾಗಿಲು ಪದ-೩ ೮.ಬಾಗಿಲು ಪದ-೪ ೯.ಜ್ಯೋತಿ ಸ್ವಾಗತದ ಪದ ೧೦.ಎಣ್ಣೆ ಎರೆಯುವ ಪದ ೧೧.ಅಕ್ಕಿ ಬತ್ತದ ಪದ-೧ ೧೨.ಅಕ್ಕಿ ಬತ್ತದ ಪದ-೨ ೧೩.ಬತ್ತದ ಪದ ೧೪.ಅಕ್ಕಿಪದ ೧೫.ಜ್ಯೋತಿಗೆಡೆ ಮಾಡುವ ಪದ ೧೬.ಪ್ರತಿಮನೆಯಿಂದ ಹೊರಡುವಾಗಿನ ಹಾಡು ೧೭.ಜ್ಯೋತಿ ಕಳಿಸುವ ಪದ **೧೨.ಸಾಂದರ್ಭಿಕ ಹಾಡುಗಳು:** ೧.ದೇವರ ಪದ ೨.ಗಣಪತಿ ಪದ ೩.ತಿರುಪತಿ ಯಾತ್ರೆ ಪದ ೪.ಬಸವನ ಮೈ ತೊಳೆಯುವ ಪದ ೫.ಹಲಿಪದ ೬.ಚೆಂಡಿನಪದ ೭.ಮಂಚ ಕುಂಚದ ಪದ ೮.ಹೆಣ್ಣಿ ಬೇಡುವ ಹಾಡು ೯.ಮದು ಮಕ್ಕಳ ಮೇಲಿನ ಪದ-೧ ೧೦.ಮದು ಮಕ್ಕಳ ಮೇಲಿನ ಪದಭಾಗ-೧ ೧೧.ಮದು ಮಕ್ಕಳ ಮೇಲಿನ ಪದಭಾಗ-೨ ೧೨.ಮದುವಳಗಿಯರ ಮೇಲೆ ಪದಭಾಗ-೧ ೧೩.ಮದುವಳಗಿಯರ ಮೇಲೆ ಪದಭಾಗ -೨ ೧೪.ಮಧುವಳಗಿಯರ ಮೇಲೆ ಪದಭಾಗ-೩ ೧೫.ಇತ್ರೆ ಗಂಡಸರ ಮೇಲೆ ಜನ ಬೆಡಗು ೧೬.ಇತ್ರ ಹೆಂಗಸರ ಮೇಲೆ ಜನ ಬೆಡಗು **೧೩.ಜಾತಿ ಬೆಡಗುಗಳು:** ೧.ಬ್ರಾಹ್ಮಣರ ಮೇಲೆ ಪದ೧ ೨.ಬ್ರಾಹ್ಮಣರ ಮೇಲೆ ಪದ೨ ೩.ಬ್ರಾಹ್ಮಣರ ಮೇಲೆ ಪದ೩ ೪.ಶಿವಭಕ್ತರ ಮೇಲೆ ಪದ ೫.ನಾಮಧಾರಿ ಗೌಡರ ಮೇಲೆ ಪದ ೬.ಅಕ್ಕಸಾಲೆಯರ ಮೇಲೆ ಪದ ೭.ವಿಶ್ವಕರ್ಮರ ಮೇಲಿನ ಪದ ೮.ಆಚಾರ್ಯರ ಮೇಲೆ ಪದ ೯.ಹೇರಾಟದ ಸೆಟ್ಟರ ಮೇಲೆ ಪದ ೧೦.ಸೆಟ್ಟಿಗಾರರ ಮೇಲಿನ ಪದ ೧೧.ಅಗಸರ ಮೇಲಿನ ಪದ ೧೨.ಗಾಣಿಗರ ಮೇಲಿನ ಪದ ೧೩.ಮಡಿವಾಳರ ಮೇಲೆ ಪದ ೧೪.ಕ್ಷೌರಿಕರ ಮೇಲೆ ಪದ ೧೫.ಸಾಹೇಬರ ಮೇಲೆ ಪದ ೧೬.ಮುಸ್ಲಿಂ ಜಾತಿಯ

ಮೇಲಿನ ಪದ **೧೪.ಕಥನ ಗೀತೆಗಳು:** ೧.ಗಣಪತಿ ಹಾಡುಗಳು-೧ ೨.ಗಣಪತಿಹಾಡು-೨ ೩.ಗಣಪತಿ ಹಾಡು-೩ ೪.ಬಸವನ ಹಾಡು ೫.ಬಸಬನ ಪದ ೬.ಅರ್ಜುನಸ್ವಾಮಿ ಹಾಡು-೧ ೭.ಅರ್ಜುನಸ್ವಾಮಿ ಹಾಡು-೨ ೮.ಜೋಗಿ ಹಾಡು ೯.ಉತ್ತರದೇವಿ ಹಾಡು ೧೦.ಕೆಉಗಳ ಅರಚುವ ಹಾಡು ೧೧.ತೆರೆ ಅಳೆಯುವ ಪದ **೧೫.ಸಂಕೀರ್ಣ ಪದಗಳು:** ೧.ದೀಪ ಹಚ್ಚುವ ಪದ ೨.ತೊಳಸಿ ಪದ ೩.ನಾಗರ ಪದ. ಬಿ.ಎಸ್. ಯಡಿಯೂರಪ್ಪ ಅವರ ಶುಭ ಸಂದೇಶ. ಗೊ.ರು.ಚನ್ನಬಸಪ್ಪ ಅವರ ಅಕಾಡಿಮ್ಯೆ ಅಧ್ಯಕ್ಷರ ನುಡಿ, ಹಿ.ಶಿ. ರಾಮಚಂದ್ರೇಗೌಡ ಅವರ ಪೂರ್ವಾಪರ ಎಂಬ ಅಧ್ಯಕ್ಷರ ಮಾತು, ಕೊನೆಯಲ್ಲಿ ಅರ್ಥಕೋಶ, ಇವೆ.

೨೧೬೫. ಹಬ್ಬದ ಹಾಡುಗಳು (ಭಾಗ-೨)

ಸಂ: ಡಿ.ಬಿ. ನಾಯಕ; ಪ್ರ: ಕರ್ನಾಟಕ ಸರ್ಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು-೫೬೦ ೦೦೨; ಮೊ.ಮು.೨೦೦೯; ಪು: ೫೦+೬೪೬=೬೯೬; ಡೆಮ್ಮಿ ೧/೮

ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಮಾಲೆಯ ೩೦ನೆಯ ಸಂಪುಟ. ಇದರಲ್ಲಿ ಎಂಟು ಭಾಗಗಳಿವೆ: **೧.ಗೌರಿಹಬ್ಬದ ಹಾಡುಗಳು:** ೧.ಗಂಗೀಗೌರಿ ಹಾಡು-೧ ೨.ಗಂಗೀಗೌರಿ ಹಾಡು-೨ ೩.ಗೌರಿ ಹಾಡು ೪.ಗೌರಿಯನ್ನು ಕಳುಹಿಸಿಕೊಡುವ ಹಾಡು-೧ ೫.ಗೌರಿಯನ್ನು ಕಳುಹಿಸಿಕೊಡುವ ಹಾಡು-೨ ೬.ಗಂಗೀ ಗೌರಿ ಸಂವಾದ ೭.ಶಿವ ಯಾರಿಗೆ ಒಳ್ಳೆಯವ ೮.ನರಗುಂದದ ಗೌರೀ ಹುಣ್ಣಿಮೆ ೯.ಬೆಳಿಯೋ ಬಿಳಿಜ್ವಾಳವ ೧೦.ಹನುಮಂತನ ಹಾಡು ೧೧.ಲೇವಡಿ ಪದ ೧೨.ಮಂಗಳಾರತಿ ಹಾಡು **೨.ಎಳ್ಳಮಾಸೀ ಹಾಡು ೩.ಶಿವರಾತ್ರಿ ಹಾಡು ೪.ಹೋಳಿ ಹಾಡುಗಳು:** ೧.ಹೋಳಿ ಹುಣ್ಣಿಮೆಯ ಮೂಲಕಥೆ ೨.ರೇವಣ ಸಿದ್ಧೇಶ್ವರ (ಪುರುಷ) ಘನತೆಯ ಪದ ೩.ಮಾಯಾ (ಸ್ತ್ರೀ) ಘನತೆಯ ಪದ ೪.ಕಾಮದಹನ ೫.ಜಲಕ್ರೀಡೆಯ ಹಾಡು ೬.ಕೃಷ್ಣ ಹೋಳಿಯ ಪದ ೭.ಪಾಂಡವರ ಅಜ್ಞಾತವಾಸ ೮.ದಕ್ಷಬ್ರಹ್ಮನ ಕಥೆ ೯.ಅಭಿಮನ್ಯುವಿನ ಕಥೆ ೧೦.ಇಂದ್ರಜಿತುವಿನ ಹೋಳಿಯ ಪದ ೧೧.ಗಯಾನ ಕಥೆ ೧೨.ಕಾಮಿನೀ ಶೃಂಗಾರ ೧೩.ಬಾಣಾಸುರ ೧೪.ಕೃಷ್ಣಾರ್ಜುನರ ಕಾಳಗ ೧೫.ಧೀರ ಕುಮಾರ ರಾಮ ೧೬.ಮಲುಹಣ. **೫.ಸಾಮಾಜಿಕ ಹಾಡುಗಳು:** ೧.ಸವಾಲಪದ ೨.ಹೆಣ್ಣು-ಗಂಡಿನ ವಾದ ೩.ಹೆಣ್ಣು-ಗಂಡಿನ ಹೋಳೀಪದ(೧) ೪.ಹೆಣ್ಣು-ಗಂಡಿನ ಹೋಳೀಪದ(೨) ೫.ಕಾಮಣ್ಣ ದೇವರ ದುಮ್ಮಸಾಲಿಪದ ೬.ಮುಷ ಕಂಡಿಯ ದುಂದುಮೆಯ ಪದ ೭.ಹುಬ್ಬಳ್ಳಿಯ ಹಾಡು ೮.ಹೆಂಗ ಮಾಡಲೆವ್ವ ತಂಗಿ ೯.ಹಸಗೇಡಿ ಹೆಣ್ಣು ೧೦.ಹೆಂಡಾ ಕುಡಿಯುವ ಗಂಡನ ಸಂಸಾರ ೧೧.ದೇವದಾಸಿ ಪದ ೧೨.ಬೆಕ್ಕಿನ ಬ್ಯೆಬ್ಯಾಡ ೧೩.ಮೋಸ ಮಾಡಿದ ಹೆಣ್ಣು ೧೪.ಬಾಳೇವಂತ ಬೋಳಿಮಗಾ ಖಾಸ ಶರಣ. **೬.ಭಾವಗೀತಾತ್ಮಕ ಹಾಡುಗಳು:** ೧.ಪ್ರಾರ್ಥನೆ ೨.ಸ್ಥಿರವಿಲ್ಲ ನನ್ನ ಮನದಾಗ ೩.ತೊಗರಿಯ ಲೆಕ್ಕ ಮರತಾಳೊ ೪.ಉಂಡಿ ಕೊಂಡಕೊಡ ೫.ಬೀದೀಲಿ ಹೊಂಟೆ ನಗನಗತ ೬.ದೈವಾನಕ ನಾನು ಬಸವಲ್ಲ ೭.ಮದವಿ ಗಂಡನ್ನ ಮರತಾಳೊ

೮.ಬಂದ ಕರಿಯಲಿ ಬ್ಯಾಡ ೯.ಎಂದು ಮೈನೆರೆದೆ ಎಲೆ ಬಾಲಿ ೧೦.ಬೇಕಾದ್ದಾದರ ಬಿಡಾಂವಲ್ಲ ೧೧.ಗುಲ್ಲ ಕೊಡತೇನ ಎಡಬಲಕ ೧೨.ಉಂಡಿಲ್ಲ ಮಾರಿ ತೊಳದಿಲ್ಲ ೧೩.ಕೊಡತೇನ ಹರಕ ಪಡಿಕೊಂದ ೧೪.ಇಡ ನಿನ್ನ ಪ್ರೀತಿ ಮರಿಬ್ಯಾಡ ೧೫.ಉಸರ ಹಾಕತೀನ ಉಣುವಾಗ ೧೬.ಸುಗ್ಗಿಮ್ಯಾಲ ಬತ್ತ ಕೊಡತೀನ ೧೭.ಖಂಡೀತ ನಿನ್ನ ಬಿಡೂದಿಲ್ಲ ೧೮.ಗ್ವಾಡಿ ಜಿಗದ ಬಾರ ೧೯.ಮದವಿ ಹೇಣತಿ ಮರತೀನ ೨೦.ವಜ್ಜರ ತೇದ ಕುಡಿದೇನ ೨೧.ಅಂಗಜನ ಬಾಟ ಹೊಡದಾವ ೨೨.ಇಂಚಲಕೊಮ್ಮಿ ಬಂದ್ಹೋಗ ೨೩.ಮದರಂಗಿ ಗೊನಿಯ ಮರಿಮಾಡ ೨೪.ಏನ ಬೇಡತಿ ಬೇಡ ೨೫.ಶೀಲವಂತಿ ಸಿಟ್ಟ ಮಾಡಬ್ಯಾಡ ೨೬.ಚೆದುರಿ ಚಿಗರಿಮರಿ ಹಂಗ ೨೭.ಹೆಚ್ಚೇನ ವಂಕಿ ಕೊಡತೇನ ೨೮.ಚೆಂದಾಗಿ ಪೂಜಿ ಮಾಡುವೆನೊ ೨೯.ಸೇವೆ ಮಾಡುವೆ ಮನಪೂರ್ಣ ೩೦.ದಯಪೂರ್ಣ ಮಾಡು ನಮ ಮ್ಯಾಲ ೩೧.ಶಂಕೆ ಇಲ್ಲದಲೆ ಭಜಿಸುವೆನೊ ೩೨.ಮನ್ನಿಸಿರಿ ಎನ್ನ ಮಾತು ೩೩.ಹ್ಯಾವಕ ಬೀಳುವ ಜನರು ೩೪.ತಾನೆ ತಾನಾಗಿ ಅರಿಬೇಕ ೩೫.ಈಶ್ವರನ ಮಹಾತ್ಮೇ ಒಬ್ಬರಿಗೆ ತಿಳಿದಿಲ್ಲ ೩೬.ದೂರೈತೊ ತಮ್ಮಾ ಗೆದೆಯುವುದಾ ೩೭.ಹದ್ದಿಗಿ ಸರ್ಪ ಈಡೇನೊ ೩೮.ಕದ್ಲೆ ಎಲ್ಲೋ ಕಲ್ತಬಂದಿ ೩೯.ಹೇಳ್ತಿ ಮಂದೀಗಿ ಕರಕರದು ೪೦.ಕೋಳಿ ಹಾಂಗ ಕಾಲಕೆದರುವಿಯೊ ೪೧.ಹಿಂಗ್ಯಾಕ ತಪ್ಪ ಕಲಿಸೀದಿ ೪೨.ದೀಪ ಲಯವಾಗಿ ಹೋಗುವುದು ೪೩.ಹಾಡತಾವ ಹಾಡ ಹುಡಹುಡುಕಿ ೪೪.ಒಂದಾರ ಹಾಡು ಹಿಂತಾದು ೪೫.ಬಿಟ್ಟು ನಾಚಿಕೆಯ ಹೇಳುವೆನೊ ೪೬.ಸೋಜಿಗದ ಹೆಣ್ಣ ಮಾರಿವಳೊ ೪೭.ಭಾರಕ ಬಂದ ಹೆಣ್ಣ ನೀನು ೪೮.ಸ್ತ್ರೀಯಳೆ ನಿನ್ನ ಬುದ್ಧಿ ೪೯.ನಾರಿ ತವರಿಗೆ ಸಾಮ್ಯ ಕೊಡುವರು ೫೦.ರಂಗದುಟಿ ರತನದಂಥವಳೆ ೫೧.ವರಶ್ರೇಷ್ಠ ಬಾಣ ಹೊಡದಾನ ೫೨.ತುಪ್ಪದಂಥವಳ ಬೆಯ್ಯಬ್ಯಾಡ ೫೩.ಪಂಟ ಹೇಳಬ್ಯಾಡ ಸುಂದರಿ ೫೪.ಅಗಸ್ಯಾಗ ನಿನ್ನ ಹುಗಸೇನ ೫೫.ಅಂಗಿಮ್ಯಾಲ ಅಂಗಿ ತೊಟ್ಟ ೫೬.ಕೊಡಿಯ ನೆರಳಾಗ ನಿಂತಿದ್ದ ೫೭.ಚೊಕ್ಕ ಬಂಗಾರದ ಖಡೆನಿಟ್ಟ ೫೮.ಕೈ ಹಿಡದ ಒಳಗ ಕರದಾಳೊ ೫೯.ಸಣ್ಣ ಶ್ಯಾವಿಗಿ ಬಸದಾಳೊ ೬೦.ದಗದಂದರ‍್ಯಾಕ ಅಳತಾಳೊ ೬೦.ಏನಾತೊ ಅವಳ ಬಾಳೇವೊ ೬೨.ಮಿಡಕತೇನ ಕಂಡು ಮನದೊಳಗ ೬೩.ಅಂಗಜನ ಬಾಣ ಬಡದೀತ ೬೪.ಕುಂಡಿ ಹೊಸದೀನೆ ಮೂರುವರ್ಷ ೬೫.ಚಿಲಕಿನ ತೆನಿಯ ಮುರಿದಿದ್ದೆ ೬೬.ಕವಣೀಯ ಕಲ್ಲ ಒಗದಂಗ ೬೭.ಬಡಿವಾರ ಬಿಡೋ ಬಿಡೋ ೬೮.ಸ್ರಾಪ ಇದ್ದಂಗ ಋಷಿಗಳದಾ ೬೯.ಸಂಕೀರ್ಣ ತ್ರಿಪದಿಗಳು. **೭.ದುಂದುಮೆ ಹಾಡುಗಳು:** ೧.ಆದಯ್ಯ ೨.ಪುರಾತನರ ಪೂಜೆ ೩.ಕೀಚಕ ವಧೆ ೪.ಕಿತ್ತೂರ ದುಂದುಮೆ ೫.ವೀರರಾಣಿ ಚೆನ್ನವ್ವ ೬.ನುಲಿಯ ಚೆಂದಯ್ಯ ೭.ಶ್ರೀಕೃಷ್ಣ ಲೀಲೆ ೮.ಶಿವನಾಮದಿಂದ ಸವೆದೀತು ಪಾಪ ೯.ಹುಬ್ಬಳ್ಳಿ ಮಂಗ **೮.ಸಂಕೀರ್ಣ ಪದಗಳು:** ೧.ಹೋಳಿ ಹಾಡಿನ ಪ್ರಕಾರಗಳು ೨.ನಿಜಗುಣಿ ಶಿವಯೋಗಿಗಳ ಹಾಡುಗಳು. **ಅನುಬಂಧಗಳು:** ಆಕರ ಗ್ರಂಥಗಳು, ಸಹಾಯಕ ಗ್ರಂಥಗಳು, ಪದಕೋಶ. ಬಿ.ಎಸ್. ಯಡಿಯೂರಪ್ಪ ಅವರ ಶುಭ ಸಂದೇಶ, ಗೊ.ರು.ಚನ್ನಬಸಪ್ಪ ಅವರ ಅಕಾಡಿಮೈ ಅಧ್ಯಕ್ಷರ ನುಡಿ, ಹಿ.ಶಿ.ರಾಮಚಂದ್ರೇಗೌಡ ಅವರ ಪೂರ್ವಾಪರ ಎಂಬ ಅಧ್ಯಕ್ಷರ ಮಾತು, ಸಂಪಾದಕರ ಪ್ರಸ್ತಾವನೆ, ಪ್ರಾದೇಶಿಕ ಪದಕೋಶ, ಇವೆ.

೨೧೬೬. ಹಬ್ಬಲಿ ಅವರ ರಸಬಳ್ಳಿ

ಸಂ: ಸಿ.ಪಿ.ಕೆ; ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಮೈಸೂರು ಜಿಲ್ಲಾ ಸಮಿತಿ, ಮೈಸೂರು ಜಿಲ್ಲಾ ಜನಪದ ಕಲಾಮಹೋತ್ಸವ ಸಮಿತಿ, ಮೈಸೂರು; ಮೊ.ಮು.: ೧೯೭೬, ಪು:೧೨+೧೯೦=೨೦೨, ಡಿಮೈ ೧/೮

ಈ ನೆನಪಿನ ಗ್ರಂಥದಲ್ಲಿ ೨೧ ಲೇಖನಗಳಿವೆ: ೧.ಕಾವ್ಯಗಳಲ್ಲಿ ಜಾನಪದ–ದೇಜಗೌ ೨.ಹೆಣ್ಣಾಗಿ ಬಾಳ ಹೊರಬೇಡ – ಹೊರೆಯಾಲ ದೊರೆಸ್ವಾಮಿ ೩.ಕೋಲಾಟ–ಮಳಲಿ ವಸಂತಕುಮಾರ್ ೪.ಜನಪದ ಕಾವ್ಯಗಳಲ್ಲಿ ರಸಿಕ ಜೋಡಿಗಳು – ಸದಾಶಿವ ಎಣ್ಣೆಹೊಳೆ ೫.ಜನಪದ ಸಾಹಿತ್ಯದ ಅಧ್ಯಯನ – ಒಂದು ಟಿಪ್ಪಣಿ –ಶಿವರಾಮು ಕಾಡನಕುಪ್ಪೆ ೬.ಜನಪದ ಸಾಹಿತ್ಯದ ಭಾಷೆ –ರಾಗೌ ೭.ಮೈಸೂರು ವಿಶ್ವವಿದ್ಯಾಲಯ ಜಾನಪದ ವಸ್ತುಸಂಗ್ರಹಾಲಯ–ಪಿ.ಆರ್. ತಿಪ್ಪೇಸ್ವಾಮಿ ೮.ಜನಪದ ಕಲೆ ಮತ್ತು ಮತಧರ್ಮ – ಡಿ.ಕೆ. ರಾಜೇಂದ್ರ ೯.ಜನಪದ ಮುಕ್ತಕಗಳಲ್ಲಿ ಬೇಸಾಯದ ಚಿತ್ರಗಳು– ನಂ. ತಪಸ್ವಿಕುಮಾರ್ ೧೦.ಈರಮಕ್ಕಳ ಕುಣಿತ – ಟಿ.ಎಸ್. ರಾಜಪ್ಪ ೧೧.ತೆಲುಗು ಜನಪದ ಕಥನ ಗೀತೆಗಳಲ್ಲಿ ರಾಮಾಯಣ – ಆರ್ವಿಯಸ್ ಸುಂದರಂ ೧೨.ಜಾನಪದ: ಬದಲಾಗಬೇಕಾದ ನಮ್ಮ ದೃಷ್ಟಿ ಧೋರಣೆಗಳು – ಎಂ. ಶಿವನಂಜಯ್ಯ ೧೩.ಒಂದು ಐತಿಹಾಸಿಕ ಲಾವಣಿ – ಕ್ಯಾತನಹಳ್ಳಿ ರಾಮಣ್ಣ ೧೪.ಜನಪದ ಕಲೆಗಳ ಮೇಲೆ ಕರ್ನಾಟಕದ ಭಕ್ತಿ ಪಂಥಗಳ ಪ್ರಭಾವ – ಸಣ್ಣನಂಜೇಗೌಡ ೧೫.ಜನಪದ ಕಥೆ – ಒಂದು ಪ್ರಾಯೋಗಿಕ ವಿಮರ್ಶೆ – ಬಿ.ಎನ್. ನಾಗರಾಜ ಭಟ್ಟ ೧೬.ಜಾನಪದ ಸೃಷ್ಟಿ ಮತ್ತು ಲೈಂಗಿಕ ಪ್ರಜ್ಞೆ– ಎಸ್. ಶ್ರೀಧರಮೂರ್ತಿ ೧೭.ಮೈಸೂರು ಜಿಲ್ಲೆಯ ಜನಪದ ಕಲೆಗಳು – ಸಿ. ನಂಜುಂಡಪ್ಪ ೧೮.ಜನಪದ ಸಂಗೀತ – ಎಂ.ವಿ. ರತ್ನ ೧೯.ಜನಪದ ವಾದ್ಯಗಳು – ಪಿ.ಕೆ. ರಾಜಶೇಖರ ೨೦.ಜನಪದ ಉಡುಗೆ ತೊಡುಗೆಗಳು – ಹಿ.ಶಿ. ರಾಮಚಂದ್ರೇಗೌಡ ೨೧.ಜನಪದ ವೈದ್ಯ – ರಾಮಲಿಂಗಯ್ಯ ಉಪ್ಪಿನಕೆರೆ. ವಿವಿಧ ಕಲೆಗಳ ಎಂಟು ಪುಟಗಳ ಫೋಟೋಗಳಿವೆ.

೨೧೬೭. ಹರದೆಯರ ಹಾಡುಗಳು

ಸಂ: ಶಶಿಕಲಾ ಮೋಳ್ಡಿ; ಪ್ರ: ಅರವಿಂದ ಪ್ರಕಾಶನ, ಮಹಾಗಾಂವ; ಮೊ.ಮು. ೧೯೭೭; ಪು: ೧೩೮; ಕ್ರೌನ್ ೧/೮

ಜನಪದ ಕಥನಗೀತ ಸಂಗ್ರಹ ಎಂಬ ಅಡಿಬರಹ ಇದೆ. ೩೪ ಕಥನಗೀತೆಗಳಿವೆ. ಪೀಠಿಕೆ, ಎಂ.ಎಸ್. ಸುಂಕಾಪೂರ ಅವರ ಮುನ್ನುಡಿ, ಇವೆ. ಕೊನೆಯಲ್ಲಿ ೧೨ ಹಾಡುಗಳಿಗೆ ಕಥಾ ವಿವರಣೆ ಹಾಗೂ ಶಬ್ದಾರ್ಥ ಇವೆ.

೨೧೬೮. ಹರದೇಶಿ ನಾಗೇಶಿ

ಸಂ: ಬಸವರಾಜ ಪೊಲೀಸ ಪಾಟೀಲ; ಪ್ರ: ಕರ್ನಾಟಕ ಸರ್ಕಾರ, ಕನ್ನಡ ಮತ್ತು ಸಂಸ್ಕೃತಿ

ನಿರ್ದೇಶನಾಲಯ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-೫೬೦ ೦೦೨; ಮೊ.ಮು.೨೦೦೬; ಪು: ೬೪+೫೪೯=೬೧೩; ಡಿಮ್ಮೈ ೧/೮

ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಮಾಲೆಯ ೫ನೆಯ ಸಂಪುಟ. ಇದರಲ್ಲಿ ನಾಲ್ಕು ಭಾಗಗಳಿದ್ದು ಒಟ್ಟು ೨೬೮ ಹಾಡುಗಳಿವೆ. **ಭಾಗ ಒಂದು:** ೧.ಸ್ತುತಿ ೨.ಹಾಡುಗಾರಿಕೆ. **ಭಾಗ ಎರಡು:** ೧.ಹರದೇಶಿ ಸಖಿ ೨.ಹರದೇಶಿ ಹಾಡುಗಳು ೩.ಹರದೇಶಿ ಖ್ಯಾಲಿ. **ಭಾಗ ಮೂರು:** ೧.ನಾಗೇಶಿ ಸಖಿ ೨.ನಾಗೇಶಿ ಹಾಡುಗಳು ೩.ನಾಗೇಶಿ ಖ್ಯಾಲಿ. **ಭಾಗ ನಾಲ್ಕು:** ೧.ಸವಾಲ ಜವಾಬ. ಎಚ್.ಡಿ. ಕುಮಾರಸ್ವಾಮಿ ಅವರ ಹೊನ್ನುಡಿ, ಹಿ.ಶಿ. ರಾಮಚಂದ್ರೇಗೌಡ ಅವರ ಪೂರ್ವಾಪರ ಎಂಬ ಅಧ್ಯಕ್ಷರ ಮಾತು, ಸಂಪಾದಕರ ಪ್ರಸ್ತಾವನೆ, ಕೊನೆಯಲ್ಲಿ ಶಬ್ದಾರ್ಥ, ಇವೆ.

೨೧೬೯. ಹರದೇಶಿ ನಾಗೇಶಿ

ಸಂ: ಬಿ.ಬಿ. ಹೆಂಡಿ; ಎಂ.ಜಿ. ಬಿರಾದಾರ; ಎಂ.ಎಸ್. ಲಠ್ಠೆ, ಪ್ರ: ಕನ್ನಡ ಅಧ್ಯಯನ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ-೬; ಮೊ.ಮು. ೧೯೮೩, ಪು:೩೨+೩೭೬=೪೦೮, ಡಿಮ್ಮೈ ೧/೮

ಏಳು ಅಧ್ಯಾಯಗಳಲ್ಲಿ ವಿಂಗಡಿಸಲ್ಪಟ್ಟಿರುವ ಹಾಡುಗಳ ಸಂಕಲನ: ೧.ಸ್ತುತಿ ೨.ಹಾಡು ಹಾಡುಗಾರಿಕೆ ೩.ಹರದೇಶಿ ೪.ನಾಗೇಶಿ ೫.ಸವಾಲ ೬.ಸಂಕೀರ್ಣ ೭.ಚರಿತ್ರೆ. ಎಂ. ನಾಗರಾಜ ಅವರ ಮುನ್ನುಡಿ, ಸಂಪಾದಕರ ಪ್ರಸ್ತಾವನೆ, ಉತ್ತರ ಕರ್ನಾಟಕದ ಪ್ರಮುಖ ಲಾವಣಿಕಾರರು ಎಂಬುದಾಗಿ ೧೧೫ ಹೆಸರುಗಳ ಪಟ್ಟಿ, ಇವೆ. ಅನುಬಂಧದಲ್ಲಿ, ಶಬ್ದಕೋಶ, ಹಾಡುಗಳ ಅಕಾರಾದಿ, ಇವೆ.

೨೧೭೦. ಹರಿಕಾಂತರ ಪದಗಳು

ಸಂ: ಜಯಪ್ರಕಾಶ ಮಾವಿನಕುಳಿ; ಪ್ರ: ಸ್ಫಟಿಕ ಪ್ರಕಾಶನ, ಗುರುನಿಕೇತನ, ಕೋಡಂಗಲ್ಲು, ಮೂಡುಬಿದಿರೆ-೫೭೪೧೯೭; ಮೊ.ಮು: ೧೯೯೨; ಪು: ೬೦; ಡಿಮ್ಮೈ ೧/೮

ಜನಪದ ಕಥನ ಗೀತೆಗಳ ಸಂಗ್ರಹ ಎಂಬ ಅಡಿಬರಹ ಇದೆ. ಗುಂಡ ಭರ್ಮನ ಪದಗಳು, ತಂಪಿನ ರಾಜನ ಪದಗಳು- ಎಂಬ ಎರಡು ಕಾವ್ಯಗಳಿವೆ. ಶ್ರೀಕಂಠ ಕೂಡಿಗೆ ಅವರ 'ಸಂಕಲನ ಕುರಿತು' ಎಂಬ ಮುನ್ನುಡಿ ಇದೆ.

೨೧೭೧. ಹರಿಗೋಲು ಕಥೆ ಹಾಡು

ಸಂ: ನಮೂದು ಇಲ್ಲ; ಪ್ರ: ಶ್ರೀಮನ್ಮಧ್ವ ಸಿದ್ಧಾಂತ ಗ್ರಂಥಾಲಯ, ಉಡುಪಿ; ಮೊ.ಮು. ೧೯೨೭; ಪು: ೨೬; ಕ್ರೌನ್ ೧/೧೬

ರಾಗ ತಾಳ ಛಂದೋ ಸಹಿತದ ಹಾಡುಗಳು.

೨೧೭೨. ಹರಿವಂಶಪುರಾಣದೊಳಗಣ ಯಕ್ಷಗಾನ ಪ್ರಭಾವತಿ ಕಲ್ಯಾಣವು

ಲೇ: ನಮೂದು ಇಲ್ಲ; ಪ್ರ: ಶ್ರೀಮನ್ಮಧ್ವ ಸಿದ್ಧಾಂತ ಗ್ರಂಥಾಲಯ, ಉಡುಪಿ; ಮೊ.ಮು. ೧೯೩೧; ಪು: ೨+೫೨=೫೪; ಕ್ರೌನ್ ೧/೮

ರಾಗ ತಾಳ ಛಂದೋ ಸಹಿತದ ಕಾವ್ಯ.

೨೧೭೩. ಹರಿಹರ-ರಾಘವಾಂಕ ಮತ್ತು ಜಾನಪದ

ಲೇ: ಶಿವರಾಮಯ್ಯ; ಪ್ರ: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು-೫೬೦ ೦೦೨; ಮೊ.ಮು.೧೯೯೭; ಪುಟ ೧೩+೫೩=೬೬; ಕ್ರೌನ್ ೧/೮

ಹರಿಹರ ಮತ್ತು ರಾಘವಾಂಕ ಎಂಬ ಪ್ರತ್ಯೇಕ ಅಧ್ಯಾಯಗಳಲ್ಲಿ ಆ ಕವಿಗಳ ರಗಳೆಗಳಲ್ಲಿ ಜಾನಪದೀಯ ಅಂಶಗಳನ್ನು ಗುರುತಿಸಲು ಪ್ರಯತ್ನಿಸಿರುವ ಗ್ರಂಥ.

೨೧೭೪. ಹಲಗಲಿ: ಗ್ರಾಮ ಜಾನಪದ

ಲೇ: ಶ್ರೀರಾಮ ಇಟ್ಟಣ್ಣವರ; ಪ್ರ: ವೀರಶೈವ ಅಧ್ಯಯನ ಅಕಾಡಿಮೈ, ಶ್ರೀ ನಾಗನೂರು ರುದ್ರಾಕ್ಷಿಮಠ, ಬೆಳಗಾವಿ; ಮೊ.ಮು: ೧೯೯೫; ಪು: ೧೨+೧೩೬=೧೪೮; ಡಿಮೈ ೧/೮

ಆರು ಅಧ್ಯಾಯಗಳಿವೆ: ೧.ಪ್ರವೇಶ ೨.ಭೌಗೋಳಿಕ ಪರಿಸರ ೩.ಪುರಾಣ-ಐತಿಹ್ಯ-ಇತಿಹಾಸ ೪.ಸಾಮಾಜಿಕ ವ್ಯವಸ್ಥೆ ೫.ಧಾರ್ಮಿಕ ಸಂಪ್ರದಾಯ-ಆಚರಣೆಗಳು ೬.ಕಲೆ-ಕ್ರೀಡೆ-ವೈದ್ಯ. ಹಲಗಲಿ ಗ್ರಾಮದ ವೀರೇಂದ್ರ ಶೀಲವಂತ ಹಾಗೂ ಶ್ರೀಶೈಲ ಗೋಲಶೆಟ್ಟಿ ಅವರುಗಳ ಮಾತುಗಳಿವೆ.

೨೧೭೫. ಹಲಸಂಗಿಯ ಲಾವಣಿಗಳು

ಸಂ: ರಾ.ಧ. ಹಲಸಂಗಿ-ಹಲಸಂಗಿ ಮ.ನಿ. ತೋಳನೂರ – ಚಡಚಣ; ಪ್ರ: ಸಿರಿ ಸಂಗಮ ಪ್ರಕಾಶನ ಚಡಚಣ ಜಿ. ವಿಜಾಪುರ: ಮೊ.ಮು = ೧೯೮೮; ಪು: ೧೨+೧೨೮ = ೧೪೦.ಕ್ರೌನ್ ೧/೮.

ಲಾವಣಿ ಸಂಗ್ರಹ ಎಂಬ ಅಡಿಬರಹ ಇದೆ. ೩೨ ಹಾಡುಗಳ ಸಂಕಲನ: ೧.ಗುರುವಜ್ರ ಖಣಿ ೨.ಹೆಣ್ಣು ಹಣ್ಣು ೩.ಘನ್ನಿನ ತೋಡಿ ಘನ್ನಪದ ೪.ಅನುಭವ ಲಾವಣಿ ೫.ಪಿಂಡ ಪ್ರಾಣ ೬.ದುರ್ಗುಣ ಬಿಡಿರಿ ೭.ಅತ್ತಿ ಕೊಟ್ಟ ಕೊಡ ೮.ಕೆಟ್ಟ ನಡಿ ೯.ಭಕ್ತಿವಂತರು ೧೦.ತಂದಿ ಸರದಾರ ೧೧.ಬರಗಾಲ ೧೨.ಅರುವಿನಿಂದ ನಡೆಯಿರಿ ೧೩.ಹತ್ತಮಂದಿ ಜತ್ತಾಗಿರಿ ೧೪.ನಗೆಮೊಗದ ಕಾಂತ ೧೫.ರೂಪದಲ್ಲಿ ರತನ ೧೬.ಕುದುರೆಯ ಜವಾಬ ೧೭.ದೇಶ ತಿರುಗಿದ ಶೃಂಗಾರ ತೋಡಿ ೧೮.ಸಂಸಾರ ಸಾಗರ ೧೯.ಕಳಿಯುಳ್ಳ ಹುಡುಗ ೨೦.ಸುಂದರ ಹುಡುಗಿ ೨೧.ಕೆಂಪು ತುಟಿಯ ಹುಡುಗ ೨೨.ಬಡಿವಾರ

ಹುಡಿಗಿ ೨೩.ಮೋಜಿನ ರಮಣಿ ೨೪.ಬಂಗಾಲ ದೇಶದ ಹೆಣ್ಣು ೨೫.ಮರಿದುಂಬಿ ಅವತಾರಿ ೨೬.ಹುಡುಗ ಹುಣ್ಣಿವಿ ಚಂದ್ರ ೨೭.ಪ್ರಾಯದ ಹೆಣ್ಣು ೨೮.ನುಡಿದಂತೆ ನಡೆ ೨೯.ಪ್ರಾರಬ್ಧ ಅಳತಿ ೩೦.ಮಹಾದೇವನ ಜವಾಬ ೩೧.ಲಕ್ಷ ಚೌರ‍್ಯಾಐಂಸಿ ೩೨.ನಿರಂಕಾರ. ಸಿಂಪಿ ಲಿಂಗಣ್ಣ ಅವರ ಮುನ್ನುಡಿ ಇದೆ.

೨೧೭೬. ಹಲವು ಜನಪದ ಕಥೆಗಳು

ಲೇ: ಸಿ.ಎಚ್. ಪ್ರಹ್ಲಾದರಾವ್; ಪ್ರ: ಜನಪದ ಅಕಾಡೆಮಿ, ಕದಂಬ, ಕಾರ್ಡ್ ರಸ್ತೆ, ರಾಜಾಜಿ ನಗರ, ಬೆಂಗಳೂರು–೧೦; ಮೊ.ಮು: ೧೯೯೪; ಪು: ೬೦; ಕ್ರೌನ್ ೧/೮

ವಿವಿಧ ಮೂಲಗಳಿಂದ ಆರಿಸಲ್ಪಟ್ಟು ಕನ್ನಡಕ್ಕೆ ರೂಪಾಂತರಿಸಿದ ಹತ್ತು ಕಥೆಗಳಿವೆ: ೧.ಕಳ್ಳ ಸನ್ಯಾಸಿಗೆ ತಕ್ಕ ಶಾಸ್ತ್ರಿ ೨.ಹುಲಿ ವೇಷದ ಇಲಿ ೩.ಬಾತುಕೋಳಿಗಳು ಹಾಗೂ ಆಮೆ ೪.ನರಿ ಮೇಷ್ಟ್ರು ೫.ನರಿರಾಯನ ದೊರೆತನ ೬.ಎಲ್ಲ ಹೋಯಿತು, ಮೂಗು ಹೋಯಿತು ೭.ಅಂತೂ ಕಡೆಗೆ ಗೆದ್ದ! ೮.ನಾಗರಾಜ ೯.ನಾಲ್ವರು ಮಿತ್ರರು ೧೦.ಮಂತ್ರದ ಮುತ್ತು. ಅಲ್ಲಲ್ಲಿ ಕೆಲವು ಚಿತ್ರಗಳಿವೆ.

೨೧೭೭. ಹಲವು ತೋಟದ ಹೂಗಳು

ಸಂ: ಕಾಳೇಗೌಡ ನಾಗವಾರ ಜಿ.ವಿ. ಆನಂದಮೂರ್ತಿ; ಪ್ರ: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು – ೫೬೦೦೦೨ ಮೊ.ಮು: ೨೦೦೦; ಪು: ೩೮+೩೫೫ = ೩೯೩; ಡಿಮ್ಮೈ ೧/೮

ಜಾನಪದ ತತ್ವಪದಗಳ ಪ್ರಾತಿನಿಧಿಕ ಸಂಕಲನ ಎಂಬ ಅಡಿಬರಹ ಇದೆ. ಅಜ್ಞಾತ ತತ್ವಪದಕಾರರು ಶಿಶುನಾಳ ಶರೀಫ ಅವರುಗಳ ಹಾಡುಗಳೊಂದಿಗೆ ಶಿವಶರಣರ ವಚನಗಳು ದಾಸರ ಪದಗಳು ಇತ್ಯಾದಿಗಳನ್ನು ಸೇರಿಸಿದ ಒಂದು ಕಾವ್ಯಸಂಕಲನ.

೨೧೭೮. ಹವೀಕ

ಲೇ: ಪಡಾರು ಮಹಾಬಲೇಶ್ವರ ಭಟ್ಟ; ಪ್ರ: ಭಾರದ್ವಾಜ ಪ್ರಕಾಶನ, ಕದಿರೆ, ಮಂಗಳೂರು–೨; ಮೊ.ಮು. ೧೯೮೧; ಪು: ೨೪; ಕ್ರೌನ್ ೧/೮

ಮೂರು ಲೇಖನಗಳ ಸಂಕಲನ: ೧.ಹವೀಕರ ಭಾಷೆ ೨.ಹವೀಕರ ಜೀವನ ೩.ಹವೀಕರ ಹಾಡು.

೨೧೭೯. ಹವ್ಯಕ ಪದಸಂಚಯ

ಸಂ: ಟಿ. ಕೇಶವ ಭಟ್ಟ; ಪ್ರ: ಚಿರಸಾಹಿತ್ಯ ಪ್ರಕಾಶನ, ಬೆಂಗಳೂರು; ಮೊ.ಮು: ೧೯೭೨, ಎ.ಮು: ೧೯೮೨; ಪು: ೧೦೨; ಕ್ರೌನ್ ೧/೮

೧೯೦ ಚತುಷ್ಪದಿಗಳಲ್ಲಿ ಶಬ್ದಾರ್ಥಗಳನ್ನು ನೀಡಿರುವ ಕೃತಿ. ಪ್ರಸ್ತಾವನೆ ಇದೆ. ಕೊನೆಯಲ್ಲಿ ಶಬ್ದಗಳ ಅಕಾರಾದಿ ಇದೆ.

೨೧೮೦. ಹವ್ಯಕರ ಶೋಭಾನೆಗಳು

ಲೇ: ಟಿ. ಕೇಶವಭಟ್ಟ; ಪ್ರ: ಚಿರಸಾಹಿತ್ಯ ಪ್ರಕಾಶನ, ೭೫೪, ಹದಿನೈದನೆ ಮುಖ್ಯ ರಸ್ತೆ, ಬನಶಂಕರಿ ಎರಡನೆ ಹಂತ, ಬೆಂಗಳೂರು-೫೬೦ ೦೭೦; ಮೊ.ಮು: ೧೯೮೬; ಪು:೭೩೬; ಡೆಮ್ಮೆ ೧/೮

ಸಂಕಲನ-ಸಂಪಾದನ-ಸಂಶೋಧನ ಗ್ರಂಥ ಎಂಬ ಅಡಿಬರಹ ಇದೆ. ಈ ಗ್ರಂಥದಲ್ಲಿ ಎರಡು ಭಾಗಗಳಿವೆ: **ಭಾಗ ಒಂದು: ಶೋಭಾನೆಗಳು:** ೧.ಮದುವೆಯ ಹಾಡುಗಳು ೨.ಜನ್ಮದಿನೋತ್ಸ (ಪೂರ್ವೋತ್ತರ ಸಹಿತ)೩.ಉಪನಯನ (ಪೂರ್ವೋತ್ತರ ಸಹಿತ) ೪.ಐಚ್ಛಿಕ (ಪೂಜೆ-ವ್ರತ-ಹಬ್ಬ-ಹೋಮ) ೫.ಪಣ್ಯಕಥಾತ್ಮಕ. **ಭಾಗ ಎರಡು: ಪರಾಮರ್ಶೆ:** ೧.ಹವ್ಯಕ ವಿಚಾರ ೨.ಶೋಬಾನೆಗಳು-ಲಕ್ಷಣ, ಪ್ರಾಚೀನತೆ ೩.ಧಾಟಿ ಮತ್ತು ಛಂದಸ್ಸು ೪.ಶೋಭಾನೆ-ಶುಭಕಾರ್ಯ, ದೇ.ಜವರೇಗೌಡ ಅವರ ಮುನ್ನುಡಿ, ತಾಳ್ತಜೆ ಕೃಷ್ಣಭಟ್ಟ ಅವರ ಒಳ್ನುಡಿ, ಜಿತಬಿಂದು ಮಹರ್ಷಿ ಅವರ ಶುಭಾಶಯ, ಇವೆ. ಎಸ್.ಕೆ. ರಾಮಚಂದ್ರರಾವ್, ಎಸ್. ರಂಗನಾಥ ಶರ್ಮಾ, ಜಿ.ಎಸ್. ಶಿವರುದ್ರಪ್ಪ, ಸೂರ್ಯನಾಥ ಕಾಮತ್, ನಿಟ್ಟೂರು ಶ್ರೀನಿವಾಸರಾವ್, ಗೊರೂರು ರಾಮಸ್ವಮಿ ಅಯ್ಯಂಗಾರ್ ಅವರುಗಳ ಅಭಿಪ್ರಾಯ ಮೆಚ್ಚುನುಡಿಗಳಿವೆ. ಪ್ರಸ್ತಾವನೆ, ಅನುಬಂಧದಲ್ಲಿ ಶಬ್ದಾರ್ಥ, ಸಾಂಖ್ಯೇಯಾರ್ಥ, ಹಾಡುಗಾರ್ತಿಯರ ವಿವರ ಇವೆ.

೨೧೮೧. ಹಸಲರ ಸಂಸ್ಕೃತಿ

ಲೇ: ಜಿ.ಎಸ್. ಭಟ್ಟ; ಪ್ರ: ಕರ್ನಾಟಕ ಸಾಹಿತ್ಯ ಅಕಾಡೆಮಿ, ನೃಪತುಂಗ ರಸ್ತೆ, ಬೆಂಗಳೂರು-೫೬೦ ೦೦೨; ಮೊ.ಮು: ೧೯೯೩; ಪು: ೪೮+೨೦೦=೨೪೮; ಕ್ರೌನ್ ೧/೮

ಎಂಟು ಅಧ್ಯಾಯಗಳಿವೆ: ೧.ಹಿನ್ನೆಲೆ ೨.ಭೌಗೋಳಿಕ ಪರಿಸರ-ಜನಸಂಖ್ಯೆ ೩.ಪೌರಾಣಿಕ, ಐತಿಹಾಸಿಕ ಮತ್ತು ಸಾಮಾಜಿಕ ಹಿನ್ನೆಲೆ ೪.ಜೀವನ ವಿಧಾನ ಮತ್ತು ಸಾಮಾಜಿಕ ವ್ಯವಸ್ಥೆ ೫.ಆಚರಣೆ ೬.ಭಾಷೆ-ಸಾಹಿತ್ಯ ೭.ಸಾಮಾಜಿಕ ಪರಿವರ್ತನೆಯ ಹಿನ್ನೆಲೆಯಲ್ಲಿ ೮.ಸಮಾರೋಪ. ಅನುಬಂಧದಲ್ಲಿ, ಹಸಲರ ಸಾಹಿತ್ಯವನ್ನೂ ವಕ್ತೃಗಳ ಹೆಸರುಗಳನ್ನೂ ಕೆಲವು ಫೋಟೋಗಳನ್ನೂ ನೀಡಲಾಗಿದೆ. **ಹಸಲರ ಸಾಹಿತ್ಯ: ಕತೆಗಳು:** ೧.ಕಮಂಡಲ ಹೂ ೨.ಜಾಣನರಿ ೩.ಬುದ್ಧವಂತ ನರಿ ೪.ಜಾಣಭಟ್ಟ. **ಗೀತೆಗಳು:** ೧.ಓಕಳಿ ಹಾಕೋದು ೨.ಬಾಗಿಲು ತೆಗೆಸುವ ಹಾಡು ೩.ಬಲಿಯೇಂದ್ರನ ಹಾಡು ೪.ಬಿಂಗಿಪದ ೫.ಕೋಲಾಟದ ಪದ ೬.ಕಮಂಡಲ ಹೂ ಕಾಳಮ್ಮನ ಪೂಜೆಗೆ ೭.ಮಾನಾಡ ಗೋವಿನಕಥೆ. ಬರಗೂರು ರಾಮಚಂದ್ರಪ್ಪ ಅವರ ಸಂಸ್ಕೃತಿ-ಉಪಸಂಸ್ಕೃತಿ ಎಂಬ ಸುದೀರ್ಘ ಪ್ರಸ್ತಾವನೆ ಇದೆ.

೨೧೮೨. ಹಸುಬೆ

ಲೇ: ಶಾಲಿನಿ ರಘುನಾಥ; ಪ್ರ: ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ಕರ್ನಾಟಕ; ಮೊ.ಮು.೨೦೦೨; ಪು: ೮+೧೩೮=೧೪೬; ಡಿಮ್ಮೈ ೧/೮

೫೬ (೨೪). ಅಂಗಡಿ ಎಸ್.ಎಸ್.; **ಬಲವಂತ-ಬಸವಂತ**; ಯರಝುರವಿ; ಪಾರ್ವತಮ್ಮ ಪ್ರಕಾಶ. ೧೯೯೭; ಪು. ೬೬+೧೦; ಇದೊಂದು ಜಾನಪದ ಗೀತರೂಪಕ. ಈ ಗೀರೂಪಕದಲ್ಲಿ ಕಾವ್ಯ ಸೌಂದರ್ಯವನ್ನುಂಟುಮಾಡಲು ಅಲಂಕಾರಗಳು, ಪ್ರತಿಮೆಗಲು ಲೀಲಾಜಾಲವಾಗಿ ಬಳಕೆಯಾಗಿವೆ ಹಾಗೂ ಇಲ್ಲಿನ ಭಾಷೆಯ ವಾಚ್ಯಾರ್ಥದಲ್ಲಿಯೂ ಗ್ರಾಮ್ಯತೆಯ ಕಸುವು ಇದೆ. ಇಲ್ಲಿನ ನಿರೂಪಣೆ, ಪಾತ್ರ ರಚನೆ, ರಸ, ಅಲಂಕಾರ, ಅಭಿವ್ಯಕ್ತಿ, ಸನ್ನಿವೇಶ ನಿರ್ಮಾಣವರ್ಣನೆ ಮತ್ತು ಸಂಭಾಷಣೆ ಇವೆಲ್ಲ ಅಂಶಗಳ ದೃಷ್ಟಿಯಿಂದ ಇದು ಜಾನಪದ ಗೀತರೂಪಕ ಎನ್ನಬಹುದಾಗಿದೆ.

೬೩ (೨೬). ಅಚಿಜಲಿ ಪಾಲ್; **ಬಂಗಾಳ ದೇಶದ ಹಾಸ್ಯ ಕಥೆಗಳು**; ಬೆಂಗಳೂರು; ಐ.ಬಿ.ಎಚ್. ಪ್ರಕಾಶನ; ೧೯೭೧; ಪು. ೫೬; ಐದು ಸಚಿತ್ರ ಕಥೆಗಳಿವೆ.

೬೪ (೨೭). ಅಂಬುಜಾ ಟಿ.ಎಸ್; **ರಂಗದ ರಂಗೋಲಿ**; ಉಡುಪಿ; ರಾಷ್ಟ್ರಕವಿ ಗೋವಿಂದಪೈ ಸಂಶೋಧನ ಕೇಂದ್ರ; ೧೯೯೮; ಪು; ೧೮೦+೬; ದೊಡ್ಡ ಸಾಮಗರೆಂದೇ ಕಲಾಲೋಕಕ್ಕೆ ಪರಿಚಿತರಿರುವ ಹರಿದಾಸ ಮಲ್ಪೆ ಶಂಕರನಾರಾಯಣ ಸಾಮಗರ ಕಲಾಜೀವನದ ಚಿತ್ರಣ ಈ ಕಿರು ಪುಸ್ತಕದಲ್ಲಿದೆ. ಸಾಮಗರು ಹರಿದಾಸರಾಗಿ ಯಕ್ಷಗಾನದ ಅರ್ಥ ಧಾರಿಯಾಗಿ ವೇಷಧಾರಿಯಾಗಿ ಕಂಡುಂಡ ಬಾಳನ್ನು ಅದರ ಸವಿಯನ್ನು ಕಹಿಸಹಿತ ಇದರಲ್ಲಿ ನಿರೂಪಿಸಿದ್ದಾರೆ.

೬೭ (೨೮). ಆತ್ಮಾರಾಮ; **ವನಿತಾ ಗೀತ ಭಾಂಡಾರ**; ಶಿರಸಿ; ಆತ್ಮಾರಾಮ ಅಮ್ಮನಳ್ಳಿ; ೧೯೪೮; ಉ. ೨+೯೪; ಈ ಕೃತಿಯಲ್ಲಿ ಶ್ರೀ ಗಉರುವಂದನಾ ಗಿರಿಜಾ ಜೋಗುಳ, ಅನ್ನಪ್ರಾಶನ, ಅಕ್ಕಿ ತೊಳಸಿ, ಅಕ್ಕತ ಕಲಿಸಿದ್ದು, ಕೇರಿ ಕರೆದದ್ದು, ಬಂಡಿ ಇಟ್ಟದ್ದು ಮೊದಲಾದ ಗೀತೆಗಳಿವೆ. ಇಲ್ಲಿಯ ಗೀತೆಗಳನ್ನು ಮೌಂಜಿ ಬಂಧನ, ವಿವಾಹ, ನಾಗವಲ್ಲಿಯ ಗೃಹ ಪ್ರವೇಶ, ಶೋಭನಪ್ರಸ್ಥ ಎಂಬ ಪ್ರಕರಣಗಳಲಿ ವಿಭಾಗಿಸಿ ೧೫೫ ಗೀತೆಗಳನ್ನು ಸಂಗ್ರಹಿಸಲಾಗಿದೆ. ಇಲ್ಲಿಯ ಗೀತೆಗಳು ಉಪದೇಶದಾಯಕವಾಗಿವೆ. ಭಾಷೆ ಸರಳವಿದೆ. ಈ ಗೀತೆಗಳ ವಿಷಯ ವೈವಿಧ್ಯಮಯವಾಗಿದೆ. ಆಧ್ಯಾತ್ಮಿಕ ದೃಷ್ಟಿಯಿಂದ ವಿಚಾರಿಸಿದರೆ ಇವು ಷಡ್ವಿಕಾರಗಳ ವಿವೇಚನಾತ್ಮಕ ವಿವರಣೆಗಳಿಂದ ಕೂಡಿವೆ.

೭೧ (೨೯). ಆನಂದರಾಮ ಉಪಾಧ್ಯ ಸಿ; **ಯಕ್ಷದರ್ಶನ**; ಬೆಂಗಳೂರು; ಕೃ; ಪ್ರಕಾಶನ; ೧೯೮೬; ಪು. ೮+೧೫೨; ಯಕ್ಷಗಾನ ಪರಪಂಚದ ಕೆಲಮಂದಿ ಮುಖ್ಯ ಕಲಾವಿದರನ್ನು ಪರಿಚಯಿಸುವ ನಿಟ್ಟಿನಲ್ಲಿ ಆನಂದರಾಜ ಉಪಾಧ್ಯಯರು ತಾವು ಹಿಂದೆ ಪ್ರಚುರ ಪಡಿಸಿದ ಒಟ್ಟು ಇಪ್ಪತ್ತು ಸಂದರ್ಶನ ಲೇಖನಗಳನ್ನು ಪೋಣಿಸಿ ಒಂದು ಮಾಲೆ ನೇಯ್ದಿರುವರು. ೧.ನಾರಣಪ್ಪ ಉಪ್ಪೂರ ೨.ರಾಮಚಂದ್ರ ನಾವಡ ೩.ದಾಮೋದರ ಮಂಡಚ್ಚ ೪.ಕಡತೋಕ ಮಂಜುನಾಥ ಭಾಗವತ ೫.ಕಾಳಿಂಗನಾವಡ, ೬.ವೀರಭದ್ರನಾಯಕ ೭.ಶಂಕರನಾರಾಯಣ ೮.ಸಾಮಗ ೯.ಶೇಣಿ ಗೋಪಾಲಕೃಷ್ಣ ಭಟ್ ೧೦.ರಾಮದಾಸಸಾಮಗ ೧೧.ಕೇರಿಕ್ಕಾಡು ಮಾಸ್ತರ್ ವಿಷ್ಣು ಭಟ್, ಕೆರೆಮನೆ ಮಹಾಬಲ ಹೆಗಡೆ ೧೨.ಕುಂಬಳೆ ಸುಂದರ ರಾವ್ ೧೩.ಕೊಳ್ಳೂರ ರಾಮಚಂದ್ರರಾವ್ ೧೪.ಕೋಟಿ ವೈಕುಂಟ ೧೫.ನಾರಾಯಣ ಭಟ್ ೧೬.ಕುಂಬಾಲು ರಾಮಕೃಷ್ಣಯ್ಯ ೧೭.ಹಿರಯಡ್ಕ ಗೋಪಾಲರಾವ್ ೧೮.ದುರ್ಗಪ್ಪ ಗುಡಿಯಾರ್ ಮುಂತಾದ ಯಕ್ಷಗಾನ ಪರಿಣತದ ಸಂದರ್ಶನ ಲೇಖನಗಳ ಸಂಕಲನವಾಗಿದೆ.

೭೨ (೩೦). ಇಬ್ರಾಹಿಂ ಎಂ. ಮುಲ್ಲಾ; **ಕರ್ನಾಟಕದ ಉರುಸುಗಳು**; ಒಂದು ಅಧ್ಯಯನ; ಧಾರವಾಡ; ಕನ್ನಡ ವಿಶ್ವವಿದ್ಯಾಲಯ ೨೦೦೦; ಪು; ೪೦೮; ಇದು ೨೦೦೦ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಮಂಡಿಸಿದ ಪಿಎಚ್.ಡಿ. ಸಂಶೋಧನ ಮಹಾಪ್ರಬಂಧ. ಇದಕ್ಕೆ ಶಾಲಿನಿ ರಘುನಾಥ ಭಟ್ ಅವರು ಮಾರ್ಗದರ್ಶಕರಾಗಿದ್ದರು. ಕರ್ನಾಟಕ ಉರುಸುಗಳನ್ನು ಕುರಿತು ಅಧ್ಯಯನಕ್ಕೊಳಗಾದ ಈ ಪ್ರಬಂಧದಲ್ಲಿ ೬ ಅಧ್ಯಾಯಗಳಿವೆ. ಇಸ್ಲಾಂಧರ್ಮ, ಸೂಫಿ ಪಂಥ, ಪೀಠ ಅಥವಾ ಮುರ್ಶದ ಹಾಗೂ ಮುರೀದ, ಸೂಫಿ ನಂತರ ಚರಿತ್ರೆಯ ಹಿನ್ನೆಲೆ ಪ್ರಪಂಚದ ಸೂಫಿ ಸಂಕ್ಷಿಪ್ತ ಚರಿತ್ರೆ, ಭಾರತದಲ್ಲಿಯ ಸೂಫಿ ನಂತರ ಸಂಕ್ಷಿಪ್ತ ರಿತ್ರೆ. ಕರ್ನಾಟಕದ ಸೂಫಿ ನಂತರ ಸಂಕ್ಷಿಪ್ತ ಚರಿತ್ರೆ, ಉರುಸು ಪದದ ಅರ್ಥ ಮತ್ತು ವ್ಯಾಖ್ಯೆ, ಕರ್ನಾಟಕದ ಪ್ರಮುಖ ಸೂಫಿ ನಂತರ ಉರುಸುಗಳು. ಉರುಸಿಗೆ ಸಂಬಂಧಿಸಿದ ಜನಪದ ಸಾಹಿತ್ಯ, ಉರುಸಿನಲ್ಲಿ ಪ್ರದರ್ಶನಗೊಳ್ಳುವ ಜನಪದ ಕಲೆಗಳು ಈ ಮೊದಲಾದ ವಿಷಯಗಳು ಇದರಲ್ಲಿವೆ.

೭೩ (೩೧). ಇಂಚಲ ಎಸ್.ಡಿ; **ಕಿತ್ತೂರ ಕ್ರಾಂತಿ**; ಕಿತ್ತೂರು ಚೆನ್ನಮ್ಮರಾಣಿ ಸ್ಮಾರಕೋತ್ಸವ ಸಮಿತಿ; ೧೯೫೭; ಪು; ೫+೧೬; ಚೆನ್ನಮ್ಮ ರಾಣಿಯ ಶೌರ್ಯವನ್ನು ವರ್ಣಿಸುವ ಲಾವಣಿಪದಗಳು ಇಲ್ಲಿವೆ.

೭೭ (೩೨). ಈರೇಗೌಡ ಡಿ.ಕೆ; **ನೂರೊಂದು ಗಿಳಿ ಮತ್ತು ಇತರ ಕಥೆಗಳು**; ಮೈಸೂರು; ಕಾದಂಬರಿ ಲೋಕ; ೧೯೭೯; ಪು. ೧೬+೧೦೫; ಹಾಸನ ತಾಲೂಕು ಮೊಸಳೆ ಹೊಸಹಳ್ಳಿಯಲ್ಲಿ ಸಂಗ್ರಹಿಸಲಾದ ೨೪ ಕಥೆಗಳು ಇದರಲ್ಲಿವೆ. ಪ್ರತಿ ಕಥೆಯಲ್ಲೂ ಕಥೆಗಾರರ ಮೂಲಧಾಟಿಯನ್ನು ಉಳಿಸಿಕೊಂಡು ಬರಲಾಗಿದೆ. ಈ ಸಂಕಲನದ ಮೊದಲ ಕಥೆಯಾದ 'ನೂರೊಂದು ಗಿಳಿಕಥೆ' ಸಂಕೀರ್ಣ ಕಥೆಗೆ ಉತ್ತಮ ಮಾದರಿಯಾಗಿದೆ. ಈ ಕಥೆಯೊಳಗೆ ಬರುವ 'ನಾಯಿ' ಮತ್ತು 'ಗಿಳಿ ಕಥೆಗಳು' ಒಂದೇ ಆಸಯವನ್ನು ಹೊಂದಿದ್ದರೂ ಭಿನ್ನರೂಪವನ್ನು ಪಡೆದು ಸ್ವತಂತ್ರಕಥೆಗಳಾಗಿವೆ. ಇದರಲ್ಲಿ ನೀತಿ ಕಥೆಗಳಿದ್ದು 'ಕಳ್ಳ' ಆದ್ರೂ ಸತ್ಯವಂತ ಹಾಗೂ 'ದಾನ' ಕಥೆಗಳು ಈ ಗುಂಪಿಗೆ ಸೇರಿದವುಗಳಾಗಿವೆ. ಆಲೂರ ಕಳ್ಳ ಬೇಲೂರ ಕಳ್ಳ, 'ಹರಿನಾರಾಯಣ' ಇತ್ಯಾದಿ ಕಥೆಗಳು ಬುದ್ಧಿವಂತಿಕೆಯ ಚಮತ್ಕಾರದ ಕಥೆಗಳಾಗಿವೆ. 'ವೈಭಿಚಾರದ ಮಗು', 'ಮಡಿವಾಳ' 'ಸಾಧುಶಿಷ್ಯ' 'ಗದ್ದೆ ಮ್ಯಾಗ್ಲ ಕತ್ತೆ'ಮೊದಲಾದ ಸರಳ ಕಥೆಗಳೂ ಇದರಲ್ಲಿವೆ. 'ಕುದ್ರೆಮೊಟ್ಟೆ', 'ನಗ್ಗೆಯೆರಡು ನಿನಗೊಂದು', 'ಪೆದ್ದಮಗ' ಮೊದಲಾದ

ವಿನೋದ ಕಥೆಗಳು ಹಾಗೂ 'ನಳ್ಳಿಕಥೆ' ಎಂಬ ಅತಿಮಾನುಷ ಕಥೆ ಕೂಡ ಈ ಸಂಕಲನದಲ್ಲಿ ಸೇರ್ಪಡೆಯಾಗಿದೆ.

೭೮ (೩೩). ಈಶ್ವರ ಪಿ; **ಮೈಸೂರು ನಗರದ ಗರಡಿಗಳು**; ಸಾಂಸ್ಕೃತಿಕ ಅಧ್ಯಯನ, ಮೈಸೂರು; ಮೈಸೂವು ವಿಶ್ವವಿದ್ಯಾಲಯ; ೨೦೦೨; ಪು; ೨೫೩; ೨೦೦೨ರಲ್ಲಿ ಹಿ.ಶಿ. ರಾಮಚಂದ್ರೇಗೌಡ ಅವರ ಮಾರ್ಗದರ್ಶನದಲ್ಲಿ ಈಶ್ವರ ಪಿ. ಅವರು ಸಿದ್ಧಪಡಿಸಿದ 'ಮೈಸೂರು ನಗರದ ಗರಡಿಗಳು; ಸಾಂಸ್ಕೃತಿಕ ಅಧ್ಯಯನ' ಎನ್ನುವ ಸಂಶೋಧನ ಮಹಾಪ್ರಬಂಧಕ್ಕೆ ಮೈಸೂರು ವಿಶ್ವವಿದ್ಯಾಲಯ ಪಿಎಚ್.ಡಿ. ಪದವಿ ನೀಡಿದೆ. ಗರಡಿ ಮತ್ತು ಗರಡಿ ಕಲೆಯ ಪ್ರಾಚೀನತೆ, ಮೈಸೂರಿನ ಪ್ರಸಿದ್ಧ ಪೈಲ್ವಾನರ ವಿವರ, ಕಸರತ್ತುಗಳ ವಿಚಾರ, ಪಟ್ಟುಗಳ ಪಾತ್ರ, ಪೈಲ್ವಾನರ ಆಹಾರ ಪದ್ಧತಿ, ಕುಸ್ತಿ ಕಲೆಗೆ ರಾಜಮಹಾರಾಜರ ಕೊಡುಗೆ ಮೊದಲಾದ ಅಧ್ಯಾಯಗಳಿವೆ.

೭೯ (೩೪). ಈಶ್ವರ ಎನ್. ಜೋಶಿ; **ದಕ್ಷಿಣ ಕನ್ನಡದ ಕುಡುಬಿಯರು**; ಬೆಂಗಳೂರು; ಐ.ಬಿ.ಎಚ್. ಪ್ರಕಾಶನ; ೧೯೯೩; ಪು; ೪೭; ಈ ಕೃತಿಯಲ್ಲಿ ಕುಡುಬಿಯರು ಜನಾಂಗದ ವಾಸಸ್ಥಳ, ಭಾಷೆ, ಧಾರ್ಮಿಕ ಸಂಪ್ರದಾಯಗಳು ವೇಷಭೂಷಣಗಳೂ, ಆಹಾರ, ವಸತಿ ಅವರ ಜೀವನಕ್ರಮ, ಬೇಟೆಯ ವಿಧಾನ, ಸಾಕುಪ್ರಾಣಿಗಳು ಮುಂತಾದ ವಿವರಗಳನ್ನು ನೀಡಿದ್ದಾರೆ. ಇದು ಕುಡುಬಿ ಜನಾಂಗದ ಪೂರ್ಣ ಪರಿಚಯವನ್ನು ನೀಡುತ್ತದೆ.

೮೦ (೩೫). ಈಶ್ವರಚಂದ್ರ ಚಿಂತಾಮಣಿ; **ಗರತಿಯರ ಮನೆಯಿಂದ**; ಜಮಖಂಡಿ ಕನ್ನಡ ಸಾಹಿತ್ಯ ಸೇವಾ ಸದನ; ೧೯೫೫; ಪು; ೧೪+೧೧೪; ಇದರಲ್ಲಿ ಗರತಿಯರ ಮನೆಯಿಂದ ಜನಪ್ರಿಯ ಜನಪದ ಸಾಹಿತ್ಯ ಮತ್ತು ಬಡವರ ಬಾಳಿನಿಂದ ಎಂಬ ಮೂರು ಲೇಖನಗಳೊಡನೆ ಗೀತೆಗಳು, ಶಿಶುಪ್ರಾಸಗಳು ಮತ್ತು ಒಡಪುಗಳಿವೆ. ಸಂಕೀರ್ಣ ಮತ್ತು ಅರ್ಥಕೋಶವಿದೆ.

೮೫ (೩೬). ಈಶ್ವರಪ್ಪ ಎಂ.ಜಿ.; **ಜಾನಪದ ಗಂಗೋತ್ರಿ (ಸಂ. ೯, ಸಂ. ೩)**; ಬೆಂಗಳೂರು; ಕರ್ನಾಟಕ ಜಾನಪದ ಮತ್ತುಯಕ್ಷಗಾನ ಅಕಾಡೆಮಿ; ೧೯೯೭; ಪು; ೧೪೬; ಇದು ಸೆಪ್ಟಂಬರ್ ೧೯೯೭ರ ೩ನೇ ಸಂಪುಟ ೯ನೇ ಸಂಚಿಕೆ. ಇದರಲ್ಲಿ ಬೇರೆ ಬೇರೆ ಜಾತಿ, ಜನಾಂಗ, ಬುಡಕಟ್ಟುಗಳ ಹಾಗೂ ಪ್ರದೇಶಗಳ ಜನರ ಶವಸಂಸ್ಕಾರ ಪದ್ಧತಿಗಳ ವಿವರವಾದ ಮಾಹಿತಿಗಳನ್ನು ಒಳಗೊಂಡ ೧೫ ಲೇಖನಗಳಿವೆ. ಮಲೆನಾಡ ಒಕ್ಕಲಿಗರು, ಬೇಡರು, ಕೊರವರು, ಹೆಳವರು, ಗೊರವರು, ಕ್ರೈಸ್ತರು, ವೀರಶೈವರು, ಕಾಡುಗೊಲ್ಲರು, ಒಕ್ಕಲಿಗರು ಆದಿವರು, ಮಲೆನಾಡ ದೇವರು ಮೊದಲಾದ ಪಂಗಡಗಳ ಶವಸಂಸ್ಕಾರ ಪದ್ಧತಿಗಳನ್ನು ವಿವಿಧಲೇಖಕರು ಬರೆದಂಥ ಲೇಖನಗಳಲ್ಲಿ ವಿವರಿಸಲಾಗಿದೆ.

೮೬ (೩೭). ಈಶ್ವರಪ್ಪ ಎಂ.ಜಿ; **ಜಾನಪದ ಗಂಗೋತ್ರಿ ಸ–೯, ಸಂ–೩**; ಬೆಂಗಳೂರು; ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ; ೧೯೯೭; ಪು; ೧೦೫; ಈ ಗ್ರಂಥದಲ್ಲಿ ಕನ್ನಡ ಸಾಹಿತ್ಯದ ಪ್ರಾಚೀನ ಸಂಕಲನಗಳಲ್ಲಿ ಹೊಮ್ಮಿರುವ ಜಾನಪದ ಕುರಿತು ಲೇಖನಗಳಿಂದ ಹಿಡಿದು ಕೊರಮ ಜನಾಂಗದ ಬೇಟೆ ಅಧ್ಯಯನ ಗಾಳಿ ಅಧ್ಯಯನ, ತೊಗಲುಗೊಂಬೆ, ಗಣಿಕಲೆ ಮತ್ತು ಗಾದೆಗಳನ್ನು ಕುರಿತು ಲೇಖನಗಳಿವೆ.

೮೭ (೩೮). ಈಶ್ವರಪ್ಪ ಎಂ.ಜಿ; **ಜಾನಪದ ಗಂಗೋತ್ರಿ ಸಂ–೯, ಸಂ–೪**; ಬೆಂಗಳೂರು; ಕರ್ನಾಟಕ ಜಾನಪದ ಮತ್ತುಯಕ್ಷಗಾನ ಅಕಾಡೆಮಿ; ೧೯೯೮; ಪು; ೧೯೨; ಈ ಕೃತಿಯಲ್ಲಿ

ಬಳ್ಳಾರಿಯಲ್ಲಿ ನಡೆದ ಮುಸ್ಲಿಂ ಜಾನಪದ ಕುರಿತು ವಿಚಾರ ಸಂಕಿರಣದಲ್ಲಿ ಮಂಡಿಸಿದ ಲೇಖನಗಳಿವೆ. ಇದರಲ್ಲಿ ೯ ಲೇಖನಗಳು ಮುಸ್ಲಿಂರ ಬಗ್ಗೆ ಇವೆ. ಉಳಿದಂತೆ ೫ ಇತರ ಲೇಖನಗಳು ಇಲ್ಲಿ ಸೇರಿವೆ ಹಾಗೂ ಒಂದು ಕಥೆ ಸಹ ಇದೆ.

೮೮ (೩೯). ಈಶ್ವರಪ್ಪ ಎಂ.ಜಿ; **ಜಾನಪದ ಗಂಗೋತ್ರಿ**; ಬೆಂಗಳೂರು; ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ; ೧೯೯೮; ಪು; ೧೯೦; ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ವತಿಯಿಂದ ಪ್ರಕಟಗೊಳ್ಳುವ ಪತ್ರಿಕೆ ಇದೆ. ಪ್ರಸ್ತುತ ಗ್ರಂಥ ೧೯೯೪ರ ಮಾರ್ಚ್ ತಿಂಗಳ ಸಂಚಿಕೆ. ಇದರಲ್ಲಿ ೧೫ ವಿಷಯಗಳಣ್ಣು ಕುರಿತ ವೈವಿಧ್ಯಮಯ ಲೇಖನಗಳಿವೆ. ಈ ಕ್ಷೇತ್ರದಲ್ಲಿ (ಜಾನಪದ) ಸಾಕಷ್ಟು ಕೃಷಿ ನಡೆಸಿರುವ ಬಹುಮುಖ್ಯ ವಿದ್ವಾಂಸರಿಂದ ಲೇಖನಗಳನ್ನು ಬರೆಸಲಾಗಿದೆ. ಜಾನಪದದ ವಿವಿಧ ಮುಖಗಳನ್ನು ಪರಿಚಯಿಸುವಲ್ಲಿ ಪ್ರಸ್ತುತ ಸಂಚಿಕೆಯ ಲೇಖನಗಳು ಮಹತ್ವದ ಆಕರಗಳಾಗಿವೆ. ಕರ್ನಾಟಕ ಜಾನಪದ ಶ್ರೀಮಂತಿಕೆಯಿಂದ ಕೂಡಿದ್ದು, ಅದನ್ನು ಸಂಗ್ರಹಿಸಬೇಕಾದ ಸಂಪಾದಿಸಬೇಕಾದ, ವಿಶ್ಲೇಷಿಸಬೇಕಾದ ಮಾಹಿತಿ ಇನ್ನೂ ಅಪಾರವಾಗಿದೆ ಎಂಬುದನ್ನು ಇಲ್ಲಿಯ ಲೇಖನಗಳು ಪ್ರಕಟಪಡಿಸುತ್ತವೆ.

೮೯ (೪೦). ಉತ್ನಾಳ ಸಿದ್ದಣ್ಣ ಬಿ; **ಜೈನ ಜನಪದ ಹಾಡುಗಳು**; ಅಥಣಿ; ಅನುಪಮ ಪ್ರಕಾಶನ; ೧೯೯೦; ಪು; ೫೮+೭; ಇದು ಜೈನ ಜನಪದ ಗೀತೆಗಳ ಸಂಗ್ರಹವಾಗಿದೆ. ಇದರಲ್ಲಿ ಒಟ್ಟು ೨೮ ಪದಗಳಿವೆ. ಕೃಷ್ಣಾನದೀ ತೀರದಲ್ಲಿರುವ ಜೈನ ಕುಟುಂಬಗಳಿಂದ ಸಂಗ್ರಹಿಸಿದ ಹಾಡುಗಳಿವೆ. ಈ ಹಾಡುಗಳಲಿ ಜೈನರ ಧರ್ಮ, ಬದುಕು, ಸಂಸ್ಕೃತಿ ಹಾಗೂ ಪ್ರಾದೇಶಿಕತೆ ಹಾಸುಹೊಕ್ಕಾಗಿರುವುದನ್ನು ಕಾಣಬಹುದು. ತೀರ್ಥಂಕರರನ್ನು ಕುರಿತು, ಬೀಸುವ ಕಲ್ಲಿನ ಹಾಡು, ಬಾಹುಬಲಿ ಕುರಿತು, ಅರಹಂತ, ಸಿದ್ಧರ ಕುರಿತು, ಪಂಚಕಲ್ಯಾಣ ಮಹೋತ್ಸವ, ಜೈನ ತೀರ್ಥಕ್ಷೇತ್ರ, ತೇರೂರ, ಪದ್ಮಾವತಿ, ಕೋಲಾಟ, ಆರತಿ, ಉಡಿತುಂಬುವ ಮದುವೆ ಮಾಡುವ, ತೇಂದಿ ಭರಮಪ್ಪ, ಪೂಜೆ ಹಬ್ಬ ಹರಿದಿನಗಳ, ಸಂಸ್ಕಾರಗಳ ಕುರಿತು, ಗ್ರಾಮದ ಬಸದಿಯ ಕುರಿತು– ಹೀಗೆ ಸಂಪೂರ್ಣ ಜೈನ ಪ್ರಪಂಚವೇ ಈ ಹಾಡುಗಳಲ್ಲಿ ತೆರೆದುಕೊಂಡಿದೆ.

೯೦ (೪೧). ಉಪಾಧ್ಯಾಯ ಕೆ.ಎಸ್.; **ನಮ್ಮೂರ ಯಕ್ಷರು**; ಮಂಗಳೂರು; ಸಿದ್ಧಾರ್ಥ ಪ್ರಕಾಶನ; ೧೯೮೭; ಪು. ೩೮+೧೦೦+೧೭+೧೮=೧೭೩; ಯಕ್ಷಗಾನಕ್ಕೆ ಸಂಬಂಧಿಸಿದಂತೆ ೯ ಭಾಗಗಳನ್ನು ಒಳಗೊಂಡ ಕೃತಿ

೯೧ (೪೨). ಉಪಾಧ್ಯಾಯ ಕೆ.ಎಸ್; **ಜಾನಪದ ಕಲೆ–ಬದುಕು**; ಪುತ್ತೂರು; ಕರ್ನಾಟಕ ಸಂಘ; ೧೯೯೪; ಪು; ೧೨೪; ಈ ಕೃತಿಯಲ್ಲಿ ಒಟ್ಟು ೧೮ ಲೇಖನಗಳಿವೆ. ಇಲ್ಲಿನ ಎರಡು ಲೇಖನಗಳನ್ನು ಹೊರತುಪಡಿಸಿ ಉಳಿದವು ಜಾನಪದ ಕಲೆಗಳಿಗೆ ಸಂಬಂಧಿಸಿದವುಗಳು. ಲೇಖಕರು ಇಲ್ಲಿ ಯಕ್ಷಗಾನ, ಬಯಲಾಟ, ವಿಶ್ವವ್ಯಾಪಿ ಗೊಂಬೆಯಾಟ, ಕರ್ನಾಟಕದಲ್ಲಿ ಗೊಂಬೆಯಾಟ, ನಾಗಮಂಡಲ, ಭುತಾರಾಧನೆ, ಕೋಳಿ ಅಂಕ, ಒತ್ತೆಕೋಲ, ಹಾಂಕಾಂಗ್‌ನಲ್ಲಿ ಯಕ್ಷಗಾನ ವಿಷಯ ಎಂಬ ಲೇಖನಗಳನ್ನು ಸವಿವರವಾಗಿ ನೀಡಿರುವರು.

೯೨ (೪೩). ಉಪೇಂದ್ರ ಪೆರಣಂಕಿಲ; **ತುಳುನಾಡು ಮತ್ತು ಕೊಡಗಿನಲ್ಲಿ ವಾಸಿಸುತ್ತಿರುವ ಪರಿವಾರ; ಬಂಟ ಜನಾಂಗದ ಜಾನಪದದ ತೌಲನಿಕ ಅಧ್ಯಯನ**; ಮಂಗಳುರು; ಮಂಗಳೂರು ವಿಶ್ವವಿದ್ಯಾಲಯ. ೧೯೯೬ರಲ್ಲಿ ಮಂಗಳೂರು ವಿಶ್ವವಿದ್ಯಾಲಯಕ್ಕೆ ಮಂಡಿದ ಪಿಎಚ್.ಡಿ. ಸಂಶೋಧನ ಮಹಾಪ್ರಬಂಧ ಕೆ. ಸುಬ್ರಹ್ಮಣ್ಯ ಭಟ್ಟ ಈ ಮಹಾಪ್ರಬಂಧದ ರಚನೆಗೆ

ಮಾರ್ಗದರ್ಶಕರಾಗಿದ್ದರು. ತುಳು ಮತ್ತು ಕೊಡಗಿನ ಪರಿವಾರ ಬಂಟ ಜನಾಂಗದ ಜಾನಪದದ ತೌಲನಿಕ ಅಧ್ಯಯನ ಇದಾಗಿದೆ. ಎಲ್ಲ ಅಧ್ಯಾಯಗಳಲ್ಲಿ ಪರಿವಾರ ಬಂಟರ ಸ್ಥೂಲ ಪರಿಚಯ ಹಿನ್ನೆಲೆ, ವಲಸೆ, ಸಾಮಾಜಿಕ ವ್ಯವಸ್ಥೆ, ಆಹಾರ ಪದ್ಧತಿ, ವಸ್ತುಕಲೆ, ಉಡುಗೆ, ತೊಡುಗೆ, ಕಸುಬು, ಕ್ರೀಡೆ, ಕಂಬಳ, ಕೋಳಿ ಅಂಕ, ಬೇಟೆ, ಪ್ರದರ್ಶನಾತ್ಮಕ ಕಲೆ, ಪ್ರಮುಖ ಆಚರಣೆ, ಜೀವನಾವರ್ತದ ಆಚರಣೆ, ಹಬ್ಬಹರಿದಿನಗಳು, ಭಾಷೆ ಮತ್ತು ಸಾಹಿತ್ಯ ಮೊದಲಾದ ವಿಷಯಗಳನ್ನು ಕುರಿತು ಚರ್ಚಿಸಲಾಗಿದೆ.

೯೩ (೪೪). ಉಮಾಪತಿ ಕೆ.ಎಸ್; **ಸೋಮಶೇಖರ ಚಿತ್ರಸೇಖರ ಯಕ್ಷಗಾನ**; ಬೆಂಗಳೂರು; ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ; ೧೯೮೦; ಪು; ೨೫+೧೯೨; ಸೋಮಶೇಖರ ಚಿತ್ರಸೇಖರ ಯಕ್ಷಗಾನ ಅದರ ಹೆಸರೇ ಸೂಚಿಸುವಂತೆ ಯಕ್ಷಗಾನದ ದಾಟಿಯಲ್ಲಿರುವ ಒಂದು ವಿಶಿಷ್ಟ ಕೃತಿ. ಇದಲ್ಲಿ ಆರು ಸಂಧಿಗಳು, ೧೦೫೩ ಪದಗಳು ಇವೆ. 'ಚೋರಕತೆ' ಎಂತಲೂ ಈ ಕಾವ್ಯವನ್ನು ಕರೆದಂತೆ ತೋರುತ್ತದೆ.

೧೦೧ (೪೫); ಓಂಕಾರನಾಯ್ಕ. ಎಚ್; **ಚಂದ್ರಗುತ್ತಿ ಕ್ಷೇತ್ರದ ಜನಪದೀಯ ಅಧ್ಯಯನ**; ಶಿವಮೊಗ್ಗ; ಕುವೆಂಪು ವಿಶ್ವವಿದ್ಯಾಲಯ; ೨೦೦೩-೦೪; ಇನ್ನೂ ಸಂಶೋಧನೆಯ ಕಾರ್ಯ ಮುಂದುವರಿದಿರುವ ಮಹಾಪ್ರಬಂಧ. ಇದರ ಮಾರ್ಗದರ್ಶಕರು ಸಣ್ಣರಾಮ ಅವರು. ಕುವೆಂಪು ವಿಶ್ವವಿದ್ಯಾಲಯಲ್ಲಿ ಪ್ರಗತಿಯಲ್ಲಿರುವ ಈ ಪಿಎಚ್.ಡಿ. ಮಹಾಪ್ರಬಂಧದಲ್ಲಿ ಚಂದ್ರಗುತ್ತಿ ಹಾಗೂ ಅದರ ಸುತ್ತಲಿನ ಪ್ರದೇಶಗಳನ್ನು ಜಾನಪದ ಅಧ್ಯಯನಕ್ಕೆ ಒಳಪಡಿಸಿರುವುದು ಕಂಡುಬರುತ್ತದೆ. ಚಂದ್ರಗುತ್ತಿ ಕ್ಷೇತ್ರದ ಭೌಗೋಳಿಕ, ಚಾರಿತ್ರಿಕ, ಸಾಂಸ್ಕೃತಿಕ ಹಿನ್ನೆಲೆ, ನಾಥಪಂಥದ ಸಂಬಂಧ, ಚಂದ್ರಗುತ್ತಿ ಮತ್ತು ಎಲ್ಲಮ್ಮನ ಅಂತರ್ ಸಂಬಂಧ, ಜಾತ್ರೆ, ಹಬ್ಬಗಳು, ತಾತ್ವಿಕ ಚಿಂತನೆ, ಆಚರಣೆಗಳು ಸಂಪ್ರದಾಯಗಳನ್ನು ಜಾನಪದ ಅಧ್ಯಯನದ ತಿಳಿವಳಿಕೆಯ ಹಿನ್ನೆಲೆಯಲ್ಲಿ ಚಿಂತನೆಗೆ ಒಳಪಡಿಸಿರುವುದು ಕಂಡುಬಂದಿದೆ.

೧೦೩ (೪೬). ಕನರಾಡಿ ವಾದಿರಾಜ ಭಟ್ಟ; **ಮೂಕಜ್ಜಿ**; ಮಂಗಳೂರು; ಪ್ರಸಾರಾಂಗ ವಿಶ್ವವಿದ್ಯಾಲಯ ೧೯೯೮; ಪು; ೭೨; ಇದು ಮೂಕಜ್ಜಿ ಎಂಬ ಹಾಡುಗಾರ್ತಿಯ ಬಗೆಗಿನ ಪುಸ್ತಕವಾಗಿದೆ. ಕುಂದಾಪುರದ ಹತ್ತಿರದ ಉಳೂರಿನ ಉಳ್ಳೂರು ಮೂಕಾಂಬಿಕಾ ಐತಾಳರು ಎಂಬ ಸಂಪ್ರದಾಯದ ಹಾಡುಗಾರ್ತಿಯ ಬದುಕು ಮತ್ತು ಹಾಡುಗಳ ಕುರಿತಾದ ವಿಶ್ಲೇಷಣೆ ಈ ಪುಸ್ತಕದಲ್ಲಿದೆ.

೧೦೫ (೪೭). ಕಮಲಾ ಹೆಮ್ಮಿಗೆ; **ಮಂಗಳದ ಮಾದರ (ಚೌಡಕಿ ಪದಗಳು)**; ಧಾರವಾಡ; ಸಮಾಜ ಪುಸ್ತಕಾಲಯ; ೧೯೯೩; ಪು; ೬೫; ಚೌಡಕಿ ಎಲ್ಲಮ್ಮನ ಪ್ರೀತಿಯ ವಾದ್ಯ ಇದನ್ನು ಉತ್ತರ ಕರ್ನಾಟಕದಲ್ಲಿ ಚೌಡಕಿ ಎಂದು ಕರೆಯುತ್ತಾರೆ. ಇದು ಮಾದರು, ಕುರುಬರು, ಹರಿಜನರು ನುಡಿಸುವಂಥ ಧರ್ಮ ಮತ್ತು ತಂತಿವಾದ್ಯವಾಗಿದೆ. ಚೌಡಕಿ ಪದಗಳಲ್ಲಿ ಚರಿತ್ರೆಗೆ ಸಂಬಂಧಿಸಿದ ಹಾಗೂ ಸ್ತುತಿಪರವಾದ ಹಾಡುಗಳಿವೆ. ಈ ಪುಸ್ತಕದಲ್ಲಿ ಒಟ್ಟು ೧೬ ಹಾಡುಗಳಿವೆ.

೧೦೯ (೪೮). ಕಮಲಾ ಹೆಮ್ಮಿಗೆ; **ಬಣ್ಣಭರಣೆ**; ಧಾರವಾಡ; ಯಕ್ಷಪ್ರಕಾಶನ, ೧೯೯೬; ಪು; ೯೮; ಈ ಕೃತಿಯಲ್ಲಿ ಲೇಖಕಿ ಹೆಣ್ಣುಮಕ್ಕಳ ಹಾಡುಗಳನ್ನು ಸಂಗ್ರಹಿಸಿದ್ದಾರೆ. ಇವು ಧಾರವಾಡದ ಸುತ್ತಮುತ್ತ ಪ್ರಚಲಿತವಿರುವ ಗೀತೆಗಳಾಗಿವೆ. ಇಲ್ಲಿ ಒಟ್ಟು ೩೪ ಗೀತೆಗಳಿದ್ದು, ಇವುಗಳನ್ನು ಸ್ತುತಿಪರಹಾಡುಗಳು, ಸೋಬಾನೆ ಹಾಡುಗಳೂ, ಹಾಗೂ ಇತರ ಸಂದರ್ಭಗಳು ಎಂದು ಮೂರು ವಿಭಾಗಗಳಲ್ಲಿ ವರ್ಗೀಕರಿಸಿದ್ದಾರೆ.

೧೧೨ (೪೯). ಕಮಲಾಕ್ಷಪ್ಪ ಪಿ; **ದಕ್ಷಿಣ ಕನ್ನಡ ಜಿಲ್ಲೆಯ ಹರಿಜನ ಮತ್ತು ಗಿರಿಜನರ ಸಾಮಾಜಿಕ ಇತಿಹಾಸ**; ೧೯೬೮; ಪುಟ; ೧೬೨; ದಕ್ಷಿಣ ಕನ್ನಡ ಜಿಲ್ಲೆಯ ಹರಿಜನ-ಗಿರಿಜನರ ಪೂರ್ವ ಇತಿಹಾಸ ಸಾಮಾಜಿಕ ಆಚಾರ, ವಿಚಾರ ಮತ್ತು ಸಮಾಜದ ಕಟ್ಟು ನೀತಿಗಳ ಸಂಕ್ಷಿಪ್ತ ವಿವರ ಈ ಕೃತಿಯಲ್ಲಿದೆ. ದಕ್ಷಿಣ ಕನ್ನಡದಲ್ಲಿರುವ ೩೩ಕ್ಕೂ ಹೆಚ್ಚಿನ ಹರಿಜನ-ಗಿರಿಜನ ಗುಂಪುಗಳನ್ನು ಗುರುತಿಸಿ ಅವುಗಳ ವಿವರಗಳನ್ನು ನೀಡಲಾಗಿದೆ. ಕೊರಗರು, ಮಲೆಕುಡಿಯರು, ಮಾದಿಗರು, ಹಸ್ಲರು ಸೇರಿದಂತೆ ಹಲವಾರು ಬುಡಕಟ್ಟುಗಳ ವಿವರಗಳಿವೆ.

೧೬೦ (೫೦). ಕರೀಗೌಡ ಬೀಜನಹಳ್ಳಿ; **ಜಾತ್ರೆಗಳು**; ಬೆಂಗಳೂರು; ಕನ್ನಡ ಸಾಹಿತ್ಯ ಪರಿಷತ್ತು; ೧೯೭೯; ಪುಟ; ೩೦; ಇದು ಜಾತ್ರೆಯ ಸ್ಥೂಲ ಪರಿಚಯವನ್ನೊಳಗೊಂಡ ಕೃತಿ.

೧೬೧ (೫೧). ಕಲಬುರ್ಗಿ ಎಂ.ಎಂ.; **ಗೋವಿನಹಾಡು**; ಬೆಂಗಳೂರು ಕನ್ನಡ ಸಾಹಿತ್ಯ ಪರಿಷತ್ತು; ೧೯೭೨; ಪುಟ; ೬+೨೦; ಗೋವಿನ ಕಥೆಯ ೧೧೪ ಪದ್ಯಗಳಿವೆ. ಈ. ನಾರಾಯಣ ಅವರ ಪ್ರಸ್ತಾವನೆಯಿದೆ. ರಂ. ಶ್ರೀ ಮುಗಳಿ ಅವರ ಮುನ್ನುಡಿಯಿದೆ.

೧೬೭ (೫೨). ಕಲವೀರ ಮನ್ವಾಚಾರ; **ಮಾತೃದೇವತಾ ಆರಾಧನೆ (ಉಗಮ ಮತ್ತು ವಿಕಾಸ)**; ಹಂಪಿ; ಕನ್ನಡ ವಿಶ್ವವಿದ್ಯಾಲಯ; ೨೦೦೨; ಪು; ೪+೨೫೪; ೨೦೦೨ರಲ್ಲಿ ಕನ್ನಡ ವಿಶ್ವವಿದ್ಯಾಲಯದಿಂದ ಮಂಜುನಾಥ ಬೇವಿನಕಟ್ಟಿ, ಅವರ ಮಾರ್ಗದರ್ಶನದಲ್ಲಿ ರಚನೆಗೊಂಡ ಪಿಎಚ್.ಡಿ. ಸಂಶೋಧನ ಮಹಾಪ್ರಬಂಧ. ಮಾತೃದೇವತೆಯ ಉಗಮ-ವಿಕಾಸ, ದೇವತೆಗಳ ವರ್ಗೀಕರಣ, ಮಾತೃದೇವತೆ ಆರಾಧನೆಗೆ ಕಾರಣಗಳು ಎಂಬ ವಿಭಾಗಗಳನ್ನಾಗಿ ಮಥಿ, ಜನಪದ ಪರಂಪರೆ, ಜನಪದ ದೈವಗಳ ಶಿಷ್ಟ ಹಾಗೂ ಜನಪದ ಪರಂಪರೆ ದೈವಗಳು, ಮಾತೃ ಪ್ರಧಾನ ಸಮಾಜ, ವೇದಕಾಲೀನ ಸಮಾಜ, ವೇದೋತ್ತರ ಸಮಾಜ, ಬಂಡಕಟ್ಟುಗಳ ಸಮಾಜ ಮುಂತಾದ ವಿಷಯಗಳನ್ನು ವಿವರವಾಗಿ ಚರ್ಚಿಸಿದ್ದಾರೆ.

೧೬೮ (೫೩). ಕಲ್ಲಪ್ಪ ಎನ್.; **ಅಡ್ಲಟ್ಟಿ ಮ್ಯಾಸ ಬೇಡರು-ಒಂದು ಸಮುದಾಯ ಅಧ್ಯಯನ**; ಹಂಪಿ, ಸಮಾಜ ವಿಜ್ರಾಇಆನಗಳ ನಿಕಾಯ ಕನ್ನಡ ವಿಶ್ವವಿದ್ಯಾಲಯ ೨೦೦೩; ಪುಟ; ೯೫; ಈ ಸಂಪ್ರಬಂಧದಲ್ಲಿ ಚಿತ್ರದುರ್ಗ ಜಿಲ್ಲೆಯ ಮ್ಯಾಸಬೇಡರ ಕುರಿತು ಅಧ್ಯಯನ ಮಾಡಲಾಗಿದೆ. ಇದರಲ್ಲಿ ಒಟ್ಟು ೫ ಅಧ್ಯಾಯಗಳಿವೆ. ಅಡ್ಲಟ್ಟಿ ಮ್ಯಶಬೇಡರ ಸಮುದಾಯದ ಜನಾಂಗಿಕ ಹಿನ್ನೆಲೆ, ಭೌಗೋಳಿಕ ಪರಿಸರ ಮೂಲ, ಪರಂಪರೆ, ಜನಸಂಖ್ಯೆ, ನೆಲೆಗಳು, ಕೌಟುಂಬಿಕ ವ್ಯವಸ್ಥೆ, ಧಾರ್ಮಿಕ ವ್ಯವಸ್ಥೆ, ಆರ್ಥಿಕ ವ್ಯವಸ್ಥೆ, ಸಾಂಸ್ಕೃತಿಕ ಬದುಕು-ಪರಂಪರೆಯನ್ನು ಸಷ್ಟಪಡಿಸಲಾಗಿದೆ. ಇವರ ಜೀವನ ವಿಧಾನ ಮತ್ತು ಸಾಮಾಜಿಕ ವ್ಯವಸ್ಥೆಯಲ್ಲಿ ಉಡುಗೆ-ತೊಡುಗೆ, ಆಹಾರ ಪದ್ಧತಿ, ವಸತಿ ವ್ಯವಸ್ಥೆ, ನ್ಯಾಯ ಪದ್ಧತಿ, ವಿಧಿ-ನಿಷೇಧಗಳ ಕುರಿತು ವಿವರವಾಗಿ ಚರ್ಚಿಸಲಾಗಿದೆ.

೧೭೨ (೫೪). ಕಲ್ಯಾಣ ಸುಂದರಂ ಎಂ.ಎಲ್; **ಇಲಿಗಳ ಮದುವೆ ಮತ್ತು ಇತರ ಕಥೆಗಳು**; ಬೆಂಗಳೂರು; ಐ.ಬಿ.ಎಚ್.;ರಕಾಶನ; ೧೯೭೧; ಪುಟ; ೫೬; ಇಲ್ಲಿ ಏಳು ಕಥೆಗಳು ಮತ್ತು ಚಿತ್ರಗಳಿವೆ.

೧೭೬ (೫೫). ಕಾಲೊಗಸ್ ಎಸ್; **ಕನ್ನಡ ಮತ್ತು ತಮಿಳು ಭಾಷೆಗಳ ರಚನಾತ್ಮಕ ಅಭ್ಯಾಸ**; ಬೆಂಗಳೂರು; ಬೆಂಗಳೂರು ವಿಶ್ವವಿದ್ಯಾಲಯ; ೧೯೮೪; ಪುಟ; ೩೫೭ ಇದು ೧೯೮೪ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಮಂಡಿಸಲಾದ ಪಿಎಚ್.ಡಿ. ಸಂಶೋಧನ ಮಹಾಪ್ರಬಂಧ. ಇದಕ್ಕೆ ಎಂ.ಚಿದಾನಂದಮೂರ್ತಿ, ಎಸ್.ವಿ. ಸಲುಬ್ರಹ್ಮಣ್ಯ ಇವರು

ಮಾರ್ಗದರ್ಶಕರಾಗಿದ್ದರು. ಜಾನಪದ ಎರಡು ಅಭ್ಯಾಸಗಳು, ತಮಿಳು ಮತ್ತು ಕನ್ನಡ ಜಾನಪದಗಳ ಮೂಲ ಅಧ್ಯಯನ. ತಮಿಳು ಮತ್ತು ಕನ್ನಡ ಜಾನಪದ ರಚನಾತ್ಮಕ ವಿಶ್ಲೇಷಣೆ ಮೊದಲಾದ ವಿಷಯಗಳಣ್ಣು ಇಲ್ಲಿ ಅಧ್ಯಯನ ಮಾಡಲಾಗಿದೆ.

೧೮೪ (೫೬). ಕಾಳೇಗೌಡ ನಾಗವಾರ; **ಕಾಡುಗೊಲ್ಲರ ಜಾನಪದ**; ಒಂದು ಅಧ್ಯಯನ; ಬೆಂಗಳೂರು; ಬೆಂಗಳೂರು ವಿಶ್ವವಿದ್ಯಾಲಯ; ೧೯೮೪; ಪಟ; ೨೫೦; ಇದು ೧೯೮೪ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಮಂಡಿಸಲಾದ ಪಿಎಚ್.ಡಿ. ಸಂಶೋಧನ ಮಹಾಪ್ರಬಂಧ. ಜಿ.ಎಸ್. ಶಿವರುದ್ರಪ್ಪ ಅವರು ಇದಕ್ಕೆ ಮಾರ್ಗದರ್ಶಕರಾಗಿದ್ದರು. ಕಾಡುಗೊಲ್ಲರ ಜನಾಂಗವನ್ನು ಜಾನಪದೀಯವಾಗಿ ಅಧ್ಯಯನ ಮಾಡಲಾದ ಈ ಪ್ರಬಂಧದಲ್ಲಿ ೧೦ ಅಧ್ಯಾಯಗಳಿವೆ.

೧೮೫ (೫೭). ಕಾಳೇಗೌಡ ನಾಗವಾರ ಮತ್ತು ದೇವೇಂದ್ರ ಕುಮಾರ ಹಕಾರಿ; **ಜಾನಪದ ಗಂಗೋತ್ರಿ (ವಿಶೇಷ ಸಂಚಿಕೆ)**; ಬೆಂಗಳೂರು; ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ; ೧೯೮೮; ಪುಟ; ೧೩೫; ಜಾನಪದದ ವಿವಿಧ ಮುಖಗಳನ್ನು ವಿಶ್ಲೇಷಿಸುವಂಥ ೯ ಲೇಖನಗಳನ್ನು ಈ ಸಂಚಿಕೆ ಒಳಗೊಂಡಿದೆ. ಸಮಾಜವಾದಿ ದೃಷ್ಟಿಯಲ್ಲಿ ಜಾನಪದ, ಜನಪದ ಸಾಹಿತ್ಯ ಮತ್ತು ಸಮಾಜವಾದಿಯ ಒಲವುಗಳು, ಬುಡಕಟ್ಟು ಅಧ್ಯಯನ, ಗೊಂಡರ ಕಾವ್ಯ, ಸ್ವಾತಂತ್ರ್ಯಪೂರ್ವ ಜನಪದ ಗೀತ ಸಾಹಿತ್ಯ ಹೀಗೆ ವಿವಿಧ ವಿದ್ವಾಂಸರ ವಿಚಾರಪೂರ್ಣ ಲೇಖನಗಳು ಇಲ್ಲಿವೆ.

೧೮೭ (೫೮). ಕಾಳೇಗೌಡ ನಾಗವಾರ; **ಆಯ್ದ ಕಥೆಗಳು**; ಬೆಂಗಳೂರು; ಕನ್ನಡ ಮತ್ತು ಸಂಸ್ಕೃತಿ ಇಲಾಖೆ; ೧೯೯೧; ಪುಟ; ೨೧+೧೫೨; ಜನಪದ ಕಥೆಗಳಿಗೆ ಸಂಬಂಧಿಸಿದೆ. ಇದರಲ್ಲಿ ಒಟ್ಟು ೧೨ ಕಥೆಗಳಿವೆ.

೧೯೨ (೫೯). ಕಾಳೇಗೌಡ ನಾಗವಾರ ಮತ್ತು ಎನ್. ಹುಚ್ಚಪ್ಪ ಮಾಸ್ತರ್, **ಗಿರಿಜನ ಸಂಸ್ಕೃತಿ**; ಬೆಂಗಳೂರು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ; ೨೦೦೦; ಪುಟ; ೧೬+೨೭೬; ಬುಡಕಟ್ಟುಗಳ ಲಕ್ಷಣ, ಸ್ವರೂಪ, ಜೀವನಶೈಲಿ, ಕಲೆ–ಸಂಸ್ಕೃತಿ, ಸಂಪ್ರದಾಯಗಳು ಮತ್ತು ಬದಲಾಗುತ್ತಿರುವ ಬುಡಕಟ್ಟು ಜನರ ಜೀವನ ವಿಧಾನಗಳನ್ನು ಈ ಸಂಪುಟದಲ್ಲಿ ಸಂಗ್ರಹಿಸಲಾಗಿದೆ. ಇಲ್ಲಿ ಬುಡಕಟ್ಟು ಅಧ್ಯಯನದ ವಿವಿಧ ಮುಖಗಳು ಅನಾವರಣಗೊಂಡಿದ್ದು, ಸದ್ಯದ ಬುಡಕಟ್ಟು ಜನರ ಸ್ಥಿತಿಗತಿಯ ಬಗ್ಗೆ ಒಂದು ಪ್ರಜ್ಞಾಪೂರ್ವಕ ವಿಶ್ಲೇಷಣೆ ದೊರೆಯುತ್ತವೆ.

೧೯೭ (೬೦). ಕ್ರಂತಿ ಶಾಹೀರ್ ಧುಂಡೀರಾಜ ಲಿಮಯೆ; **ಹುಲಕುಂದ ಶಿವಲಿಂಗಸ್ವಾಮಿ ರಚಿತ ಕನ್ನಡ ಗೀಗೀ ಪದಗಳು**; ಬೆಳಗಾವಿ; ಸೀತಾರಾಮ ಪ್ರಕಾಶನ; ೧೯೮೫; ಪುಟ; ೧೦೦; ಇದು ಗೀಗೀ ಪದಗಳ ಸಂಗ್ರಹವಾಗಿದೆ. ಬೆಳಗಾವಿ ಜಿಲ್ಲೆಯ ಹುಲಕುಂದದ ಶಿವಲಿಂಗಸ್ವಾಮಿಯವರು ರಚಿಸಿದಂಥ ೪೨ ಗೀಗೀ ಪದಗಳು ಈ ಸಂಗ್ರಹದಲ್ಲಿವೆ. ಇವುಗಳಲ್ಲಿ ದೇವರ ಸ್ತುತಿಗಳು, ಸ್ವಾತಂತ್ರ್ಯ ಸಂಗ್ರಾಮವನ್ನು ಕುರಿತಾದವು. ಐತಿಹಾಸಿಕ ಘಟನೆಗಳನ್ನು ಒಳಗೊಂಡಂಥವು ಹಾಗೂ ಸಾಮಾಜಿಕ ಪ್ರಜ್ಞೆಯ ಮತ್ತು ನೀತಿ ತತ್ವಗಳನ್ನು ಹೊಂದಿದ ಗೀಗೀ ಪದಗಳಿವೆ. ಪಾರ್ವತಿದೇವಿ ಸ್ತುತು, ವಿಠ್ಠಲನ ಪದ, ಅಶೋಕ ಚಕ್ರದ ಪದ, ಗಾಂಧೀಜಿ ಮಹಿಮೆಯ ಪದ. ಕರ್ನಾಟಕ ಏಕೀಕರಣ ಪದ, ಸಾಲಿ ಕಲಿಯಿರಿ ಎನ್ನುವ ಪದ. ನೀತಿ–ನಡತೆಯ ಪದ, ಕಲಿಯುಗ ಮಹಿಮೆ, ಸಾರಾಯಿ ಪದ, ಹೆಣ್ಣುಮಕ್ಕಳಿಗೆ ಹಿತನುಡಿ– ಹೀಗೆ ವೈವಿಧ್ಯಮಯವಾದ ವಿಷಯಗಳನ್ನು ಒಳಗೊಂಡ ಗೀಗೀ ಪದಗಳು ಇದರಲ್ಲಿವೆ.

೧೯೮ (೬೧). ಕ್ಲಾಸ್ ಪೀಟರ್ ಜೆ; ಅನು: ಎ.ವ್ಹಿ. ನಾವಡ ಮತ್ತು ಸುಭಾಷ್ಚಂದ್ರ; **ತುಳುವ ದರ್ಶನ**; ಕುಂದಾಪುರ; ಪ್ರಾದೇಶಿಕ; ೧೯೮೭; ಪುಟ; ೩೨೪+೨೨; ಅಮೇರಿಕೆಯ ಪೀಟರ್ ಜೆ. ಕ್ಲಾಸ್ ಅವರು ತುಳುವ ಸಂಸ್ಕೃತಿಯನ್ನು ಕುರಿತಾಗಿ ಬರೆದ ಸಂಶೋಧನ ಪ್ರಬಂಧದ ಕನ್ನಡ ಅನುವಾದವಿದು. ಪೀಟರ್ ಬರೆದಂಥ ಆಂಗ್ಲ ಭಾಷೆಯಲ್ಲಿ ಲೇಖಕರ ಟಿಪ್ಪಣಿ ಇದೆ. ಅನುವಾದವನ್ನು ಕುರಿತು ಆರಂಭದಲ್ಲಿ ನಾವಡರು ಬರೆದಿದ್ದಾರೆ.

೧೯೯ (೬೨). ಕಿತ್ತೂರ ಮಾಸ್ತರ; **ಗೀಗೀ ಪದಗಳು**; ಗದಗ; ಎಂ.ಎಸ್. ಶಾಬಾದಿಮಠ; ಪುಟ; ೨೬; ಆಧುನಿಕ ರಚನೆಯ ಗೀಗೀ ಮಾದರಿಯ ಪದಗಳು ಈ ಕೃತಿಯಲ್ಲಿವೆ.

೨೦೦ (೬೩). ಕಿಶೋರ ಕುಮಾರ ರೈ ಬಿ.ಎಸ್.; **ತುಳುನಾಡಿನ ಕೋಳಿ ಅಂಕ**; ವಿವರಣೆ ಮತ್ತು ವಿಶ್ಲೇಷಣೆ; ಹಂಪಿ; ಕನ್ನಡ ವಿಶ್ವವಿದ್ಯಾಲಯ; ೧೯೯೪; ಪುಟ; ೪+೧೦೮; ೧೯೯೪ರಲ್ಲಿ ಕನ್ನಡ ವಿಶ್ವವಿದ್ಯಾಲಯದಿಂದ ಪುರುಷೋತ್ತಮ ಬಿಳಿಮಲೆ ಇವರ ಮಾರ್ಗದರ್ಶನದಲ್ಲಿ ರಚನೆಗೊಂಡ ಎಂ.ಫಿಲ್ ಸಂಪ್ರಬಂಧ. ಇದರಲ್ಲಿ ಒಟ್ಟು ೭ ಅಧ್ಯಾಯಗಳಿವೆ. ಅಧ್ಯಯನ ಸೈದ್ಧಾಂತಿಕ ಚೌಕಟ್ಟು, ಕೋಳಿಅಂಕದ ಸಾಂದರ್ಭಿಕ ಮಾಹಿತಿಗಳು, ವಿವರಣೆ, ವಿಶ್ಲೇಷಣೆ, ಪ್ರಸಿದ್ಧ ಕೋಳಿ ಅಂಕಗಳು ಮುಂತಾದ ಮಾಹಿತಿಗಳನ್ನು ಕುರಿತು ಚರ್ಚಿಸಿದ್ದಾರೆ. ಅನುಬಂಧದಲ್ಲಿ ಕೋಳಿ ಅಂಕದ ಆಮಂತ್ರಣ ಪತ್ರಿಕೆ, ಛಾಯಾಚಿತ್ರಗಳು ಆಕರ ಗ್ರಂಥಗಳನ್ನು ನೀಡಿದ್ದಾರೆ.

೨೦೧ (೬೪). ಕಿಶೋರಕುಮಾರ ರೈ ಬಿ.ಎಸ್; **ಉಳ್ಳಾಲ್ತಿ ಆರಾಧನೆ**; ಇತಿಹಾಸ, ಪುರಾಣ ಮತ್ತು ಪ್ರದರ್ಶನ; ಮಂಗಳೂರು ವಿಶ್ವವಿದ್ಯಾಲಯ; ೨೦೦೩; ಪುಟ; ೩೦೫; ಇದು ೨೦೦೩ರಲ್ಲಿ ಮಂಗಳೂರು ವಿಶ್ವವಿದ್ಯಾಲಯಕ್ಕೆ ಮಂಡಿಸಿದ ಪಿಎಚ್.ಡಿ. ಸಂಶೋಧನ ಮಹಾಪ್ರಬಂಧ. ಕೆ. ಚಿನ್ನಪ್ಪಗೌಡ ಈ ಮಹಾಪ್ರಬಂಧಕ್ಕೆ ಮಾರ್ಗದರ್ಶಕರಾಗಿದ್ದರು. ಈ ಸಂಶೋಧನ ಮಹಾಪ್ರಬಂಧದಲ್ಲಿ ೮ ಅಧ್ಯಾಯಗಳಿವೆ. ಇದರಲ್ಲಿ ಉಳ್ಳಾಲ್ತಿ ಆರಾಧನೆ, ಉಳ್ಳಾಲ್ತಿ ಆರಾಧನೆ ಮತ್ತು ಪಾಡ್ದನಗಳು, ಉಳ್ಳಾಲ್ತಿ ಆರಾಧನೆ ಮತ್ತು ಇತಿಹಾಸ, ತುಳುನಾಡು ಮತ್ತು ಆಡಳಿತ ಇತಿಹಾಸ, ಉಳ್ಳಾಲ್ತಿ ಆರಾಧನೆ ಮತ್ತು ಜನಪದರು, ಉಳ್ಳಾಲ್ತಿ ಆರಾಧನೆ ಮತ್ತು ಇತರ ಭೂತಗಳ ಆರಾಧನೆ ಎಂಬ ವಿಷಯಗಳನ್ನು ಕುರಿತು ಹೇಳಲಾಗಿದೆ. ತುಳುನಾಡಿನ ಬಹುಮುಖ್ಯ ಆರಾಧನ ದೈವವಾದ ಉಳ್ಳಾಲ್ತಿಯ ಆರಾಧನೆಯ ಹಿಮದಿರುವ ಇತಿಹಾಸ. ಈ ಇತಿಹಾಸ ಪರಂಪರಾಗತವಾಗಿ ಪುರಾಣವಾಗಿ ರೂಪಗೊಂಡ ರೀತಿ, ಇವುಗಳ ನೆಲೆಗಳು ಇಲ್ಲಿ ಶೋಧನೆಗೊಂಡಿದೆ. ಇತಿಹಾಸ, ಪುರಾಣ ಮತ್ತು ಪ್ರದರ್ಶನಗಳ ಅಂತರ್ ಸಂಬಂಧವನ್ನು ಇಲ್ಲಿ ಗುರುತಿಸಲಾಗಿದೆ.

೨೦೨ (೬೫). ಕುರ್ತುಕೋಟಿ ಹು.ರಾ; **ಹಂತಿಯ ಹೊಸಪದಗಳು**; ಮುಂಡರಗಿ; ಜಗದ್ಗುರು ಅನ್ನದಾನೇಶ್ವರ ಸಂಸ್ಥಾನ; ೧೯೯೨; ಪುಟ; ೫೨; ಹು.ರಾ. ಕುರ್ತುರೋಟಿಯವರು ರಚಿಸಿದ ಹಂತಿ ಹೊಸಪದಗಳೆಂಬ ಕವನ ಸಂಕಲನದಲ್ಲಿ ಮನೋಹರವಾದ ಪದಗಳು, ಐತಿಹಾಸಿಕ ಸ್ತ್ರೀ ಪುರುಷರ ಪದಗಳು, ಹಾಸ್ಯ ಜನಪದಗಳು ಒಗಟುಗಳು, ಶಿವಶರಣರ ಮತ್ತು ದೇವದೇವತೆಗಳ ಮೇಲಿನ ಪದಗಳು, ಹಂತಿಯ ಹೊಸ ಪದಗಳು ಎಂದು ೬ ಪದಗಳನ್ನು ಸಂಕಲಿಸಿದ್ದಾರೆ. ಇವು ಒಕ್ಕಲುತನದ ಪದಗಳಾಗಿವೆ.

೨೦೩ (೬೬). ಕುಮಾರ್ ಆರ್.ಬಿ; **ಕರ್ನಾಟಕದ ಮುದ್ದೆ ಕುಂಬಾರರು**; ಹಂಪಿ ಕನ್ನಡ ವಿಶ್ವವಿದ್ಯಾಲಯ ೨೦೦೦; ಪುಟ; ೬+೨೧೫; ೨೦೦೦ರಲ್ಲಿ ಕನ್ನಡ ವಿಶ್ವವಿದ್ಯಾಲಯದಿಂದ , ಮಂಜುನಾಥ ಬೇವಿನಕಟ್ಟಿ ಅವರ ಮಾರ್ಗದರ್ಶನದಲ್ಲಿ ರಚನೆಗೊಂಡ ಪಿಎಚ್.ಡಿ.

ಸಂಶೋಧನ ಪ್ರಬಂಧ. ಇದರಲ್ಲಿ ಒಂಬತ್ತು ಅಧ್ಯಾಯಗಳಿವೆ. ಮುದ್ದೆ ಕುಂಬಾರರ ಮೂಲ, ಸಾಮಾಜಿಕ ಜೀವನ, ಆಚರಣೆಗಳು, ಮುದ್ದೆ ಕುಂಬಾರರ ಜನಪದ ಸಾಹಿತ್ಯ, ಆರ್ಥಿಕ ಜೀವನ, ರಾಜಕೀಯ ಜೀವನ, ಸಾಮಾಜಿಕ ಮತ್ತು ಸಾಂಸ್ಕೃತಿಕ ಸ್ಥಿತ್ಯಂತರಗಳು ಇತ್ಯಾದಿ ವಿಷಗಳ ಸಮೀಕ್ಷೆಯನ್ನು ಮಾಡಿದ್ದಾರೆ.

೨೦೪ (೬೭). ಕುಮಾರ ಚಲ್ಯ (ಸಿ.ಎಸ್. ಶಿವಕುಮಾರಸ್ವಾಮಿ); **ಬೇರು ತೋರಿದ ಹಾದಿ**; ಮೈಸೂರು, ಅಭಿರುಚಿ ಪ್ರಕಾಶನ; ೨೦೦೩; ಬೇರು ತೋರಿದ ಹಾದಿ ಜಾನಪದ ಸಂಬಂಧಿಯಾದ ಲೇಖನಗಳ ಸಂಕಲನ. ಇದರಲ್ಲಿ ಎರಡು ಭಾಗಗಳಿದ್ದು, ಮೊದಲನೆಯ ಭಾಗದಲ್ಲಿ 'ಸಾಹಿತ್ಯಕ ಜಾನಪದ'ವನ್ನು ಕುರಿತ ಮೂರು ಲೇಖನಗಳಿವೆ. ಎರಡನೆಯ ಭಾಗದಲ್ಲಿ ಸಾಹಿತ್ಯೇತರ ಜಾನಪದವನ್ನು ಕುರಿತು ನಾಲ್ಕು ಲೇಖನಗಳಿದ್ದು, ಮುಖ್ಯವಾಗಿ ಸಸ್ಯ ಮತ್ತು ಪ್ರಾಣಿ ಜಾನಪದವನ್ನು (Flora and Fouma Folklore) ಪರಿಭಾವಿಸಲಾಗಿದೆ. ಮೂರನೆಯ ಭಾಗವಾದ ಅನುಬಂಧದಲ್ಲಿ ಪೂರಕ ಸಾಮಗ್ರಿಗಳನ್ನು ನೀಡಲಾಗಿದೆ.

೨೦೬ (೬೮). ಕುಲಕರ್ಣಿ ಬಿ.ಎಸ್.; **ಜಾನಪದ ಪರಿಮಳ**; ಧಾರವಾಡ; ಕನ್ನಡ ಸಂಶೋಧನ ಸಂಸ್ಥೆ; ೧೯೮೦; ಮುಟ; ೧೭೦; ಈ ಗ್ರಂಥ ಜಾನಪದ ಗೀತೆಗಳ ಸಂಗ್ರಹವಾಗಿದೆ. ಇಲ್ಲಿ ಧಾರವಾಡ, ಗುಲಬರ್ಗಾ ಹಾಗೂ ಬಿಜಾಪುರ ಜಿಲ್ಲೆಯ ಹಾಡುಗಳನ್ನು ಸಂಗ್ರಹಿಸಲಾಗಿದೆ. ಇಲ್ಲಿ ಜನಪದ ಗೀತೆಗಳು ಕಾಳಿಂಗನಪದ, ಗಂಗೆ-ಗೌರಿಯ ವಾದದ ಪದ ಮತ್ತು ಇತರ ಪದಗಳು, ಬತ್ತಲೆಗಾದೆಗಳು ಹಾಗೂ ಶಬ್ದಕೋಶವಿದೆ. ಇಲ್ಲಿ ೧೦೦೮ ಬೆತ್ತಲೆಗಾದೆಗಳನ್ನು ಸಂಗ್ರಹಿಸಲಾಗಿದೆ ಜಾನಪದ ಗೀತೆಗಳು ಮತ್ತು ಗಾದೆಗಳ ನಿರೂಪಣೆಯಲ್ಲಿ ಪ್ರಾದೇಶಿಕ ಭಾಷೆಯ ವೈಶಿಷ್ಟ್ಯವನ್ನು ಉಳಿಸಿಕೊಂಡುಬರಲಾಗಿದೆ.

೨೦೮ (೬೯). ಕುಲಕರ್ಣಿ ಎಚ್.ಆರ್; **ಭಾಗ್ಯಲಕ್ಷ್ಮೀ**; ಬಿಜಾಪುರ; ಎಚ್.ಆರ್. ಕುಲಕರ್ಣಿ; ಮು; ೨೪ ಗುಲಬರ್ಗಾ ಜಿಲ್ಲೆಯ ಗತ್ತರಗಿಯ ಭಾಗ್ಯವಂತಿ ದೇವಿಯ ಲಾವಣಿಯನ್ನು ಈ ಚಿಕ್ಕ ಕೃತಿಯಲ್ಲಿ ಕಾಣಬಹುದು. ಸೀಡಿಯಿಂದಲೇ ಪ್ರಸಿದ್ಧವಾಗಿರುವ ಬೇಡಿದ್ದನ್ನು ನೀಡುವ ಈ ದೇವಿಯ ಗುಣಗಾನವು ಇಲ್ಲಿಯ ಲಾವಣಿಯಲ್ಲಿದೆ.

೨೧೩ (೭೦). ಕೃಷ್ಣ ಮಂದಿರ ಬುಕ್ ಡಿಪೊ; **ಲಾವಣಿ ಪದಗಳು**; ಬಳ್ಳಾರಿ; ಕೃಷ್ಣಮಂದಿರ ಬುಕ್ ಡಿಪೋ; ೧೯೧೫; ಮುಟ; ೭೨; ವಿವಿಧ ವಿಷಯಗಳಿಗೆ ಸಂಬಂಧಿಸಿದ ಲಾವಣಿ ಪದಗಳುದ ಇಲ್ಲಿವೆ.

೨೧೪ (೭೧). ಕೃಷ್ಣಮಾಸಡಿ; **ನಂಬಿಕೆಗಳು**; ಸಾಗರ; ಅಕ್ಷರ ಪ್ರಕಾಶನ; ೧೯೮೬; ಜಾನಪದ ನಂಬಿಕೆಗಳನ್ನು ಒಳಗೊಂಡ ಕೃತಿ.

೨೧೫ (೭೨). ಕೃಷ್ಣ ರಂಗೋ ಕುಲರ್ಣಿ; **ಜಾನಪದ ಸಾಹಿತ್ಯ ಸಂಗ್ರಹ**; ಅರಭಾವಿ; ಎಸ್.ಎಸ್. ಸೊಪ್ಪಿನಮಠ; ೧೯೩೯; ಮುಟ; ೧೬; ಬೀಸುವ ಕಲ್ಲಿನ ಪದಗಳು, ತ್ರಿಪದಿಗಳು ಇಲ್ಲಿವೆ.

೨೧೮ (೭೩). ಕೃಷ್ಣಕುಮಾರ ಸಿ.ಪಿ; ಅನು: ಮೂಲ: ವೆರಿಯರ್ ಎಲ್ವಿನ್, ಶಾಮರಾವ್ ಹಿವಾಲೆ; **ಕಾಡಿನ ಹಾಡುಗಳು**; ಬೆಂಗಳೂರು; ಕನ್ನಡ ಸಾಹಿತ್ಯ ಅಕಾಡೆಮಿ; ೧೯೮೮; ಮುಟ; ೪+೧೪೪; ಇದು ಕಾಡು ಜನಾಂಗವಾದ ಗೊಂಡರ ಜನಪದ ಗೀತೆಗಳ ಸಂಗ್ರಹವಾಗಿದೆ. ವೆರಿಯರ್ ಎಲ್ವಿನ್ ಮತ್ತು ಶಾಮರಾವ್ ಹಿವಾಲೆ ೧೯೩೫ರಲ್ಲಿ ಪ್ರಕಟಿಸಿದ Songs of Forest ಎಂಬ ಇಂಗ್ಲೀಷ್ ಪುಸ್ತಕದ ಅನುವಾದವೇ 'ಕಾಡಿನ ಹಾಡುಗಳು' ಕೃತಿ. ಈ ಕೃತಿಯ ಕೊನೆಯಲ್ಲಿ ಗೊಂಡರ ೨೦ ಗಾದೆ ಮಾತುಗಳನ್ನು

ಸಂಗ್ರಹಿಸಲಾಗಿದೆ. ಇದರಲ್ಲಿ ೨೮೮ ಗೊಂಡರ ಪದಗಳಿವೆ. ಈ ಪದಗಳ ಇಂಗ್ಲೀಷ್ ಭಾಷಾಂತರ ಮುಕ್ತ ಛಂದಸ್ಸಿನಲ್ಲಿದ್ದು ಕನ್ನಡ ಅನುವಾದವೂ ಅದೇ ಜಾಡನ್ನು ಹಿಡಿದಿದೆ.

೨೨೧ (೭೪). ಕೃಷ್ಣಪ್ಪ (ಬಿ); **ಯವನವೀರ ಕಥಾವಳಿ;** ಈ ಪುಸ್ತಕದಲ್ಲಿ ಒಟ್ಟು ಆರು ಕತೆಗಳಿವೆ. ೧.ಥೀಸಿಯಸ್ಸಿ ಕಥೆ ೨.ಪಸಿಗಯಸ್ಸಿ ಕಥೆ ೩.ಕ್ಯಾಡ್‌ಮಸ್ಸನೂ ಅವ ನಿರ್ಭಾಗ್ಯ ಸಂತತಿಯೂ ೪.ಜಿಲ್ಲೆ ರೋಫನ್ನಿನ ಕಥೆ. ಅದ್ಭುತವಾದ ಒಂದು ಹಂದಿಯ ಬೇಟೆ, ೬ ಆಫಿನಯಸ್ಸಿಕಥೆ.

೨೨೯ (೭೫). ಕೃಷ್ಣಮೂರ್ತಿ ಕೆ.ಆರ್; **ಮೂಢ ನಂಬಿಕೆಗಳನ್ನು ಕೈಬಿಡಬೇಡಿ;** ಜನಪ್ರಿಯ ಪ್ರಕಾಶನ ಪುಟ; ೧೩೧; ಪ್ರಸ್ತುತ ಕೃತಿ ಮೂಡನಂಬಿಕೆಗಳಲ್ಲಿ ಅಡಗಿರುವ ಸಾಮಾಜಿಕ ಹಾಗೂ ವೈಜ್ಞಾನಿಕ ಕಾರಣಗಳನ್ನು ತಿಳಿಯುವ ಪ್ರಯತ್ನದ ಫಲ. ಆನ ಸಮುದಾಯಗಳಲ್ಲಿ ಸಾಂಪ್ರದಾಯಿಕ ವಾದವು ಎನ್ನುವ ಕಾರಣಕ್ಕೆ ನಿರ್ಲಕ್ಷ್ಯೆಗೆ, ತಿರಸ್ಕಾರಕ್ಕೆ ಒಳಗಾಗಿರುವ ನಂಬಿಕೆಗಳಲ್ಲಿ ಅನೇಕ ಅನುಸರಣಾಯೋಗ್ಯ ಸಂಗತಿಗಳಿವೆ ಎಂಬುದನ್ನು ಕುರಿತು ವಿಶ್ಲೇಷಿಸಲಾಗಿದೆ.

೨೩೦ (೭೬). ಕೃಷ್ಣಮೂರ್ತಿ ಜಿ.ಎಂ; **ಬಂಗಾಳದ ಜಾನಪದ ಕಥೆಗಳು;** ಬೆಂಗಳೂರು; ಎಸ್.ಬಿ.ಎಸ್. ಪಬ್ಲಿಕೇಷನ್ಸ್ ಡಿಸ್ಟ್ರಿಬ್ಯೂಟರ್ಸ್; ೧೯೯೩; ಪುಟ; ೮+೧೧೬; ಈ ಕೃತಿಯಲ್ಲಿ ೯ ಕಥನಗಳನ್ನು ಸಂಗ್ರಹಿಸಲಾಗಿದೆ. ಇವು ಬಂಗಾಳದ ಜನಪದರಲ್ಲಿ ಪ್ರಚಲಿತದಲ್ಲಿರುವ ಕಥೆಗಳಾಗಿವೆ. ಏಳು ಸಹೋದರರ ಹಾಗೂ ಒಬ್ಬ ಸಹೀದರಿಯ ಕಥೆ. ಸೂಜಿರಾಜ, ಕಿರಣ್ಮಾಲಳ ಕಥೆ, ರೂಪಕುಮಾರನ ಕಥೆ, ಸುಬು ಮತ್ತು ಡುಲು ಅವರ ಕಥೆ ಹೀಗೆ ಒಂಬತ್ತು ಕುತುಹಲಕಾರಿ ಕಥೆಗಳು ಇಲ್ಲಿವೆ.

೨೪೫ (೭೭). ಕೃಷ್ಣಮೂರ್ತಿ ಹನೂರು; **ನ್ಯಾಯಗಾರನ ಹೆಂಡತಿ;** ಹೊನ್ನಾವರ; ಉ.ಕ. ಜಾನಪದ ಪ್ರಕಾಶನ, ೧೯೮೯; ಪುಟ; ೧೧೦+೧೨; ಇದು ಕಥಾಸಂಕಲನವಾಗಿದೆ. ಚಿತ್ರದುರ್ಗ ಜಿಲ್ಲೆಯ ಮಡಿವಾಳ ನೆರಸಜ್ಜ ಹೇಳಿದ ೧೨ ಕತೆಗಳು ಈ ಸಂಗ್ರಹದಲ್ಲಿವೆ. ಇದರಲ್ಲಿ ನ್ಯಾಯಗಾರನ ಹೆಂಡತಿ, ನೂರೊಮದು ಎಲೆಯೂಟ, ೩ ಮುತ್ತು ಕೊಟ್ಟವಳು, ಕೀಲು ಕುದುರೆ, ಐದು ಜನ ಹೆಂಡಿರ ಕಥೆ, ಚಂದರಶೇಖರ ಮಹಾರಾಜ ನೀಲಂಜಿ ಕುಮಾರ ಮೊದಲಾದ ಕಥೆಗಳಿದ್ದು, ಇವು ಈಗಾಗಲೇ ಬೇರೆ ಬೇರೆ ಗ್ರಂಥದಲ್ಲಿ ಪ್ರಕಟಗೊಂಡಂಥವೇ ಆಗಿವೆ.

೨೫೭ (೭೮). ಕೃಷ್ಣಶಾಸ್ತ್ರಿ ಜಂಗಮ ಕೋಟಿ; **ಗಾದೆಗಳ ಭಂಡಾರ (ಮೊದಲಭಾಗ);** ಬೆಂಗಳೂರು; ಸತ್ಯಶೋಧನ ಪ್ರಕಟಮಂದಿರ; ೧೯೫೬; ಪುಟ; ೧೫೨; ವಿಷಯಾನುಸಾರ ವರ್ಗೀಕರಿಸಿದ ೩೮೭೨ ಗಾದೆಗಳಿವೆ. ಕೆಲವು ಗಾದೆಗಳ ವಿವರಣೆ, ವ್ಯಾಖ್ಯಾನಕೊಡಲಾಗಿದೆ. ಕೆಲವು ಸಂಸ್ಕೃತ ಸೂಕ್ತಿಗಳೂ ಸೇರಿವೆ.

೨೫೯ (೭೯). ಕೆನರೀಸ್; **ಕರ್ನಾಟಕ ಲೋಕೋತ್ತಿ ನಿಧಾನ;** ಮಂಗಳೂರು; ಮಿಷನ್ ಬುಕ್ ಎಂಡ್ ಟ್ರಾಕ್ಟಡಿಪಾಸಿಟರಿ; ೧೯೧೯; ಪುಟ; ೧೨೯; ೧೫೦೦ ಕನ್ನಡಗಾದೆಗಳು– ಅವುಗಳ ಉದ್ದೇಶ ವಿವರಣೆಗಳೊಂದಿಗೆ

೨೬೧ (೮೦). ಕೆರಿಮನಿ ಸಿ.ವಿ.; **ನಮ್ಮವರ ಬದುಕು;** ಬೆಂಗಳೂರು; ಕನ್ನಡ ಸಾಹಿತ್ಯ ಪರಿಷತ್ತು; ೧೯೯೨; ಪುಟ; ೬೮+೮; ಈ ಪುಸ್ತಕದಲ್ಲಿ ನಾಲ್ಕು ಪ್ರಕಾರದ ಜಾನಪದ ಗೀತೆಗಳು ಇವೆ. ಲಾವಣಿಗಳು, ಜೋಗುಳ ಪದ ಮುಂತಾದ ಪದಗಳಿವೆ.

೨೬೨ (೮೧). ಕೆಂಚವೀರಪ್ಪ ಎನ್; **ಕರ್ನಾಟಕ ಆಸಾದಿ ಸಂಪ್ರದಾಯ**; ಧಾರವಾಡ; ಕನ್ನಡ ವಿಶ್ವವಿದ್ಯಾಲಯ; ೨೦೦೧; ಪುಟ; ೧೦೪; ೨೦೦೧ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಕೆ.ಆರ್. ದುರ್ಗಾದಾಸ ಅವರ ಮಾರ್ಗದರ್ಶನದಲ್ಲಿ ಮಂಡಿತವಾದ ಎಂ.ಫಿಲ್. ಸಂಶೋಧನ ಸಂಪ್ರಬಂಧ ಕರ್ನಾಟಕದ ಆಸಾದಿ ಸಂಪ್ರದಾಯವನ್ನು ಕುರಿತು ವಿವರವಾಗಿ ಮಾಹಿತಿ ನೀಡುವ ಈ ಸಂಪ್ರಬಂಧದಲ್ಲಿ ೭ ಅಧ್ಯಾಯಗಳಿವೆ. ಗ್ರಾಮದೇವತೆಗಳ ಆರಾಧನೆ, ಸಂಪ್ರದಾಯ ಮತ್ತು ಆಚರಣೆಗಳು ಕರ್ನಾಟಕದಲ್ಲಿ ಮಾದಿಗ ಜನಾಂಗ, ಕರ್ನಾಟಕದಲ್ಲಿ ಆಸಾದಿ, ಆಸಾದಿ ಸಂಪ್ರದಾಯ ಅಂದು–ಇಂದು ಈ ಮೊದಲಾದ ಪ್ರಮುಖ ವಿಷಯಗಳು ಇದರಲ್ಲಿವೆ.

೨೬೪ (೮೨). ಕೇಶವ್ ಕೆಂಗೆನ್‌ಯಜ್ಞಾವತಿ; **ಸಾಂಸ್ಕೃತಿಕ ತುಳುನಾಡು**; ಮಂಗಳೂರು; ಚಂದ್ರಿಕಾ ಪ್ರಕಾಶನ; ೧೯೯೪; ಪುಟ; ೧೦+೮೬; ಇದು ತುಳುನಾಡಿನ ಭಾಷೆ, ಸಾಹಿತ್ಯ, ಸಂಸ್ಕೃತಿ ಮೊದಲಾದವುಗಳ ವಿವಿಧ ಪ್ರಕಾರಗಳು ಸಂಗ್ರಹವಾಗಿವೆ. ಇಲ್ಲಿ ತುಳುನಾಡಿನ ವೈಶಿಷ್ಟ್ಯ, ಇತಿಹಾಸ, ಆರ್ಥಿಕತೆ, ಸಂಸ್ಕೃತಿ ಮೊದಲಾದವುಗಳ ಕುರಿತು ಲೇಖನಗಳಿವೆ. ಜಾನಪದಕ್ಕೆ ಸಂಬಂಧಿಸಿದಂತೆ ಮದುವೆ ಹಾಗೂ ಇತರ ಶುಭಕಾರ್ಯದ ಸಂಪ್ರದಾಯಗಳು ವಿವರಿಸುವ ಲೇಖನಗಳು, ಜಾನಪದ ಗೀತೆ, ಕುಣಿತ, ಕ್ರೀಡೆ, ವೈದ್ಯ, ಕಥೆ, ಪಾಡ್ದನಗಳು, ಒಗಟುಗಳು, ಬಯಲಾಟ ಮೊದಲಾದವುಗಳ ಕುರಿತಾದ ವಿಶ್ಲೇಷಣೆಯಿದೆ.

೨೬೮ (೮೩). ಕೇಶವನ್ ಪ್ರಸಾದ ಕೆ; **ಕೊಳ್ಳೆಗಾಲ ಸುತ್ತಿನ ಊಟೋಪಚಾರಗಳು**; ಮೈಸೂರು, ಮೈಸೂರು ವಿಶ್ವವಿದ್ಯಾನಿಲಯ; ಅಂಬಳಿಕೆ ಹಿರಿಯಣ್ಣ ಅವರ ಮಾರ್ಗದರ್ಶನದಲ್ಲಿ ಕೆ. ರೇಶವನ್ ಪ್ರಸಾದ ಅವರು ಸಿದ್ಧಪಡಿಸಿದ 'ಕೊಳ್ಳೇಗಾಲ ಸುತ್ತಿನ ಊಟೋಪಚಾರಗಳು' ಎನ್ನುವ ಸಂಶೋಧನ ಮಹಾಪ್ರಬಂಧಕ್ಕೆ ಮೈಸೂರು ವಿಶ್ವವಿದ್ಯಾಲಯ ಪಿಎಚ್.ಡಿ. ನೀಡಿದೆ.

೨೭೫ (೮೪). ಕೇಶವಮೂರ್ತಿ ಎಚ್.ಎಲ್.ಡಿ. ಕೃಷ್ಣಪ್ಪಗೌಡ, ಅರಕೆರೆ, ಬಿ.ಎಸ್. ಕೃಷ್ಣಪ್ರಸಾದ್, ಕೆ. ವೆಂಕಟಕೃಷ್ಣ; **ಬದುಕು (ಸ್ಮರಣಗ್ರಂಥ)**; ಮಂಡ್ಯ; ಮಂಡ್ಯಜಿಲ್ಲಾ ಜಾನಪದ ಪರಿಷತ್ತು ೧೯೮೭; ಪುಟ; ೧೫೧+೫; ಇದು ೧೯೮೬ನೇ ನವ್ಹಂಬರ ೨೮, ೨೯ ಮತ್ತು ೩೦ ರಂದು ಮದ್ದೂರಿನಲ್ಲಿ ನಡೆದ ಅಖಿಲ ಕರ್ನಾಟಕ ಜನಪದ ಮೇಳದ ಸ್ಮರಣ ಗ್ರಂಥವಾಗಿದೆ. ಮದ್ದೂರಿನ ಜಾನಪದ ಮೇಳ ಕಂಡದ್ದು, ಅನಿಸಿದ್ದು, ಜಾನಪದ ಹೊಸ ಮಾರ್ಗಗಳು ಮತ್ತು ಜನಪದ ಮೇಳ, ಗೊಲ್ಲರ ದೊಡ್ಡಿ; ಬದುಕು ಬವಣೆ, ಜಾನಪದ ಲೋಕ, ಗಾದೆಗಳ ಅಂತರಂಗ–ಮೊದಲಾದ ಲೇಖನಗಳು ಈ ಗ್ರಂಥದಲ್ಲಿವೆ.

೨೭೬ (೮೫). ಕೈಯಾರ ಕಿಞ್ಞಣ್ಣ ರೈ, ಕ.ಭ. ಪೆರ್ಲ (ಸಂ); **ಯಕ್ಷಗಾನ ಕಲಾತಪಸ್ವಿ**; ಉಡುಪಿ; ಯು.ಎಲ್. ರಾವ್; ೧೯೬೮; ಪುಟ; ೮+೨೨೪; ಇದು ಬಲಿಪ ನಾರಾಯಣ ಭಾಗವತರ ಸಂಸ್ಮರಣ ಗ್ರಂಥ. ಇದರಲ್ಲಿ ೩ ಭಾಗಗಳಿವೆ. ಮೊದಲ ಭಾಗದಲ್ಲಿ ಕ.ಭ. ಪೆರ್ಲರು ಬರೆದ ಬಲಿಪರ ಜೀವನ; ೨ನೇ ಭಾಗದಲ್ಲಿ ಬಲಿಪರನ್ನು ಒಬ್ಬ ೨೨ ಜನರಿಂದ ಸಂಸ್ಮರಣೆಗಳು. ೩ನೇ ಭಾಗದಲ್ಲಿ ಯಕ್ಷಗಾನ ವಿವಿಧ ಮುಖಗಳಿಗೆ ಸಂಬಂಧಿಸಿದ ಹತ್ತು ಲೇಖನಗಳು ಇವೆ. ಯಕ್ಷಗಾನವೂ ದಿ. ಬಲಿಪ ನಾರಾಯಣ ಭಾಗವತರೂ (ಕುಬಣೂರು ಬಾಲಕೃಷ್ಣರಾವ್). ಯಕ್ಷಗಾನ ರಾಕ್ಷಸ (ದೊರಬೆ ಸೀತಾರಾಮಯ್ಯ) ಗೊಂಬೆ ಆಟ (ಶಿವರಾಮ ಕಾರಂತ) ಇತ್ಯಾದಿ ೧೦ ಲೇಖನಗಳಿವೆ.

೨೭೮ (೮೬). ಕೋಟ್ಯಾಳ ಬಿ.ಎಸ್.; **ಜಾನಪದ ಸಾಹಿತ್ಯದಲ್ಲಿ ಶೃಂಗಾರ ನಿರೂಪಣೆ**; ಧಾರವಾಡ; ಕರ್ನಾಟಕ ವಿಶ್ವವಿದ್ಯಾಲಯ; ೧೯೮೮; ಪುಟ; ೬+೬೯; ಪ್ರಸ್ತುತ ಕೃತಿ ಕರ್ನಾಟಕ ವಿಶ್ವವಿದ್ಯಾಲಯ ಪ್ರಸಾರಾಂಗ ಉಪನ್ಯಾಸ ಗ್ರಂಥಮಾಲೆ ಸರಣಿಯಲ್ಲಿ ಪ್ರಕಟಗೊಂಡಿದೆ. ಒಟ್ಟು ೬ ಅಧ್ಯಾಯಗಳಿಂದ ಕೂಡಿರುವ ಇದು ಜನಪದ ಸಾಹಿತ್ಯ, ಶೃಂಗಾರ ರಸ, ಲಾವಣಿಗಳಲ್ಲಿ ಶರಂಗಾರ, ತ್ರಿಪದಿಗಳಲ್ಲಿ ಶೃಂಗಾರ, ಜನಪದ ಸಾಹಿತ್ಯದ ಇತರೆ ಪ್ರಕಾರಗಳಲ್ಲಿ ಶೃಂಗಾರ ಎಂಬ ವಿಚಾರಗಳನ್ನೊಳಗೊಂಡಿದೆ. ಪ್ರಣಯಿಗಳ ಕಾಮ ವಿಲಾಸ, ಸತಿ–ಪತಿಯರ ಸರಸ–ಸಲ್ಲಾಪ, ನಿತ್ಯೋಕ್ತಿಗಳಲ್ಲಿರುವ ಶೃಂಗಾರವನ್ನು ಕಲಸ್ಪರ್ಶಿಯಾಗಿ ಶೋಭಿಸಲಾಗಿದೆ. ಒಟ್ಟಾರೆ ಜನಪದ ಸಾಹಿತ್ಯದ ಶೃಂಗಾರ ರಸ ಮಹಾಕವಿಗಳ ಶೃಂಗಾರಕ್ಕೇನೂ ಕಡಿಮೆಯಿಲ್ಲವೆಂದು ತೋರ್ಪಡಿಸುವುದೇ ಪುಸ್ತಕದ ಉದ್ದೇಶ.

೨೭೯ (೮೭). ಕೋಟ್ಯಾಳ ಬಿ.ಎಸ್.; **ಬೀಬೀ ಇಂಗಳಗಿ ಸಂಪ್ರದಾಯದ ಗೀಗೀ ಪದಗಳು**; ಗುಲ್ಬರ್ಗ; ಗುಲ್ಬರ್ಗಾ ವಿಶ್ವವಿದ್ಯಾಲಯ; ೧೯೯೧; ಪುಟ ೪೦೯; ಇದು ೧೯೯೧ರಲ್ಲಿ ಗುಲ್ಬರ್ಗ ವಿಶ್ವವಿದ್ಯಾಲಯದಿಂದ ಮ.ಗು. ಬಿರಾದಾರ ಅವರ ಮಾರ್ಗದರ್ಶನದಲ್ಲಿ ರಚನೆಗೊಂಡ ಪಿಎಚ್.ಡಿ. ಸಂಶೋಧನ ಮಹಾಪ್ರಬಂಧ. ಇದರಲ್ಲಿ ಐದು ಅಧ್ಯಾಯಗಳಿವೆ. ಬೀಬೀ ಇಂಗಳಗಿ ಸಂಪ್ರದಾಯದ ಗೀಗೀ ಕಾರರು, ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ಕುರಿತು ಚರ್ಚಿಸಿದ್ದಾರೆ. ಅವರ ಜೀವನ ವಿಧಾನ, ಹವ್ಯಾಸ, ವೃತ್ತಿ, ನಂಬಿಕೆ, ಆಚರಣೆ ಇತ್ಯಾದಿ ಕುರಿತು ತಿಳಿಸಿದ್ದಾರೆ. ಗೀಗೀ ಪದಗಳಿಗೂ ಸಣ್ಣಾಟಕ್ಕೂ ಇರುವ ಸಾಮ್ಯ–ವೈಷಮ್ಯಗಳನ್ನು ಹೇಳಿದ್ದಾರೆ.

೨೮೧ (೮೮). ಖಂಡೋಬಾ ಪಿ.ಕೆ.; **ತಾಂಡ ಸಂಸ್ಕೃತಿ**; ಗುಲ್ಬರ್ಗಾ; ಪ್ರಸಾರಾಂಗ, ಗುಲ್ಬರ್ಗಾ ವಿಶ್ವವಿದ್ಯಾಲಯ; ೧೯೯೦; ಪುಟ; ೫೭+೬; ತಾಂಡ ಸಂಸ್ಕೃತಿ ಜನಾಂಗದ ಒಟ್ಟು ಪರಿಚಯ ನೀಡುವ ಕೃತಿ

೨೮೩ (೮೯). ಖಂಡೋಬಾ. ಪಿ.ಕೆ.; **ಪರಿಸರ ಸಂಬಂಧಿ ದೈವಗಳು**; ಗುಲ್ಬರ್ಗಾ; ಪ್ರಸಾರಾಂಗ ವಿಶ್ವವಿದ್ಯಾಲಯ; ೧೯೯೩; ಪುಟ; ೬+೮೦; ಇದರಲ್ಲಿ ನಮ್ಮ ಪರಿಸರದಲ್ಲಿರುವ ದೈವಗಳಾದ ಸೂರ್ಯ, ಚಂದ್ರ, ಮಳೆ, ಮೋಡ, ನಕ್ಷತ್ರ, ಗುಡುಗು, ಸಿಡಿಲು, ಮಿಂಚು, ಗಾಳಿ, ಗ್ರಹ ಇತ್ಯಾದಿಗಳ ಕುರಿತಂತೆ ೭ ಅಧ್ಯಾಯಗಳಿವೆ. ಈ ದೈವಗಳಿಗೆ ಸಂಬಂಧಿಸಿದ ಸಂಪ್ರದಾಯ ಆಚರಣೆ ಮತ್ತು ನಂಬಿಕೆಗಳ ಪರಿಕಲ್ಪನೆಯನ್ನು ನೀಡಲಾಗಿದೆ.

೨೮೫ (೯೦). ಖಂಡೋಬಾ. ಪಿ.ಕೆ; **ಜಾನಪದ ಮುನ್ನೋಟ**; ಗುಲ್ಬರ್ಗಾ; ಸಂಗೀತಾ ಪಬ್ಲಿಕೇಶನ್ ೧೯೯೩; ಪುಟ; ೧೦+೧೬೦; ಜಾನಪದ ಮುನ್ನೋಟ ಹನ್ನೆರಡು ಪ್ರಬಂಧಗಳ ಒಂದು ಸಂಕಲನವಾಗಿದೆ. ಜಾನಪದ ಮುನ್ನೋಟ, ಸಾಂಸ್ಕೃತಿಕ ಅಧ್ಯಯನ ಕನ್ನಡ ಜಾನಪದ; ಅಧ್ಯಯನ ಸಮಸ್ಯೆಗಳು ಬುಡಕಟ್ಟುಗಳ ಸಾಂಸ್ಕೃತಿಕ ಅಧ್ಯಯನ ಸೂತ್ರಗಳ ವಿವೇಚನೆ. ಕನ್ನಡ ಶಿಷ್ಟ ಸಾಹಿತ್ಯದಲ್ಲಿ ಜಾನಪದ ಆಕಾಶ ಜಾನಪದ ಖನಿಜ ಜಾನಪದ; ಮಾನವ ಮತ್ತು ಕಂಚು, ತಾಮ್ರ, ಹಿತ್ತಾಳೆ, ಉತ್ತರ ಕರ್ನಾಟಕದಲ್ಲಿ ಜನಪದ ಅರಾಧಾನಾ ಕಲೆಗಳು, ಸಮೂಹ ಮಾಧ್ಯಮವಾಗಿ ಲಂಬಾಣಿ ಜನಪದ ಕಲೆಗಳು, ಲಂಬಾಣಿ ಜನಪದ ಕಲೆಗಳು ಮೊದಲಾದ ಪ್ರಬಂಧಗಳಿವೆ.

೨೮೬ (೯೧). ಖಂಡೋಬಾ. ಪಿ.ಕೆ; **ಜನಪದ ಕಥನಗೀತೆಗಳು**; ಬೆಂಗಳೂರು; ಕರ್ನಾಟಕ ಸಾಹಿತ್ಯ ಅಕಾಡೆಮಿ; ೧೯೯೬; ಪುಟ; ೭೬+೧೦; ೧೨ ಜನಪದ ಕಥನಗೀತೆಗಳನ್ನು ಒಳಗೊಂಡ ಕೃತಿ ಇದಾಗಿದೆ.

೨೮೭ (೯೨). ಖಮಡೋಬಾ. ಪಿ.ಕೆ.; **ಹಲಸಂಗಿ ಗೆಳೆಯರು (ಪ್ರಬಂಧ ಸಂಕಲನ)**; ಬೆಂಗಳೂರು; ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ; ೧೯೯೭; ಪುಟ; ೯೭; ಈ ಕೃತಿಯಲ್ಲಿ ಏಳು ಲೇಖನಗಳಿವೆ. ಸ್ವಾತಂತ್ರ್ಯಪೂರ್ವ ಜಾನಪದ ಅಧ್ಯಯನದ ದೃಷ್ಟಿ ಧೋರಣೆಗಳು, ಹಲಸಂಗಿ ಗೆಳೆಯರು ಮತ್ತು ೧೦ರ ದಶಕದ ಜಾನಪದ ಚಟುವಟಿಕೆಗಳು, ಹಲಸಂಗಿ ಗೆಳೆಯರ ಗುಂಪಿನ ಕೊಡುಗೆ ಮೊದಲಾದವು ಇದರಲ್ಲಿ ಸೇರ್ಪಡೆಯಾಗಿವೆ.

೨೯೦ (೯೩). ಗಜಾನನ ಶಿ. ಭಟ್; **ಯಕ್ಷಗಾನ ನಟ ಸಂಘಟಕ ಶಂಬು ಹೆಗಡೆ ಸಂಪ್ರದಾಯ ಮತ್ತು ಸೃಜನಶೀಲತೆ ಅಧ್ಯಯನ**; ಧಾರವಾಡ; ಕರ್ನಾಟಕ ವಿಶ್ವವಿದ್ಯಾಲಯ; ೧೯೯೧; ಪುಟ; ೮೮೫; ಇದು ೧೯೯೧ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಪಿಎಚ್.ಡಿ. ಮಹಾಪ್ರಬಂಧ. ಇದಕ್ಕೆ ಎಸ್.ಆರ್. ನಾಯಕ ಅವರ ಮಾರ್ಗದರ್ಶಕರು ಯಕ್ಷಗಾನ ನಟ ಮತ್ತು ಸಂಘಕರಾದ ಶಂಬು ಹೆಗಡೆ ಅವರ ಸಂಪ್ರದಾಯ ಮತ್ತು ಸೃಜನಶೀಲತೆಯನ್ನು ಕುರಿತು ಹೇಳು ಈ ಪ್ರಬಂಧದಲ್ಲಿ ೬ ಅಧ್ಯಾಯಗಳಿವೆ. ಪ್ರೇರಣಾಂಗ, ಪೂರ್ವರಂಗ, ನಟ ಸಂಪ್ರದಾಯದ ಸಾತತ್ಯ, ಪ್ರವೇಶರಂಗ, ಸೃಜನಶೀಲತೆಯ ನೆಲೆಗಳೂ, ಪ್ರತ್ಯಕ್ಷರಂಗ, ಪಾತ್ರ ನಿರ್ವಹಣೆ, ಪರಿಕರ ರಂಗ, ಸಂಘಟನೆಯ ಸೃಜನಶೀಲತೆ, ಪರಿಶೀಲನರಂಗ ಈ ಎಲ್ಲ ವಿಷಯಗಳನ್ನು ಇದರಲ್ಲಿ ವಿವರಿಸಲಾಗಿದೆ.

೨೯೨ (೯೪). ಗಣಪತಿ ಭಟ್ ಪಿ; **ತುಳುನಾಡಿನ ಜಾನಪದ ನಂಬಿಕೆಗಳು**; ಮಂಗಳೂರು ವಿಶ್ವವಿದ್ಯಾಲಯ; ೧೯೮೯; ಪುಟ; ೧೨೪; ೧೯೮೯ರಲ್ಲಿ ಬಿಳಿಮಲೆ ಪುರುಷೋತ್ತಮ ಅವರ ಮಾರ್ಗದರ್ಶನದಲ್ಲಿ ಮಂಗಳೂರು ವಿಶ್ವವಿದ್ಯಾಲಯದಿಂದ ರಚನೆಗೊಂಡ ಎಂ.ಫಿಲ್ ಸಮಪ್ರಬಂಧ. ಇದರಲ್ಲಿ ತುಳುನಾಡಿನ ಜಾನಪದ ನಂಬಿಕೆಗಳನ್ನು ಕುರಿತ ೭ ಅಧ್ಯಾಯಗಳಿವೆ. ಈ ಸಂಪ್ರಬಂಧದಲ್ಲಿ ತುಳುನಾಡಿನ ಜನಪದ ನಂಬಿಕೆಗಳು ಸ್ವರೂಪ ಮತ್ತು ಲಕ್ಷಣ< ನಂಬಿಕೆಗಳ ವರ್ಗೀಕರಣ ನಂಬಿಕೆಗಳ ಅಧ್ಯಯನ, ತುಳುನಾಡಿನ ನಂಬಿಕೆಗಳ ಪ್ರಾದೇಶಿಕ ಸ್ವರೂಪ, ನಂಬಿಕೆಗಳು ಮತ್ತು ಆಧುನೀಕರಣ ಮೊದಲಾದ ವಿಷಯಗಳನ್ನು ಅಧ್ಯಯನ ಮಾಡಲಾಗಿದ. ಅನುಬಂಧದಲ್ಲಿ ವಕ್ತೃಗಳ ವಿವರ ಛಾಯಾಚಿತ್ರ ಮೊದಲಾದವುಗಳನ್ನು ಗಮನಿಸಬಹುದು.

೨೯೩ (೯೫). ಗಣಪತಿರಾವ್ ಪಾಂಡೇಶ್ವರ್; **ಯಕ್ಷಗಾನ ಕಲಾಲೋಕ**; ಹೊನ್ನಾವರ; ದೀನಬಂಧು ಮುದ್ರಣ ಪ್ರಕಾಶನ; ೧೯೬೭; ಪುಟ; ೬+೧೪೪; ಈ ಕೃತಿಯಲ್ಲಿ ಮುಖ್ಯವಾಗಿ ಯಕ್ಷಗಾನ ಕಲೆಗೆ ಸಂಬಂಧಿಸಿದ ವಿಚಾರ ವಿಮರ್ಶೆಯ ಪ್ರಬಂಧಗಳು ಭಾಷಣಗಳು; ಯಕ್ಷಗಾನ ಕಲೆ, ಯಕ್ಷಗಾನ ಸಾಹಿತ್ಯ ವೈಭವ, ಭರತ ಮುನಿಯ ನಾಟ್ಯ ಶಾಸ್ತ್ರ, ನಾದಲೀಲೆ, ಜಾನಪದ ನೃತ್ಯಗಳು ಕಲೆಯ ಉಗಮ, ನೃತ್ಯಾಭಿನಯದ ಮರ್ಮ, ಯಕ್ಷಗಾನ ಮೇಳಗಳು, ಕಲಾವಿದರ ಸನ್ಮಾನ, ಯಕ್ಷಗಾನ ಬಯಲಾಟ (ಪುಸ್ತಕ ವಿಮರ್ಶೆ). ಇಂದಿನ ನಮ್ಮ ಸಾಹಿತ್ಯ ವಿಮರ್ಶೆ, ಸಾಹಿತ್ಯಕರು ಮತ್ತು ಜನಜೀವನ ದೇವ–ದಾನವರು, ವಿಮರ್ಶೆ ಸಾಹಿತ್ಯದಿಂದ ಅಕ್ಷರಕ್ಕೆ ಎಂಬವುಗಳಿವೆ.

೨೯೭ (೯೬). ಗಣೇಶ್ ಮೊಗಳ್ಳಿ; **ಶತಮಾನ**; ಬಳ್ಳಾರಿ; ಲೋಹಿಯಾ ಪ್ರಕಾಶನ; ೨೦೦೦; ಜನಪದ ಸಂಸ್ಕೃತಿಯನ್ನು ೩೦ನೆಯ ಶತಮಾನಕ್ಕೆ ಅನ್ವಯಿಸಿ, ವಿಶ್ಲೇಷಿಸಿದ ಶತಮಾನ ಸಂಚಯ ಇದಾಗಿದೆ.

೩೦೩ (೯೭). ಗಂಗಾಧರ ದೈವಜ್ಞ; **ಬುಡಕಟ್ಟು ಸಮಾಜ**; ಹುಟ್ಟು ಸಾವಿನ ನಡುವೆ; ಹಂಪಿ; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ; ೨೦೦೦, ಪುಟ; ೧೬೩+೧೨; ಬುಡಕಟ್ಟು

ಅಧ್ಯಯನ ಮಾಲೆಗಳಲ್ಲಿ ಒಂದಾದ ಈ ಕೃತಿಯು ಬುಡಕಟ್ಟುಗಳಲ್ಲಿ ಪ್ರಚಲಿತವಿರುವ ಸೃಷ್ಟಿ ಪುರಾಣಗಳು, ಹುಟ್ಟಿನ ಸಂದರ್ಭದ ಆಚರಣೆಗಳ ವಿಶ್ಲೇಷಣೆ, ಋತುಮತಿ ಸಂದರ್ಭದ ಆಚರಣೆಗಳ ವಿಶ್ಲೇಷಣೆ, ಮದುಪಿ ಸಂದರ್ಭದ ಆಚರಣೆಗಳ ವಿಶ್ಲೇಷಣೆ, ಸಾವಿನ ಸಂದರ್ಭದ ಆಚರಣೆಗಳ ವಿಶ್ಲೇಷಣೆ, ಸಾವಿನ ನಂತರ ದೆವ್ವ-ಭೂತಗಳ ಪರಿಕಲ್ಪನೆ. ಈ ಆರು ವಿಷಯಗಳನ್ನು ಕುರಿತಾಗಿ ವಿವರಿಸುತ್ತದೆ.

೩೦೪ (೯೮). ಗಂಗಾಧರ. ಬಿ; **ಜನಪದ ಸಾಹಿತ್ಯದಲ್ಲಿ ಕುಟುಂಬ ಮತ್ತು ದಾಂಪತ್ಯ ಜೀವನ**; ಬೆಂಗಳೂರು; ಬೆಂಗಳೂರು ವಿಶ್ವವಿದ್ಯಾಲಯ; ೧೯೯೮; ಪುಟ; ೨೧೩; ಇದು ೧೯೯೮ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಮಂಡಿಸಿದ ಪಿಎಚ್.ಡಿ. ಸಂಶೋಧನ ಮಹಾಪ್ರಬಂಧ. ಇದಕ್ಕೆ ಸಿದ್ಧಲಿಂಗಯ್ಯ ಅವರು ಮಾರ್ಗದರ್ಶಕರಾಗಿದ್ದರು. ಕುಟುಂಬ-ದಾಂಪತ್ಯ ಪರಿಕಲ್ಪನೆಗಳ ವಿಕಾಸ ಪತಿ-ಪತ್ನಿ ಸಂಬಂಧದ ಸ್ವರೂಪ, ಬಹುಪತ್ನಿತ್ವದ ಸ್ವರೂಪ, ವಿವಾಹೇತರ ಸಂಬಂಧದ ವಿನ್ಯಾಸಗಳು, ಅತ್ತೆ-ಸೊಸೆ ಸಂಬಂಧದ ವಿನ್ಯಾಸಗಳು, ಬಲಿದಾನದ ಕಥನ-ಕವನಗಳಲ್ಲಿ ಕುಟುಂಬ ಮತ್ತು ದಾಂಪತ್ಯದ ಸ್ವರೂಪ ಮೊದಲಾದ ವಿಷಯಗಳನ್ನು ಈ ಮಹಾಪ್ರಬಂಧದಲ್ಲಿ ವಿವರಿಸಲಾಗಿದೆ.

೩೦೭ (೯೯). ಗಾಯತ್ರಿ ನಾವಡ; **ಚಿತ್ತಾರ ಬರೆದ ಬದುಕು**; ಕುಂದಾಪುರ; ಪ್ರಾದೇಶಿಕ ವ್ಯಾಸಂಗ; ೧೯೯೩; ಪುಟ; ೧೨೭+೧೦; ಸಂಪ್ರದಾಯದ ಗೀತೆಗಳ ಹಿನ್ನೆಲೆಯಲ್ಲಿ ಹೆಣ್ಣಿನ ಒಂದು ಜೀವನಾವರ್ತವನ್ನು ಗಮನದಲ್ಲಿರಿಸಿ ಸಂಕಲಿಸಿದ ಕೃತಿ ಇದಾಗಿದೆ. ಈ ಕೃತಿಯ ಮುಖ್ಯ ಉದ್ದೇಶವೆಂದರೆ ಸಮಾಜಶಾಸ್ತ್ರೀಯ ಹಿನ್ನೆಲೆಯಲ್ಲಿ ಜನಪದ ಗೀತಕಾವ್ಯಗಳನ್ನು ಗುರತಿಸುವುದೇ ಆಗಿದೆ. ಈ ಕೃತಿಯಲ್ಲಿ ಕೋಟ ಸಂಸ್ಕೃತಿಯ ಪರಿಚಯವೂ ಇದೆ. ಸಂದರ್ಭ ಸಿದ್ಧಾಂತದ ದೃಷ್ಟಿಯಿಂದ ಸಂಪ್ರದಾಯ ಆಚರಣೆಗಳ ಸುದೀರ್ಘ ವಿವರಣೆಯನ್ನು ಲೇಖಕಿ ಅಭ್ಯಾಸಿಗರಿಗೆ ನೀಡಿದ್ದಾರೆ. ಹಾಡುಗಾರರ ವಿವರವೂ ಈ ಕೃತಿಯಲ್ಲಿ ಲಭ್ಯ.

೩೦೮ (೧೦೦). ಗಾಯತ್ರಿ ನಾವಡ; **ಸಿರಿಕಥೆ**; ಹಂಪಿ; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ; ೧೯೯೪; ಪುಟ;೨+೨೬; ಸಿರಿಕತೆಯನ್ನು ಒಳಗೊಂಡ ಕೃತಿ.

೩೦೯ (೧೦೧). ಗಾಯತ್ರಿ ನಾವಡ; **ವಿರಚನೆ**; ಕೋಟೇಶ್ವರ; ಎನ್.ಆರ್.ಎ.ಎಮ್.ಎಚ್. ಪ್ರಕಾಶನ; ೧೯೯; ಪುಟ; ೯೦; ಇದು ಸ್ತ್ರೀವಾದಿ ಸಂಸ್ಕೃತಿ ಚಿಂತನೆಯನ್ನೊಳಗೊಂಡ ಕೃತಿಯಾಗಿದೆ. ಇದರಲ್ಲಿ ಜನಪದಕ್ಕೆ ಸಂಬಂಧಿಸಿದಂತೆ ಸ್ತ್ರೀವಾದಿ ಜನಪದ, ಪಾಡ್ದನಗಳಲ್ಲಿ ಸ್ತ್ರೀತ್ವದ ಪ್ರತಿನಿಧೀಕರಣ, ಸಿರಿ-ಹೆಣ್ಣಿನ ಅನನ್ಯತೆಯ ಹುಡುಕಾಟ, ಕೆರೆಗೆ ಹಾರ-ಒಂದು ಬದಲಿ ಓದಿಕೆ, ಜಾನಪದ ಮಹಾಕಾವ್ಯಗಳಲ್ಲಿ ಪಾತಿವ್ರತ್ಯದ ನಿರ್ವಚನ. ಅಜ್ಜಿ ಕಥೆಗಳಲ್ಲಿ ಸ್ತ್ರೀವಾದಿ ನಿಲುವುಗಳು, ಜನಪದ ಕತೆಗಳಲ್ಲಿ ಚಾಲಾಕ್ಷಿ ಹೆಣ್ಣುಗಳು ಎಂಬ ಲೇಖನಗಳಿವೆ. ಈ ಲೇಖನಗಳಲ್ಲಿ ಜನಪದದಲ್ಲಿ ಸ್ತ್ರೀವಾದಿ ನೆಲೆಗಳನ್ನು ಗುರುತಿಸಲಾಗಿದೆ. ಸ್ತ್ರೀ ಸಂವೇದನೆಯನ್ನು ಕುರಿತಾದ ಇನ್ನಿತರ ಲೇಖನಗಳೂ ಇದರಲ್ಲಿವೆ.

೩೧೩ (೧೦೨). ಗೀತಾ. ಕೆ; **ಮಂಗಳೂರು ಪರಿಸರದ ಅಡುಗೆ ಜಾನಪದ**; ಮಂಗಳೂರು; ಮಂಗಳೂರು ವಿಶ್ವವಿದ್ಯಾಲಯ; ೧೯೮೮; ಪುಟ; ೧೭೧; ಇದು ಬಿಳಿಮಲೆ ಪುರುಷೋತ್ತಮ ಅವರ ಮಾರ್ಗದರ್ಶನದಲ್ಲಿ ಮಂಗಳೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಎಂ.ಫಿಲ್ ಪ್ರಬಂಧವಾಗಿದೆ. ಇದರಲ್ಲಿ ಮಂಗಳೂರು ಪರಿಸರದ ಅಡುಗೆ ಜಾನಪದದ ಕುರಿತಾಗಿ ೮ ಅಧ್ಯಾಯಗಳಿವೆ. ಅಡುಗೆ ಜಾನಪದದ ಹಿನ್ನೆಲೆ, ಪಾಡ್ದನಗಳಲಿ ಅಡುಗೆ ಚಿತ್ರ, ಅಡುಗಮನೆಯ ವಾಸ್ತು ವಿವರ, ಅಡುಗೆ ಮನೆ ವ್ಯವಸ್ಥೆ ಅದರ ಸ್ಥಾನ, ಅಡುಗೆ

ಜಾನಪದದ ವರ್ಗೀಕರಣ, ಅಡುಗೆ ಜಾನಪದ ಅಧ್ಯಯನ; ಅಡುಗೆ ಸಂಬಂಧಿ ನಂಬಿಕೆಗಳು, ಅಡುಗೆ ಜಾನಪದದ ಮೇಲೆ ಹೋಟೇಲುಗಳ ಪ್ರಭಾವ ಈ ಮೊದಲಾದ ವಿಷಯಗಳ ವಿಶ್ಲೇಷಣೆಯನ್ನು ಸಂಪ್ರಬಂಧದಲ್ಲಿ ಮಾಡಲಾಗಿದೆ.

೩೨೬ (೧೦೪). ಗುರುನಾಥ ಎಂ.ಬಿ.; **ಚಿತ್ರದುರ್ಗ ಜಿಲ್ಲೆಯ ಬಯಲಾಟದ ಹಸ್ತಪ್ರತಿಗಳು**, ಕುವೆಂಪು ವಿಶ್ವವಿದ್ಯಾಲಯ; ಶಿವಮೊಗ್ಗ; ಶಿವಮೊಗ್ಗ; ಕುವೆಂಪು ವಿಶ್ವವಿದ್ಯಾಲಯ; ೨೦೦೨

೩೨೭ (೧೦೫). **ಗುರುಪ್ರಸಾದ ಸಿ.ಟಿ; ನೀಲಗಾರರು**; ಒಂದು ಧಾರ್ಮಿಕ ಸಮುದಾಯದ ಅಧ್ಯಯನ; ಹಂಪಿ; ಕನ್ನಡ ವಿಶ್ವವಿದ್ಯಾಲಯ; ೨೦೦೨, ಪುಟ; ೪+೨೫೩; ೨೦೦೨ರಲ್ಲಿ ಕನ್ನಡ ವಿಶ್ವವಿದ್ಯಾಲಯದಿಂದ ಹಿ.ಚಿ. ಬೋರಲಿಂಗಯ್ಯ ಅವರ ಮಾರ್ಗದರ್ಶನದಲ್ಲಿ ರಚನೆಗೊಮಡ ಪಿಎಚ್.ಡಿ. ಮಹಾಪ್ರಬಂಧ. ಇದರಲ್ಲಿ ಎಂಟು ಅಧ್ಯಾಯಗಳಿವೆ. ಚರಿತ್ರೆ, ಮಧ್ಯಕಾಲೀನ ಧಾರ್ಮಿಕ ಚಟುವಟಿಕೆಗಳು, ವಚನ ಚಳುವಳಿಯ ಧರ್ಮಿಕ ಪರಿಸರ, ವೈದಿಕ ಭಕ್ತಿಪಂಥದ ಚಟುವಟಿಕೆಗಳು, ಭಕ್ತಿ ಪಂಥಗಳ ದೃಷ್ಟಿಯಲ್ಲಿ ಕೆಳಜಾತಿಗಳು, ಕೆಳವರ್ಗದ ಪರ್ಯಾಯ ಚಿಂತನೆಗಳೂ, ನೀಲಗಾರರ ಚಾರಿತ್ರಿಕ ಬೆಳವಣಿಗೆ, ಸಮಾಜ, ಸಂಸ್ಕೃತಿ, ಆಚರಣೆಗಳು, ಪರಂಪರೆ, ಮೌಖಿಕ ಮಹಾಕಾವ್ಯಗಳು, ಅರ್ಥ, ನೀಲಗಾರರ ವೃತ್ತಿಗಳು, ಸ್ಥಿತ್ಯಂತರಗಳು ಇತ್ಯಾದಿ ವಿಷಯಗಳ ವಿವರಣೆಯನ್ನು ಒಳಗೊಂಡಿದೆ.

೩೩೦ (೧೦೬). ಗುರುಮೂರ್ತಿ ಕೆ.ಜಿ; **ಜಾನಪದ ರೀತಿ–ನೀತಿಗಳು**; ಬೆಂಗಳೂರು; ಕರ್ನಾಟಕ ಜಾನಪದ ಪ್ರಸಾರ ನಿಧಿ; ೧೯೮೧; ಪುಟ; ೧೨೮; ಇದು ಜನಪದಕ್ಕೆ ಸಂಬಂಧಿಸಿದ ಲೇಖನಗಳ ಸಂಕಲನವಾಗಿದೆ. ಇದರಲ್ಲಿದ ಜನಪದರ ಬದುಕಿನ ರೀತಿ–ನೀತಿಗಳನ್ನು ವಿವರಿಸುವ ೯ ಲೇಖನಗಳಿವೆ. ಮೊದಲ ಲೇಖನವಾದ 'ಜಾನಪದ ರೀತಿ–ನೀತಿಗಳು'ದಲ್ಲಿ ಜನಪದ ಸಮಾಜದ ಸಮಸ್ತ ಲಕ್ಷಣಗಳನ್ನು ಕುರಿತಾಗಿ ಪರಿಚಯಿಸಲಾಗಿದೆ. ಮುಂದಿನ ಲೇಖನಗಳಲಿ ಜನಪದರ ಸಾಮಾಜಿಕ ಜೀವನವನ್ನೂ ಅವರ ನಡವಳಿಕೆ ಹಾಗೂ ವ್ಯಕ್ತಿತ್ವಗಳನ್ನು ಕುರಿತು ವಿಶ್ಲೇಷಿಸಲಾಗಿದೆ.

೩೩೨ (೧೦೭). ಗುರುಮೂರ್ತಿ ಮಳಲಕೆರೆ; **ಗಾದೆಗೊಂದು ಬೋಧೆ**; ದಾವಣಗೆರೆ; ಶ್ರೀ ಸಿದ್ಧಲಿಂಗ ಪ್ರಕಾಶನ; ೨೦೦೦; ಪುಟ; ೧೪+೧೮೨; ಈ ಕೃತಿಯಲ್ಲಿ ಸುಮಾರು ೧೨೫ ಗಾದೆಗಳನ್ನು ಅಕಾರಾದಿಯಾಗಿ ಜೋಡಿಸಿಕೊಂಡು ಅವುಗಳಿಗೆ ವಿವರಣೆಯನ್ನು ನೀಡಲಾಗಿದೆ. ಈ ವಿವರಣೆಗೆ ಪೂರಕವಾಗುವಂತೆ ಕಥೆಯೊಂದನ್ನು ಹೆಣೆದು ಈ ಮೂಲಕ ಗಾದೆಯ ಅರ್ಥವಂತಿಕೆಯನ್ನು ಹೆಚ್ಚಿಸಿದ್ದಾರೆ. ಕಥೆಯ ನಂತರ ಆ ಗಾದೆಗೆ ಪರ್ಯಾಯವಾಗಿ ಬಳಕೆಯಾಗುವ ನಾಲ್ಕಾರು ಗಾದೆಗಳನ್ನು ಅಲ್ಲಿಯೇ ಪಟ್ಟಿಮಾಡಿದ್ದಾರೆ. ಹೀಗಾಗಿ ಇದು ೫೦೦ಕ್ಕೂ ಹೆಚ್ಚಿನ ಗಾದೆಗಳ ಸಂಗ್ರಹ ಎಂದು ಹೇಳಬಹುದು.

೩೩೩ (೧೦೮). ಗುರುಸ್ವಾಮಿ ಮಲೆಯೂರು, ದೇವಯ್ಯ ಹರವೆ; **ಚಿಕ್ಕದಣ್ಣಾಯಕ ಚನ್ನಬಸವಣ್ಣ**; ನಂಜನಗೂಡು; ರೂಪ ಪ್ರಕಾಶನ; ೧೯೮೭; ಪುಟ; ೨೦+೭೪; ಇದೊಂದು ಜನಪದ ಕಥನ ಕಾವ್ಯ. ಆನಪದ ಹಾಡುಗಾರ್ತಿಯೊಬ್ಬಳಿಂದ ಸಂಗ್ರಹಿಸಿದ ದೀರ್ಘವಲ್ಲದ ಕಥನ ಕಾವ್ಯ. ಈ ಕಥನಗೀತೆಯಲ್ಲಿ ಚನ್ನಬಸವಣ್ಣ ಪ್ರಸಾದ ಜನ್ಮಿ ಎಂದು ಕರೆಯಲಾಗಿದ್ದು, ಚನ್ನಯ್ಯ, ಕಕ್ಕಯ್ಯ ಇವರುಗಳ ಪ್ರಸಾದಕ್ಕೆ ಹೆಚ್ಚಿನ ಮಹತ್ವ ಕೊಡಲಾಗಿದೆ. ಇಲ್ಲಿ ಚನ್ನಯ್ಯ ಮತ್ತು ಹರಳಯ್ಯರು ಅಸ್ಪ್ರಶ್ಯ ವರ್ಗಕ್ಕೆ ಸೇರಿದಂತೆ. ಪ್ರಸ್ತುತ ಕೃತಿಯ ಗಾಯಕಿಯೂ ಅಸ್ಪ್ರಶ್ಯಳೇ ಆಗಿರುವುದರಿಂದ ಮತ್ತು ಹರಳಯ್ಯನ ಭಕ್ತೆಯಾಗಿರುವುದು ಇಲ್ಲ ಮುಖ್ಯವಾಗಿ ಗಮನಿಸುವ ಸಂಗತಿ.

೩೩೪ (೧೦೯). ಗುಂಡಕರ್ಜಗಿ ವಾಯ್.ಕೆ.; **ಹಂಡೆ ಕುರುಬರ ಒಂದು ಸಾಂಸ್ಕೃತಿಕ ಅಧ್ಯಯನ**; ಧಾರವಾಡ; ಕರ್ನಾಟಕ ವಿಶ್ವವಿದ್ಯಾಲಯ; ೧೯೯೭; ಪುಟ; ೬೧; ೧೯೯೭ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಎಂ.ಫಿಲ್ ಸಂಶೋಧನ ಸಂಪ್ರಬಂಧ. ಇದಕ್ಕೆ ಎಂ.ಎಂ. ಕಲಬುರ್ಗಿ ಅವರು ಮಾರ್ಗದರ್ಶಕರಾಗಿದ್ದರು. ಹಂಡೆ ಕುರುಬರನ್ನು ಸಾಂಸ್ಕೃತಿಕ ಅಧ್ಯಯನಕ್ಕೊಳಪಡಿಸಿದ ಈ ಸಂಪ್ರಬಂಧದಲ್ಲಿ ೯ ಅಧ್ಯಾಯಗಳಿವೆ. ಹಂಡೆಕುರುಬರ ಮೂಲ ಮತ್ತು ವಿಕಾಸ ಹಂಡೆ ಕುರುಬರ ಭೌಗೋಳಿಕ ಪ್ರಸಾರ ಮತ್ತು ಜನಸಂಖ್ಯೆ, ಹಂಡೆ ಕುರುಬರ ಪ್ರಕಾರಗಳು ಮತ್ತು ಉಪಪ್ರಕಾರಗಳು. ಹಂಡೆ ಕುರುಬರು ಮತ್ತು ಅವರ ಕುಟುಂಬ-ಜೀವನ, ವೃತ್ತಿ-ಜೀವನ, ಹಂಡೆ ಕುರುಬರ ಧಾರ್ಮಿಕ ಆಚರಣೆಗಳು, ಹಂಡೆ ಕುರುಬರ ಇತರ ಆಚರಣೆ-ಸಂಸ್ಕಾರಗಳು. ಹಂಡೆ ಕುರುಬರ ರಾಜಕೀಯ ಚಟುವಟಿಕೆಗಳು, ಹಂಡೆ ಕುರುಬರ ಸಾಹಿತ್ಯ- ಈ ಮೊದಲಾದ ಪ್ರಮುಖ ಅಂಶಗಳನ್ನು ಇದರಲ್ಲಿ ವಿವರಿಸಲಾಗಿದೆ.

೩೩೭ (೧೧೦). ಗೋಪಾಲಕೃಷ್ಣ ಬಿ. ಕುರುಪ್; **ಯಕ್ಷಗಾನ ತೆಂಕುತಿಟ್ಟಿನ ಚೆಂಡೆವಾದನ ಕ್ರಮ**; ಉಡುಪಿ; ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ; ೧೯೯೮; ಪುಟ; ೮+೯೮; ಇದು ತೆಂಕುತಿಟ್ಟಿನ ಅಥವಾ ಚೆಂಡೆವಾದನದ ಕುರಿತ ಕೃತಿ. ಇದರಲ್ಲಿ ಚೆಂಡೆಯನ್ನು ಬಾರಿಸುವ ರೀತಿಯನ್ನು ಶಾಸ್ತ್ರೀಯವಾಗಿ ವಿವರಿಸಲಾಗಿದೆ. ಚೆಂಡೆವಾದನ ಗ್ರಹಿಕೆ ಮತ್ತು ಕಲಿಕೆಗಳಿಗೆ ಈ ಗ್ರಂಥ ಅತ್ಯಂ ಉಪಯುಕ್ತವಾಗಿದೆ. ಸ್ವತಃ ಚೆಂಡೆವಾದಕರಾದ ಕುರುಪ್‌ರು ಪ್ರಾಯೋಗಿಕ ಅನುಭವದ ಹಿನ್ನೆಲೆಯಲ್ಲಿ ಈ ಕೃತಿಯನ್ನು ರಚಿಸಿದ್ದಾರೆ.

೩೩೮ (೧೧೧). ಗೋಪಾಲಕೃಷ್ಣ ಪಿ. ನಾಯಕ; **ಉತ್ತರ ಕನ್ನಡ ಜಾನಪದ ಕಲೆ**, ಧಾರವಾಡ; ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ; ೧೯೮೮; ಪುಟ; ೫೬; ಈ ಗ್ರಂಥದಲ್ಲಿ ಉತ್ತರ ಕನ್ನಡದ ಜನಪದ ಕಲೆಗಳ ಪರಿಚಯವನ್ನು ನೀಡಿದ್ದಾರೆ. ಉತ್ತರ ಕನ್ನಡ ಜಾನಪದ ಗುಮಟೆಗಪಂಗು ಸುಗ್ಗಿ, ಹೋಳಿಹಬ್ಬ, ಕೋಲಾಟ, ಗೋಪು, ನೃತ್ಯ, ಬಂಡಿಹಬ್ಬ, ಲಾವಣಿ ಮತ್ತು ಗೀಗೀ ಪದ, ಬಸವನಾಟ ಯಕ್ಷಗಾನ, ಸಣ್ಣಾಟಗಳು, ಗುಡಿಗಾರಿಕೆ, ಶಿಲ್ಪ, ಚಿತ್ರ, ಜನಪದ ಸಾಹಿತ್ಯ ಹೀಗೆ ವಿಂಗಡಿಸಿ ಉತ್ತರ ಕನ್ನಡದ ಜಾನಪದ ಸಾಹಿತ್ಯವನ್ನು ಪರಿಚಯಿಸಿದ್ದಾರೆ.

೩೪೦ (೧೧೨). ಗೋಪಾಲಕೃಷ್ಣ ಭಟ್ಟ; **ಯಕ್ಷಗಾನ ಮತ್ತು ನಾನು**; ಪುತ್ತೂರು; ಶ್ರೀ ಶೇಣಿ ಸನ್ಮಾನ ಸಮಿತಿ ಕನ್ನಡ ಸಂಘ; ೧೯೮೧; ಪುಟ; ೧೩+೧೩೪+೨೯; ಯಕ್ಷಗಾನಕ್ಕೆ ಸಂಬಂಧಿಸಿದಂತೆ ೫ ಭಾಗಗಳನ್ನು ಒಳಗೊಂಡ ಕೃತಿ ಮತ್ತು ಯಕ್ಷಗಾನಕ್ಕೆ ಸಂಬಂಧಿಸಿದ ಛಾಯಾಚಿತ್ರಗಳನ್ನು ಒಳಗೊಂಡಿದೆ.

೩೪೧ (೧೧೩). ಗೋಪಾಲಕೃಷ್ಣ ಹೆಗಡೆ; **ಹಾಲಕ್ಕಿ ಸಮಾಜ**; ಒಂದು ಅಧ್ಯಯನ; ಬೆಂಗಳೂರು; ಬೆಂಗಳೂರು ವಿಶ್ವವಿದ್ಯಾಲಯ; ೧೯೮೮; ಪುಟ; ೨೬೦; ಇದು ೧೯೮೮ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಪಿಎಚ್.ಡಿ. ಸಂಶೋಧನ ಮಹಾಪ್ರಬಂಧ. ಇದಕ್ಕೆ ಚಂದ್ರಶೇಖರ ಕಂಬಾರ ಅವರು ಮಾರ್ಗದರ್ಶಕರು. ಹಾಲಕ್ಕಿ ಸಮಾಜವನ್ನು ಕುರಿತ ಈ ಮಹಾಪ್ರಬಂಧದಲ್ಲಿ ೬ ಅಧ್ಯಯಗಳಿವೆ. ಹಾಲಕ್ಕಿಗಳ ಸಾಮಾಜಿಕ ಪರಿಕಲ್ಪನೆ, ಹಾಲಕ್ಕಿಗಳ ಪ್ರಾಕೃತಿಕ ಪರಿಸರ ಮತ್ತು ಪ್ರಾದೇಶಿಕ ಇತಿಹಾಸ, ಸಾಮಾಜಿಕ ಭಾಷಾ ವಿಜ್ಞಾನದ ನೆಲೆಯಲ್ಲಿ ಹಾಲಕ್ಕಿ ಹಾಗೂ ಇತರ ಪದಗಳ ಅರ್ಥ, ಹಾಲಕ್ಕಿ ಒಕ್ಕಲಿಗರ ಮೂಲ, ಹಾಲಕ್ಕಿ ಬುಡಕಟ್ಟಿನ ಸ್ವರೂಪ ಮೊದಲಾದ ವಿಷಯಗಳನ್ನು ಕುರಿತು ಇಲ್ಲಿ ಅಧ್ಯಯನ ಮಾಡಲಾಗಿದೆ.

೩೪೨ (೧೧೪). ಗೋಪಾಲಕೃಷ್ಣ ಹೆಗಡೆ; **ಪ್ರಸಂಗ ದರ್ಶನ ಶೇಣಿ ರಾಮಾಯಣ**; ಉತ್ತರ ಕನ್ನಡ; ಸುದರ್ಶನ ಪ್ರಕಾಶನ; ೧೯೯೩; ಪುಟ; ೨೬೨; ಯಕ್ಷಗಾನ ಪ್ರಸಂಗಕ್ಕೆ ಸಂಬಂಧಿಸಿದಂತೆ ೨೨ ಪ್ರಸಂಗಗಳನ್ನು ಒಳಗೊಂಡ ಕೃತಿ.

೩೪೫ (೧೧೫). ಗೋಪಾಳಿ ದುರದುಂಡಿ; **ಲಾವಣೀ ಪದಗಳು**; ಬಳ್ಳಾರಿ ಶಿವಲಿಂಗ ಶೆಟ್ಟಿ; ೧೯೧೨; ಪುಟ; ೭೨; ಪೌರಾಣಿಕ ಲಾವಣೀ ಪದಗಳು ಇಲ್ಲಿವೆ.

೩೪೬ (೧೧೬). ಗೋವಿಂದಜೋಶಿ ಹಣಮಂತ; **ಸಾಮತಿ ಸಂಗ್ರಹ–ಕನ್ನಡ ಗಾದೆಗಳೂ ಅವುಗಳ ಸಮಾನಾರ್ಥಕ ಇಂಗ್ಲೀಷ್ ನುಡಿಗಳು**; ಬೆಳಗಾಂ; ಬೆಳಗಾಂ ಸಮಾಚಾರ ಪ್ರೆಸ್; ೧೮೯೪, ೧೯೦೬; ಪುಟ; ೧೨೪; ಗಾದೆಗಳ ಸಂಗ್ರಹ

೩೫೨ (೧೧೭). ಗೌರಾಂಬಿಕಾದೇವಿ ಹಂಜಗಿಮಠ; **ಜೋಗಳ ಪದಗಳು**; ಹುಬ್ಬಳ್ಳಿ; ಎ.ಎಂ. ಕರಡಿ; ೧೯೫೫; ಪುಟ; ೨೪; ಮಕ್ಕಳನ್ನು ಮಲಗಿಸುವಾಗ ಹಾಡುವ ಜೋಗುಳ ಪದಗಳು ಈ ಕೃತಿಯಲ್ಲಿವೆ.

೩೫೩ (೧೧೮). ಚನ್ನಪ್ಪ ಚಕ್ಕಲೂರು; **ಕನ್ನಡ ಒಗಟುಮಾಲೆ**; ಚಕ್ಕಲೂರು; ಕನ್ನಡ ಮಿತ್ರ ಸಂಘ; ೨೮೯ ಒಗಟುಗಳ ಸಂಗ್ರಹವಾಗಿದೆ. ಉತ್ತರಗಳನ್ನು ಪ್ರತ್ಯೇಕವಾಗಿ ಕೊಡಲಾಗಿದೆ. ಸ.ನ. ನಾರಾಯಣಸ್ವಾಮಿ ಅವರ ಮುನ್ನಡಿಯಿದೆ.

೩೫೪ (೧೧೯). ಚನ್ನಬಸನಗೌಡ ಬ. ಪಾಟೀಲ; **ಏಳುಮಲೆ ಕೈಲಾಸ (ಶ್ರೀಮಹದೇಶ್ವರ ಚರಿತ್ರೆ) ಮೈಸೂರು ಜಿಲ್ಲೆ**; ಶ್ರೀ ಶಾಂತಮಲ್ಲಿಕಾರ್ಜುನ ಪರಕಾಶನ; ೧೯೮೯; ಪುಟ; ೫೪; ಇದು ಮಹದೇಶ್ವರ ಚರಿತ್ರೆಯನ್ನು ಒಳಗೊಂಡ ಕೃತಿಯಾಗಿದೆ. ಕಂಸಾಳೆ ಪದದಲ್ಲಿ ಬರುವ ಮಹದೇಶ್ವರ ಚರಿತ್ರೆಯನ್ನು ಸಂಗ್ರಹಿಸಿ, ಕ್ಷೇತ್ರಪರಿಚಯದ ಜೊತೆಗೆ ಮಹದೇಶ್ವರನ ಸರಳ ಚರಿತ್ರೆಯನ್ನು ಇಲ್ಲಿ ನೀಡಲಾಗಿದೆ. ಶ್ರೀಕ್ಷೇತ್ರಕ್ಕೆ ಸಂಬಂಧಿಸಿದಂತೆ ಅನೇಕ ಭಾವಚಿತ್ರಗಳನ್ನು ಕೊಡಲಾಗಿದೆ. ಕೃತಿಯ ಕೊನೆಗೆ ಮಹದೇಶ್ವರನ ಕುರಿತಾದ ತ್ರಿಪದಿಗಳನ್ನು ಸಂಗ್ರಹಿಸಲಾಗಿದೆ.

೩೫೬ (೧೧೯). ಚನ್ನಬಸಪ್ಪ ಗೊ.ರು. ಮತ್ತು ಸ.ಹ. ಕರಿಬಸಪ್ಪ; **ಜೋಗದ ಝೋಕ್ ಮತ್ತು ಇತರ ಹಾಡುಗಳು**;ಲ ಚಿಕ್ಕಮಗಳೂರು; ತರುಣರ ಸಂಘ; ೧೯೫೬; ಪುಟ; ೪+೩೦; ಮೂಗೂರು ಮಲ್ಲಪ್ಪನವರ ಪ್ರಸಿದ್ಧ ರಚನೆ 'ಜೋಗದ ಝೋಕ್ ಮತ್ತು ಇತರ ಕೆಲವು ಗೀತೆಗಳು ಇಲ್ಲಿವೆ. ಅಲ್ಲದೆ ಕೆ.ಆರ್. ಲಿಂಗಪ್ಪನವರು ಮುನ್ನುಡಿಯನ್ನು ಬರೆದಿದ್ದಾರೆ.

೩೭೪ (೧೨೦). ಚಂದ್ರರಾಜ ಶೆಟ್ಟಿ ಟಿ.; **ಒಗಟುಗಳು**; ಮಂಗಳೂರು; ಪ್ರಭಾತ್ ಪ್ರಿಂಟರ್ಸ್; ೧೯೫೬; ಪುಟ; ೧೬; ಒಗಟುಗಳ ಸಂಗ್ರಹವಾಗಿದೆ.

೩೮೮ (೧೨೧). ಚಂದ್ರಶೇಖರ ಕೆ; **ಜನಪದ ಒಗಟುಗಳು**; ಬೆಂಗಳೂರು; ಮೆಸರ್ಸ್ ಟಿ. ನಾರಾಯಣ ಅಯ್ಯಂಗಾರ್; ೧೯೯೩; ಪುಟ; ೧೫೨; ಈ ಕೃತಿಯಲ್ಲಿ ಒಟ್ಟು ೧೧೩೫ ಜನಪದ ಒಗಟುಗಳನ್ನು ಸಂಗ್ರಹಿಸಿದ್ದಾರೆ.

೩೮೯ (೧೨೨). ಚಂದ್ರಶೇಖರ ದಾಮ್ಲೆ; **ಜಾತ್ರೆ ಮತ್ತು ಇತರ ಸಂಶೋಧನಾತ್ಮಕ ಪ್ರಬಂಧಗಳು**; ಸುಳ್ಯ; ಸಮಾಜಶಾಸ್ತ್ರ ಸಂಘ; ೧೯೯೦; ಪುಟ; ೧೦+೧೦೬; ಜನಪದ ಜೀವನದ ಕುರಿತಾದ ಸಂಶೋಧನಾತ್ಮಕ ಲೇಖನಗಳ ಸಂಗ್ರಹ ಇದಾಗಿದೆ. ಇದರಲ್ಲಿ ಒಟ್ಟು ೧೦ ಲೇಖನಗಳಿವೆ. ಚೆನ್ನುನಲಿಕೆ, ನಾಕೂರುಕಯ, ಬಲಿವಾಡ, ದೃಷ್ಟಿ, ಕೃಷಿ

ನಂಬಿಕೆಗಳು, ರೈತ ಪ್ರಕೃತಿಯ ಕೈಗೂಸು. ಕೊಡಗಿನಲ್ಲಿ ಗೌಡರು, ಹರಿಜನ ಕಾಲೋನಿ, ಜೀರ್ಮುಕ್ಕಿಯ ಮುಸ್ಲಿಮರು, ಈ ೯ ಲೇಖನಗಳು ಸುಳ್ಯದ ನೆಹರೂ ಮೆಮೋರಿಯಲ್ ಕಾಲೇಜಿನ ವಿದ್ಯಾರ್ಥಿಗಳ ಸಂಶೋಧನಾತ್ಮಕ ಬರವಣಿಗೆಗಳಾಗಿವೆ.

೩೯೧ (೧೨೩). ಚಂದ್ರಶೇಖರ್ ಎಂ; **ಬೆಪ್ಪು ತಕ್ಕಡಿ ಬೆಳವ**; ಮೈಸೂರು; ಮಯೂರ ಪ್ರಕಾಶನ; ೧೯೬೫; ಪುಟ; ೮+೮೬; ಎಂಟು ಕಥೆಗಳ ಸಂಗ್ರಹ. ಸಚಿತ್ರ, ಲೇಖಕರ 'ಮೊದಲ ಮಾತು' ಇದೆ.

೩೯೨ (೧೨೪). ಚಂದ್ರಶೇಖರ ಮಂಡೆಕೋಲು; **ಅನ್ವೇಷಣೆ**; ಸುಳ್ಯ; ಅನ್ವೇಷಣ ಬಳಗ; ೨೦೦೧; ಪುಟ; ೧೦+೫೫; ಇದು ಸಂಶೋಧನೆ ಲೇಖನಗಳ ಸಂಗ್ರಹವಾಗಿದೆ. ಇಲ್ಲಿ ಒಟ್ಟು ೮ ಲೇಖನಗಳಿವೆ. ಅವುಗಳಲ್ಲಿ ಸುಳ್ಯ ಪರಿಸರದ ಅಡ್ಡಣ ಪೆಟ್ಟು, ಚಾಲ್ಲೂರಿನ ದಾಲ್ಲೂರಾಯಿ, ಎಡಮಂಗಲ ಮಾಲೆಂಗ್ರಿಯ ಮಾಲಿಂಗರಾಯ, ದುಗಲಡ್ಕದ ದುಗ್ಗಲರಾಯ, ಸುಳ್ಯದ ಶಾಸನಗಳು; ಬಳ್ಪದ ತ್ರಿಶೂಲಿನಿ ಎಂಬ ೬ ಲೇಖನಗಳು ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ಪ್ರದೇಶಗಳ ಭೂತಾರಾಧನೆಯನ್ನು ಕುರಿತಾದ ವಿಶ್ಲೇಷಣೆಯನ್ನು ಒಳಗೊಂಡಿದೆ.

೪೦೧ (೧೨೫). ಚಿತ್ತ ಪ್ರಸಾದ್; ಅನು: ಶಿವರಾಮ ಕಾರಂತ; **ಬಂಗಾಲದ ಬೆರಗಿನ ಕಥೆಗಳು**; ಬೆಂಗಳೂರು; ಐ.ಬಿ.ಎಚ್. ಪ್ರಕಾಶನ; ೧೯೭೧; ಪುಟ; ೬೫; ನಾಲ್ಕು ಸಚಿತ್ರ ಕಥೆಗಳಿವೆ.

೪೧೩ (೧೨೬). ಚೆನ್ನಕೇಶವ ಎನ್.ಕೆ.; **ಯಕ್ಷಗಾನ ವಚೋವಿಲಾಸ**; ಉಡುಪಿ; ಕರ್ನಾಟಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ; ೨೦೦೦; ಪುಟ; ೧೦+೯೪; ಈ ಕೃತಿಯಲ್ಲಿ (ಯಕ್ಷಗಾನದಲ್ಲಿಯ ಪೀಠಿಕೆಯ ಕುರಿತಾದ ವಿಶ್ಲೇಷಣೆ) ಅರ್ಥಗಾರಿಕೆ, ಸಾಹಿತ್ಯಾಂಶ, ಹೊಳಹುಗಳು, ಸಮಾನಾಂತರತೆ, ರಸವಾಕ್ಯಗಳು, ಹಾಸ್ಯ, ವಿಜ್ಞಾನ, ಅನೌಚಿತ್ಯ, ರಂಗದಿಂದ ಹೊರಗೆ ಎಂಬ ಲೇಖನಗಳಿವೆ.

೪೧೬ (೧೨೭). ಚೆನ್ನಣ್ಣ ವಾಲೀಕರ; **ಗುಲಬರ್ಗಾ ಜಿಲ್ಲೆಯ ತ್ರಿಪದಿಗಳು**; ಹೆಣ್ಣೋಡ; ಯುನಿವರ್ಸಲ್ ಪಬ್ಲಿಕೇಶನ್ಸ್; ೧೯೮೯; ಪುಟ; ೯೦+೧೦; ಚೆನ್ನಣ್ಣ ವಾಲೀಕಾರ ಅವರ ಮೊದಲ ಜನಪದ ಸಂಗ್ರಹ ಇದಾಗಿದೆ. ಗರತಿಹಡು, ಮಲ್ಲಿಗೆ ದಂಡೆ, ಜೀವನ ಸಂಗೀತ ಇವೇ ಮೊದಲಾದ ಸಂಕಲನಗಳ ಸ್ಫೂರ್ತಿ ಹಾಗೂ ಪ್ರೇರಣೆಯಿಂದ ಈ ಕೃತಿಯನ್ನು ಹೊರತರಲಾಗಿದೆ. ಗುಲ್ಬರ್ಗಾ ಜಿಲ್ಲೆಯ ಮಹಿಳೆಯರು ಅದೂ ಶೋಷಿತ ಸಮುದಾಯಗಳ ಮಹಿಳೆಯರು ಹಾಡಿದ ತ್ರಿಪದಿಗಳನ್ನು ಸಂಗ್ರಹಿಸಲಾಗಿದೆ.

೪೧೭ (೧೨೮). ಚೆನ್ನಣ್ಣ ವಾಲೀಕರ; **ಐದು ಜನಪದ ಸಮಾಜವಾದಿ ಕಾವ್ಯಗಳು**; ಬೆಂಗಳೂರು; ಇಳಾ ಪ್ರಕಾಶನ; ೧೯೯೦; ಪುಟ; ೨೦೦+೮; ಈ ಕೃತಿಯಲ್ಲಿ ೫ ಕಾವ್ಯಗಳನ್ನು ಕಾಣಬಹುದು. ಮಾದರ ಸಾಬವ್ವನ ಕೋಲಿನಪದ ತೆಳವಾರ ಮರಿಯಮ್ಮನ ಚಪ್ಪಾಳೆ ಹಾಡು, ಪಾರ್ವತಿ ಹುಸೇನಬಿಯರ ಬುರ್ರಕಥಾ,ದ ಕಾಡುರಬೀಜನ ವೇಷಗಾರರ ಹಾಡು, ನಾಯ್ಕೋಡಿ ಬಸಂತನ ಬಂಡಾಯದ ಲಾವಣಿ.

೪೨೦ (೧೨೯). ಚೆನ್ನಣ್ಣ ವಾಲೀಕಾರ; **ವಾಲೀಕಾರ ಚೆನ್ನಣ್ಣನ ಜಾನಪದ ಲೋಕ**; ಗುಲ್ಬರ್ಗಾ; ದಲಿತ ಬಂಡಾಯ ವಿಚಾರ ಪ್ರಚಾರ ಸಮಿತಿ; ೧೯೯೩; ಪುಟ; ೩೭೮+೧೮; ಇಲ್ಲಿ ೨೧ ಲೇಖನಗಳಿವೆ. ಆನಪದ ವೃತ್ತಿ ಗಾಯಕರು ಲೇಖನ ಅಭ್ಯಾಸ ಪೂರ್ಣವಾದ ಲೇಖನವಾಗಿದೆ. ಜಾತ್ರೆಗಳ ಪೌರಾಣಿಕ ಹಿನ್ನೆಲೆ ಗೊಂಬೆಯಾಟಗಳು ಸ್ಥೂಲವಾದ

ಹಾಗೂ ಪರಿಚಯಾತ್ಮಕವಾದ ಲೇಖನಗಳಾಗಿವೆ. ಈ ಕೃತಿಯು ಉತ್ತರ ಕರ್ನಾಟಕ ಜಾನಪದ ಅಧ್ಯಯನ ಶಕ್ತಿ ಮತ್ತು ದೌರ್ಬಲ್ಯಗಳನ್ನು ತೆರೆದು ತೋರುತ್ತದೆ.

೪೩೧ (೧೩೦). ಜಗನ್ನಾಥ ಎಸ್. ಹೆಬ್ಬಾಳೆ; **ಸತ್ತವರ ಹಾಡುಗಳು**; ಬೀದರ; ಜನದನಿ ಪ್ರಕಾಶನ; ೧೯೯೪, ಪು; ೪೬+೧೬; ಸತ್ತವರ ಹಾಡು ಹೃದಯದ ಆಕ್ರೋಶ, ನೋವು ನಿರಾಶೆ ಮತ್ತು ಚಿಂತೆಯಿಂದ ತುಂಬಿಕೊಂಡಿದೆ. ಉಪಮೆ, ಗಾದೆಗಳಂತೂ ಹಾಡಿನ ಮೇಟಿಯಾಗಿದೆ. ಈ ಹಾಡುಗಳು ಬಹುಪ್ರಾಚೀನ ಕಾಲದಿಂದಲೂ ಬೆಳೆದು ಬಂದಿವೆ ಎಂಬುದಕ್ಕೆ ಅನೇಕ ದಂತಕಥೆಗಳಿವೆ. ಸತ್ತವರ ಶವಸಂಸ್ಕಾರ ಪದ್ಧತಿ ಮತ್ತು ಹಾಡುಗಳ ಆಯಾ ಸಮಾಜ, ಜನಾಂಗ ಮತ್ತು ಸತ್ತ ವ್ಯಕ್ತಿಯ ವಯಸ್ಸನ್ನು ಪ್ರತಿಬಿಂಬಿಸುತ್ತವೆ. ದುಃಖ, ಆವೇಶದ ರಾಗಾಲಾಪ ಮಾಡುವ ಬಗೆ ತೀರ ಭಿನ್ನವೆನಿಸಿದೆ. ಇಲ್ಲಿ ಒಟ್ಟು ೧೯ ಹಾಡುಗಳಿವೆ.

೪೩೭ (೧೩೨). ಜತ್ತಪ್ಪ ರೈ ಕದಂಬಾಡಿ; **ಬೇಟೆಯ ನೆನಪುಗಳು**; ಕನ್ನಡ ಸಂಘ, ದಕ್ಷಿಣ ಕನ್ನಡ; ೧೯೭೮, ಪು; ೧೦+೧೦೦; ಬೇಟೆಗೆ ಸಂಬಂಧಿಸಿದ ಕೆಲವು ಪ್ರಸಂಗಗಳನ್ನು ಒಳಗೊಂಡ ಕೃತಿ. ಒಟ್ಟು ೭ ಪ್ರಸಂಗಗಳನ್ನು ಒಳಗೊಂಡ ಕೃತಿ ಆಗಿದೆ.

೪೪೨ (೧೩೩). ಜಯಪ್ರಕಾಶ ಮಾವಿನಕುಳಿ; **ಹರಿಕಾಂತರ ಪದಗಳು**; ಮೂಡುಬಿದಿರೆ ಸ್ಫಟಿಕ ಪ್ರಕಾಶನ, ಕೋಡಂಗಲ್ಲು; ೧೯೯೨; ಪುಟ. ೬೦; ಇದು ಜನಪದ ಕಥನಗೀತೆಗಳ ಸಂಗ್ರಹವಾಗಿದೆ. ಮೂಲದಲ್ಲಿ ಉತ್ತರ ಕನ್ನಡದ ಕುಮಟಾ ತಾಲೂಕಿನ ಶ್ರೀ ಹೊನ್ನಪ್ಪ ಹರಿಕಾಂತ ಹಾಡುತ್ತಿದ್ದ ಎರಡು ಕಥನಗೀತೆಗಳು ಇದರಲ್ಲಿವೆ.

೪೪೭ (೧೩೪). ಜಯಶ್ರೀ ಗಾಯಕವಾಡ; **ಆಳಂದ ತಾಲೂಕ ಸಂಪ್ರದಾಯದ ಹಾಡುಗಳು ಒಂದು ಅಧ್ಯಯನ**; ಗುಲ್ಬರ್ಗಾ; ಗುಲ್ಬರ್ಗಾ ವಿಶ್ವವಿದ್ಯಾಲಯ; ೧೯೮೮; ಪು. ೧೧೧; ಇದು ೧೯೮೮ರಲ್ಲಿ ಚೆನ್ನಣ್ಣ ವಲಲೀಕಾರ ಅವರ ಮಾರ್ಗದರ್ಶನದಲ್ಲಿ ರಚನೆಯಾದ ಎಂ.ಫಿಲ್ ಪ್ರಬಂಧ ಇದಾಗಿದೆ. ಇದನ್ನು ಗುಲ್ಬರ್ಗಾ ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಮಾಡಲಾಗಿದೆ. ಇದರಲಲಿ ಆರು ಅಧ್ಯಾಯಗಳಿವೆ. ಆಳಂದ ತಾಲೂಕಿನ ಜಾನಪದ ಭಾಷೆಯ ವೈಶಿಷ್ಟ್ಯ, ಜಾನಪದ ಸಾಹಿತ್ಯ ಸ್ವರೂಪ, ಜಾನಪದ ಸಾಹಿತ್ಯದಲ್ಲಿಯ ಸಂಪ್ರದಾಯದ ಹಾಡುಗಳು, ಸಂಪ್ರದಾಯದ ಹಾಡುಗಳಲ್ಲಿ ಬೆಳೆದು ಬಂದಿರುವ ಮನುಷ್ಯನ ಜೀವನದ ಬೆಳವಣಿಗೆ ಮತ್ತು ಸಂಬಂಧಗಳು, ಜೀವನಮೌಲ್ಯ ಇತ್ಯಾದಿ ವಿಷಯಗಳ ಅಧ್ಯಯನ ಇದರಲ್ಲಿದೆ.

೪೪೮ (೧೩೫). ಜಯಶ್ರೀ ಗುತ್ತಲ; **ಜನಪದ ಮಂಗಳ ಗೀತೆಗಳು**; ಬೆಂಗಳೂರು; ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ; ೧೯೯೪; ಪು. ೮+೬೪; ಈ ಸಂಕಲನದಲ್ಲಿ ಉತ್ತರ ಕರ್ನಾಟಕದ ವಿವಿಧ ದೈವಗಳನ್ನು ಕುರಿತ ಹಾಡುಗಳ ಜೊತೆಗೆ, ಸೋಬಾನೆ ಹಾಡುಗಳು ಹೆಚ್ಚಾಗಿ ಸೇರಿಕೊಂಡಿವೆ. ಒಂದೆರಡು ಕೋಲಾಟದ ಪದಗಳೂ ಇವೆ. ಆದರೆ ಸಂಪ್ರದಾಯದ ಪದಗಳ ಸಂಖ್ಯೆಯೇ ಹೆಚ್ಚು. ಈ ಹಾಡುಗಳನ್ನು ಹಾಡಿದವರ ಹೆಸರನ್ನು ಗೀತೆಯೊಂದಿಗೆ ನೀಡಲಾಗಿದೆ. ಇಲ್ಲಿ ಒಟ್ಟು ೪೪ ಗೀತೆಗಳನ್ನು ಸಂಗ್ರಹಿಸಲಾಗಿದೆ.

೪೪೯ (೧೩೬). ಜಯಶ್ರೀ ಗ. ಬರಡೆ; **ಬೆಳಗಾವಿ ಜಿಲ್ಲೆಯ ಹರಿಜನ ಸಂಸ್ಕಾರಗಳು**; ಧಾರವಾಡ; ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ; ೧೯೯೫; ಪು. ೮೫; ೧೯೯೫ರಲ್ಲಿ ಬಿ.ಬಿ. ಬಿರಾದಾರ ಅವರ ಮಾರ್ಗದರ್ಶನದಲ್ಲಿ ಕನಾಟಕ ವಿಶ್ವವಿದ್ಯಾಲಯಕ್ಕೆ ಮಂಡಿಸಿದ ಎಂ.ಫಿಲ್. ಸಂಶೋಧನ ಸಂಪ್ರಬಂಧ. ಬೆಳಗಾವಿ ಜಿಲ್ಲೆಯ ಹರಿಜನರ ಸಂಸ್ಕಾರಗಳನ್ನು

ಕುರಿತು ಹೇಳುವ ಈ ಸಂಪ್ರಬಂಧದಲ್ಲಿ ೭ ಅಧ್ಯಾಯಗಳಿವೆ. ಹರಿಜನರ ಪರಿಚಯ, ಹರಿಜನರ ಸಂಸ್ಕಾರಗಳು, ಹರಿಜನರ ಜನಪದ ಸಂಸ್ಕಾರಗಳು, ಹರಿಜನರ ಮದುವೆ ಸಂಸ್ಕಾರಗಳು, ಹರಿಜನರ ಮರಣದ ಸಂಸ್ಕಾರಗಳು ಮೊದಲಾದ ಹರಿಜನ ಸಂಸ್ಕಾರಗಳನ್ನು ಕುರಿತು ಈ ಸಂಪ್ರಬಂಧ ವಿವರಿಸುತ್ತದೆ.

೪೫೦ (೧೩೭). ಜವರೇಗೌಡ ದೇ; **ಭಾರತದ ಜಾನಪದ ಕತೆಗಳು**; ಬೆಂಗಳೂರು; ಐ.ಬಿ.ಎಚ್. ಪ್ರಕಾಶನ; ೧೯೭೧; ಪು. ೧೦೨+೧; ಇದೊಂದು ಮಕ್ಕಳ ಕತೆಗಳ ಸಂಕಲನವಾಗಿದೆ. ಇದರಲ್ಲಿ ಒಟ್ಟು ೧೪ ಕತೆಗಳಿವೆ. ಕತೆಯೊಂದರ ಜೊತೆಗೆ ಚಿತ್ರಗಳಿದ್ದು ಮಕ್ಕಳನ್ನು ಆಕರ್ಷಿಸುತ್ತವೆ. ಭಾಷೆ ಸರಳವಾಗಿದೆ. ಇಲ್ಲಿನ ನೀತಿ, ಮೌಲ್ಯಗಳು ಜಾನಪದೀಯ ತಳಹದಿಯ ಮೇಲೆ ನಿಂತಿವೆ.

೪೫೮ (೧೩೮). ಜಾನಕಿ ಬಿ.ಜೆ.; **ದಂಪತಿಯ ಒಗಟುಗಳು**; ಹುಬ್ಬಳ್ಳಿ; ಜಗದಂಬಾ ಪ್ರಕಾಶನ; ೧೯೫೯; ಪು. ೭೦; ದಂಪತಿಗಳು ಹೇಳುವ ಒಗಟುಗಳು ಈ ಕೃತಿಯಲ್ಲಿವೆ.

೪೫೯ (೧೩೯). ಜಾನಕಿ ಬಿ.ಜೆ.; **ಹಂತಿಯ ಪದಗಳು**; ಹುಬ್ಬಳ್ಳಿ; ಶ್ರೀ ಜಗದಂಬಾ ಪ್ರಕಾಶನ; ೧೯೫೯; ಪು. ೭೦; ಹಂತಿಹಾಡುಗಳ ಸಂಗ್ರಹ ಇದಾಗಿದೆ. ಸಾಮಾನ್ಯ ಓದುಗರನ್ನು ಗಮನದಲ್ಲಿ ಇಟ್ಟುಕೊಂಡು ಇವುಗಳನ್ನು ಸಂಗ್ರಹಿಸಲಾಗಿದೆ.

೪೭೦ (೧೪೦). ಜೇಕಬ್ ಕೆ; **ಕೇರಳದ ಜಾನಪದ ಕಥೆಗಳು**; ಬೆಂಗಳೂರು; ಎಸ್.ಬಿ.ಎಸ್. ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್; ೧೯೯೩; ಪು. ೬+೧೦೫; ಈ ಕರತಿಯಲ್ಲಿ ಒಟ್ಟು ೪೮ ಕಥೆಗಳಿವೆ. ಈ ಕಥೆಗಳು ಕೇರಳದಲ್ಲಿ ತುಂಬಾ ಪ್ರಚಲಿತದಲ್ಲಿವೆ. ಇವು ಸರಳ ಭಾಷೆಯನ್ನೊಳಗೊಂಡಿದ್ದು, ನೀತಿ, ಧರ್ಮ, ಕರ್ಮ, ಸೇವೆ ಮೊದಲಾದ ಮೌಲ್ಯಗಳನ್ನು ಪ್ರತಿಪಾದಿಸುತ್ತವೆ. ಇದರಲ್ಲಿ ಲೇಖಕರು ಓದುಗರ ಸಹಾಯಕ್ಕೆಂದು ಚಿತ್ರಗಳನ್ನು ನೀಡಿದ್ದಾರೆ.

೪೭೧ (೧೪೧). ಜೈನ ಜೆ.ಸಿ.; **ಕಥೆಗಳ ಕೊಪ್ಪರಿಗೆ**; ಬೆಂಗಳೂರು; ಐ.ಬಿ.ಎಚ್. ಪ್ರಕಾಶನ; ೧೯೬೯; ಪು. ೪೩; ಹದಿಮೂರು ಕಥೆಗಳು ಸುಚಿತ್ರವಾಗಿವೆ.

೪೭೫ (೧೪೨). ಜೋಶಿ ವೆಂ.ಮು; **ಜನಪದ ಜಗತ್ತಿನಲ್ಲಿ ಮಹಾಭಾರತ**; ಬೆಂಗಳೂರು ಜನಪದ ಅಕಾಡೆಮಿ; ೧೯೮೪; ಪು. ೫೧+೫; ಇದು ಜನಪದ ಮಹಾಭಾರತದ ಕೆಲ ಪಾತ್ರಗಳ ಪರಿಚಯವನ್ನು ಒಳಗೊಂಡಿದೆ. ಇಲ್ಲಿ ಮಹಾಭಾರತದ ಸುಭದ್ರೆ, ಅರ್ಜುನ ಹಾಗೂ ದ್ರೌಪದಿಯ ಪಾತ್ರಗಳನ್ನು ಜಾನಪದ ದೃಷ್ಟಿ ಕೋನದಿಂದ ಚಿತ್ರಿಸಲಾಗಿದೆ. ಜನಪದದ ಕೋಲಾಟದ ಪದಗಳು, ಗೀಗೀ ಪದಗಳು, ಲಾವಣಿ ಪದಗಳು, ಸಣ್ಣಾಟ, ದೊಡ್ಡಾಟ ಸೋಬಾನೆ ತ್ರಿಪದಿಗಳು ಮೊದಲಾದ ಪ್ರಕಾರಗಳಲ್ಲಿ ಬರುವ ಮಹಾಭಾರತದ ಗದ್ಯರೂಪ ಇದಾಗಿದೆ.

೪೭೮ (೧೪೩). ಜೋಶಿ ಶಂ.ಬಾ; **ಮಕ್ಕಳ ಒಡಪುಗಳು**; ಧಾರವಾಡ; ಸಮಾಜ ಪುಸ್ತಕಾಲಯ; ೧೯೪೦, ೧೯೪೬, ೧೯೬೬; ಪುಟ. ೨೮; ಉತ್ತರಗಳೊಡನೆ ೨೧೪ ಒಗಟುಗಳಿವೆ.

೪೭೯ (೧೪೪). ಜ್ಯೋತಿ ಡಿ.ಬಿ.; **ಶ್ರೀಮತಿ ಕೌಜಲಗಿ ನಿಂಗಮ್ಮ**; ಹಂಪಿ; ಸಮಾಜ ವಿಜ್ಞಾನಗಳ ನಿಕಾಯ; ೨೦೦೩; ಪು. ೧೧೨; ಈ ಸಂಪ್ರಬಂಧದಲ್ಲಿ ಅಲೆಮಾರಿ ಸಮುದಾಯದ ಕಲಾವಿದೆಯಾದ ಕನ್ನಡ ನಾಡಿನ ಪ್ರಥಮ ರಂಗಭೂಮಿ ನಟಿ ಶ್ರೀಮತಿ ಕಾಜಲಗಿ ನಿಂಗಮ್ಮನ ಕುರಿತಾದ ಅಧ್ಯಯನವಿದೆ. ಇದರಲ್ಲಿ ಒಟ್ಟು ೫ ಅಧ್ಯಾಯಗಳು ಹಾಗೂ ಅನುಬಂಧವಿದೆ. ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ ಕಾಜಲಗಿಯ ನಿಂಗಮ್ಮನ

ಜೀವನ ಹಾಗೂ ಸಾಧನೆಯನ್ನು ಕುರಿತಾದ ಸಂಶೋಧನ ಗ್ರಂಥ ಇದಾಗಿದ.ಎ ಡೊಂಬರ ಸಮಾಜದ ಚಾರಿತ್ರಿಕ ಬೆಳವಣಿಗೆ, ಡೊಂಬರ ಮಹಿಳೆಯ ಸ್ಥಾನಮಾನ ಮತ್ತು ಪ್ರಮುಖ ಡೊಂಬರ ಮಹಿಳೆಯರ ವಿವರಗಳಿವೆ. ಡೊಂಬರ ಕಲೆಗಳು, ಸಾಂಸ್ಕೃತಿಕ ಆಚರಣೆಗಳು, ರಂಗಭೂಮಿಯ ಜೊತೆಗಿನ ಸಂಬಂಧಗಳು, ಈ ಹಿನ್ನೆಲೆಯಲ್ಲಿ ನಿಂಗಮ್ಮನ ಜೀವನ ಮತ್ತು ಸಾಧನೆಗಳನ್ನು ಅಧ್ಯಯನ ಮಾಡಲಾಗಿದೆ.

೪೮೦ (೧೪೫). ಜ್ಯೋತಿ ಹೊಸೂರ; **ಬೆರಸಿ ಇಟ್ಟೀನ ಬೆಲ್ಲ ನೆನಗಡಲಿ**; ಬೆಳಗಾವಿ; ಜಾನಪದ ಮಂಟಪ; ೧೯೬೯; ಪು. ೯೬; 'ಬೆರಸಿ ಇಟ್ಟೀನ ಬೆಲ್ಲ ನೆನಗಡು' ಈ ಸಂಗ್ರಹದಲ್ಲಿ ಉತ್ತಮವಾದ ಜನಪದ ಗೀತೆಗಳಿವೆ. ಈ ಸಂಗ್ರಹದ ಮೊದಲ ದನಿ ಏಳುತಲೆ ನೆನವಿನ, ಏಳೆಂಟು ದೇವರನ ಎಂಬುವದು ಪ್ರಾರ್ಥನಾ ರೂಪ ಪದ್ಯ, ಭಕ್ತಿ ಕಾವ್ಯಗಳೆರಡೂ ಈ ಸಂಗ್ರಹದಲ್ಲಿವೆ.

೪೮೩ (೧೪೬). ಟೋಪಣ್ಣವರ ಎಸ್.ಜಿ; **ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಜಾನಪದೀಯ ಅಂಶಗಳು**; ಧರವಾಡ; ಕರ್ನಾಟಕ ವಿಶ್ವವಿದ್ಯಾಲಯ; ೧೯೯೩; ಪುಟ ೧೧೭; ೧೯೯೩ರಲ್ಲಿ ಎಸ್.ಜಿ. ಇಮ್ರಾಪೂರ ಅವರ ಮಾರ್ಗದರ್ಶನದಲ್ಲಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಎಂ.ಫಿಲ್ ಸಂಶೋಧನ ಸಂಪ್ರಬಂಧ, ಜಾನಪದೀಯ ಅಂಶಗಳನ್ನು ತೆರೆದು ತೋರುವ ಶಿವರಾಮ ಕಾರಂತರ ಕಾದಂಬರಿಗಳ ಅಧ್ಯಯನವಾದ ಈ ಸಂಪ್ರಬಂಧದಲ್ಲಿ ೧೧ ಅಧ್ಯಾಯಗಳಿವೆ. ಈ ಸಂಪ್ರಬಂಧದಲ್ಲಿ ಶಿವರಾಮ ಕಾರಂತ ಮತ್ತು ಕನ್ನಡ ಕಾದಂಬರಿ ಪ್ರಕಾರ, ಕಾರಂತರ ಕಾದಂಬರಿಗಳಲ್ಲಿ ವಸ್ತು ವೈವಿಧ್ಯ, ಕಾರಂತರ ಕಾದಂಬರಿಗಳಲ್ಲಿ ಪ್ರಾದೇಶಿಕತೆ, ಕಾರಂತರ ಕಾದಂಬರಿಗಳಲ್ಲಿ ಉಕ್ತವಾದ ನಂಬಿಕೆ ಮತ್ತು ಸಂಪ್ರದಾಯಗಳೂ, ಕಾರಂತರ ಕಾದಂಬರಿಗಳಲ್ಲಿ ಉಕ್ತವಾದ ಜನ ಜೀವನ–ಸಂಸ್ಕೃತಿ, ಕಾದಂಬರಿಭಾಷೆ, ಕಾದಂಬರಿಗಳಲ್ಲಿ ಆಹಾರ ಪಾನೀಯಗಳು, ವೇಷಭೂಷಣ, ಉಡುಗೆ–ತೊಡುಗೆಗಳು, ಜನಪದ ವೈದ್ಯ–ಮಾಟ–ಮಂತ್ರ–ತಂತ್ರ, ಜನಪದ ಕಲೆಗಳು ಹೀಗೆ ಮೊದಲಾದ ಜಾನಪದೀಯ ಅಂಶಗಳನ್ನು ವವರಿಸಲಾಗಿದೆ.

೪೯೨ (೧೪೭). ತಮ್ಮಣ್ಣಗೌಡ ಎನ್; **ಬೇಸಾಯಕ್ಕೆ ಸಂಬಂಧಪಟ್ಟ ನಂಬಿಕೆಗಳು ಹಾಗೂ ಆಚರಣೆಗಳು**; ಬೆಂಗಳೂರು; ಬೆಂಗಳೂರು ವಿಶ್ವವಿದ್ಯಾಲಯ; ೧೯೮೪; ಪುಟ ೧೧೨; ಇದು ೧೯೮೪ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಶೋಧನ ಎಂ.ಫಿಲ್, ಸಂಪ್ರಬಂಧ ಕೆ. ಮರುಳಸಿದ್ದಪ್ಪ ಇದಕ್ಕೆ ಮಾರ್ಗದರ್ಶಕರಾಗಿದ್ದು, ಬೇಸಾಯಕ್ಕೆ ಸಂಬಂಧಪಟ್ಟ ನಂಬಿಕೆ ಹಾಗೂ ಆಚರಣೆಗಳನ್ನು ಕುರಿತು ಹೇಳುವ ಈ ಸಂಪ್ರಬಂಧದಲ್ಲಿ ೯ ಅಧ್ಯಾಯಗಳಿವೆ.

೪೯೪ (೧೪೮). ತಲ್ವಾಡಿ ಬಿ.ಎಸ್.; **ಅರಸು ತೂಕದ ನಲ್ಲ**; ಬೆಂಗಳೂರು; ವಿದ್ಯಾಶ್ರೀ ಪ್ರಕಾಶನ; ೧೯೯೧; ಪು ೨೦+೧೦೦; ಆಲದ ಮರ ಐತಿಹ್ಯಕ್ಕೆ ಸಂಬಂಧಿಸಿದಂತೆ ೮ ಲೇಖನಗಳನ್ನು ಒಳಗೊಂಡ ಕೃತಿ.

೪೯೮ (೧೪೯). ತಲ್ವಾಡಿ ಬಿ.ಎಸ್.; **ಬೇವು ಮತ್ತು ಇತರ ಕಥೆಗಳು**; ಬೆಂಗಳೂರು; ಕರ್ನಾಟಕ ಕ್ರೈಸ್ತ ಜಾನಪದ ಕೇಂದ್ರ; ೧೯೯೭; ಪುಟ ೧೨೪; ಇಲ್ಲಿಯ ಕಥೆಗಳು ಮೂಢನಂಬಿಕೆ, ಸಂಪ್ರದಾಯ, ಪಯಕ್ತಿಯಂತಹ ಜೀವವಿರೋಧಿ ಅಂಶಗಳನ್ನು ತೋರೆಯುವಂತೆ ಇರುವ ಕಥೆಗಳು.

೫೦೧ (೧೫೦). ತಳವಾರ ನೀಲಿಗಿರಿ; **ಜಾನಪದ–೧೯೯೪**; ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡಮಿ; ೧೯೯೬; ಪುಟ ೧೯೬+೮; ೧೯೯೪ನೆಯ ಸಾಲಿನಲ್ಲಿ ಪ್ರಕಟವಾದ ಪ್ರಮುಖ ಲೇಖನಗಳ ಸಂಗ್ರಹ ಇದಾಗಿದೆ. ಜಾನಪದದ ಬೇರೆ ಬೇರೆ ಮುಖಗಳಿಗೆ ಸಂಬಂಧಿಸಿದ ಒಟ್ಟು ೨೦ ಲೇಖನಗಳು ಇದರಲ್ಲಿವೆ. ಈ ಲೇಖನಗಳು ಕ್ರಮವಾಗಿ ಜಾನಪದದ ಪರಿವೀಕ್ಷಣ ಮತ್ತು ಅಧ್ಯಯನ, ಸಾಹಿತ್ಯ ಪ್ರಕಾರಗಳ ಅಧ್ಯಯನ, ಜನಾಂಗಿಕ ಅಧ್ಯಯನ, ಕ್ರೀಡೆ, ಸಂಪ್ರದಾಯ ಆಚರಣೆಗಳು, ಪ್ರದರ್ಶನ ಕಲೆಗಳು ಹಾಗೂ ಗಣನೀಯ ಸೇವೆ ಸಲ್ಲಿಸುತ್ತಿರುವ ಜಾನಪದ ಸಂಸ್ಥೆಗಳ ಪರಿಚಯ ಈ ರೀತಿಯಾಗಿ ಸಂಯೋಜಿಸಲ್ಪಟ್ಟಿವೆ.

೫೦೩ (೧೫೧). ತಿಪ್ಪೇಸ್ವಾಮಿ ಜಿ.ಆರ್.; **ಗ್ರಾಮೀಣ ಗೃಹ ವಸ್ತುಗಳು**; ವಿಜಾಪುರ; ಭಾರತೀ ಸಾಹಿತ್ಯ ಭಂಡಾರ; ೧೯೮೮; ಪುಟ ೮೦; ಇದರಲ್ಲಿ ಗೃಹ ಬಳಕೆಯ ಜಾನಪದ ವಸ್ತುಗಳ ಸಚಿತ್ರ ಪರಿಚಯವಿದೆ. ಹಳ್ಳಿಗಳಲ್ಲಿ ಬಳಸುವ ಶ್ಯಾವಿಗೆ ಮಣೆ, ಕಡಗೋಲು, ನೆಲವು, ಅಡ್ಡಣಿಗೆ, ಒನಕೆ–ಒರಳು, ಸಂಬಾರು–ಬಟ್ಟಲು ಮರಿಗೆ ಇತ್ಯಾದಿಗಳ ವೈಶಿಷ್ಟ್ಯಗಳನ್ನು ಪರಿಚಯಿಸಲಾಗಿದೆ. ಇದು ಮಕ್ಕಳಿಗಾಗಿ ಬರೆದ ಕೃತಿಯಾಗಿದೆ.

೫೦೪ (೧೫೨). ತಿಪ್ಪೇಸ್ವಾಮಿ ಜಿ.ಆರ್; **ಜಾನಪದ ಗಂಗೋತ್ರಿ ಸಂ. ೮ ಸಂ ೧**; ಬೆಂಗಳೂರು; ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ; ೧೯೯೫; ಪುಟ ೮೯; ಇದರಲ್ಲಿರುವ ಲೇಖನಗಳು ಕನ್ನಡ ಜಾನಪದದ ವಿವಿಧ ಲೇಖನಗಳು, ಕನ್ನಡ ಜಾನಪದದ ವಿವಿಧ ನೆಲೆಗಳನ್ನು ಇವು ಪರಿಚಯ ಮಾಡಿಕೊಡುತ್ತವೆ.

೫೧೯ (೨೫೩). ತಿಮ್ಮರಾಯಪ್ಪ ಎಂ; **ಜನಪದ ಮಹಾಕಾವ್ಯ ಮಲೆಯ ಮಾದೇಶ್ವರ**; ಒಂದು ಜಾನಪದೀಯ ಅಧ್ಯಯನ; ಬೆಂಗಳೂರು; ಬೆಂಗಳೂರು ವಿಶ್ವವಿದ್ಯಾಲಯ; ೧೯೯೧; ಪುಟ ೧೨೨; ಇದು ೧೯೯೧ರಲ್ಲಿ ಸಿದ್ಧಲಿಂಗಯ್ಯ ಅವರ ಮಾರ್ಗದರ್ಶನದಲ್ಲಿ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಮಂಡಿಸಿರುವ ಪಿಎಚ್.ಡಿ. ಸಂಶೋಧನ ಮಹಾಪ್ರಬಂಧ.

೫೧೪ (೧೫೪). ತುಕಾರಾಂ ಪೂಜಾರಿ; **ಕಣ್ಮರೆಯಾಗುತ್ತಿರುವ ತುಳು ಬದುಕು**; ಬಂಟ್ವಾಳ; ರಾಣಿ ಅಬ್ಬಕ್ಕ ತುಳು ಅಧ್ಯಯನ ಕೇಂದ್ರ; ೧೯೯೭; ಪುಟ ೧೨+೮೦; 'ರಾಣಿ ಅಬ್ಬಕ್ಕ ತುಳು ಅಧ್ಯಯನ ಕೇಂದ್ರ' ಉದ್ಘಾಟನೆಯ ವೇಳೆಯಲ್ಲಿ ಏರ್ಪಡಿಸಿದ್ದ ವಿಚಾರ ಗೋಷ್ಠಿಯ ಪ್ರಬಂಧಗಳ ಪುಸ್ತಕರೂಪ ಇದಾಗಿದೆ. ತುಳುವರ ಉಡುಗೆ–ತೊಡುಗೆ, ತುಳುವರ ಪಾರಂಪರಿಕ ವೃತ್ತಿ–ವ್ಯವಸಾಯಗಳು, ತುಳುವರ ಆಹಾರ ಕ್ರೀಡೆ, ಮನೋರಂಜನೆ, ತುಳುನಾಡಿನ ವ್ಯಾಪಾರ ವ್ಯವಹಾರಗಳ ಇತಿಹಾಸ, ತುಳು ಜಾನಪದ ಸಾಹಿತ್ಯ ಹೀಗೆ ತುಳು ಸಾಂಸ್ಕೃತಿಕ ಬದುಕಿನ ಬಹುತೇಕ ಎಲ್ಲ ಮಗ್ಗುಲಗಳ ಮೇಲೆ ಬೆಳಕು ಚೆಲ್ಲುವ ೬ ಪ್ರಬಂಧಗಳು ಈ ಸಂಕಲನದಲ್ಲಿವೆ.

೫೧೬ (೧೫೫). ದಯಾನಂದ ಕಿನ್ನಾಳ; **ಎಂ.ಎಸ್. ಲಠ್ಠೆಯವರ ಜಾನಪದ ಕೃತಿಗಳು**; ಗುಲ್ಬರ್ಗಾ; ಗುಲ್ಬರ್ಗಾ ವಿಶ್ವವಿದ್ಯಾಲಯ; ೧೯೯೪; ಪುಟ ೧೬೧; ಇದು ೧೯೯೪ರಲ್ಲಿ ವ್ಹಿ.ಜಿ. ಪೂಜಾರ ಅವರ ಮಾರ್ಗದರ್ಶನದಲ್ಲಿ ರಚನೆಯಾದ ಎಂ.ಫಿಲ್ ಪ್ರಬಂಧ ಇದಾಗಿದೆ. ಇದರಲ್ಲಿ ೪ ಅಧ್ಯಾಯಗಳಿವೆ. ಎಂ.ಎಸ್. ಲಠ್ಠೆ ಅವರ ಜೀವನ ಮತ್ತು ಸಾಧನೆ ಎಂ.ಎಸ್. ಲಠ್ಠೆಯವರ ಜನಪದ ಕೃತಿಗಳು ೧.ಸ್ವತಂತ್ರ ಕೃತಿಗಳು ೨.ಸಂಪಾದಿತ ಕೃತಿಗಳು, ಕನ್ನಡ ಜನಪದ ಸಾಹಿತ್ಯಕ್ಕೆ ಲಠ್ಠೆಯವರ ಕೊಡುಗೆ–ವಿಷಯಗಳ ಅಧ್ಯಯನ

ಇದರಲ್ಲಿದೆ. ಇಲ್ಲಿ ಲಾವಣಿ, ಬಯಲಾಟಗಳು ಸ್ವತಂತ್ರ ಕೃತಿಗಳು, ಹಂತಿ ಹಾಡುಗಳು, ಅನುಭಾವ ಪದ, ಚರಿತ್ರೆಗಳ ಕುರಿತು ಇಲ್ಲಿಯ ಕೃತಿಗಳನ್ನು ಸಮೀಕ್ಷಿಸಿ ವಿವರಿಸಲಾಗಿದೆ.

೫೧೭ (೧೫೬). ದಾದಾಪೀರ್ ಬಿ.ಸಿ; **ಪಿಂಜಾರರ ಸಂಸ್ಕೃತಿ (ಉಪಸಂಸ್ಕೃತಿ ಅಧ್ಯಯನ)**; ಬೆಂಗಳೂರು; ಕರ್ನಾಟಕ ಸಾಹಿತ್ಯ ಅಕಾಡೆಮಿ; ೧೯೯೩; ಪುಟ ೩೨೬+೪೮; ಕನಾಟಕದ ಬಯಲುಸೀಮೆ ಅಂದರೆ ಬಿಜಾಪುರ, ಬೀದರ್, ಗುಲ್ಬರ್ಗಾ, ಬಳ್ಳಾರಿ, ರಾಯಚೂರು, ಚಿತ್ರದುರ್ಗ, ಧಾರವಾಡ ಪ್ರದೇಶಗಳಲ್ಲಿ ವಾಸಿಸುವ ಪಿಂಜಾರರ ಸಂಪೂರ್ಣ ವಿವರಣೆ ಇಲ್ಲಿದೆ.

೫೧೮ (೧೫೭). ದಾನೇಶ ಎ. ಚಿಕ್ಕಿ; **ಆಭರಣಗಳ ಸಾಮಾಜಿಕ ದೃಷ್ಟಿಕೋನ**; ಧಾರವಾಡ; ಕರ್ನಾಟಕ ವಿಶ್ವವಿದ್ಯಾಲಯ; ೧೯೬೭, ೧೯೭೧; ಪುಟ ೮+೬೫+೧೮; ಆಭರಣಗಳನ್ನು ವಿವಿಧ ರೀತಿಯಿಂದ ಅಭ್ಯಸಿಸಿ ಜನಪದ ಸಾಹಿತ್ಯದಲ್ಲಿನ ಆಭರಣಗಳ ಉಲ್ಲೇಖಗಳನ್ನು, ಆಭರಣಗಳನ್ನು ಕುರಿತ ಗಾದೆಗಳನ್ನೂ ಅಪಾದಮಸ್ತಕ ಆಭರಣಗಳ ಪಟ್ಟಿಯನ್ನು ಕೊಟ್ಟಿದ್ದಾರೆ.

೫೧೯ (೧೫೮). ದಾಮೋದರ ಕಲ್ಮಾಡಿ ಮತ್ತು ಚೆಲುವರಾಜ್ ಪೆರಂಪಳ್ಳಿ; **ಜನಮಾನಸದಲ್ಲಿ ಕೋಟಿ ಚೆನ್ನಯರು**; ಉಡುಪಿ; ಶ್ರೀ ಬ್ರಹ್ಮ ಬೈದರ್ಕಳ ಸಾಂಸ್ಕೃತಿಕ ಅಧ್ಯಯನ ಪ್ರತಿಷ್ಠಾನರಿ; ೧೯೯೮; ಪುಟ ೮೨; ಜಾನಪದದಲ್ಲಿ ವ್ಯಕ್ತವಾಗುವ ತುಳುನಾಡಿನ ಅಲೌಕಿಕ ವೀರರಾದ ಕೋಟಿಚೆನ್ನಯರ ಸಂಪೂರ್ಣ ಕಥೆ ಇಲ್ಲಿದೆ. ಇಲ್ಲಿ ಕೋಟಿ ಚೆನ್ನಯರ ಪೂರ್ವಕಥೆ. ದೇಯಿ ಬೈದೆತಿಯ ಕಥೆ, ಕೋಟಿ ಚೆನ್ನಯರು ಪಡುವಲೆಯಿಂದ ಎಣ್ಮೂರಿಗೆ ಇದನ್ನು ಒಳಗೊಂಡಂತೆ ಅವರು ಸಾಂಸ್ಕೃತಿಕ ವೀರರಾಗಿ ದೈವತ್ವಕ್ಕೇರಿದ ಬಗೆ. ಗರೋಡಿ ಕಟ್ಟಿಸಿಕೊಂಡು ಆರಾಧನಾ ಕೇಂದ್ರವಾದರೀತಿ. ಆಯ್ದ ಕೆಲವು ಗರೋಡಿಗಳಲ್ಲಿ ಆರಾಧನಾ ಕ್ರಮದಲ್ಲಿಯ ವಿಭಿನ್ನತೆ, ಜನರ ನಂಬಿಕೆಯಲ್ಲಿ ಗರೋಡಿಗಳ ಅಸ್ತಿತ್ವ ಹಾಗೂ ಈಗಲೂ ಕುಡ ಗರೋಡಿ ಜನಪ್ರಿಯವಾಗಲು ಕಾರಣ ಒಟ್ಟಾರೆ ಜನಮಾನಸದಲ್ಲಿ ಕೋಟಿ ಚೆನ್ನಯರು ಏನೆಂಬುದನ್ನು ಕುರಿತಾದ ಮಾಹಿತಿ ಈ ಪುಸ್ತಕದಲ್ಲಿದೆ.

೫೨೬ (೧೫೯). ದ್ವಾರಪಾಲ ಜಿನ್ನಪ್ಪಾ ಜಡಿ; **ಯುರೋಪ ಖಂಡದ ಮಹಾಯುದ್ಧದ ಲಾವಣಿ ಪದಮಾಲಿಕೆ**; ಬೆಳಗಾವಿ; ದ್ವಾರಪಾಲ ಜಿನ್ನಪ್ಪಾ ಜಡಿ; ೧೯೧೮; ಪುಟ ೬೪; ಮೊದಲ ಮಹಾಯುದ್ಧ ಕುರಿತ ಲಾವಣಿ ಪದ ಇಲ್ಲಿದೆ.

೫೨೮ (೧೬೦) ದುರ್ಗದಮಠ ಗಿರಿಜ ಮ; **ವಿಶ್ವೇಶ್ವರಿ ಬಸವಲಿಂಗಯ್ಯ; ಸೋಗುಗಳು**; ಧಾರವಾಡ; ಭೂಷಣ ಪ್ರಕಾಶನ, ಜಾನಪದ ಸಂಶೋಧನ ಕೇಂದ್ರ; ೧೬೬೬; ಪುಟ ೧೨; 'ಸೋಗುಗಳು' ಜನಪದರ ಜೀವನ ಕಲೆಗಳಾಗಿದ್ದವು. ಬರಬರುತ್ತ ಇದು ವೃತ್ತಿಯಾಗಿಯೂ ಪರಿವರ್ತಿತವಾಯಿತು. ಸೋಗುಗಳನ್ನು ಹಾಕಿಕೊಂಡೆ ಜೀವನ ಸಾಗಿಸುವ ಕೆಲವು ಜನಾಂಗಗಳೂ ನಿರ್ಮಾಣವಾದವು. ಈ ಗ್ರಂಥದಲ್ಲಿ ಸೋಗು ಹಾಕುವ ಜನಾಂಗ, ಅವರ ಬದುಕು, ಸೋಗು ಹಾಕಿಕೊಳ್ಳಲು ಬೇಕಾದ ಪರಿಕರಗಳು, ಅವುಗಳ ವಿಶ್ಲೇಷಣೆ ಮೊದಲಾದವುಗಳ ಸ್ಥೂಲ ಪರಿಚಯ ಎಂಟು ಅಧ್ಯಾಯಗಳಲ್ಲಿದೆ.

೫೩೨ (೧೬೧). ದುಂಡಪ್ಪ ಹಿ.ಗೂ; **ಹಳ್ಳಿ ಒಡತಿ ಊರಮ್ಮನ ಚರಿತೆ**; ಹರಿಹರ; ಕುಂಬೇಶ್ವರ ಪ್ರಕಾಶನ; ೧೯೯೪; ಪುಟ ೭+೬೨; ಊರಮ್ಮನ ಹುಟ್ಟು, ಬೆಳವಣಿಗೆ, ದಂತಕತೆ, ಜಾತ್ರೆ, ಹಾಡು, ಭಕ್ತಿಗೀತೆಗಳ ಸಂಗ್ರಹ, ಕೃತಿಯಾಗಿದೆ. ಇಲ್ಲಿ ಊರಮ್ಮನ ಜಾತ್ರೆ,

ಸಂಪ್ರದಾಯ, ಆಚರಣೆಗಳು, ದಂತಕತೆಗಳನ್ನು ಹಾಡುಗಳು ವಿವಿಧ ರೀತಿಯಲ್ಲಿವೆ. ಭಕ್ತಿಗೀತೆಗಳೂ ಇವೆ.

೫೩೩ (೧೬೨). ದುಂಡಪ್ಪ ಎಚ್.ಜಿ; **ಕುಂಬಾರನ ಹಾಡುಗಳು**; ಹರಿಹರ; ಕುಂಬೇಶ್ವರ ಪ್ರಕಾಶನ; ೧೯೮೧; ಪುಟ ೧೬+೫೪; ಕೃತಿಯ ಹೆಸರೇ ಸೂಚಿಸುವಂತೆ ಇದು ಕುಂಬಾರನ ಕುರಿತಾದ ಹಾಡುಗಳನ್ನೊತ್ತ ಕಿರು ಕೃತಿ. ೪೦ ಗೀತೆಗಳು ಇಲ್ಲಿವೆ. ಈ ಕೃತಿಯಲ್ಲಿ ಬರುವ ಸನ್ನಿವೇಶಗಳಲ್ಲಿ ಒಂದು ಜನಾಂಗದ, ಒಂದು ಸಥಳದ ಗತಕಾಲದ ನೆನಪಿನ ಇತಿಹಾಸವನ್ನು ಪದಗಳ ರೂಪದಲ್ಲಿ ಕವಿ ಪದಗಳ ರೂಪದಲ್ಲಿ ಸೆರೆಹಿಡಿದಿದ್ದಾನೆ.

೫೩೪ (೧೬೨). ದೇವನೂರ ಕೆ.ಎಸ್.; **ರಸಭರಿತ ಗೀಗೀ ಪದಗಳು**; ಗದಗ; ಪಿ.ಸಿ. ಶಾಬಾದಿಮಠ ಬುಕ್ ಡಿಪೋ; ೧೯೬೭; ಪುಟ ೨೩; ಕೆಲವು ಗೀಗೀ ಪದಗಳ ಸಂಗ್ರಹವಾಗಿದೆ.

೫೩೫ (೧೬೪). ದೇವನೂರ ಕೆ.ಎಸ್.; **ತಾಯಿಯ ಹಾಡುಗಳು**; ಗದಗ; ಪಿ.ಸಿ. ಶಾಬಾದಿಮಠ ಬುಕ್ ಡಿಪೋ; ೧೯೬೮; ಪುಟ ೫೮; ಈ ಗ್ರಂಥದಲ್ಲಿ ಗೀತೆಗಳ ಸಂಕೀರ್ಣ ಸಂಗ್ರಹ, ಹಲವು ಆಧುನಿಕ ರಚನೆಗಳು, ದಾಸರ ಪದಗಳು ಸಹ ಸೇರಿವೆ.

೫೪೫ (೧೬೫). ದೇವೇಂದ್ರ ಕುಮಾರ ಹಕಾರಿ; **ಹಂತಿ ಹಾಡುಗಳು**; ಬೆಂಗಳೂರು; ಕನ್ನಡ ಸಾಹಿತ್ಯ ಅಕಾಡೆಮಿ; ೧೯೯೬; ಪುಟ ೭೦; ಉತ್ತರ ಕರ್ನಾಟಕದಲ್ಲಿ ಒಕ್ಕಲು ಹಾಕಿದಾಗ, ತೆನೆ ತುಳಿಸುವ ಸಂದರ್ಭದಲ್ಲಿ ಹಾಡಿದ ಹಂತಿ ಹಾಡುಗಳ ಸಂಗ್ರಹ ಕೃತಿ ಇದಾಗಿದೆ.

೫೫೨ (೧೬೬). ದೊಡ್ಡ ಭಾವೆಪ್ಪ ಮೂಗಿ; **ದೊರೆ ಮಲ್ಲಸರ್ಜನ ದುಂದುಮಿ**; ಬೈಲಹೊಂಗಲ; ಕಿತ್ತೂರ ಚೆನ್ನಮ್ಮ ರಾಣಿ ಇತಿಹಾಸ ಮಂಡಲ; ೧೯೫೧; ಪುಟ ೧೬+೮೮; ಕಿತ್ತೂರಿನ ದೊರೆ ಮಲ್ಲಸರ್ಜನನ್ನು ಕುರಿತ ಎರಡು ರಚನೆಗಳು ಈ ಕೃತಿಯಲ್ಲಿವೆ. ಮೊದಲನೆಯದು ದುಂದುಮಿ ಎರಡನೆಯದು ಲಾವಣಿ ಪದ, ಪ್ರಸ್ತಾವನೆ ಮತ್ತು ಮಧುರಚೆನ್ನರ ಮುನ್ನುಡಿಯಿದೆ.

೫೫೩ (೧೬೭). ದೊಡ್ಡ ಭಾವೆಪ್ಪ ಮೂಗಿ; **ಕಿತ್ತೂರು ಕಾಳಗ**; ಬಯಲು ಹೊಂಗಲ ರುದ್ರಗೌಡ ಪ್ರಕಾಶನ; ೧೯೫೯; ಪುಟ ೮೦; ಕಿತ್ತೂರಿನ ಇತಿಹಾಸಕ್ಕೆ ಸಂಬಂಧಿಸಿದಂತೆ ಈಗಾಗಲೇ ಸಾಕಷ್ಟು ಮಸ್ತಕಗಳು ಹೊರಬಂದಿವೆ. ಆದರೆ ವಿಸ್ತ್ರತವಾದ ಕಿತ್ತೂರಿನ ಇತಿಹಾಸ ಕುರಿತು ಜನಪದರ ಹಾಡುಗಳಲ್ಲಿ ಚಿತ್ರಗೊಂಡಿರುವ ಸಂಗತಿಗಳನ್ನು ಸಂಗ್ರಹಿಸಿ ಪ್ರಕಟಿಸುವ ಉದ್ದೇಶದ ಹಿನ್ನೆಲೆಯಲ್ಲಿ ಈ ಗ್ರಂಥ ಹೊಬಂದಿದೆ. ಈ ಹಾಡುಗಳಲ್ಲಿ ಬರುವ ಐತಿಹಾಸಿಕ ವ್ಯಕ್ತಿತ್ವವನ್ನು ಸ್ಪಷ್ಟವಾಗಿ ಬಿಂಬಿಸಲಾಗಿದೆ. ಇಲ್ಲಿ ಪ್ರಕಟಗೊಂಡಿರುವ ಹತ್ತು ಗೀತೆಗಳು ಕಿತ್ತೂರಿನ ಇತಿಹಾಸಕ್ಕೆ ಸಂಬಂಧಿಸಿದಂತೆ ಬೆಳಕು ಚೆಲ್ಲುತ್ತವೆ. ಉಳಿದ ಮೂರು ಹಾಡುಗಳು ನಾಗೇಶ ಹರಿದೇಸಿ ಸೋಬಾನೆ ಮತ್ತು ಕೋಲಾಟದ ಚಿಕ್ಕ ಚಿಕ್ಕ ಹಾಡುಗಳನ್ನು ಕಾಣಬಹುದು.

೫೫೪ (೧೬೮). ದೊಡ್ಡಮನಿ ಕೆ.ಎನ್; **ಬೆಳಗಾವಿ ಜಿಲ್ಲೆಯ ಜನಪದ ಕಾವ್ಯಪ್ರಕಾರಗಳು**; ಧಾರವಾಡ; ಕರ್ನಾಟಕ ವಿಶ್ವವಿದ್ಯಾಲಯ; ೧೯೯೭; ಪುಟ ೧೫೪; ೧೯೯೭ರಲ್ಲಿ ಕೆ.ಆರ್. ದುರ್ಗಾದಾಸ ಅವರ ಮಾರ್ಗದರ್ಶನದಲ್ಲಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಮಂಡಿಸಲಾದ ಎಂ.ಫಿಲ್ ಸಂಶೋಧನ ಸಂಪ್ರಬಂಧ. ಒಂದು ಜಿಲ್ಲೆಯಲ್ಲಿ ಬಳಕೆಯಾಗಿರುವ ಮತ್ತು ಬಳಕೆಯಲ್ಲಿರುವ ಜನಪದ ಕಾವ್ಯಪ್ರಕಾರಗಳನ್ನು ಕುರಿತು ಹೇಳುವ ಈ ಸಂಪ್ರಬಂಧದಲ್ಲಿ ೭ ಅಧ್ಯಾಯಗಳಿವೆ. ಬೆಳಗಾವಿ ಜಿಲ್ಲೆಯ ಜನಪದ ಕಾವ್ಯಪ್ರಕಾರಗಳು, ಮೇಳದ ಹಾಡುಗಳು, ಸ್ವತಂತ್ರ ಹಾಡುಗಳು, ಮಕ್ಕಳ ಹಾಡುಗಳು,

ಬೆಳಗಾವಿ ಜಿಲ್ಲೆಯ ಜನಪದ ಕಾವ್ಯ ಪ್ರಕಾರಗಳು; ಒಂದು ಸಾಂಸ್ಕೃತಿಕ ನೋಟ ಮೊದಲಾದವು ಈ ಸಂಪ್ರಬಂಧದಲ್ಲಿ ಉಕ್ತವಾದ ವಿಷಯಗಳಾಗಿವೆ.

೫೫೫ (೧೬೯). ದೊಡ್ಡರಾಮಣ್ಣನವರ; **ಬ್ಯಾಡಗಿ ತಾಲೂಕಿನ ವೈದ್ಯ ಜನಪದ**; ಒಂದು ಅಧ್ಯಯನ, ಧಾರವಾಡ; ಕರ್ನಾಟಕ ವಿಶ್ವವಿದ್ಯಾಲಯ; ೧೯೯೩; ಪುಟ ೮೧; ೧೯೯೩ರಲ್ಲಿ ಕರ್ನಾಟಕ ವಿರ್ಶವವಿದ್ಯಾಲಯಕ್ಕೆ ಮಂಡಿಸಿದ ಎಂ.ಫಿಲ್. ಸಂಶೋಧನೆ ಸಂಪ್ರಬಂಧ. ಇದಕ್ಕೆ ಎಸ್.ಎಸ್. ಭದ್ರಾಪುರ ಅವರ ಮಾರ್ಗದರ್ಶಕರಾಗಿದ್ದರು. ಒಂದು ತಾಲೂಕಿನ ವೈದ್ಯ ಜನಪದವನ್ನು ಕುರಿತು ಹೇಳುವ ಈ ಸಂಪ್ರಬಂಧದಲ್ಲಿ ೫ ಅಧ್ಯಾಯಗಳಿವೆ. ಬ್ಯಾಡಗಿ ತಾಲೂಕಿನಲ್ಲಿ ದೊರೆಯುವ ಔಷಧೀಯ ಪ್ರಕಾರಗಳು ಹಾಗೂ ಅವುಗಳ ಸಂಕ್ಷಿಪ್ತ ಪರಿಚಯ, ಬ್ಯಾಡಗಿ ತಾಲೂಕಿನ ಗಿಡಮೂಲಿಕೆ, ಔಷಧಿ ದೊರೆಯುವ ಸ್ಥಳಗಳು ಹಾಗೂ ಅವುಗಳನ್ನು ತಯಾರಿಸುವ ವಿಧನಗಳು. ಬ್ಯಾಡಗಿ ತಾಲೂಕಿನ ಗಿಡ ಮೂಲಿಕೆ ಔಷಧಕ್ಕೆ ಸಂಬಂಧಿಸಿದ ಗಾದೆ, ಒಗಟು ಹಾಗೂ ನಂಬಿಕೆಗಳ ಪರಿಚಯ ಮೊದಲಾದ ವಿಷಯಗಳನ್ನು ಕುರಿತು ಈ ಸಂಪ್ರಬಂಧ ಹೇಳುತ್ತದೆ.

೫೬೩ (೧೭೦). ನಗರಕರ ಡಿ.ಡಿ.; **ಜನಪದ ಗೀತೆಗಳಲ್ಲಿ ತಾಯಿ**; ಧರವಾಡ; ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ; ೨೦೦೦; ಪುಟ ೬+೩೩; ಕರ್ನಾಟಕ ವಿಶ್ವವಿದ್ಯಾಲಯ ಉಪನ್ಯಾಸ ಗ್ರಂಥಮಾಲೆಯಲ್ಲಿ ಪ್ರಕಟವಾಗಿರುವ ಈ ಕೃತಿಯಲ್ಲಿ ಜನಪದ ಸಾಹಿತ್ಯ ಎಂದರೇನು? ಅದರ ಸ್ವರೂಪವೇನು? ಎಂಬಿತ್ಯಾದಿ ಸಂಗತಿಗಳನ್ನು ಕುರಿತು ಪ್ರಸ್ತಾಪಿಸಲಾಗಿದೆ.

೫೬೫ (೧೭೧). ನರಸಿಂಹ ಕೃಷ್ಣ ಗೋಠೆ; **ಗಲಗಲಿ ಅವ್ವನವರ ಮುಯ್ಯದ ಹಾಡುಗಳು**; ಬೆಳಗಾವಿ; ಪರಿಮಳ ಪ್ರಕಾಶನ; ೧೯೯೨; ಪುಟ ೧೪೪; ಈ ಸಂಕಲನದಲ್ಲಿ ಒಟ್ಟು ೧೪೮ ಪದಗಳಿವೆ. ಇವುಗಳಲ್ಲಿ ದ್ವಾರತಾಪಟ್ಟಣದ ವಿಸ್ತಾರದ ಹಾಡುಗಳು, ದೂತೆಯ ಹಾಡುಗಳು, ಹೆಂಗಸರ ವಾದದ ಹಾಡುಗಳು, ಗಂಡಸರ ವಾದದ ಹಾಡುಗಳು ಉಡುಗೊರೆಯ ಹಾಡುಗಳು, ಬಲಗೊಂಡ ಹಾಡುಗಳು, ವನದ ಹಾಡುಗಳು ದ್ರೌಪದಿ ರಮಣ ಹಾಡುಗಳು, ಗಂಡಸರ ವಾದದ ಪದಗಳು, ರಾಸಕ್ರೀಡೆ ಮುಂತಾದ ಪದಗಳು ಸೇರಿವೆ.

೫೬೬ (೧೭೨). ನರಸಿಂಹಭಟ್ಟ ರೈಂತಜೆ; **ಗರತಿ ಮಂಗಣೆ**; ಪೆರುಮೊಗ್ರು; ರೈಂತಜೆ ನರಸಿಂಹಭಟ್ಟ; ೧೯೯೭; ಪುಟ ೪೬; ತುಳುಪಾಡ್ದನಗಳಲ್ಲಿ ಬರುವ ಪತಿವ್ರತೆಯಾದ, ಪರವ ಜಾತಿಯ 'ಮಂಗಣೆ'ಯ ಬಾಳಿನ ಒಂದು ಭಾಗವನ್ನು ವಸ್ತುವಾಗಿರಿಸಿ ಬರೆದ 'ಗರತಿ ಮಂಗಣೆ' ತುಳುನಾಡಿನ ಒಂದು ಜಾನಪದ ಕಥಾನಕವಾಗಿದೆ.

೫೭೧ (೧೭೩). ನರಸಿಂಹರಾಜ ಟಿ; **ಮ್ಯಾಸಬೇಡರ ಸಾಂಸ್ಕೃತಿಕ ವೀರರು: ಒಂದು ಅಧ್ಯಯನ**; ಶಿವಮೊಗ್ಗ; ಕನ್ನಡ ಭಾರತಿ, ಕುವೆಂಪು ವಿಶ್ವವಿದ್ಯಾಲಯ; ೧೯೯೮; ಈ ಸಂಪ್ರಬಂಧದಲ್ಲಿ ೬ ಅಧ್ಯಾಯಗಳಿವೆ. ಇದರಲ್ಲಿ ಮ್ಯಾಸಬೇಡರು, ಸಾಂಸ್ಕೃತಿಕ ವೀರರು. ಈ ವೀರರ ಬಗ್ಗೆ ನಡೆದಿರುವ ಅಧ್ಯಯವನ್ನು ವಿವರಿಸಲಾಗಿದೆ. ಎರಡನೆಯ ಅಧ್ಯಾಯದಲ್ಲಿ ಗಾದ್ರಿ ಪಾಲನಾಯಕನ ಪುರಾಣ, ಆಚರಣೆಗಳನ್ನು ದಾಖಲು ಮಾಡಿ ಅವುಗಳನ್ನು ವಿಶ್ಲೇಷಿಸಲಾಗಿದೆ.

೫೭೮ (೧೭೪). ನವೀನ ಸಿ.ಕೆ; **ಸಿರಿಸಂಪಿಗೆ ನಾಗಮಂಡಲ; ಒಂದು ತೌಲನಿಕ ಅಧ್ಯಯನ**; ಕುವೆಂಪು ವಿಶ್ವವಿದ್ಯಾನಿಲಯ; ೨೦೦೦; ಪುಟ ೯೩; ಕುವೆಂಪು ವಿಶವವಿದ್ಯಾಲಯಕ್ಕೆ ಎಂ.ಫಿಲ್, ಪದವಿಗಾಗಿ ಸಾದರಪಡಿಸಿದ ಸಂಪ್ರಬಂಧವಿದು. ಇದರಲ್ಲಿ 'ಸಿರಿಸಂಪಿಗೆ' ಹಾಗೂ 'ನಾಗಮಂಡಲ' ಜನಪದ ಕಥೆಗಳ ಆಧಾರಿತ ನಾಟಕಗಳ ತೌಲಿನಿಕ ಅಧ್ಯಯನ

ನಡೆಸಲಾಗಿದೆ. ಗಿರೀಶ್ ಕಾರ್ನಾಡ ಹಾಗೂ ಚಂದ್ರಶೇಖರ ಕಂಬಾರ ಅವರ ನಾಟಕಗಳಿಗೆ ಆಧಾರವಾಗಿದ್ದ ಕಥೆಗಳನ್ನು ಪುನಃ ಸಂಗ್ರಹಿಸಿ ಆ ಕಥೆಗಳನ್ನು ಮೂಲಕಥೆಗಳು ಹಾಗೂ ನಾಟಕದೊಡನೆ ತೌಲನಿಕವಾಗಿ ವಿವೇಚನೆ ನಡೆಸಲಾಗಿದೆ.

೫೮೯ (೧೭೫). ನವೀನ್ ಕುಮಾರ ಮರಿಕೆ; **ತುಳುನಾಡಿನಲ್ಲಿ ಕೊರಗ ತನಿಯ: ಒಂದು ಅಧ್ಯಯನ**; ಪುತ್ತೂರು; ಶ್ರೀ ಮಹಾಶಕ್ತಿ ಸಂಘ; ೨೦೦೦; ಪುಟ ೧೫+೬೧; ಇದು ತುಳುನಾಡಿನ ಆರಾಧ್ಯ ದೈವವಾದ ಕೊರಗ ತನಿಯನ ಬಗ್ಗೆ ಬರೆದ ಕೃತಿಯಾಗಿದೆ. ಇಲ್ಲಿ ತುಳುನಾಡಿನ ದೈವಾರಾಧನೆ, ಕೊರಗ ತನಿಯ ಪಡ್ದನದ ಬಗ್ಗೆ, ಕೊರಗ ತನಿಯ ಪಾಡ್ದನ (ಗದ್ಯರೂಪ) ಮತ್ತು ಅದರ ಕನ್ನಡ ಅನುವಾದ ಇದೆ.

೫೯೧ (೧೭೬). ನಂಜಪ್ಪನವರ ಮಾ. ನಂ; **ಬಸವ ಚರಿತ್ರೆಯ ಲಾವಣಿ**; ವಿರಶೈವ ಸಾಹಿತ್ಯ ಭಂಡಾರ; ೧೯೪೫; ಪುಟ ೪೮; ಈ ಪುಸ್ತಕದಲ್ಲಿ ಎಂಟು ಅಧ್ಯಾಯಗಳಿವೆ. ೧.ಕವಿಸ್ತುತಿ–ಕೈಲಾಸ–ಭೂಲೋಕ ೨.ಬಾಗೇವಾಡಿಯಿಂದ ಕಪ್ಪಡಿ ಕ್ಷೇತ್ರಕ್ಕೆ ೩.ಕಪ್ಪಡಿ ಕ್ಷೇತ್ರದಿಂದ ಕಲ್ಯಾಣ ಪಟ್ಟಣಕ್ಕೆ ಮುಂತಾದ ಲಾವಣಿಗಳು ಇದರಲ್ಲಿವೆ.

೫೯೪ (೧೭೭). ನಂಜುಂಡಸ್ವಾಮಿ; **ಕೊಳ್ಳೇಗಾಲ ತಾಲ್ಲೂಕಿನ ಪ್ರದರ್ಶನ ಕಲೆಗಳು**; ಮೈಸೂರು; ಮೈಸೂರು ವಿಶ್ವವಿದ್ಯಾಲಯ; ೨೦೦೨; ೨೦೦೨ರಲ್ಲಿ ಡಿ.ಕೆ. ರಾಜೇಂದ್ರ ಅವರ ಮಾರ್ಗದರ್ಶನದಲ್ಲಿ ನಂಜುಂಡಸ್ವಾಮಿ ಅವರು ಸಿದ್ಧಪಡಿಸಿದ 'ಕೊಳ್ಳೇಗಾಲ ತಾಲ್ಲೂಕಿನ ಪ್ರದರ್ಶನ ಕಲೆಗಳು' ಎನ್ನುವ ಸಂಶೋಧನ ಮಹಾಪ್ರಬಂಧಕ್ಕೆ ಮೈಸೂರು ವಿಶ್ವವಿದ್ಯಾಲಯ ಪಿಎಚ್.ಡಿ. ಪದವಿ ನೀಡಿದೆ.

೫೯೮ (೧೭೮). ನಾಗಮ್ಮಯ್ಯ; **ಜನಪ್ರಿಯ ಜನಪದ ಗೀತೆಗಳು**; ಮೈಸೂರು; ಶ್ರೀ ಸರಸ್ವತಿ ಬುಕ್ ಡಿಪೋ; ೧೯೬೭; ಪುಟ ೮೦; ತ್ರಿಪದಿ, ಗೀತೆಗಳ ಸಂಗ್ರಹ ಇದಾಗಿದೆ. ಇದರಲ್ಲಿ ಅನೇಕ ಜನಪ್ರಿಯ ತ್ರಿಪದಿಗಳನ್ನು ಆಯ್ದುಕೊಡಲಾಗಿದೆ.

೫೯೨ (೧೭೯). ನಾಗರಾಜ ಎಚ್; **ಚಿತ್ರದುರ್ಗ ಜಿಲ್ಲೆಯ ಬಯಲಾಟಗಳ ಅಧ್ಯಯನ**; ಮೈಸೂರು; ಮೈಸೂರು ವಿಶ್ವವಿದ್ಯಾಲಯ; ೨೦೦೦; ೨೦೦೦ರಲ್ಲಿ ಹಿ.ಶಿ. ರಾಮಚಂದ್ರಗೌಡ ಅವರ ಮಾರ್ಗದರ್ಶನದಲ್ಲಿ ನಾಗರಾಜ ಎಚ್ ಅವರು ಸಿದ್ಧಪಡಿಸಿದ ಚಿತ್ರದುರ್ಗ ಜಿಲ್ಲೆಯ ಬಯಲಾಟಗಳ ಅಧ್ಯಯನ' ಎನ್ನುವ ಸಂಶೋಧನ ಮಹಾಪ್ರಬಂಧಕ್ಕೆ ಮೈಸೂರು ವಿಶ್ವವಿದ್ಯಾಲಯ ಪಿಎಚ್.ಡಿ. ಪದವಿ ನೀಡಿದೆ.

೬೦೭ (೧೮೦). ನಾಗರಾಜು ಬಿ.ವಿ.; **ಗೊಲ್ಲರಹಟ್ಟಿ: ಒಂದು ಸಾಮಾಜಿಕ ಅಧ್ಯಯನ**; ಬೆಂಗಳೂರು; ಆಪ್ತ ಪ್ರಕಾಶನ; ೧೯೮೮; ಪುಟ ೧೧೨; ಕಾಡುಗೊಲ್ಲರ ಜೀವನ ವಿಧಾನ ಸಂಪ್ರದಾಯ ಸಾಹಿತ್ಯ, ಸಆಂಸ್ಕೃತಿಕ ಪರಂಪರೆ ಒಳಗೊಂಡಂತೆ ಅಧ್ಯಯನಕ್ಕೆ ಒಳಪಡಿಸಿದ್ದಾರೆ.

೬೧೧ (೧೮೧). ನಾಗವರ್ಮ ಜಿ.ಎಚ್.; **ಬಳ್ಳಾರಿ ಜಿಲ್ಲೆಯ ತೊಗಲುಗೊಂಬೆಯಾಟ**; ಹಂಪಿ; ಕನ್ನಡ ವಿಶ್ವವಿದ್ಯಾಲಯುದಿಂದ; ೨೦೦೨; ೪+೧೦೦; ೨೦೦೨ರಲ್ಲಿ ಕನ್ನಡ ವಿಶ್ವವಿದ್ಯಾಲಯದಿಂದ ಎಚ್.ಕೆ. ನಾಗೇಶ ಅವರ ಮಾರ್ಗದರ್ಶನದಲ್ಲಿ ರಚನೆಗೊಂಡ ಸಂಶೋಧನ ಎಂ.ಫಿಲ್. ಸಂಪ್ರಬಂಧ. ಇದರಲ್ಲಿ ಏಳು ಅಧ್ಯಾಯಗಳಿವೆ. ತೊಗಲುಗೊಂಬೆಯಾಟ ಪದ ನಿಷ್ಪತ್ತಿ, ತೊಗಲು ಗೊಂಬೆಯಾಟ ಮತ್ತು ಜನಪದ ಸಾಹಿತ್ಯ, ಪ್ರದರ್ಶನ ಕಲೆಗಳು, ಕಲಾವಿದರು ಮತ್ತು ತೊಗಲುಗೊಂಬೆಯಾಟದ ಪರಂಪರೆ ಆಧುನಿಕತೆ ಮತ್ತು ತೊಗಲುಗೊಂಬೆ ಕಲಾವಿದರ ಸ್ಥಾನ ಹೀಗೆ

ವಿಭಾಗಗಳನ್ನಾಗಿ ಮಾಡಿ ಕಾಲಘಟ್ಟಗಳು, ರಂಗ ಸಜ್ಜಿಕೆಯ ನಿರ್ಮಾಣ, ಚಾರಿತ್ರಿಕ ನೆಲೆ, ಐತಿಹ್ಯಗಳ ಕುರಿತು ವಿವರವಾಗಿ ಅಧ್ಯಯನ ಮಾಡಿದ್ದಾರೆ.

೬೪೨ (೧೮೨). ನಾಯಕ ಎನ್.ಆರ್; **ತುಳಸಿ ತಿಮ್ಮಪ್ಪರಾಯ**; ಹೊನ್ನಾವರ; ಜಾನಪದ ಪ್ರಕಾಶನ; ೧೯೮೭; ಪುಟ ೮೮; ತುಳಸಿ ಹಾಗೂ ತಿಮ್ಮಪ್ಪನನ್ನು ಕುರಿತ ಜಾನಪದ ಹಡುಗಳನ್ನು ಈ ಕೃತಿ ಒಳಗೊಂಡಿದೆ. ಆರಂಭದಲ್ಲಿ ತುಳಸಿ ಪೂಜೆ ಹಾಗೂ ತಿಮ್ಮಪ್ಪರಾಯನನ್ನು ಕುರಿತ ವಿಶ್ಲೇಷಣೆಯಿದೆ ನಂತರ ತುಳಸಿಪೂಜೆ ಹಾಗೂ ಮದುವೆಯನ್ನು ಕುರಿತಾದ ಹಾಲಕ್ಕಿ ಒಕ್ಕಲಿಗರು, ಹರಿಕಾಂತರು, ನಾಡವರು, ಗೊಂಡರು, ಗೊಮೊಕ್ಕಲಿಗರು ಹಾಗೂ ನಾಮಧಾರಿಗಳು ಹಾಡಿದಂಥ ಹಾಡುಗಳನ್ನು ಸಂಗ್ರಹಿಸಲಾಗಿದೆ.

೬೪೩ (೧೮೩). ನಾಯಕ ಎನ್.ಆರ್; **ಬಂದಾನೆ ಬಲಿಯಂದ್ರರಾಯ**; ಹೊನ್ನವಾರ; ಜಾನಪದ ಪ್ರಕಾಶನ; ೧೯೮೯; ಪುಟ ೪+೩೯+೬೬; ಇದು ದೀಪಾವಳಿ ಹಬ್ಬ ಹಾಗೂ ಆ ಸಮಯದಲ್ಲಿ ಹಾಡುವ ಜಾನಪದ ಗೀತೆಗಳ ಸಂಗ್ರಹವಾಗಿದೆ. ಇದರಲ್ಲಿ ದೀಪಾವಳಿಯಲ್ಲಿ ಹಾಡುವ ಒಟ್ಟು ೩೬ ಪದಗಳಿವೆ. ಬಹುತೇಕ ಪದಗಳು ಬಲೀಂದ್ರನಿಗೆ ಸಂಬಂಧಿಸಿವೆ. ಇನ್ನುಳಿದಂತೆ ಲಕ್ಷ್ಮೀ ಮೇಲಿನ ಹಾಡುಗಳು, ಮಂಗಳಾರತಿ ಹಾಡುಗಳು ಹಾಗೂ ಗೋವಿನ ಹಟ್ಟಿಯ ಕುರಿತಾದ ಹಾಡುಗಳು ಇದರಲ್ಲಿವೆ.

೬೫೩ (೧೮೪). ನಾಯಕ ಎನ್.ಆರ್; **ಸುಗ್ಗಿಹಬ್ಬ**; ಉಡುಪಿ; ಆರ್.ಆರ್.ಸಿ. ೧೯೯; ಪುಟ ೨೧೨+೮; ಉತ್ತರ ಕನ್ನಡ ಜಿಲ್ಲೆಯ ಮುಕ್ರಿ ಜನಾಂಗದ ಜನಪದ ಗೀತೆಗಳು ಹಾಗೂ ಕಥೆಗಳ ಸಂಗ್ರಹ ಇದಾಗಿದೆ. ಇದರಲ್ಲಿ ಮದುವೆ ಹಾಡು, ಸೋಬಾನದ ಹಾಡು, ಬಯಕೆಯ ಹಾಡು, ಜೋಗುಳ ಮುಂತಾದ ಹಾಡುಗಳನ್ನು ಸಂಗ್ರಹಿಸಿಕೊಡಲಾಗಿದೆ. ಈ ಕೃತಿಯಲ್ಲಿ ಸಂಗ್ರಹಗೊಂಡ ಗೀತೆಗಳು ಪದಗಳು ಹಾಗೂ ಕಥೆಗಳ ಸಂಕ್ಷಿಪ್ತ ಕನ್ನಡ ಅನುವಾದವನ್ನು ಕೃತಿಯ ಆರಂಭದಲ್ಲೇ ಕೂಡಲಾಗಿದೆ.

೬೫೬ (೧೮೫). ನಾಯಕ ಪಿ.ವಿ.; **ಅಣಿಲೆಕಾಯಿ**; ಮಂಗಳ; ಪ್ರಭಾತ್ ಪ್ರಿಂಟರ್ಸ್; ೧೯೬೦; ಪುಟ ೧೦; ಅಣಲೆಕಾಯಿಯ ಔಷಧಿಯ ಉಪಯೋಗಗಳನ್ನು ಕುರಿತಾದ ಕೃತಿಯಿದು.

೬೫೭ (೧೮೬). ನಾಯಕ ಬೆನಕನಹಳ್ಳಿ; **ಮೇಲುಷಿಕಾರಿಗರು**; ಬೆಂಗಳೂರು; ಐ.ಬಿ.ಎಚ್, ಪ್ರಕಾಶನ; ೧೯೮೨; ಪುಟ ೪೬; ಮೇಲುಕ್ಷಿಕಾರಿಗರು ಯಾರು? ಅವರ ಆಚರಿಸುವ ಹಬ್ಬಗಳು, ಕೆಲವು ಸಂಸ್ಕಾರಗಳು, ಸಂಪ್ರದಾಯಗಳು ಐತಿಹ್ಯ, ಕಸುಬು ಇತ್ಯಾದಿಗಳನ್ನು ಕುರಿತು ಈ ಗ್ರಂಥದಲ್ಲಿ ಚರ್ಚಿಸಿದ್ದಾರೆ. ಇದು ಒಂದು ಜನಾಂಗದ ಸಂಸ್ಕೃತಿಯನ್ನು ತಿಳಿಸುವ ಉತ್ತಮ ಕೃತಿಯಾಗಿದೆ.

೬೫೯ (೧೮೭). ನಾಯಕ ಮ್ಯಸ್ಕೇರಿ ಎಂ.ಕೆ; **ಜನಪ್ರಿಯ ಜಾನಪದ ಪ್ರೇಮಗೀತೆಗಳು**; ಗದಗ; ಅಶ್ವಿನಿ ಪ್ರಕಾಶನ; ೧೯೯೭; ಪುಟ ೮೮; ಜನಪ್ರಿಯ ಜಾನಪದ ಪ್ರೇಮಗೀತೆಗಳನ್ನು ಸಂಗ್ರಹಿಸಿದ ಕೃತಿ.

೬೭೧ (೧೮೮). ನಾರಾಯಣ ಕೆ.ವಿ.ಎನ್. ಲಕ್ಷ್ಮಿನಾರಾಯಣ; **ತುಂಬೇ ಹೂವಿಟ್ಟು ಶರಣೆನ್ನಿ**; ಕೆ.ವಿ. ನಾರಾಯಣ. ಎನ್. ಲಕ್ಷ್ಮಿನಾರಾಯಣ; ೧೯೬೯; ಪುಟ ೬೪; 'ತುಂಬೇ ಹೂವಿಟ್ಟು ಶರಣೆನ್ನಿ' ಇದು ಜಾನಪದ ಭಕ್ತಿಗೀತೆಗಳ ಸಂಗ್ರಹವಾಗಿದೆ. ಇದರಲ್ಲಿ ೧.ಸರಸ್ವತಿ ೨.ಲಕ್ಷುಮದೇವಿ ೩.ಹೊನ್ನವ್ವ ೪.ದೇವೀರಿ ೫.ಹೊಂಗೆವ್ವ ೬.ಜೇನುಕಲ್ಲು ಸಿದ್ದಪ್ಪ ೭.ಭೈರವ ೮.ಮುಪ್ಪುರಲಿಂಗ ೯.ಧೀರಜವನಯ್ಯ ೧೦.ವೀರಭದ್ರ ೧೧.ಚಲುವರಾಯ ೧೨.ಚೆಲುವ ನೀಲಮ್ಮ ಮುಂತಾದ ಪದ್ಯಭಾಗಗಳಿವೆ.

೬೭೬ (೧೮೯). ನಾರಾಯಣ ಎಂ; ತುಳು ಒಗಟುಗಳು; ಮಂಗಳೂರು; ಪ್ರಭಾತ್ ಪ್ರಿಂಟರ್ಸ್; ೧೯೬೨; ಪು. ೨೬; ೨೦೨ ತುಳು ಒಗಟುಗಳು. ಉತ್ತರ ಕನ್ನಡ ತಾತ್ಪರ್ಯ

೬೮೮ (೧೯೦). ನಾವಡ ಎ.ವಿ; **ಜಾನಪದ ವರ್ಷ**; ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ; ೧೯೯೬; ಪುಟ ೮+೬೬; ವಿವಿಧ ಲೇಖಕರು ಬರೆದು ಸಂಗ್ರಹಿಸಿದ ಜಾನಪದ ಕರತಿ ಇದಾಗಿದ್ದು ಒಟರ್ರ್ಪು ಲೇಖನಗಳನ್ನೊಳಗೊಂಡಿದೆ. ಇಲ್ಲಿ ಜನಪದ ಸಾಹಿತ್ಯದ ಸಂಗ್ರಹಕ್ಕೆ ಉಪಯೀಗಿಸಿರುವ ಬಗೆಗಳನ್ನು ಕುರಿತು ಚರ್ಚಿಸಲಾಗಿದೆ ಮತ್ತು ಇತರ ಲೇಖನಗಳಿವೆ.

೬೯೪ (೧೯೧). ನಿಕೇತನ; **ತುಳು ಮಹಾಕಾವ್ಯ ಮಂದಾರ ರಾಮಾಯಣ ಸ್ವರೂಪ ಮತ್ತು ಅನನ್ಯತೆ;** ಮಂಗಳೂರು; ಮಂಗಳೂರು ವಿಶ್ವವಿದ್ಯಾಲಯ; ೨೦೦೦; ಪುಟ ೨೦೮; ೨೦೦೦ರಲ್ಲಿ ಮಂಗಳೂರು ವಿಶ್ವವಿದ್ಯಾಲಯಕ್ಕೆ ಮಂಡಿಸಲಾದ ಈ ಪಿಎಚ್.ಡಿ. ಸಂಶೋಧನ ಮಹಾಪ್ರಬಂಧ, ತುಳುವಿನ ಪ್ರಸಿದ್ಧ ಜನಪದ ಮಾಹಾಕಾವ್ಯವಾದ 'ಅಮಂದಾರ ರಾಮಾಯಣ'ದ ಸಂಪೂರ್ಣ ಅಧ್ಯಯನವಾಗಿದೆ. ಈ ಮಹಾಪ್ರಬಂಧಕ್ಕೆ ಕೆ. ಅಭಯ ಕುಮಾರ್ ಮಾರ್ಗದರ್ಶಕರಾಗಿದ್ದರು. ಈ ಸಂಶೋಧನ ಮಹಾ ಪ್ರಬಂಧದಲ್ಲಿ ೧೦ ಅಧ್ಯಾಯಗಳಿವೆ. ಮಂದಾರ ರಾಮಾಯಣ ಕೃತಿ ಪರಿಚಯ, ಮಂದಾರ ರಾಮಾಯಣ ಮತ್ತು ರಾಮಾಯಣ ಪರಂಪರೆಗಳ ತೌಲನಿಕ ಅಧ್ಯಯನ, ಮಂದಾರ ರಾಮಾಯಣ ಮತ್ತು ತುಳು ಮಹಾಕಾವ್ಯಗಳು, ಮಂದಾರ ರಾಮಾಯಣದ ಪ್ರೇರಣೆ ಪ್ರಭಾವ, ಮಂದಾರ ರಾಮಾಯಣ ಕಥಾವಸ್ತು ವಿವೇಷನೆ, ಮಂದಾರ ರಾಮಾಯಣದ ಪಾತ್ರ, ಮಂದಾರ ರಾಮಾಯಣದಲ್ಲಿ ಚಿತ್ರಿತವಾಗಿರುವ ತುಳುನಾಡಿನ ಭೌಗೋಳಿಕ ಪರಿಸರ, ತುಳು ಸಮಾಜ-ಸಂಸ್ಕೃತಿ ಮಂದಾರ ರಾಮಾಯಣದ ಅಭಿವ್ಯಕ್ತಿ ಮತ್ತು ಛಂದಸ್ಸು, ತುಳು ಸಾಹಿತ್ಯಕ್ಕೆ ಮಂದಾರ ರಾಮಾಯಣದ ಕೊಡುಗೆ ಮೊದಲಾದ ವಿಷಯಗಳನ್ನು ಇಲ್ಲಿ ವಿವರಿಸಲಾಗಿದೆ.

೭೦೭ (೧೯೨). ನಿಂಗಣ್ಣ ಸಣ್ಣಕ್ಕಿ; **ಗಿಳಿಕುಂತ ಕೂಗ್ಯಾವ**; ರಾಯಭಾಗ; ಜಾನಪದ ಮಂಟಪ ಕಾಲಗತಿ ಪ್ರಕಾಶನ; ೧೯೮೮; ಪುಟ ೮+೯೬; ಇದು ಜನಪದ ಹಾಡುಗಳ ಸಂಗ್ರಹವಾಗಿದೆ. ಬೆಳಗಾವಿ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಹಾಡುಗಳು ಇದರಲ್ಲಿವೆ. ಗಿಳಿಕುಂತ ಕೂಗ್ಯಾವ, ಗಿಳಿರಾಮ, ಹುಡುಗಿಯರು, ನಿಂಬಿಯ ಬಣ್ಣದ ಮ್ಯಾಗಳ ಗುರುಧ್ಯಾನ, ಬಲಭೀಮ, ಸತ್ಯುಳ್ಳ ಗೋಪೆವ್ವ, ಅಂಕಲಗಿ ಅಡವೀಶ, ಗರತಿಯ ಒಗಟೋತ್ತರ ಮೊದಲಾದ ಪ್ರಸಿದ್ಧ ಜನಪದ ಗೀತೆಗಳು ಇದರಲ್ಲಿವೆ.

೭೧೪ (೧೯೩). ನೀಲಕಂಠಯ್ಯ ಬಿ; **ಹೈದರ್ ಮತ್ತು ಟಿಪ್ಪುಸುಲ್ತಾನ್ ಲಾವಣಿ**; ಬೆಂಗಳೂರು; ಟಿ. ದೊರೆಸ್ವಾಮಿ ಅಯ್ಯಂಗಾರ್ ಆ್ಯಂಡ್ ಸನ್ಸ್; ೧೯೪೯; ಪುಟ ೮; ಇದು ಒಂದು ಜನಪದ ಸಂಸ್ಕೃತಿಯನ್ನು ಬಿಂಬಿಸುವ ಲಾವಣಿ. ಈ ಲಾವಣಿಯಲ್ಲಿ ಹೈದರ್ ಮತ್ತು ಟಿಪ್ಪು ಸುಲ್ತಾನನ ಅಂತ್ಯಕಾಲದ ಸನ್ನಿವೇಶವನ್ನು ಒಳಗೊಂಡಿದೆ ಎಂದು ತಿಳಿಸಿದ್ದಾರೆ.

೭೬೯ (೧೯೪). ಪಾಟೀಲ ಬಿ.ಪಿ; **ತೇದುಂಡ ಹಂತಿ ನಮಬಾಳು (ಹಂತಿಪದಗಳ ಸಂಗ್ರಹ)**; ಧಾರವಾಡ; ನೀಲಾಂಬಿಕಾ ಪ್ರಕಾಶನ; ೧೯೩೩ ಪುಟ ४+೫೩; ಈ ಕೃತಿಯಲ್ಲಿ ೨೨೮ ಹಂತಿ ಹಾಡುಗಳಿವೆ. ಧಾರವಾಡ ಜಿಲ್ಲೆಯ ನವಲಗುಂದದ ಶಲವಡಿ ಮತ್ತು ರೋಣದ ಮಾಳವಾಡ ಗ್ರಾಮಗಳಿಂದ ಇಲ್ಲಿ ಹಾಡುಗಳನ್ನು ಸಂಗ್ರಹಿಸಲಾಗಿದೆ. ಹಂತಿ ರೈತನ ಬದುಕಿನ ಒಂದುಪ್ರಮುಖ ಹಂತ, ಸುಖ-ದುಖ ಮೊದಲಾದವುಗಳನ್ನೆಲ್ಲ

ಧಾರಾಳವಾಗಿ ಕೊಂಡಾಡುತ್ತಾನೆ. ಇಲ್ಲಿಯ ಹಂತಿ ಹಾಡುಗಳಲ್ಲೂ ಈ ಎಲ್ಲಾ ವಿಷಯಗಳಿವೆ.

೭೭೧ (೧೯೫). ಪಾಟೀಲ ವ್ಹಿ.ಎಲ್; **ವಡ್ಡಾರಾಧನೆಯ ಜಾನಪದೀಯ ಹಾಗೂ ಸಾಮಾಜಿಕ ಅಂಶಗಳು**; ಧರವಾಡ; ಕರ್ನಾಟಕ ವಿಶ್ವವಿದ್ಯಾಲಯ; ೧೯೭೪; ಪುಟ ೧೨೪; ೧೯೭೪ರಲ್ಲಿ ಎಸ್.ಎಲ್. ಸಣ್ಣೆಲ್ಲಪ್ಪನವರ ಅವರ ಮಾರ್ಗದರ್ಶನದಲ್ಲಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಮಂಡಿಸಿದ ಎಂ.ಫಿಲ್ ಸಂಶೋಧನ ಸಂಪ್ರಬಂಧ. ವಡ್ಡಾರಾಧನೆ ಗ್ರಂಥವನ್ನು ಜಾನಪದದೀಯ ಹಾಗೂ ಸಾಮಾಜಿಕ ಅಂಶಗಳಿಂದ ಗುರುತಿಸಿದ ಈ ಸಂಪ್ರಬಂಧದಲ್ಲಿ ೫ ಅಧ್ಯಾಯಗಳಿವೆ. ವಡ್ಡಾರಾಧನೆಯ ಕತೃ, ಕೃತಿ, ಕಾಲ, ದೇಶ, ವಿಚಾರ, ಜನಪದ ಕಥೆ ಮತ್ತು ವಡ್ಡಾರಾಧನೆಯ ಕಥೆಗಳ ಒಂದು ವಿವೇಚನೆ. ಜಾನಪದೀಯ ಹಾಗೂ ಸಾಮಾಜಿಕ ಅಂಶಗಳು, ಸಮಾಜ, ಕಲೆ, ವಿಧಿ-ವಿಧಾನ=ಸಂಪ್ರದಾಯಗಳು. ಆಡಳಿತ, ಭಾಷೆ ಮೊದಲಾದವು ಈ ಸಂಪ್ರಬಂಧದಲ್ಲಿ ಪ್ರಮುಖವಾದ ಅಂಶಗಳಾಗಿವೆ.

೭೯೧ (೧೯೬). ಪುರುಷೋತ್ತಮ ಬಿಳಿಮಲೆ; **ಕುಮಾರರಾಮ ಮತ್ತು ಕುಮಟದುರ್ಗ**; ಹಂಪಿ; ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ; ೧೯೯೯; ಪುಟ ೩೮+೨; ಕುಮಾರಾಮ ಮತ್ತು ಕುಮಟದುರ್ಗವನ್ನು ಪರಿಚಯಿಸುವ ಕೃತಿ

೮೦೨ (೧೯೭). ಪೋತೆ ಎಚ್.ಟಿ; **ಹೈದ್ರಾಬಾದ ಕರ್ನಾಟಕದ ಜನಪದ ವಾದ್ಯಗಳು**; ಗುಲ್ಬರ್ಗಾ; ಗುಲ್ಬರ್ಗ ವಿಶ್ವವಿದ್ಯಾಲಯ; ೧೯೮೯; ಪುಟ ೧೭೪; ಇದು ೧೯೮೯ರಲ್ಲಿ ಗುಲ್ಬರ್ಗಾ ವಿಶ್ವವಿದ್ಯಾಲಯದಿಂದ ಪಿ.ಕೆ. ಖಂಡೋಬಾ ಅವರ ಮಾರ್ಗದರ್ಶನದಲ್ಲಿ ರಚನೆಗೊಂಡ ಪಿಎಚ್.ಡಿ. ಸಂಶೋಧನ ಸಂಪ್ರಬಂಧ. ಇದರಲ್ಲಿ ಐದು ಅಧ್ಯಾಯಗಳಿವೆ. ಜನಪದ ವಾದ್ಯಗಳ ಕಲ್ಪನೆ, ಜನಪದ ವಾದ್ಯಗಳ ಉಗಮ, ವಿಕಾಸ, ವಾದ್ಯಗಳ ವರ್ಗೀಕರಣ, ಪ್ರಾದೇಶಿಕ ವೈಶಿಷ್ಟ್ಯಗಳನ್ನು ಕುರಿತು ಚರ್ಚಿಸಿದ್ದಾರೆ. ತಂತಿ ವಾದ್ಯ, ಧರ್ಮವಾದ್ಯ, ಲೋಹವಾದ್ಯ, ಗಾಳಿವಾದ್ಯಗಳೆಂದು ವರ್ಗೀಕರಿಸಿ ಅಧ್ಯಯನ ಕೈಗೊಂಡಿದ್ದಾರೆ. ಕೊನೆಗೆ ಹೈದ್ರಾಬಾದ ಕರ್ನಾಟಕದ ಜನಪದ ವಾದ್ಯಗಳ ರೇಖಾಚಿತ್ರಗಳನ್ನು ಮತ್ತು ಕೆಲವು ವಾದ್ಯಗಳ ಛಾಯಾಚಿತ್ರಗಳನ್ನು ನೀಡಿದ್ದಾರೆ.

೮೦೪ (೧೯೮). ಪೋತೆ ಎಚ್.ಟಿ; **ಜಾನಪದ ಸಿಂಗಾರ**; ರಾಯಚೂರು; ಕುಮಾರ ಪೂರ್ಣಿಮಾ ಪ್ರಕಾಶನ; ೨೦೦೧; ಪುಟ ೮+೧೦೮; ಈ ಕೃತಿಯಲ್ಲಿ ಹತ್ತು ಲೇಖನಗಳಿವೆ. ಜಾನಪದ ಪ್ರದರ್ಶನ ಕಲೆಗಳ ಸಾಂಸ್ಕೃತಿಕ ಹಿನ್ನೆಲೆ. ರಾಯಚೂರ ಜಿಲ್ಲೆಯ ಜನಪದ ಪ್ರದರ್ಶನ ಕಲೆಗಳು. ಆನಪದ ವಾದ್ಯಗಳ ಕಲ್ಪನೆ, ಆಧುನಿಕ ಬದುಕಿನಲ್ಲಿ ಜನಪದ ಪ್ರದರ್ಶನ ಕಲೆಗಳು, ಜನಪದ ನೃತ್ಯಕಲೆಗಳು, ಜನಪದ ಪ್ರದರ್ಶನ ಕಲೆಗಳ ಅಳಿವು-ಉಳಿವು. ಆನಪದ ಉಡುಗೆ-ತೊಡುಗೆಗಳು ಮುಂತಾದ ಲೇಖನಗಳು ಇದರಲ್ಲಿವೆ.

೮೧೭ (೧೯೯). ಪ್ರಭಾಕರ ಜೋಶಿ ಎಂ; **ಕೃಷ್ಣಸಂಧಾನ**; ಪ್ರಸಂಗ ಮತ್ತು ಪ್ರಯೋಗ; ಮಂಗಳೂರು, ಮಂಗಳೂರು ವಿಶ್ವವಿದ್ಯಾಲಯ; ೧೯೯೮; ಪುಟ ೩೮೦; 'ಕೃಷ್ಣಸಂಧಾನ; ಪ್ರಸಂಗ ಮತ್ತು ಪ್ರಯೋಗ' ಯು.ಪಿ. ಉಪಾಧ್ಯಾಯ ಅವರ ಮಾರ್ಗದರ್ಶನದಲ್ಲಿ ೧೯೯೮ರಲ್ಲಿ ಮಂಗಳೂರು ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಪಿಎಚ್.ಡಿ. ಸಂಶೋಧನ ಮಹಾಪ್ರಬಂಧ. ಇದು ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ ಉಡುಪಿಯಿಂದ ಸಂಶೋಧನೆ ಮಾಡಲಾಗಿದೆ. ಇದರಲ್ಲಿ ೯ ಅಧ್ಯಾಯಗಳಿವೆ. ವಸ್ತು ಪರಿಶೀಲನ, ಆಕರ ಪರಿಶೀಲನ, ಪ್ರಸಂಗ ಪರಶೀಲನ ಪ್ರಯೋಗ ಪರಿಶೀಲನ, ಪಾತ್ರ ಪರಿಶೀಲನ,

ಅರ್ಥ ಪರಿಶೀಲನ, ನಾಟ್ಯ ಪರಿಶೀಲನ ಈ ಎಲ್ಲ ಅಧ್ಯಯನಗಳು ಒಂದು ಪ್ರಸಂಗವನ್ನು ಅದರ ಪ್ರಯೋಗ ಸಂದರ್ಭದಲ್ಲಿಟ್ಟು ವಿವೇಚಿಸಲಾಗಿದೆ. ಒಂದು ಪ್ರಸಂಗದ ಮುಖೇನ 'ಪ್ರಸಂಗ–ಪ್ರಯೋಗ' ಸಮುಚ್ಚಯದ ವಿವಿಧ ಆಯಾಮಗಳನ್ನು, ಇಡೀ ಯಕ್ಷಗಾನವನ್ನು ಗಮನಿಸುವ ಪ್ರಯತ್ನವನ್ನು ಈ ಮಹಾಪ್ರಬಂಧದಲ್ಲಿ ಮಾಡಲಾಗಿದೆ.

೮೨೩ (೨೦೦). ಪ್ರಹ್ಲಾದ ಕುಲಕರಣಿ; **ನಾಣ್ಣುಡಿ**; ಬೆಳಗಾವಿ; ೧೯೩೬; ಪುಟ ೫೪; ಗಾದೆಗಳ ಸ್ವರೂಪವನ್ನು ಚರ್ಚಿಸುವ ಪ್ರಬಂಧ

೮೫೨ (೨೦೧). ಬಸವರಾಜ ಪಾವಟಿ; **ಜಾನಪದದಲ್ಲಿ ಶಲವಡಿ ಗುರುಶಾಂತೇಶ**; ಶಲವಡಿ; ಶ್ರೀ ಮ.ನಿ.ಪ್ರ ಬಸವರಾಜ ಮಹಾಸ್ವಾಮಿ; ೧೯೭೫; ಪುಟ ೭೨+೧೨; ಇದು ಧಾರವಾಡ ಜಿಲ್ಲೆಯ ಶಲವಡಿಯ ಗುರುಶಾಂತ ಶಿವಯೋಗಿಗಳ ಕುರಿತಾದ ಜಾನಪದ ಗೀತೆಗಳ ಸಂಗ್ರಹವಾಗಿದೆ. ಇದರಲ್ಲಿ ಗುರುಶಾಂತರ ಮುಕ್ತಕಗಳು, ಗುರುಶಾಂತರ ಕೋಲುಪದಗಳು, ಗುರುಶಾಂತರ ಕೋಲಾಟಗಳು, ಗುರುಶಾಂತ ಡೊಳ್ಳಿನ ಪದಗಳು, ಗುರುಶಾಂತರ ತತ್ವಪದಗಳೆಂದು ಒಟ್ಟು ೨೨ ಹಾಡುಗಳಿವೆ.

೮೭೦ (೨೦೨). ಜಬಸವರಾಜ ಸೋಳೇರಿ ಪಾಳ್ಯ; **ಜಗತ್ತಿನ ಜನಪದ ಜಾಣೆಯರ ಕಥೆಗಳು**; ಬೆಂಗಳೂರು; ವಿಶ್ವವಿದ್ಯಾಲಯ; ೧೯೯೮; ಪುಟ ೧೧+೮೬; ಜಗತ್ತಿನ ಬೇರೆ ಬೇರೆ ದೇಶಗಳ ಎಂಟು ಜಾನಪದ ಕಥೆಗಳನ್ನು ಈ ಪುಸ್ತಕದಲ್ಲಿ ಅನುವಾದಿಸಿ ಕೊಡಲಾಗಿದೆ.

೮೭೧ (೨೦೩). ಬಸವಲಿಂಗಯ್ಯ ಹಿರೇಮಠ, ವಿಶ್ವೇಶ್ವರಿ ಬಸಲಿಂಗಯ್ಯ; **ಪಾರಿಜಾತ ಪರಾಮರ್ಶೆ** ಕಿತ್ತೂರು; ಭೂಷಣ ಪ್ರಕಾಶನ; ೧೯೯೭; ಪುಟ ೬೨+೫; ಈ ಸಂಕಲನದಲ್ಲಿ ಒಂಬತ್ತು ಲೇಖನಗಳಿವೆ. ಅಪರಾಳ ತಮ್ಮಣ್ಣನ ಶ್ರೀಕೃಷ್ಣ ಪಾರಿಜಾತ, ಕುಲಗೋಡ ತಮ್ಮಣ್ಣನ ಪಾರಿಜಾತ, ಪಾರಿಜಾತ ಕೃತಿ ಪರಂಪರೆ, ಶ್ರೀಕೃಷ್ಣ ಪಾರಿಜಾತ ಮತ್ತು ಭಾಮಾಕಲಾಪ, ಪರಿಜಾತ ಮತ್ತು ಮರಾಠಿ ರಂಗಭೂಮಿ, ಪಾರಿಜಾತ ಮತ್ತು ಕೊರವಂಜಿ, ಪಾರಿಜಾತದ ಸಂಗೀತ. ಶ್ರೀಕೃಷ್ಣ ಪಾರಿಜಾತದ ರಂಗತಂತ್ರ ಮತ್ತು ಹೊಸ ಸಾಧ್ಯತೆಗಳು ಮುಂತಾದವು.

೮೭೨ (೨೦೪). ಬಸವಲಿಂಗಯ್ಯ ಹಿರೇಮಠ, ವಿಶ್ವೇಶ್ವರ ಬಸಲಿಂಗಯ್ಯ; **ಸಣ್ಣಾಟದ ಸ್ವರೂಪ**; ಕಿತ್ತೂರು; ಭೂಷಣ ಪ್ರಕಾಶನ; ೧೯೯೭; ಪುಟ ೭೨+೬; ಈ ಪುಸ್ತಕದಲ್ಲಿ ಎಂಟು ಲೇಖನಗಳಿವೆ. ಸಣ್ಣಾಟದ ಉಗಮ ಮತ್ತು ವಿಕಾಸ, ಸಣ್ಣಾಟದ ಭೌಗೋಳಿಕ ಪ್ರಸಾರ, ಕರ್ನಾಟಕದ ಸಣ್ಣಾಟ–ಮಹಾರಾಷ್ಟ್ರದ ತಮಾಷಾ ಸಣ್ಣಾಟ ಮತ್ತು ವಿವೇಚನೆ. ಸಣ್ಣಾಟದ ರಂಗತಂತ್ರ, ಸಣ್ಣಾಟದ ಹೊಸ ಸಾಧ್ಯತೆಗಳು, ಕವಿ ಪ್ರತಿ ಮತ್ತು ರಂಗಪ್ರತಿ, ಸಣ್ಣಾಟದ ಸಂಗೀತವಾದ್ಯ ಮುಂತಾದವುಗಳು ಉಲ್ಲೇಖಿತವಾಗಿವೆ.

೮೭೮ (೨೦೫). ಬಾಲಕೃಷ್ಣ ಶೆಟ್ಟಿ ಪೊಳಲಿ; **ಯಕ್ಷಗಾನ ವಾಚಸ್ಪತಿ**; ಮಂಗಳೂರು; ಪ್ರಸಾರಾಂಗ; ಮಂಗಳೂರು ವಿಶ್ವವಿದ್ಯಾಲಯ; ೧೯೯೯; ಪುಟ ೫೮; ಇದು ಯಕ್ಷಗಾನ ಕಲಾವಿದರಾದ ದಿ. ಪೊಳಲಿ ಶಂಕರನಾರಾಯಣ ಶಾಸ್ತ್ರಿಯವರ ಬದುಕು ಮತ್ತು ಸಾಧನೆಯನ್ನು ಕುರಿತಾದ ಕೃತಿಯಾಗಿದೆ. ಬದುಕು ಮತ್ತು ಸಾಧನೆ ಎಂಬ ಎರಡು ಭಾಗಗಳಲ್ಲಿ ಅವರ ಜೀವನದ ಪ್ರಮುಖ ಘಟ್ಟಗಳು ಮತ್ತು ಯಕ್ಷಗಾನದಲ್ಲಿ ಅವರ ಸಾಧನೆಯ ಕುರಿತ ಮಾಹಿತಿ ನೀಡಲಾಗಿದೆ.

೮೮೦ (೨೦೬). ಬಾಲಬಂಧು; **ಒಗಟಿನ ಗಂಟು**; ಬೆಂಗಳೂರು; ಕರ್ನಾಟಕ ಮಕ್ಕಳ ಸಾಹಿತ್ಯ ಸಂಘ; ೧೯೭೦; ಒಂದು ನೂರು ಒಗಟುಗಳ ಸಂಗ್ರಹ

೮೮೧ (೨೦೭). ಬಾಳಣ್ಣ ಶೀಗೀ ಹಳ್ಳಿ; **ರಂಗಸಂಗಾತಿ**; ಬೆಂಗಳೂರು; ಕನಕ ಸಾಹಿತ್ಯ ಪ್ರತಿಷ್ಠಾನ; ೨೦೦೨; ಪುಟ ೮+೧೧೨; ಇದು ಜನಪದ ಲೇಖನಗಳ ಸಂಗ್ರಹವಾಗಿದೆ. ಜಾನಪದ, ವೃತ್ತಿ ಹಾಗೂ ಹವ್ಯಾಸಿ ಹೀಗೆ ಮುಖ್ಯವಾದ ೩ ರಂಗಭೂಮಿಯನ್ನೊಳಗೊಂಡ ಲೇಖನಗಳು ಇಲ್ಲಿವೆ. ಇದರಲ್ಲಿ ಒಟ್ಟು ೧೩ ಲೇಖನಗಳಿವೆ. ರಂಗಭೂಮಿ ಮತ್ತು ನಾಟಕಗಳ ವಿವೇಚನೆಯನ್ನು ಮಾಡಿಕೊಡುತ್ತವೆ. ಜಾನಪದ ರಂಗಭೂಮಿಯ ಸಣ್ಣಾಟ, ಪಾರಿಜಾತಗಳ ಅಧ್ಯಯನದಿಂದ ಮೊದಲುಗೊಂಡು ರಂಗಭೂಮಿ ತಂತ್ರ, ವಿನ್ಯಾಸ, ಸಾಹಿತ್ಯಗಳವರೆಗೆ ಈ ಲೇಖನಗಳ ಹರಹು ಇದೆ.

೮೯೨ (೨೦೮). ಬಿರಾದಾರ ಮ.ಗು; ಎಮ್.ಎಸ್. ಲಠ್ಠೆ; ಎಸ್.ಡಿ. ಸವದತ್ತಿಮಠ; **ಯಯಾತಿ (ದೊಡ್ಡಾಟ)**; ಗುಲ್ಬರ್ಗಾ; ಪ್ರಸಾರಾಂಗ ವಿಶ್ವವಿದ್ಯಾಲಯ; ೧೯೮೭; ಪುಟ ೨೦+೧೨೮; ಯಯಾತಿ ಒಂದು ಬಯಲಾಟ. ಕನ್ನಡ ಜನಪದ ರಂಗಭೂಮಿಯ ಪ್ರಯೋಗಕ್ಕೆ ಯೋಗ್ಯವಾದ ಕಥಾಪುಸ್ತಕ ಇದಾಗಿದೆ. ಈ ಕೃತಿಯು ಬೆಳಗಾವಿ ಜಿಲ್ಲೆಯ ನೇಸರಿಗಿ ಗ್ರಾಮದ ಬಸವಣ್ಣೆಪ್ಪ ವಿರಚಿಸಿದುದು. ಯಯಾತಿ ಉತ್ತರ ಕರ್ನಾಟಕದ ಬಯಲಾಟಗಳಲ್ಲಿ ಒಂದು ಅದು ಮೂಡಲಪಾಯ ದೊಡ್ಡಾಟ.

೮೯೮ (೨೦೯). ಬಿಂದುಮಾಧವ ಬಿ; **ನಾಡ ಹಾಡುಗಳು**; ೧೯೪೦; ಪುಟ ೫೮೫; ನಾಡಿಗೆ ಸಂಬಂಧಿಸಿದ ಕೆಲವು ಹಾಡುಗಳು ಈ ಕೃತಿಯಲ್ಲಿವೆ.

೯೦೨ (೨೧೦). ಬೆಳ್ಳಿಕಟ್ಟಿ ಜಿ.ಎಸ್; **ತ್ರಿಪದಿ ಸಾಹಿತ್ಯದಲ್ಲಿ ಸಾಮಾಜಿಕ ಮೌಲ್ಯಗಳು**; ಒಂದು ಅಧ್ಯಯ; ಧಾರವಾಡ; ಕರ್ನಾಟಕ ವಿಶ್ವವಿದ್ಯಾಲಯ; ೧೯೯೫; ಪುಟ ೧೩೫; ೧೯೯೫ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಮಂಡಿತವಾದ ಎಂ.ಫಿಲ್ ಸಂಶೋಧನ ಸಂಪ್ರಬಂಧ. ಎಸ್.ಎಸ್. ಭದ್ರಾಪುರ ಇದಕ್ಕೆ ಮಾರ್ಗದರ್ಶಕರು. ಉತ್ತರ ಕರ್ನಾಟಕದ ಪ್ರಮುಖ ಜನಪದ ತ್ರಿಪದಿ ಕೃತಿಗಳನ್ನು ಗಮನದಲ್ಲಿರಿಸಿಕೊಂಡು ಆ ಸಾಹಿತ್ಯದಲ್ಲಿ ಸಾಮಾಜಿಕ ಮೌಲ್ಯಗಳನ್ನು ಗುರುತಿಸುವ ಈ ಸಂಪ್ರಬಂಧದಲ್ಲಿ ೬ ಅಧ್ಯಾಯಗಳಿವೆ. ತ್ರಿಪದಿ ಉಗಮ, ವಿಕಾಸ ಮತ್ತು ಲಕ್ಷಣ, ತ್ರಿಪದಿ ಸಾಹಿತ್ಯದ ಘಟ್ಟಗಳು, ಉತ್ತರ ಕರ್ನಾಟಕದ ಪ್ರಮುಖ ಜನಪದ ತ್ರಿಪದಿ ಕೃತಿಗಳು, ಜನಪದ ತ್ರಿಪದಿಗಳಲ್ಲಿನ ಸಾಮಾಜಿಕ ಮೌಲ್ಯಗಳು ಈ ಮೊದಲಾದ ವಿಷಯಗಳನ್ನು ಈ ಸಂಪ್ರಬಂಧ ವಿವರವಾಗಿ ತಿಳಿಸುತ್ತದೆ.

೯೦೩ (೨೧೧). ಬೋರಯ್ಯ ಕೆ; **ಕನ್ನಡ ಜಾನಪದ ಕಥನಗೀತೆಗಳಲ್ಲಿ ಬಂಡಾಯ** ದನಿ; ಶಿವಮೊಗ್ಗ; ಕುವೆಂಪು ವಿಶ್ವವಿದ್ಯಾಲಯ; ೨೦೦೧; ಪುಟ ೧೦೨; ಕುವೆಂಪು ವಿಶ್ವವಿದ್ಯಾಲಯದಿಂದ ೨೦೦೧ರಲ್ಲಿ ಸಣ್ಣರಾಮ ಅವರ ಮಾರ್ಗದರ್ಶನದಲ್ಲಿದ ರಚನೆಗೊಂಡ ಪಿಎಚ್.ಡಿ. ಸಂಶೋಧನ ಸಂಪ್ರಬಂಧ. ಇದರಲ್ಲಿ ಐದು ಅಧ್ಯಾಯಗಳಿವೆ. ಜನಪದ ಕಥೆ, ಗೀತೆ, ಗಾದೆ, ಒಗಟುಗಳಲ್ಲಿ ಬಂಡಾಯದ ಸ್ವರೂಪವನ್ನು ಸ್ಥೂಲವಾಗಿ ಚರ್ಚಿಸಿದ್ದಾರೆ. ಆನಪದ ಕಥನ ಗೀತೆಗಳಲ್ಲಿ ಬಂಡಾಯದ ದನಿ, ಕಥನಗೀತೆಗಳಲ್ಲಿ ಮೌಲ್ಯ ಪ್ರತಿಪಾದನೆ ಹೀಗೆ ಅಧ್ಯಾಯಗಳನ್ನಾಗಿ ವಇಂಗಡಿಸಿ ಅದರ ಮೂಲಕ ಸಾಮಾಜಿಕ ಮೌಲ್ಯ ಪ್ರತಿಪಾದನೆ ಹೀಗೆ ಅಧ್ಯಾಯಗಳನ್ನಾಗಿ ವಿಂಗಡಿಸಿ ಅದರ ಮೂಲಕ ಸಾಮಾಜಿಕ, ಐತಿಹಾಸಿಕ, ಪೌರಾಣಿಕ ಕಥನ ಗೀತೆಗಳಲ್ಲಿ ಬಂಡಾಯದ ದನಿಯನ್ನು ಗಉರುತಿಸಿದ್ದಾರೆ. ಮೌಲ್ಯ, ಆದರ್ಶ, ನೋವು, ಸಕಟ, ಬಲಿದಾನ, ಮತ್ಸರ, ದೈವಭಕ್ತಿ, ನೀತಿ ಮೊದಲಾದ ಅನೇಕ ವಿಚಾರಗಳಿಗೆ ಕಥನಗೀತೆಗಳ ಅಭಿವ್ಯಕ್ತಿಯಾಗಿರುವುದನ್ನು ಕುರಿತು ವಿವೇಚಿಸಲಾಗಿದೆ.

೯೦೬ (೨೧೨). ಬೋರಲಿಂಗಯ್ಯ ಹಿ.ಚಿ.; **ಎಚ್.ಎಲ್. ನಾಗೇಗೌಡ**; ಪ್ರಶಸ್ತಿ ಪಡೆದ ಮಹನೀಯರು (೧೯೮೦-೧೯೮೬); ಬೆಂಗಳೂರು; ಕರ್ನಾಟಕ ಜಾನಪದ ಮತ್ತು ಯಕ್ಷಗಾನ

ಅಕಾಡೆಮಿ; ೧೯೮೭; ಪುಟ ೩೧೨+೮; ೧೯೮೦ ರಿಂದ ೧೯೮೬ರವರೆಗೆ ೧೩೭ ಜಾನಪದ ಕಲಾವಿದರನ್ನು ಸನ್ಮಾನಿಸಿದ ವಿವರಗಳು ಮತ್ತು ಜಾನಪದ ಕಲಾವಿದರ ಹೆಸರುಗಳು ಮತ್ತು ಅವರು ಮಾಡಿದ ಸಾಧನೆಗಳ ವಿವರಗಳು ಪ್ರಶಸ್ತಿ ಪಡೆದ ಮಹನೀಯರು ಪುಸ್ತಕದಲ್ಲಿ ಸಂಗ್ರಹವಾಗಿವೆ.

೯೦೭ (೨೧೩). ಬೋರಲಿಂಗಯ್ಯ ಹಿ.ಚಿ.; **ಗಿರಿಜನ ನಾಡಿಗೆ ಪಯಣ**; ಬೆಂಗಳೂರು; ರಾಗಿರೊಟ್ಟಿ ಪ್ರಕಾಶನ; ೧೯೯೧; ಪುಟ ೧೮೪+೮; ಗಿರಿಜನ ಸಂಸ್ಕೃತಿಯನ್ನು ಹಾಗೂ ಅವರ ಸಮಸ್ಯೆಗಳನ್ನು ಈ ಕೃತಿಯಲ್ಲಿ ವಿವರಿಸಲಾಗಿದೆ.

೯೧೯ (೨೧೪). ಭಜಂತ್ರಿ ಎಸ್.ಬಿ; **ಜನಪದ ಕಾವ್ಯಗಳಲ್ಲಿ ಚಿತ್ರಿತಗೊಂಡಿರುವ ಉತ್ತರ ಕರ್ನಾಟಕದ ಸ್ವಾತಂತ್ರ್ಯವೀರರು**; ಧಾರವಾಡ; ಕನಾಟಕ ವಿಶ್ವವಿದ್ಯಾಲಯ; ೧೯೯೪; ಪುಟ ೧೭೭; ೧೯೯೪ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಎಂ.ಫಿಲ್ ಸಂಶೋಧನ ಸಂಪ್ರಬಂಧ. ಇದಕ್ಕೆ ಬಿ.ವ್ಹಿ. ಯಕ್ಕುಂಡಿಮಠ ಅವರು ಮಾರ್ಗದರ್ಶಕರಾಗಿದ್ದರು. ಸ್ವಾತಂತ್ರ್ಯ ವೀರರನ್ನು ಜನಪದ ಕಾವ್ಯಗಳಲ್ಲಿ ಚಿತ್ರಿಸುವ ಈ ಸಂಪ್ರಬಂಧದಲ್ಲಿ ೫ ಅಧ್ಯಾಯಗಳಿವೆ. ಜನಪದ ಕಾವ್ಯಗಳು ಹಾಗೂ ಅವುಗಳ ವೈವಿಧ್ಯತೆ, ಸ್ವಾತಂತ್ರ್ಯ ಪದದ ಅರ್ಥ–ವ್ಯಾಪ್ತಿ ಹಾಗೂ ಇತಿಹಾಸ. ಸ್ವಾತಂತ್ರ್ಯ ಹೋರಾಟಗಾರರ ಕುರಿತು ಜನಪದ ಗೀತೆಗಳು, ಸ್ವಾತಂತ್ರ್ಯ ಹೋರಾಟದಲ್ಲಿ ವೀರಮಹಿಳೆ ಕಿತ್ತೂರು ಚೆನ್ನಮ್ಮ, ಸ್ವಾತಂತ್ರ್ಯ ಹೋರಾಟದಲ್ಲಿ ಸಂಗೊಳ್ಳಿ ರಾಯಣ್ಣ, ಹಲಗಲಿ ಬೇಡರು, ನರಗುಂದ ಬಾಬಾಸಾಹೇಬ, ಮುಂಡರಗಿ ಭಿಮರಾಯ, ಸಿಂಧೂರ ಲಕ್ಷ್ಮಣ, ಮೈಲಾರ ಮಹಾದೇವಪ್ಪ ಮೊದಲಾದವು ಈ ಪ್ರಬಂಧದಲ್ಲಿ ಪ್ರಮುಖವಾದ ವಿಷಯಗಳಾಗಿವೆ.

೯೨೦ (೨೧೫). ಭಜಂತ್ರಿ ಎಸ್.ಬಿ; **ಜನಪದ ಒಡಪುಗಳು**; ಪಂಚಗಾಂವ್; ಚೈತನ್ಯ ಪ್ರಕಾಶನ; ೧೯೯೫; ಪುಟ ೮+೨೮+೭೪=೧೧೦; ೩೯೭ ಜನಪದ ಒಡಮುಗಳ ಸಂಕಲನ. ಜನಪದರಲ್ಲಿ ಬಳಕೆಯಾಗುತ್ತಿದ್ದ ಒಡಪುಗಳನ್ನು ಈ ಲೇಖನ ಪರಿಚಯಿಸುತ್ತದೆ.

೯೨೨ (೨೧೬). ಭಟ್ ಎಂ.ಆರ್; **ಮಚ್ಚೆ**; ಮಂಗಳೂರು; ಪ್ರಭಾತ್ ಪ್ರಿಂಟರ್ಸ್; ೧೯೫೭; ಪುಟ ೧೪; ಮಚ್ಚೆಯನ್ನು ಕುರಿತ ಕೆಲವು ನಂಬಿಕೆಗಳನ್ನು ಗ್ರಂಥರೂಪದಲ್ಲಿ ಕೊಡಲಾಗಿದೆ. ಮಚ್ಚೆಯ ವೈವಿಧ್ಯಗಳು, ಅವುಗಳು ಕಂಡುಬರುವ ದೇಹದ ಭಾಗಗಳನ್ನು ಈ ಕಿರುಹೊತ್ತಿಗೆಯಲ್ಲಿ ವಿವರಿಸಲಾಗಿದೆ.

೯೨೩ (೨೧೭). ಭಟ್ ಎಲ್.ಜಿ; **ಉತ್ತರ ಕನ್ನಡದ ಮುಕರಿಗಳು–ಬುಡಕಟ್ಟು ಅಧ್ಯಯನ**; ಬೆಂಗಳೂರು; ಐ.ಬಿ.ಎಚ್. ಪ್ರಕಾಶನ; ೧೯೮೫; ಪುಟ ೪೩; ಉತ್ತರ ಕನ್ನಡ ಜಿಲ್ಲೆಯ ಮುಕರಿಗಳ ಸ್ಥೂಲ ಪರಿಚಯ ಒಳಗೊಂಡಿದೆ.

೯೨೪ (೨೧೮). ಭಟ್ ಎಲ್.ಜಿ; **ಹಾಲಕ್ಕಿ ಸುಗ್ಗಿ**; ಬೆಂಗಳೂರು; ಐ.ಬಿ.ಎಚ್. ಪ್ರಕಾಶನ; ೧೯೮೪; ಪುಟ ೪೦; ಹಾಲಕ್ಕಿ ಒಕ್ಕಲಿಗರನ್ನು ಕುರಿತ ಒಟ್ಟು ಅವರ ಜೀವನದ ಸಂಪ್ರದಾಯ, ಪರಂಪರೆ, ವಿಧಿ–ವಿಧಾನಗಳು ವೃತ್ತಿ ಸಾಹಿತ್ಯ ಇವುಗಳೆಲ್ಲವನ್ನು ಕುರಿತ ಗ್ರಂಥವಾಗಿದೆ.

೯೨೬ (೨೧೯). ಭಟ್ ಎಲ್.ಜಿ; **ಬಾಗಿಲು ತಡೆಯುವ ಪದಗಳು**; ಬೆಂಗಳೂರು; ಬುಕ್ ಡಿಪೋ; ೧೯೯೩; ಪುಟ ೮; ಬಾಗಿಲು ತಡೆವ ೨೧ ಪದಗಳು ಈ ಕೃತಿಯಲ್ಲಿವೆ.

೯೩೬ (೨೨೦). ಭಾನುಮತಿ ವೈ.ಸಿ; **ಹೆತ್ತೂರಿನ ಹಬ್ಬಗಳು**; ಮಾನವಿಕ ಕರ್ನಾಟಕ ಮೈಸೂರು ವಿಶ್ವವಿದ್ಯಾಲಯ; ೧೯೮೮; ಪುಟ ೧೦; ಹೆತ್ತೂರಿನ ಹಬ್ಬಗಳ ಸ್ಥೂಲ ಪರಿಚಯ ಕೃತಿ

೯೩೭ (೨೨೧). ಭಾನುಮತಿ ವೈ.ಸಿ; **ಬತ್ತೀಸ ಪುತ್ತಳಿ ಕಥೆ**; ಕನ್ನಡ ಅಧ್ಯಯನ ಸಂಸ್ಥೆ; ೧೯೮೯; ಪುಟ ೧೧೬+೮೦೪; ಈ 'ಬತ್ತೀಸ ಪುತ್ತಳಿ ಕಥೆಗಳು' ನಾನಾ ಕಾರಣಗಳಿಂದ ಇಂದಿಗೂ ಪ್ರಸ್ತುತವಾಗುತ್ತವೆ. ಮುಖ್ಯವಾಗಿ ಜಾನಪದ ಮತ್ತು ಮಾನವಶಾಸ್ತ್ರದ ಅಧ್ಯಯನಕ್ಕೆ ಸಂಶೋಧನೆಗೆ ಹೆಚ್ಚು ಫಲಕಾರಿಯಾಗಿವೆ. ಇವುಗಳಲ್ಲಿ ಉಲ್ಲೇಖಗೊಂಡ ಮೈಲಾರಲಿಂಗ ಸಂಪ್ರದಾಯ, ಬೆರಳು ಕೊಡುವ ಸಂಪ್ರದಾಯ, ಮುಡಿ ಕೊಡುವ ಪದ್ಧತಿಗಳೂ ಕೇವಲ ಕರ್ನಾಟಕಕ್ಕೆ ಮಾತ್ರ ಸಿಮಿತವಾಗಿಲ್ಲ, ಬದಲಾಗಿ ಇಡೀ ಭಾರತಾದ್ಯಂತ ಪ್ರಚಲಿತದಲ್ಲಿವೆ.

೯೪೦ (೨೨೨). ಭಾರತ ಸರ್ಕಾರದ ಸಚಿವಾಲಯ; **ದೇಶ ವಿದೇಶಗಳ ಜನಪ್ರಿಯ ಕಥೆಗಳು**; ದೆಹಲಿ; ಭಾರತ ಸರ್ಕಾರದ ಸಮಾಚಾರ ಮತ್ತು ಪ್ರಸಾರ ಸಚಿವಾಲಯದ ಪ್ರಕಾಶನ ವಿಭಾಗ; ೧೯೫೭; ಪುಟ ೧೦೮; ವಿವಿಧ ದೇಶಗಳ ಹದಿನಾರು ಕಥೆಗಳಿವೆ. ಲೇಖಕರ ಪರಿಚಯವಿದೆ.

೯೪೧ (೨೨೩). ಭಾರತಿ ಸಂಗಪ್ಪ ಗದ್ದಿ; **ಜನಪದ ಒಡಪುಗಳ ಸಾಂಸ್ಕೃತಿಕ ಅಧ್ಯಯನ**; ಧಾರವಾಡ; ಕರ್ನಾಟಕ ವಿಶ್ವವಿದ್ಯಾಲಯ; ೧೯೯೮; ಪುಟ ೩೫೧; ಇದು ೧೯೯೮ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸುಲೋಚನಾ ಸಂ. ಮಟ್ಟಿ ಅವರ ಮಾರ್ಗದರ್ಶನದಲ್ಲಿ ಮಂಡಿಸಿದ ಪಿಎಚ್.ಡಿ. ಸಂಶೋಧನ ಮಹಾಪ್ರಬಂಧವಾಗಿದೆ. ಇದರಲ್ಲಿ ೧೦ ಅಧ್ಯಾಯಗಳಿವೆ. ಜನಪದ ಸಾಹಿತ್ಯ ಪ್ರಕಾರಗಳಲ್ಲಿ ಒಡಪು, ಜನಪದ ಸಾಹಿತ್ಯ ಪ್ರಕಾರಗಳಲ್ಲಿ ಒಡಪುಗಳ ಸಂಬಂಧ, ಒಡಪುಗಳ ಸ್ವರೂಪ ಮತ್ತು ಲಕ್ಷಣ. ಕರ್ನಾಟಕದಲ್ಲಿ ಒಡಪುಗಳ ಅಧ್ಯಯನ, ಒಡಪುಗಳ ವರ್ಗೀಕರಣ, ಒಡಪುಗಳ ಸಾಮಾಜಿಕ ಮತ್ತು ಸಾಂಸ್ಕೃತಿಕ ಮೌಲ್ಯ, ಒಡಪುಗಳ ಸಾಹಿತ್ಯಿಕ ಮೌಲ್ಯ, ಒಡಪುಗಳು ಅಂದು–ಇಂದು–ಹೀಗೆ ಅನೇಕ ಪ್ರಮುಖವಾದ ಅಂಶಗಳನ್ನು ಈ ಮಹಾಪ್ರಬಂಧದಲ್ಲಿ ಅಧ್ಯಯನ ಮಾಡಲಾಗಿದೆ.

೯೫೫ (೨೨೪). ಮನೋಹರ; **ಬಂಗಾರದ ಹೆಜ್ಜೆ**; ಧಾರವಾಡ; ಸಮಾಜ ಪುಸ್ತಕಾಲಯ; ೧೯೯೦; ಪುಟ ೩೬; ೯ ಜನಪದ ಕತೆಗಳನ್ನು ಒಳಗೊಂಡ ಕೃತಿ.

೯೫೭ (೨೨೫). ಮನೋಹರ ಎಸ್. ಕುಂದರ್; **ಚಿತ್ರಗಳ ಮೂಲಕ ಸಮಕಾಲೀನ ಯಕ್ಷಗಾನ**; ಉಡುಪಿ; ಶೀನ–ಮೀನ ಪ್ರಕಾಶನ; ೧೯೯೮; ಪುಟ ೩೨+೭೨; ಈ ಪುಸ್ತಕದಲ್ಲಿ ಯಕ್ಷಗಾನ ಪ್ರಸಂಗಗಳಲ್ಲಿಯ ಎಲ್ಲ ಪಾತ್ರಗಳನ್ನು ಭಾವಚಿತ್ರ ಸಮೇತ ವಿವರಿಸಲಾಗಿದೆ. ಮುನ್ನುಡಿಯಲ್ಲಿ ಸಮಕಾಲೀನ ಯಕ್ಷಗಾನದ ಹಿಂದು–ಮುಂದು ಎಂಬ ದೀರ್ಘ ಲೇಖನವಿದೆ. ಅರಿಕೆಯಲ್ಲಿ ಲೇಖಕರು ಕೃತಿಯ ಕುರಿತು ಬರೆದಿದ್ದಾರೆ. ೩೦೨ ಪಾತ್ರಗಳ ಭಾವಚಿತ್ರಗಳಿದ್ದು ಅವುಗಳ ಕುರಿತು ವಿವರಣೆಯನ್ನು ನೀಡಲಾಗಿದೆ.

೯೫೮ (೨೨೬). ಮರಕಿಣಿ; **ದಕ್ಷಿಣ ಕನ್ನಡದ ಜನಪದ ಗೀತೆಗಳು**; ಪುತ್ತೂರು; ಜನಪ್ರಿಯ ಸಾಹಿತ್ಯ; ೧೯೬೧; ಪುಟ ೨೮; ದಕ್ಷಿಣ ಕನ್ನಡ ಜಿಲ್ಲೆಯ ದಕ್ಷಿಣ ಭಾಗದಲ್ಲಿಯ ಹವ್ಯಕ ಬ್ರಾಹ್ಮಣ ವರ್ಗದ ಜನರು ಹಾಡುವ ಜನಪದ ಗೀತೆಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ. ಇಲ್ಲಿ ಬದುಕಿನ ವಿವಿಧ ಮುಖಗಳಿಗೆ ಸಂಬಂಧಿಸಿದ (ಅಂದರೆ ಸುಖಜೀವನ, ಶ್ರಮಜೀವನ, ಲಾಲಿ, ಪ್ರಾಯಶ್ಚಿತ, ತವರು, ಉಪಚಾರ, ಸಂಗಾತಿ ಬಗೆ) ಹೀಗೆ

೯೬ ತ್ರಿಪದಿಗಳನ್ನು ಸಂಗ್ರಹಿಸಲಾಗಿದೆ. ಕೃತಿಯ ಕೊನೆಯಲ್ಲಿ ಕೆಲವು ಪ್ರಾದೇಶಿಕ ಶಬ್ದಗಳಿಗೆ ಸಮಾನ ಪದಗಳನ್ನು ಕೊಡಲಾಗಿದೆ.

೯೭೩ (೨೭೭). ಮಹಾಬಲಭಟ್ಟ ಮುಳಿಯ; **ಸ್ವರ್ಣಕಮಲ**; ಮಂಗಳೂರು; ಪಂಚಿಕಲ್ ಶ್ಯಾಮರಾಯ ಆಚಾರ್ಯ; ೧೯೮೮; ಪುಟ ೪೩೭; ಇದು ಯಕ್ಷಗಾನ ಕಲಾವಿದರಾದ ಅರ್ಕುಳ ಸುಬ್ರಾಯ ಆಚಾರ್ಯರ ಸಂಸ್ಮರಣ ಗ್ರಂಥವಾಗಿದೆ. ಇದರಲ್ಲಿ ಎರಡು ಭಾಗಗಳಿವೆ. ವಿವಿಧ ಲೇಖಕರು ಆಚಾರ್ಯರ ಬಗ್ಗೆ ಬಗ್ಗತೆ ಬರೆದ ೧೩ ಲೇಖನಗಳಿವೆ. ಹಾಗೂ ಯಕ್ಷಗಾನದ ಬಗ್ಗೆ ಬರೆದ ೩೭ ಲೇಖನಗಳಿವೆ.

೯೭೭ (೨೨೮). ಮಹಾಬಲೇಶ್ವರ ಭಟ್ಟ ಪಡಾರು; **ಬಸುರಿಯ ಹಾಡು ಮತ್ತು ಶ್ರೀಕೃಷ್ಣ ಸತ್ಯಭಾಮಾ ಸಂವಾದ**; ಮಂಗಳೂರು; ಪ್ರಭಾತ್ ಪ್ರಿಂಟರ್ಸ್; ೧೯೬೧; ಪುಟ ೧೨; ವಿವರಣೆಯೊಂದಿಗೆ ಕೆಲವು ಬಿಡಿಪದಗಳು ಈ ಸಂಗ್ರಹದಲ್ಲಿ ಸೇರ್ಪಡೆಯಾಗಿವೆ.

೯೮೦ (೨೨೯). ಮಹಾಂತೇಶ ಎಸ್. ಗುಬ್ಬೇವಾಡಾ; **ಜಾನಪದದಲ್ಲಿ ಆರ್ಥಿಕ ವಿಚಾರಗಳು**; ಧಾರವಾಡ; ಕರ್ನಾಟಕ ವಿಶ್ವವಿದ್ಯಾಲಯ; ೧೯೮೬; ಪುಟ ೬+೪೯=೫೫; ಜನಪದದಲ್ಲಿಯ ಆರ್ಥಿಕ ಅಂಶಗಳ ಕುರಿತಾದ ಉಪನ್ಯಾಸಮಾಲೆ ಕೃತಿ.

೯೮೧ (೨೩೦). ಮಹೇಶ; **ಜಾನಪದ ವಿನೋದ ಗರತಿಯ ಹಾಡುಗಳು**; ಗದಗ; ಎಂ.ಎಸ್. ಶಾಬಾದಿಮಠ; ಪುಟ ೩೨; ೨೦೧ ತ್ರಿಪದಿಗಳ ಸಂಗ್ರಹ ಇದಾಗಿದೆ.

೯೯೧ (೨೩೧). ಕಮಜುನಾಥ ಬಿ; **ಕನ್ನಡ ಜನಪದ ನಂಬಿಕೆಗಳು**; ಒಂದು ಅಧ್ಯಯನ; ಮೈಸೂರು; ಮೈಸೂರು ವಿಶ್ವವಿದ್ಯಾನಿಲಯ; ೧೯೯೪; ೧೯೯೪ರಲ್ಲಿ ಹಿ.ಶಿ. ರಾಮಚಂದ್ರೇಗೌಡ ಅವರ ಮಾರ್ಗಧರ್ಶನದಲ್ಲಿ ಮಂಜುನಾಥ ಬಿ. ಅವರು ಸಿದ್ಧಪಡಿಸಿದ ಕನ್ನಡ ಜನಪದ ನಂಬಿಕೆಗಳು; ಒಂದು ಅಧ್ಯಯನ ಎನ್ನುವ ಸಂಶೋಧನ ಮಹಾಪ್ರಬಂಧಕ್ಕೆ ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ. ಪದವಿ ನೀಡಿದೆ.

೯೯೩ (೨೩೨). ಮಂಜುನಾಥ ಜಿ.ಆರ್; **ಮಾರಿಹಬ್ಬ**; ಒಂದು ಅಧ್ಯಯ; ಹಂಪಿ. ಕನ್ನಡ ವಿಶ್ವವಿದ್ಯಾಲಯ; ೧೯೯೭; ಪುಟ ೪+೮೦; ೧೯೯೭ರಲ್ಲಿ ಕನ್ನಡ ವಿಶ್ವವಿದ್ಯಾಲಯದಿಂದ ಕೆ.ಎಂ. ಮೈತ್ರಿ ಅವರ ಮಾರ್ಗದರ್ಶನದಲ್ಲಿ ರಚನೆಗೊಂಡ ಎಂ.ಫಿಲ್. ಸಂಶೋಧನ ಸಂಪ್ರಬಂಧ. ಇದರಲ್ಲಿ ಒಟ್ಟು ಐದು ಅಧ್ಯಾಯಗಳಿವೆ. ಹೆಣ್ಣು ದೇವತಾರಾಧನೆ, ಮಾರಿಹಬ್ಬ, ಮಾರಿಹಬ್ಬದ ತಾತ್ವಿಕ ಚರ್ಚೆ, ಮಾರಿಹಬ್ಬದ ಬಗೆಗಿನ ಐತಿಹ್ಯಗಳು, ಆಚರಣೆ–ಸಂಪ್ರದಾಯಗಳು, ತಾತ್ವಕ ಚರ್ಚೆಯನ್ನು ಮಾಡಿದ್ದಾರೆ. ಕೊನೆಗೆ ಅನುಬಂಧದಲ್ಲಿ ವಕ್ತೃ ವಿವರ ಆಧಾರಗ್ರಂಥಗಳು, ಸಹಾಯಕ ಗ್ರಂಥಸೂಚಿ, ಛಾಯಾಚಿತ್ರಗಳನ್ನು ನೀಡಿದ್ದಾರೆ.

೯೯೪ (೨೩೩). ಮಂಜುನಾಥ ಬೇವಿನಕಟ್ಟಿ; **ಜನಪದ ಸಂಸಸ್ಕೃತಿ**; ಹ್ಯಾರಡ; ತೇಜಸ್ವಿ ಪ್ರಕಾಶನ; ೧೯೯೪; ಪುಟ ೭೭; ಈ ಗ್ರಂಥ ಎಂಟು ಲೇಖನಗಳ ಸಂಕಲನ. ಇದರಲ್ಲಿ ಬದಲಾಗುತ್ತಿರುವ ಸನ್ನಿವೇಶದಲ್ಲಿ ಜಾನಪದ ನೆಲೆಗಳನ್ನು ಮತ್ತು ಗ್ರಾಮದೇವತೆ ಸ್ವರೂಪ ಹಿನ್ನೆಲೆ ಗುರುತಿಸಿದ್ದಾರೆ. ಜಾತ್ರೆ, ನಂಬಿಕೆ, ಬುಡಕಟ್ಟು, ಸಂಸ್ಕೃತಿ ಮುಂತಾದವುಗಳನ್ನು ಇಲ್ಲಿ ವಿವರಿಸಿದ್ದಾರೆ.

೯೯೫ (೨೩೪). ಮಂಜುನಾಥ ಬೇವಿನಕಟ್ಟಿ; **ಮಳಲಿಯಮ್ಮ ನಿನ್ನಾಲ್ಕದೋ–ಉದೋ**; ಹೊಸಪೇಟೆ; ಅಂಬಿಕಾ ಪ್ರಿಂಟರ್ಸ್ ಆ್ಯಂಡ್ ಪಬ್ಲಿಷರ್ಸ್; ೧೯೯೪; ಪುಟ ೬+೫೦; ಈ ಕೃತಿಯಲ್ಲಿ ಒಂದು ಗ್ರಾಮದೇವತೆಯ ಸ್ಥೂಲ ಪರಿಚಯವಿರುತ್ತದೆ. ಹ್ಯಾರಡದ ಗ್ರಾಮದೇವತೆ

ಮಳಲಿಯಮ್ಮನ ಆಚಾರ–ವಿಚಾರ, ವಿಧಿ–ವಿಧಾನಗಳನ್ನು ಇಲ್ಲಿ ಸ್ಥೂಲವಾಗಿ ಚರ್ಚಿಸಿದ್ದಾರೆ.

೯೯೯ (೨೩೫). ಮಂಜುನಾಥ ಭಾಗವತ; **ಯಕ್ಷಗಾನ ನಾಟಕದ ಪರಂಪರೆ ಮತ್ತು ಕೃತಿಗಳು**; ಮಂಗಳೂರು; ಪ್ರಭಾತ್ ಪ್ರಂಟರ್ಸ್; ೧೯೫೬; ಪುಟ ೧೭; ಯಕ್ಷಗಾನ ಕುರಿತಾದ ಒಂದು ಪ್ರಬಂಧ ಹಾಗೂ ಕೆಲವು ಕೃತಿಗಳ ಸ್ಥೂಲ ಪರಿಚಯವಿದೆ.

೧೦೦೦ (೨೩೬). ಮಂಜುನಾಥ ಭಾಗವತ; **ಉತ್ತರ ಕನ್ನಡ ಜಿಲ್ಲೆಯ ಯಕ್ಷಗಾನ ಮಂಡಳಿಗಳು**; ಮಂಗಳೂರು; ಪ್ರಭಾತ್ ಪ್ರಿಂಟರ್ಸ್; ೧೯೫೭; ಪುಟ ೧೭; ಉತ್ತರ ಕನ್ನಡ ಜಿಲ್ಲೆಯ ೩ ಪ್ರಸಿದ್ಧ ಮೇಳಗಳ ಪರಿಚಯವಿದೆ.

೧೦೦೧ (೨೩೭). ಮಂಜುನಾಥ ಭಾಗವತ ಹೊಸ್ತೋಟ; **ಯಕ್ಷಗಾನ ಗೋವರ್ಧನ ಗಿರಿಪೂಜೆ**; ಶಿವಮೊಗ್ಗ, ಮಲೆನಾಡು ಜಾನಪದ ಮತ್ತು ಯಕ್ಷಗಾನ ಕೂ ಪ್ರತಿಷ್ಠಾನ; ೧೯೯೩; ಪುಟ ೩೧; ಪರಿಸರಕ್ಕೆ ಸಂಬಂಧಿಸಿದ ನಿಸರ್ಗ ಸಂಧಾನ ಯಕ್ಷಗಾನ ಕೃತಿಯಾಗಿದೆ. ಕರು ಬೆರಳಿನಿಂದ ಗೋವರ್ಧನನನ್ನು ಎತ್ತಿಹಿಡಿದ ಪವಾಡ ಚಿತ್ರಣವನ್ನು ಅರ್ಥ ಸಹಿತ ವಿವರಿಸಲಾಗಿದೆ.

೧೦೦೨ (೨೩೮). ಮಂಜುನಾಥ ಭಾಗವತ ಹೊಸ್ತೋಟ; **ಮಾಹಾ ಕೋಲಾಹಲ**; ಗದಗ; ವೀರಶೈವ ಅಧ್ಯಯನ ಸಂಸ್ಥೆ; ೧೯೯೫; ಪುಟ ೬+೪೧; ಯಕ್ಷಗಾನ ನಾಟಕವನ್ನೊಳಗೊಂಡ ಕೃತಿ

೧೦೦೭ (೨೩೯). ಮಾಧವ ಪೆರಾಜೆ; **ಹೊಸಪೇಟೆ ತಾಲೂಕಿನ ಗಂಡು ಜೋಗಮ್ಮರ ಅಧ್ಯಯನ**; ಹಂಪಿ; ಕನ್ನಡ ವಿಶ್ವವಿದ್ಯಾಲಯ; ೧೯೯೩–೯೪; ಪುಟ ೬+೪೮; ೧೯೯೩–೯೪ರಲ್ಲಿ ಕನ್ನಡ ವಿಶ್ವವಿದ್ಯಾಲಯದಿಂದ ರಹಮತ್ ತೇಕೆರೆ ಅವರ ಮಾರ್ಗದರ್ಶನದಲ್ಲಿ ರಚನೆಗೊಂಡ ಸಂಶೋಧನ ಸಂಪ್ರಬಂಧ. ಇದರಲ್ಲಿ ಆರು ಅಧ್ಯಾಯಗಳಿವೆ. ಗಂಡು ಜೋಗಮ್ಮರ ಹಿನ್ನೆಲೆ, ಮಾಹಾಭಾರತದ ಶಿಖಂಡಿ ಮತ್ತು ಭೀಷ್ಮರು, ವೈಜ್ಞಾನಿಕ ಶೋಧಗಳು, ಗಂಡು ಜೋಗಮ್ಮ ಪದಕ್ಕೆ ನಿಘಂಟುಗಳು ನೀಡುವ ಅರ್ಥ ಸಾಮಾಜಿಕ, ಆರ್ಥಿಕ ಹಿನ್ನೆಲೆ, ಮೂಲ ಆಚರಣೆಗಳು, ಧಾರ್ಮಿಕ ನಂಬಿಕೆಗಳು, ವಿಧಿ–ವಿಧಾನಗಳು, ವೇಷಭೂಷಣಗಳು, ದೇವರ ಕಟ್ಟಿಸಿಕೊಳ್ಳುವುದು ಇತ್ಯಾದಿ ವಿಷಯಗಳನ್ನು ಕುರಿತು ವಿವರವಾಗಿ ಚರ್ಚಿಸಿದ್ದಾರೆ.

೧೦೦೮ (೨೪೦). ಮಾಧವ ಪೆರಾಜೆ; **ಯಕ್ಷಗಾನ ಕಾವ್ಯ ಪರಿಪಂಥ**; ಉಕ್ಕಿನಡ್ಕ; ಶ್ರೇಣಿ ಪ್ರಕಾಶನ, ೧೯೯೫; ಪುಟ ೪+೧೨+೫೦; ಇದು ಯಕ್ಷಗಾನ ಕಾವ್ಯ ಕೃತಿಯಾಗಿದೆ.

೧೦೧೨ (೨೪೧). ಮಾರುತಿ ವಿ.ಎಸ್.; **ಗೋಸಂಗಿ ಸಮುದಾಯ**; ಒಂದು ಅಧ್ಯಯನ; ಹಂಪಿ; ಕನ್ನಡ ವಿಶ್ವವಿದ್ಯಾಲಯ; ೨೦೦೨; ಪುಟ ೫+೨೫೧; ೨೦೦೨ರಲ್ಲಿ ಕನ್ನಡ ವಿಶ್ವವಿದ್ಯಾಲಯದಿಂದ ಹಿ.ಚಿ. ಬೋರಲಿಂಗಯ್ಯ ಅವರ ಮಾರ್ಗದರ್ಶನದಲ್ಲಿ ರಚನೆಗೊಂಡ ಪಿಎಚ್.ಡಿ. ಸಂಶೋಧನ ಮಹಾಪ್ರಬಂಧ. ಇದರಲ್ಲಿ ಒಟ್ಟು ೭ ಅಧ್ಯಾಯನಗಳಿವೆ. ಗೋಸಂಗಿಗಳ ಸಾಮಜಿಕ ವ್ಯವಸ್ಥೆ, ಸಾಂಸ್ಕೃತಿಕ ಬದುಕು, ಸಮುದಾಯದ ಆರ್ಥಿಕ ಸ್ಥಿತಿಗತಿ, ಭಾಷೆ, ಸಾಹಿತ್ಯ ಮತ್ತು ಕಲೆ, ವರ್ತಮಾನದಲ್ಲಿ ಗೋಸಂಗಿಗಳು ಎಂಬುದಾಗಿ ವಿಂಗಡಿಸಿ ಆ ಅಧ್ಯಾಯಗಳ ಮೂಲಕ ಆ ಸಮುದಾಯದ ವಿಸ್ತೃತ ಅಧ್ಯಯನವನ್ನು ಮಾಡಿದ್ದಾರೆ. ಅನುಬಂಧದಲ್ಲಿ ಗ್ರಂಥಋಣ, ಕೋಷ್ಟಕಗಳು, ವಕ್ತೃವಿವರ ಛಾಯಾಚಿತ್ರಗಳಿವೆ.

೧೦೧೪ (೨೪೨). ಮೀನಾರಾವ್; **ಅಭಿಮನ್ಯು ಕಾಳಗ**; ಶಿವಮೊಗ್ಗ; ಕೆಳದಿ ಸಂಗ್ರಹಾಲಯ; ೧೯೮೯; ಪುಟ ೩೫+೬೮; ಇದು ಯಕ್ಷಗಾನ ಪ್ರಸಂಗದ ಅಭಿಮನ್ಯ ಕಾಳಗ ಕುರಿತ ಕೃತಿಯಾಗಿದೆ.

೧೦೧೫ (೨೪೩). ಮುಡೂರು ಟಿ.ಜಿ; **ಹೊಸಕೆರೆಯ ಹೊನ್ನಮ್ಮ**; ಪಂಜ, ದಕ್ಷಿಣ ಕನ್ನಡ; ಪ್ರತಿಮಾ ಪ್ರಕಾಶನ; ೧೯೭೦; ಪುಟ ೪+೪೦; ದಕ್ಷಿಣ ಕನ್ನಡ ಜಿಲ್ಲೆಯ ಸುಬ್ರಹ್ಮಣ್ಯದಲ್ಲಿ ಅಪೂರ್ಣವಾಗಿ ದೊರೆತ ಹೊನ್ನಮ್ಮನಕೆರೆ ಲಾವಣಿಯನ್ನು ಆಧರಿಸಿ ರಚಿಸಿದ ಜನಪದಗೀತ ರೂಪಕ

೧೦೧೭ (೨೪೪). ಮುದಕಮ್ಮನವರ ಎ.ಜೆ; **ದೇವರಗುಡ್ಡ: ಒಂದು ಜಾನಪದೀಯ ಅಧ್ಯಯನ**; ಧಾರವಾಡ; ಕರ್ನಾಟಕ ವಿಶ್ವವಿದ್ಯಾಲಯ; ೧೯೯೩; ಪುಟ ೧೭೨; ೧೯೯೩ರಲ್ಲಿ ಎಸ್.ಎಸ್. ಭದ್ರಾಪುರ ಅವರ ಮಾರ್ಗದರ್ಶನದಲ್ಲಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಎಂ.ಫಿಲ್ ಸಂಶೋಧನ ಸಂಪ್ರಬಂಧ. ದೇವರಗುಡ್ಡವನ್ನು ಒಂದು ಜಾನಪದೀಯ ಅಧ್ಯಯನಕ್ಕೊಳಪಡಿಸಿದ ಈ ಸಂಪ್ರಬಂಧದಲ್ಲಿ ೭ ಅಧ್ಯಾಯಗಳಿವೆ. ಈ ಸಂಪ್ರಬಂಧದಲ್ಲಿ ದೇವರಗುಡ್ಡ ಕ್ಷೇತ್ರ ಪರಿಚಯ, ದೇವರಗುಡ್ಡ ಕ್ಷೇತ್ರ ಸಾಮಾಜಿಕ ಹಿನ್ನೆಲೆ, ದೇವರಗುಡ್ಡ ಕ್ಷೇತ್ರದ ಸಂಬಂಧಗಳ ಪರಿಚಯ, ದೇವರಗುಡ್ಡ ಕ್ಷೇತ್ರದ ಹಾಡುಗಳು ಪ್ರಮುಖವಾದವುಗಳಾಗಿವೆ.

೧೦೨೦ (೨೪೫). ಮುದ್ದೇಬಿಹಾಳ ಆರ್.ಸಿ; **ಸಿಂಧೂರ ಲಕ್ಷಣ (ಮಹಾಕಾವ್ಯ)**; ಬಿಜಾಪುರ; ರಸಬಳ್ಳಿ ಪ್ರಕಾಶನ; ೧೯೯೩; ಪುಟ ೫೯೮+೨೪; ಇದು ಸಿಂಧೂರ ಲಕ್ಷ್ಮಣನ ಬದುಕಿನ ವಿವಿಧ ಘಟನಾವಳಿಗಳಿಗೆ ಸಂಬಂಧಿಸಿದಂತೆ ಇರುವ ಜನಪದ ಹಾಡುಗಳನ್ನು ಇದರಲ್ಲಿ ಸಂಗ್ರಹಿಸಿ ಬೃಹತ್ ಕಾವ್ಯವನ್ನು ರಚಿಸಲಾಗಿದೆ.

೧೦೨೧ (೨೪೯). ಮುದ್ದೇಬಿಹಾಳ್ ಆರ್.ಸಿ; **ಬೇಡನಾಯಕರ ಪಾಡು**; ಅಜಿಜಳ; ರಂಗನಗೌಡ ಎಚ್. ಪಾಟೀಲ; ೧೯೯೪; ಪುಟ ೩೧+೯೨; ಇದೊಂದು ಕಥನಕಾವ್ಯವಾಗಿದ್ದು, ವಾಲ್ಮೀಕಿ, ಬೇಡರ ಕಣ್ಣಪ್ಪ, ಏಕಲವ್ಯ ಮೊದಲಾದ ಪ್ರಸಿದ್ಧ ಬೇಡನಾಯಕರ ಜೊತೆ ಇತರ ಅಪರಿಚಿತ ಬೇಡನಾಯಕರ ಚರಿತ್ರೆಯನ್ನು ನಿರೂಪಿಸಿದ್ದಾರೆ. ಊರಬೇಡರು, ಮ್ಯಾಸಬೇಡರು, ಕುಮಾರರಾಮ, ಕಂಬದಮ್ಮ, ಹಲಗಲಿಯ ಬೇಡರು, ಶ್ರೀಮಂತ ವರರಾಣಿ ರಂಗಮ್ಮನವರು ಮೊದಲಾದ ೨೫ಜನ ಬೇಡರ ಬಗೆಗಿನ ತ್ರಿಪದಿಗಳು ಇದರಲ್ಲಿವೆ. ಈ ತ್ರಿಪದಿಗಳಲ್ಲಿ ಬೇಡರ ದೇಶಪ್ರೇಮ, ತ್ಯಾಗ, ಶೌರ್ಯ, ಧೈರ್ಯ ಮೊದಲಾದ ಗುಣಗಳನ್ನು ಅಭಿವ್ಯಕ್ತಿಸಲಾಗಿದೆ.

೧೦೨೩ (೨೪೭). ಮುನಿಸ್ವಾಮಿ ಎಂ.ಸಿ. (ಮೂಲ); ಅನು: ಎ.ಎಸ್. ಸತ್ಯನಾಥನ್; **ವಿದೂಷಕ ನ್ಯಾಯಾಧೀಶ ಮತ್ತು ಮಂತ್ರಿ**; ಬೆಂಗಳೂರು; ಐ.ಬಿ.ಎಚ್. ಪ್ರಕಾಶನ; ೧೯೭೦; ಪುಟ ೯೬; ತಮಿಳು ದೇಶದ ಜನಪದ ಕಥೆಗಳಲ್ಲಿ ಹೆಸರಾದ ತೆನಾಲಿರಾಮ, ಮರ್ಯಾದೆ ರಾಮ ಮತ್ತು ಮಂತ್ರಿ ಅಪ್ಪಾಜಿಗಳೆಂಬ ವ್ಯಕ್ತಿಗಳನ್ನು ಕುರಿತ ಸಚಿತ್ರ ಕತೆಗಳಿವೆ.

೧೦೩೦ (೨೪೮). ಮೃತ್ಯಂಜಯ ಹೊರಕೇರಿ; **ನಲವಡಿ ಶ್ರೀಕಂಠಶಾಸ್ತ್ರಿಗಳ ಲಾವಣಿಗಳು**; ಗುಲ್ಬರ್ಗಾ; ಪ್ರಸಾರಾಂಗ, ಗುಲ್ಬರ್ಗಾ ವಿಶ್ವವಿದ್ಯಾಲಯ; ೧೯೯೦; ಪುಟ ೭+೩೨; ನಲವಡಿ ಶ್ರೀಕಂಠಶಾಸ್ತ್ರಿಗಳು ಬರೆದ ಈ ಹತ್ತು ಲಾವಣಿಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ. ಈ ಪುಸ್ತಕದಲ್ಲಿ ೧೦ ಅಧ್ಯಾಯಗಳಿವೆ. ಶ್ರೀಕಂಠಶಾಸ್ತ್ರಿಗಳ ಜೀವನ, ಲಾವಣಿ, ಶ್ರೀಕಂಠಶಾಸ್ತ್ರಿಗಳ ಲಾವಣಿಗಳು. ಬ್ರಿಟೀಷ್-ಜರ್ಮನ್ ಯುದ್ಧ, ಹೈದ್ರಾಬಾದ್ ರಜಾಕರ

ಲಾವಣಿ, ಶಿಕ್ಷಣ, ಅಸ್ಪ್ರಶ್ಯತಾ ನಿವಾರಣೆ, ಮಧ್ಯಪಾನ, ಒಕ್ಕಲುತನ ಸುಧಾರಣೆ, ಗಾಂಧೀತತ್ವ, ಸಮಾರೋಪ.

೧೦೩೪ (೨೪೯). ಮೇರಿ ಫಾತಿಮಾ ಎನ್.ಎ; **ಮೈಸೂರು ಜಿಲ್ಲೆಯ ಕ್ರೈಸ್ತರು ಮತ್ತು ಅವರ ಜಾನಪದ ಸಂಪ್ರದಾಯಗಳು**; ಮೈಸೂರು; ಮೈಸೂರು ವಿಶ್ವವಿದ್ಯಾಲಯ; ೧೯೯೩; ೧೯೯೩ರಲ್ಲಿ ಅಂಬಳಿಕೆ ಹಿರಿಯಣ್ಣ ಅವರ ಮಾರ್ಗದರ್ಶನದಲ್ಲಿ ಮೇರಿ ಫಾತಿಮಾ ಎನ್.ಎ. ಅವರು ಸಿದ್ಧಪಡಿಸಿದ ಮೈಸೂರು ಜಿಲ್ಲೆಯ ಕ್ರೈಸ್ತರು ಮತ್ತು ಅವರ ಜಾನಪದ ಸಂಪ್ರದಾಯಗಳು ಎನ್ನುವ ಸಂಶೋಧನ ಮಹಾಪ್ರಬಂಧಕ್ಕೆ ಮೈಸೂರು ವಿಶ್ವವಿದ್ಯಾಲಯ ಪಿಎಚ್.ಡಿ. ಪದವಿ ನೀಡಿದೆ.

೧೦೪೦ (೨೫೦). ಮೋರಟಗಿ ಜಿ.ಎಸ್; **ಮುಸ್ಲಿಂ ಹಬ್ಬಗಳು ಮತ್ತು ಆಚರಣೆಗಳು**; ಒಂದು ಅಧ್ಯಯನ; ೧೯೯೬; ಪುಟ ೧೧೯; ೧೯೯೬ರಲ್ಲಿ ಎಸ್.ಜಿ. ಇವಪ್ರಾಪೂರ ಅವರ ಮಾರ್ಗದರ್ಶನದಲ್ಲಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಎಂ.ಫಿಲ್. ಸಂಶೋಧನ ಸಂಪ್ರಬಂಧ. ಮುಸ್ಲಿಂರ ಹಬ್ಬ ಮತ್ತು ಆಚರಣೆಗಳನ್ನು ವಿವರಿಸುವ ಈ ಸಂಪ್ರಬಂಧದಲ್ಲಿ ೪ ಅಧ್ಯಾಯಗಳಿವೆ. ಇಸ್ಲಾಂಧರ್ಮ, ಪ್ರಮುಖ ಹಬ್ಬಗಳು ಮತ್ತು ಆಚರಣೆಗಳು, ರಂಜಾನ್–ಈದ್, ಕರ್–ಈದ್, ಮೊಹರಂ, ಈದ್–ಎ–ಮಿಲಾದ, ಶಬಮೇರಾಜ, ಶಬ್‌ರಾತ, ಶಬೇರಕದ್ರ ಮೊದಲಾದವು ಈ ಸಂಪ್ರಬಂಧದಲ್ಲಿ ಪ್ರಮುಖ ಆಂಶಗಳಾಗಿವೆ.

೧೦೪೪ (೨೫೧). ಮೋಹನ್ ಜಿ.ಎನ್; **ಕನ್ನಡ–ತೆಲುಗು ಗಾದೆಗಳು**; ಹೈದರಾಬಾದ್ ಜಾನಪದ ಸಾಹಿತ್ಯ ಪರಿಷತ್ತು; ೧೯೭೭; ಪುಟ ೯+೧೧೫; ಇದು ಗಾದೆಗಳ ಸಂಗ್ರಹವಾಗಿದೆ. ಇದರಲ್ಲಿ ಕನ್ನಡ ತೆಲುಗು ಭಾಷೆಗಳಲ್ಲಿ ಸಮಾನವಾಗಿರುವ ೧೧೭ ಗಾದೆಗಳೇ ಅಲ್ಲದೇ ಕನ್ನಡ, ತೆಲುಗು, ಆಂಗ್ಲ ಮತ್ತು ಹಿಂದಿ ಭಾಷೆಗಳಲ್ಲಿಯೂ ಸಹ ಸಮಾನವಾಗಿರುವ ಗಾದೆಗಳನ್ನು ಸೇರಿಸಲಾಗಿದೆ.

೧೦೪೭ (೨೫೨). ಮೋಹನ ಎಚ್.ಎಸ್.; **ಮಲೆನಾಡ ದೇವರು: ಸಾಂಸ್ಕೃತಿಕ ಅಧ್ಯಯನ**; ಶಿವಮೊಗ್ಗ; ಕುವೆಂಪು ವಿಶ್ವವಿದ್ಯಾಲಯ; ೨೦೦೩–೦೪; ಕುವೆಂಪು ವಿಶ್ವವಿದ್ಯಾಲಯದ ರಂಗರಾಜ ವನದುರ್ಗ ಅವರ ಮಾರ್ಗದರ್ಶನದಲ್ಲಿ ಪ್ರಗತಿಯಲ್ಲಿರುವ ಪಿಎಚ್.ಡಿ. ಸಂಶೋಧನ ಮಹಾಪ್ರಬಂಧ. ಇದರಲ್ಲಿ ೭ ಅಧ್ಯಾಯಗಳಿವೆ. ದೀವರ ಪರಂಪರೆ, ಪ್ರಭಾವ ಮತ್ತು ಪ್ರಕ್ರಿಯೆಗಳನ್ನು ಕುರಿತು ವಿವರಿಸಿದ್ದಾರೆ ದೀವರ ಜೀವನ ಮತ್ತು ಸಂಬಂಧಗಳನ್ನು ಕುರಿತು ಹೇಳಿದ್ದಾರೆ. ದೀವರ ಕಲೆಗಳ ಆಶಯ ಮತ್ತು ಅಭಿವ್ಯಕ್ತಿಗಳನ್ನು ಚರ್ಚಿಸಿದ್ದಾರೆ. ದೀವರ ನಂಬಿಕೆ–ಆಚರಣೆ, ಸಾಂಸ್ಕೃತಿಕ ಸ್ಥಿತ್ಯಂತರಗಳನ್ನು ಕುರಿತು ವಿಶ್ಲೇಷಿಸಿದ್ದಾರೆ.

೧೦೪೯ (೨೫೩). ಯದುಪತಿ ಗೌಡ; **ಬೆಳ್ತಂಗಡಿ ಪರಿಸರದ ಮೇರರ ಕುಣಿತಗಳು**; ಮಂಗಳೂರು; ಮಂಗಳೂರು ವಿಶ್ವವಿದ್ಯಾಲಯ; ೧೯೮೯; ಪುಟ ೧೪೪; ೧೯೮೯ರಲ್ಲಿ ಮಂಗಳೂರು ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಎಂ.ಫಿಲ್. ಪ್ರಬಂಧ. ಪುರುಷೋತ್ತಮ ಬಿಳಿಮಲೆ ಇದಕ್ಕೆ ಮಾರ್ಗದರ್ಶಕರು. ಬೆಳ್ತಂಗಡಿ ತಾಲೂಕಿನ ಮೇರರ ಕುಣಿತಗಳ ಅಧ್ಯಯನವಾದ ಈ ಸಂಪ್ರಬಂಧದಲ್ಲಿ ೬ ಅಧ್ಯಾಯಗಳಿವೆ. ಮೇರರ ಸಾಮಾನ್ಯ ಪರಿಚಯ, ಮೇರರ ಕುಣಿತಗಳ ವರ್ಗೀಕರಣ, ಮೇರರ ಕಾಲಾನುಸಾರಿ ಕುಣಿತಗಳು, ಮೇರರ ಕಾಲಾನುಸಾರಿಯಲ್ಲದ ಕುಣಿತಗಳು ಹೀಗೆ ಅನೇಕ ವಿಷಯಗಳ ವಿವರಣೆ ಈ ಸಂಪ್ರಬಂಧದಲ್ಲಿದೆ. ಅನುಬಂಧದಲ್ಲಿ ಬೆಳ್ತಂಗಡಿ ತಾಲೂಕಿನ ಭೂಪಟ, ಛಾಯಾಚಿತ್ರ, ಕೆಲವು ಪ್ರಮುಖಪದಗಳ ಅರ್ಥ, ವಕ್ತೃಗಳ ವಿವರ ಮೊದಲಾದವನ್ನು ಗಮನಿಸಬಹುದು.

೧೦೫೯ (೨೫೪). ರಘುನಾಥ ಬಿ.ಎಂ.; **ಕನ್ನಡ ಜನಪದ ಕಥೆಗಳಲ್ಲಿ ಹಾಸ್ಯ;** ಶಂಕರಘಟ್ಟ; ಕನ್ನಡ ಭಾರತಿ; ೨೦೦೧; ಪುಟ ೧೦೧; ಕನ್ನಡ ಜಾನಪದ ಕಥೆಗಳಲ್ಲಿಯ ಹಾಸ್ಯವನ್ನು ಕುರಿತ ಸಂಶೋಧನೆ ಪ್ರಬಂಧ ಇದಾಗಿದೆ. ಇದರಲಲಿ ಒಟ್ಟು ೬ ಅಧ್ಯಾಯಗಳಿವೆ.

೧೯೬೧ (೨೫೫). ರಘುರಾಂ ಡಿ.ಎನ್.; **ವಡ್ಡಗೆರೆ ವೀರನಾಗಮ್ಮ (ಯಕ್ಷಗಾನ ಕಥಾ ಪ್ರಸಂಗ);** ಬೆಂಗಳೂರು; ಜನಪದ ಸಾಹಿತ್ಯ ಪರಿಷತ್ತು; ೧೯೯೦; ಪುಟ ೪೬+೦೪; ಯಕ್ಷಗಾನ ಕಥಾ ಪ್ರಸಂಗವನ್ನು ಇಲ್ಲಿ ವಿವರಿಸಲಾಗಿದೆ.

೧೦೬೨ (೨೫೬). ರಮಾದೇವಮ್ಮ ಎಸ್.ಕೆ; **ಏಷ್ಯದ ಆಯ್ದ ಕಥೆಗಳು;** ಟೋಕಿಯೋ ಯುನೆಸ್ಕೋವಿನ ಏಷ್ಯಾ ಸಾಂಸ್ಕೃತಿಕ ಕೇಂದ್ರ; ೧೯೭೯; ಪುಟ ೧೪೫; ಇದು ಏಷ್ಯಾದ ಬರ್ಮಾ, ಆಪಘಾನಿಸ್ಥನ, ಕೋರಿಯ, ಮಲೇಷಿಯಾ, ನೇಪಾಳ, ಭಾರತ ಮೊದಲಾದ ೧೪ ದೇಶಗಳ ಆಯ್ದ ಜನಪದ ಕಥೆಗಳ ಸಂಗ್ರಹವಾಗಿದೆ. ಸುಂದರ ನೀರುಹಕ್ಕಿ, ಗಿಡುಗ ಮತ್ತು ಮರ, ಯೂನಿ ಮತ್ತು ಎತ್ತು, ಮಾಂತ್ರಿಕ ಕೊಳಲು ತಾತನಿಗೊಂದು ಉಡುಗೊರೆ, ಮೇಡಂ ಬಸ್ ಸವಾರಿ ಮೊದಲಾದ ೧೪ ಸಚಿತ್ರ ಕಥೆಗಳು ಇಲ್ಲಿವೆ. ಈ ಕಥೆಗಳನ್ನು ವಿಶೇಷವಾಗಿ ಮಕ್ಕಳಿಗೆ ರಚಿಸಲಾಗಿದೆ.

೧೦೬೪ (೨೫೭). ರಮೇಶ ಜೆ.ಕೆ; **ಮಲೆಯ ಸೀಮೆಯ ಕಥೆಗಳು;** ತೀರ್ಥಹಳ್ಳಿ; ಚಕೋರ ಪ್ರಕಾಶನ; ೧೯೯೭, ೨೦೦೩; ಪುಟ ೧೨+೧೧೬; ಇಲ್ಲಿರುವ ಕಥೆಗಳು ಶಿವಮೊಗ್ಗ ತಾಲೂಕು ಮತ್ತು ತೀರ್ಥಹಳ್ಳಿ ತಾಲೂಕಿನ ಕಥೆಗಾರರಿಮದ ಪಡೆದವುಗಳಾಗಿವೆ. ಸಂಗ್ರಹದ ಮೊದಲ ಐದು ಕಥೆಗಳು ಭಿನ್ನ ಪಾಠದವವಾಗಿದ್ದು ವಿಸ್ತೃತ ರೂಪದಲ್ಲಿವೆ.

೧೦೬೫ (೨೫೮). ರಮೇಶ ಡಿ.ಜಿ; **ಮಲೆನಾಡಿನ ಬೇಲ ಜನಾಂಗ; ಒಂದು ಸಾಂಸ್ಕೃತಿಕ ಅಧ್ಯಯನ;** ಬೆಂಗಳೂರು; ಬೆಂಗಳೂರು ವಿಶ್ವವಿದ್ಯಾಲಯ; ೨೦೦೦; ಪುಟ ೨೩೨; ಇದು ೨೦೦೦ರಲ್ಲಿ ಚಿಕ್ಕಣ್ಣ ಅವರ ಮಾರ್ಗದರ್ಶನದಲ್ಲಿ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಪಿಎಚ್.ಡಿ. ಸಂಶೋಧನ ಮಹಾಪ್ರಬಂಧ. ಮಲೆನಾಡಿನ ಬೇಲ ಜನಾಂಗವನ್ನು ಸಾಂಸ್ಕೃತಿಕವಾಗಿ ಅಧ್ಯಯನ ಮಾಡಲಾದ ಈ ಮಹಾಪ್ರಬಂಧದಲ್ಲಿ ೫ ಅಧ್ಯಾಯಗಳಿವೆ. ಬೇಲ ಜನಾಂಗದ ಸಾಂಸ್ಕೃತಿಕ ಅಧ್ಯಯನ, ಜನಜೀವನ, ಬೇಲರ ಆಟಗಳು, ವಾದ್ಯಗಳು ಹಾಗೂ ಪ್ರರ್ಸನಾತ್ಮಕ ಕಲೆಗಳು ಮೊದಲಾದ ವಿಷಯಗಳು ಇಲ್ಲಿ ಅಧ್ಯಯನ ಮಾಡಲಾಗಿದೆ.

೧೦೮೧ (೨೫೯). ರವಿ ಎಂ.ವಿ; **ಹಾಸನ ಜಿಲ್ಲೆಯ ಕೊರಮರು: ಒಂದು ಅಧ್ಯಯನ;** ಮೈಸೂರು; ಮೈಸೂರು ವಿಶ್ವವಿದ್ಯಾಲಯ; ೨೦೦೧; ೨೦೦೧ರಲ್ಲಿ ಕೃಷ್ಣಮೂರ್ತಿ ಹನೂರ ಅವರ ಮಾರ್ಗದರ್ಶನದಲ್ಲಿ ಎಂ.ವಿ. ರವಿ ಅವರು ಸಿದ್ಧಪಡಿಸಿದ ಹಾಸನ ಜಿಲ್ಲೆಯ ಕೊರಮರು ಒಂದು ಅಧ್ಯಯನ ಎಂಬ ಸಂಶೋಧನ ಮಹಾಪ್ರಬಂಧಕ್ಕೆ ಮೈಸೂರು ವಿಶ್ವವಿದ್ಯಾಲಯ ಪಿಎಚ್.ಡಿ. ಪದವಿ ನೀಡಿದೆ.

೧೦೮೪ (೨೬೦). ರಂಗಯ್ಯ ಎನ್.ಆರ್; **ಆಯ್ದ ಹಳ್ಳಿಯ ಹಾಡುಗಳು;** ಮೈಸೂರು; ಕಲಾಕ್ಷೇತ್ರ; ೧೯೫೮; ಪುಟ ೭+೩೨; ೧೭ ಗೀತೆಗಳ ಸಂಗ್ರಹ ಇದಾಗಿದೆ.

೧೦೮೭ (೨೬೧). ರಂಗಸ್ವಾಮಿ ಬಿ.ಎನ್.; **ಹಳ್ಳಿಯ ಪದಗಳು;** ಮಂಡ್ಯ; ಸರಸ್ವತೀ ಪುಸ್ತಕ ಭಂಡಾರ; ೧೯೪೦; ಪುಟ ೧೬+೮೧; ಮೈಸೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ಸಂಗ್ರಹಿಸಿದ ಗೀತೆಗಳು. ಹೆಚ್ಚಾಗಿ ತ್ರಿಪದಿಗಳು ಇಲ್ಲಿವೆ.

೧೯೯೪ (೨೬೨). ರಾಘವ ನಂಬಿಯಾರ್ ಕೆ.ಎಮ್; **ವಿಲೋಕನ**; ಬೆಂಗಳೂರು; ಇಳಾ ಪ್ರಕಾಶನ; ೧೯೯೮; ಪುಟ ೧೨+೧೩೨; ಈ ಕೃತಿ ಯಕ್ಷಗಾನ ರಂಗಭೂಮಿಯ ಕುರಿತ ವಿಮರ್ಶಾಲೇಖನಗಳನ್ನು ಒಳಗೊಂಡಿದೆ. ಒಡವೆಯಿದ್ದು ಬಡವೆ, ಶಾಸ್ತ್ರೀಯ ಗಾನದ ಹಳೆಯರೀತಿ, ರಂಗಸ್ಥಳಕ್ಕೆ ಮಂಚ ಬಂದದ್ದು ಹೇಗೆ? ತಾಳ-ಲಯಗಳ ಮಡಿಲಲ್ಲಿ, ಗೀತದ ತಿಟ್ಟುಮಟ್ಟು, ವಾದ್ಯ-ವಾದನಗಳ ಅವತಾರಗಳು, ಆಂಗಿಕದ ಇತಿ-ಮಿತಿ, ಹೆಜ್ಜೆಗಾರಿಕೆಯ ವಜ್ಜೆ-ಓಜೆ ಬಿಂಬದ ಚಲನೆಯ ಪರಹತಿ, ಸ್ವಭಾವದ ಗುರುತು ಮುಖದಲ್ಲೇ ಬಣ್ಣ ಬದಲಿದ ನುಡಿಯ ಸಿರಿ, ಸಾತ್ವಿಕಾಭಿನಯ ಎಂಬ ಲೇಖನಗಳು ಈ ಕೃತಿಯಲ್ಲಿವೆ.

೧೧೧೧ (೨೬೩). ರಾಜಪ್ಪ ಟಿ.ಎಸ್; **ರಾಚಪ್ಪಾಜಿ**; ಮೈಸೂರು; ರಾಜ್ಯ ಸಂಪನ್ಮೂಲ ಕೇಂದ್ರ; ೧೯೮೯; ಪುಟ ೨೮; ಮಂಟೇಸ್ವಾಮಿ ಪರಂಪರೆಯಲ್ಲಿ ಬಹಳ ಮುಖ್ಯವಾದ ಸಾಂಸ್ಕೃತಿಕ ವೀರ ರಾಚಪ್ಪಾಜಿಯನ್ನು ಪರಿಚಯಿಸುವ ಕೃತಿ ಇದು. ಇದರಲ್ಲಿ ರೂಪ್ಪಾಜಿಯ ಬಗ್ಗೆ ಇರುವ ಜಾನಪದ ಸಾಮಗ್ರಿಯನ್ನು ಬಳಸಿಕೊಂಡು ರಾಚಪ್ಪಾಜಿಯ ಹುಟ್ಟು-ಬೆಳವಣಿಗೆಯನ್ನು ವಿವರಿಸಲಾಗಿದೆ. ವಯಸ್ಕ ಶಿಕ್ಷಣವಂತರಿಗೆ ಅರ್ಥವಾಗುವಂತೆ ಅತ್ಯಂತ ಸರಳ ಹಾಗೂ ಸುಲಲಿತವಾಗಿ ವಿಚಾರಗಳನ್ನು ಬರೆಯಲಾಗಿದೆ.

೧೧೧೩ (೨೬೪) ರಾಜರತ್ನಂ ಜಿ.ಪಿ; ಮೂಲ: ಸೋಮನಾಥ ಧಾರ್; **ಕಾಶ್ಮೀರದ ಹಳ್ಳಿಯ ಕತೆಗಳು**; ಬೆಂಗಳೂರು; ಹಿಂದ್ ಕಿತಾಬ್ಸ್ ಲಿಮಿಟೆಡ್; ೧೯೪೯; ಪುಟ ೪+೫೪; ಇದೊಂದು ಮಕ್ಕಳ ಕತೆಗಳ ಸಂಕಲನ. ಕಾಶ್ಮೀರದ ಜನರ ಹಳ್ಳಿಯ ಕತೆಗಳನ್ನು ಒಳಗೊಂಡ ಈ ಅಮೂಲ್ಯವಾದ ಸಂಗ್ರಹದಲ್ಲಿಯ ಸರಳವಾದ ಕತೆಗಳು ಓದುಗರ ಚಿತ್ರವನ್ನು ಹಿಡಿಯುತ್ತವೆ. ಇತರೆ ದೇಶದ ಹಳ್ಳಿಯ ಕತೆಗಳಿಗೂ ಇವಕ್ಕೂ ಹಳ ಹೋಲಿಕೆಯುಂಟು. ಇಲ್ಲಿನ ಕತೆಗಳು ಪ್ರಾಜ್ಞನ ಲೌಕಿಕ ಅನುಭವಗಳ ಸಾರವನ್ನು ಸಂಗ್ರಹಿಸಿಕೊಟ್ಟು ಈ ಜೀವನದ ಯಾತ್ರೆಯಲ್ಲಿ ಸರಿಯಾದ ದಾರಿ ಯಾವುದೆಂದು ಸೂಚನೆ ಕೊಡುತ್ತವೆ. ನಮ್ಮ ಬದುಕಿನಲ್ಲಿ ಯಾವುದನ್ನು ಬಿಡಬೇಕು, ಯಾವುದನ್ನು ಕಟ್ಟಿಕೊಳ್ಳಬೇಕು ಎಂಬುದನ್ನು ಕಣ್ಣಿಗೆ ಕಟ್ಟುವಂತೆ ಒತ್ತಿಹೇಳಿ ಒಂದೊಮದು ಒಂದೊಂದು ನೀತಿಯನ್ನು ಬೋಧಿಸುತ್ತವೆ. ಈ ಸಂಕಲನದಲಿ ಒಟ್ಟು ೭ ಕತೆಗಳಿವೆ. ಒಂದು ಕತೆಗೂ ಮುರು ನಾಲ್ಕು ಸನ್ನಿವೇಶಕ್ಕೆ ತಕ್ಕ ಚಿತ್ರಗಳನ್ನು ಸೊಗಸಾಗಿ ನೀಡಲಾಗಿದೆ.

೧೧೧೭ (೨೬೫). ರಾಜರತ್ನಂ ಜಿ.ಪಿ.; **ರಾಯನರಿ ಮೊದಲಾದ ಎಂಟು ಕಥೆಗಳು**; ಬೆಂಗಳೂರು; ವಿದೇಹ; ೧೯೬೭; ಪುಟ ೧೨೮; ಗ್ರಿಮ್ ಸಹೋದರರ ಹಾಗೂ ಈಸೂಪನ ಕಥೆಗಳ ರೂಪಾಂತರವಿದೆ.

೧೧೨೫ (೨೬೬). ರಾಜಶೇಖರ ಎಚ್.ಎಸ್; ವೀರಗಾಸೆ; ಒಂದು ಅಧ್ಯಯನ; ಶಿವಮೊಗ್ಗ; ಕುವೆಂಪು ವಿಶ್ವವಿದ್ಯಾಲಯ. ಕುವೆಂಪು ವಿಶ್ವವಿದ್ಯಾಲಯದಿಂದ ಬಸವರಾಜ ನೆಲ್ಲಿಸರ ಅವರ ಮಾರ್ಗದರ್ಶನದಲ್ಲಿ ರಚನೆಗೊಮಡ ಪಿಎಚ್.ಡಿ. ಸಂಶೋಧನ ಮಹಾಪ್ರಬಂಧ. ಇದರಲ್ಲಿ ಒಂಬತ್ತು ಅಧ್ಯಾಯಗಳಿವೆ. ವೀರಗಾಸೆಯ ಹಿನ್ನೆಲೆ ಮತ್ತು ಸ್ವರೂಪ, ಧರ್ಮಿಕ ಆಚರಣೆ ಮತ್ತು ಸಂಪ್ರದಾಯ, ಹಬ್ಬ ಹರಿದಿನಗಳು ಮತ್ತು ವಿಧಿ-ನಿಷೇಧಗಳು ಎಂಬ ವಿಭಾಗಗಳನ್ನು ಮಾಡಿ ಅದರ ಮೂಲಕ ವಿಸ್ತೃತವಾದ ಅಧ್ಯಯನ ಕೈಗೊಂಡಿದ್ದಾರೆ. ಆನಪದ ಕಲೆಗಳು ಮತ್ತು ವೀರಗಾಸೆ ಕಾಸಿ ಕುಣಿತ, ಲಿಮಗಬೀದರು, ಪುರವಂತಿಕೆ, ನಂದಿಕೋಲು ಈ ವಿಷಯಗಳನ್ನು ಕುರಿತು ಚರ್ಚಿಸಿದ್ದಾರೆ. ಸಂಘರ್ಷ ಮತ್ತು ಸಮನ್ವಯ, ಸಾಮಾಜಿಕ ಏರಿಳಿತಗಳನ್ನು ಕುರಿತು, ವೀರಗಾಸೆಯ ಕಲಾವಿದರನ್ನು

ಕುರಿತು, ಅವರ ಸಾಹಿತ್ಯ ಕುರಿತು, ವಚನಕಾರರ ಕುರಿತು, ಪೌರಾಣಿಕ, ಚಾರಿತ್ರಿಕ ಅಂಶಗಳನ್ನು ಕುರಿತು ವಿವರವಾಗಿ ಚರ್ಚಿಸಿದ್ದಾರೆ.

೧೧೪೨ (೨೬೭). ರಾಜೇಸಾಬ ಇ. ಚಪ್ಪರಬಂದ; **ವಿಜಾಪುರ ಜಿಲ್ಲೆಯ ಜಾತ್ರೆಗಳು**; ಒಂದು ಅಧ್ಯಯನ; ಧಾರವಾಡ; ಕರ್ನಾಟಕ ವಿಶ್ವವಿದ್ಯಾಲಯ; ೧೯೯೮; ಪುಟ ೨೨೨; ಇದು ೧೯೯೮ರಲ್ಲಿ ಎಸ್.ಜಿ. ಇಮ್ರಾಪೂರ ಅವರ ಮಾರ್ಗದರ್ಶನದಲ್ಲಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಲಾದ ಪಿಎಚ್.ಡಿ. ಸಂಶೋಧನ ಮಹಾಪ್ರಬಂಧ. ವಿಜಾಪುರ ಜಿಲ್ಲೆಯ ಸಮಗ್ರ ಜಾತಿಗಳನ್ನು ಕುರಿತು ಅಧ್ಯಯನ ಮಾಡಲಾಗಿರು ಈ ಪ್ರಬಂಧದಲ್ಲಿ ೧೨ ಅಧ್ಯಾಯಗಳಿವೆ. ಜಾತ್ರೆ ಮತ್ತು ಜಾನಪದ ಸಂಸ್ಕೃತಿ, ಜಾತ್ರೆ ಮತ್ತು ಸಾಮಾಜಿಕ ಕತೆ, ವಿಜಾಪುರ ಜಿಲ್ಲೆಯ ಜಾತ್ರೆಗಳ ಪ್ರಾದೇಶಿಕ ವೈಶಿಷ್ಟ್ಯ, ಜಾತ್ರೆ, ಉತ್ಸವಗಳು ಮತ್ತು ಉರುಸು, ವಿಜಾಪುರ ಜಿಲ್ಲೆಯ ಜಾತ್ರೆಗಳ ವರ್ಗೀಕರಣ ವಿಜಾಪುರ ಜಿಲ್ಲೆಯ ಜಾತ್ರೆಗಳ ವಿಧಿ ವಿಧಾನ ವಯಶಿಷ್ಟ್ಯ, ಜಾತ್ರೆ–ನಂಬಿಕೆ–ಸಂಪ್ರದಾಯ ಮತ್ತು ಆಚರಣೆಗಳು, ಜಾತ್ರೆ; ದೇವರುಗಳನ್ನು ಕುರಿತು ಜನಪದ ಕಾವ್ಯ, ಜಾತ್ರೆ ಸಂದರ್ಭ ಮತ್ತು ಪ್ರದರ್ಶನ ಕಲೆಗಳು– ಹೀಗೆ ವಿವಿಧ ವಿಷಯಗಳನ್ನು ಕುರಿತು ಇಲ್ಲಿ ಅಧ್ಯಯನ ಮಾಡಲಾಗಿದೆ.

೧೧೪೪ (೨೬೮). ರಾಜೇಂದ್ರ ಡಿ.ಕೆ.; **ನಮ್ಮ ಸುತ್ತಿನ ನಂಬಿಕೆಗಳು**; ಮೈಸೂರು; ಕನ್ನಡ ಅಧ್ಯಯನ ಸಂಸ್ಥೆ; ೧೯೭೩; ಪುಟ ೧೦+೮೦; ಹಾಸನ, ತುಮಕೂರು ಮತ್ತು ಬೆಂಗಳೂರು ಜಿಲ್ಲೆಯ ನಾನಾ ಭಾಗಗಳಲ್ಲಿ ಸಂಗ್ರಹಿಸಿದ ೬೭೪ ನಂಬಿಕೆಗಳು, ಪ್ರಸ್ತಾವನೆ, ಅನುಬಂಧ, ಅರ್ಥಕೋಶ ಮತ್ತು ಹಾ.ಮಾ. ನಾಯಕರ ಮುನ್ನುಡಿ ಇವೆ.

೧೧೫೪ (೨೬೯). ರಾಮಗಾಣಿಗ ಭಾಗವತ ಐರೋಡಿ; **ಗಂಗಾವತರಣ (ಕುಂಬಾಸುರ ವಧೆ ಸಹಿತ) ಕೋಟೇಶ್ವರ**; ಎನ್.ಆರ್.ಎಂ.ಎಚ್; ೧೯೯೭; ಪುಟ ೧೧೧; ಪೌರಾಣಿಕ ಯಕ್ಷಗಾನ ಪ್ರಸಂಗಗಳನ್ನು ಒಳಗೊಂಡ ಕೃತಿ

೧೧೬೯ (೨೭೦). ರಾಮಚಂದ್ರ ವೆಂಕಟೇಶ ಕರಗುದರಿ; **ಕೋಲುಹಾಡುಗಳು**; ಹುಬ್ಬಳ್ಳೀ; ಶಂಕರವಿಲಾಸ ಪ್ರಂಟಿಂಗ್ ಪ್ರೆಸ್; ೧೯೩೪; ಪುಟ ೩೭; ಗಣಪತಿ ಮೇಳದ ಪದ್ಯಗಳು ಈ ಪುಸ್ತಕದಲ್ಲಿವೆ.

೧೧೭೦ (೨೭೧). ರಾಮಚಂದ್ರಪ್ಪ ಬರಗೂರ; **ಕನ್ನಡ ಶಿಷ್ಟ ಸಾಹಿತ್ಯದಲ್ಲಿ ಜಾನಪದ**; ಬೆಂಗಳೂರು; ಕರ್ನಾಟಕ ಸಾಹಿತ್ಯ ಅಕಾಡೆಮಿ; ೧೯೯೩; ಪುಟ ೬೮+೧೭೬; ಈ ಪುಸ್ತಕದಲ್ಲಿ ಏಳು ಲೇಖನಗಳಿವೆ. ಆಶಯಲೇಖನ. ಪ್ರಾಚೀನ ಸಾಹಿತ್ಯದಲ್ಲಿ ಜಾನಪದೀಯ ಅಂತರ ಸಂಬಂಧ, ಮಧ್ಯಕಾಲೀನ ಸಾಹಿತ್ಯದಲ್ಲಿ ಜಾನಪದೀಯ ಲಯ–ಆಶಯ, ನವೋದಯ ಸಾಹಿತ್ಯದಲ್ಲಿ ಜನಪದ ಸಾದಹಿತ್ಯದ ತುಡಿತಗಳು, ನವ್ಯ ಸಾಹಿತ್ಯ ಮತ್ತು ಜನಪದ ಸಾಹಿತ್ಯ ಸಂಬಂಧಗಳ ಸ್ವರೂಪ, ಪ್ರಗತಿಶೀಲ ಸಾಹಿತ್ಯ ಮತ್ತು ಜನಪದ ಸಾಹಿತ್ಯ. ದಲಿತ ಬಂಡಾಯ ಸಾಹಿತ್ಯ ಮತ್ತು ಜಾನಪದೀಯತೆ ಲೆಖನಗಳು ಇಲ್ಲಿವೆ.

೧೧೭೬ (೨೭೨). ರಾಮಚಂದ್ರಾಚಾರ್ಯರು ಅಧ್ಯಾಪಕ; **ಒಗಟುಗಳು**; ಧರವಾಡ; ಶ್ರೀ ಕೃಷ್ಣ ಪುಸ್ತಕಾಲಯ; ಪುಟ ೧೬; ಮನರಂಜನೆ ಚಮತ್ಕಾರಗಳಿಂದ ಕೂಡಿದ ಒಗಟುಗಳಿವೆ.

೧೨೦೫ (೨೭೩). ರಾಮದೇವ ಶೆಣೈ. ಆರ್; **ಕುಂದದರ್ಶನ**; ಕುಂದಾಪುರ; ಭಂಡಾರ್ಕರ್ಸ್ ಕಾಲೇಜು; ೧೯೭೭; ಪುಟ ೮+೩೬೫; ಲೇಖನ ಸಂಗ್ರಹಕೃತಿ ಇದಾಗಿದೆ. ಜಾನಪದದ ವಿವಿಧ

ಆಯಾಮಗಳನ್ನು ಇಲ್ಲಿ ಪರಿಚಯಿಸಲಾಗಿದೆ. ಇತಿಹಾಸ, ಧರ್ಮಿಕ ಪರಂಪರೆ, ಜಾನಪದ ಕ್ರೀಡೆ, ಕಲೆ, ಮನೋಲ್ಲಾಸ, ಜನಾಂಗ, ಸೊಬಗ, ಸಂಕೀರ್ಣ, ನಮ್ಮ ದೇವಾಲಯಗಳು ಎಂ ಶೀರ್ಷಿಕೆಗಳಡಿಯಲ್ಲಿ ವಿವಿಧ ಲೇಖನಗಳನ್ನು ಸಂಗ್ರಹಿಸಲಾಗಿದೆ.

೧೨೦೬ (೨೭೪). ರಾಮಪ್ಪಗೌಡ ಕಡಿದಾಳು; ಕೆ.ಎಸ್; **ಮಲೆನಾಡಿನ ಶಿಕಾರಿಯ ನೆನಪುಗಳು**; ತೀರ್ಥಹಳ್ಳಿ; ಸಹ್ಯಾದ್ರಿ ಪರಕಾಶನ; ೧೯೮೯; ಪುಟ ೮+೧೩೦; ಬೇಟೆ ಶಿಕಾರಿಯ ೪೧ ಪ್ರಸಂಗಗಳನ್ನು ಒಳಗೊಂಡಿದುದಾಗಿದೆ.

೧೨೧೦ (೨೭೫). ರಾಮಯ್ಯ ರಾಮದೇವನಹಳ್ಳಿ ಬಿ; **ಮಾಸ್ತಮ್ಮ ಮತ್ತು ಹಾಡುಗಳು**; ಶಿಡ್ಲಘಟ್ಟ, ಮಲ್ಲಿಕಾ ಪ್ರಿಂಟಿಂಗ್ ಪ್ರೆಸ್; ೧೯೭೫; ಪುಟ ೨೦+೬೬; ಮಾಸ್ತಮ, ಪಡಲ್ದಿಮ್ಮ, ಯಮಧರ್ಮರಾಯ ಮತ್ತು ರೇಣುಕಾ (ಎಲ್ಲಮ್ಮ) ಎಂಬುವು ಇಲ್ಲಿಯ ನಾಲ್ಕು ಹಾಡುಗಳು. ಪುಸ್ತಕಕ್ಕೆ ಉಪಯುಕ್ತ ಪ್ರಸ್ತಾವನೆಯನ್ನು ಬರೆದಿದ್ದು ಅದರಲ್ಲಿ ಐತಿಹ್ಯ ಎಂದರೇನು? ಐತಿಹ್ಯದ ವಿಧಗಳು, ಸಂಗ್ರಹಿತ ಕಾವ್ಯಗಳು ಗ್ರಾಮದೇವತೆಗಳ ವಿವರಿಸಲಾಗಿದೆ. ಸಂಗ್ರಹದ ಕೊನೆಗೆ ಅರ್ಥಕೋಶ ಕೊಡಲಾಗಿದೆ.

೧೨೧೧ (೨೭೬). ರಾಮಯ್ಯ ಬಿ. ರಮದೇವನಹಳ್ಳಿ; **ಜನಪದ ಮಹಾಭಾರತ**; ರಾಮದೇವನ ಹಳ್ಳಿ; ಸರಸ್ವತಿ ಮಂದಿರ; ೧೯೭೮; ಪುಟ ೧೩+೧೩೨; ಈ ಕೃತಿಯಲ್ಲಿ ವಿವರವಾದ ಪ್ರಸ್ತಾವನೆ, ಕೌರವನ ವಾಸಕ್ಕೆ ಕರ್ಣ ಬಂದ. ಆರು ಮಂದಿ ಹಸ್ತಿನಾಪುರವ ಸೇರಿದರು. ಆನಂದವಾಯಿತು ನನ್ನ ಮನಸ್ಸು, ಸತ್ಯುಳಿದ ದರುಮರು, ವೈಕುಂಠ ಕಂಡರು ಎಂಬ ಮುಂತಾದ ಶೀರ್ಷಿಕೆಗಳಡಿಯಲ್ಲಿ ಮಹಾಭಾರತದ ಕಥೆಯನ್ನು ತ್ರಿಪದಿಗಳಲ್ಲಿ ಹಿಡಿಯಲಾಗಿದೆ. ಇದು ಮಹಾಭಾರತದ ಕಥೆಯೇ ಆದರೂ ಅನೇಕ ಸನ್ನಿವೇಶಗಳಲ್ಲಿ ಕಥನಾಕ್ರಮದಲ್ಲಿ ಜಾನಪದವನ್ನು ಬಿಂಬಿಸಿ, ಕೆಲವು ಸನ್ನಿವೇಶಗಳಲ್ಲಿ ಬದಲಾವಣೆ ಕಂಡುಬರುತ್ತದೆ. ಯುದ್ಧದಂತಹ ಪ್ರಮುಖವಾದ ಭಾಗವನ್ನೇ ಮೊಟಕುಗೊಳಿಸಿ ಕಾವ್ಯವನ್ನು ಬೆಳೆಸಿರುವುದು ಉಚಿತವೇ ಆಗಿದೆ.

೧೨೧೩ (೨೭೭). ರಾಮರಾಯ ಕಂಡದಲೆ; **ಯಕ್ಷಗಾನ ಸಭಾಲಕ್ಷಣ**; ಉಡುಪಿ; ಶ್ರೀ ಮನ್ಮಧ್ವ ಸಿದ್ಧಾಂತ ಗ್ರಂಥಾಲಯ; ೧೯೫೧; ಪುಟ ೭೪; ಸೋದಾಹರಣವಾಗಿ ಯಕ್ಷಗಾನ ಸಭಾ ಲಕ್ಷಣದ ನಿರೂಪಣೆಯಿದೆ. ಇದು ಕೋಟಿ ಸುಬ್ಬರಾಯರಿಂದ ಪರಿಷ್ಕರಿಸಲ್ಪಟ್ಟಿದೆ.

೧೨೩೬ (೨೭೮). ರಾಮಸ್ವಾಮಿ ಎನ್.ಎಸ್; **ಜನಪ್ರಿಯ ಜನಪದ ಗೀತೆಗಳು**; ಹಾಸನ; ಶ್ರೀ ಸಿದ್ದೇಶ್ವರ ಪ್ರೆಸ್; ೧೯೫೮; ಪುಟ ೪೨; ಗೀತೆಗಳ ಸಂಕಲನ ಇದಾಗಿದೆ.

೧೨೩೯ (೨೭೯). ರಾಮಾನುಜನ್ ಎ.ಕೆ.; ಅನು: ಮಹಾಬಲೇಶ್ವರರಾವ್; **ಭಾರತೀಯ ಜನಪದ ಕಥೆಗಳು**; ಇಂಡಿಯಾ; ನ್ಯಾಷನಲ್ ಬುಕ್ ಟ್ರಸ್ಟ್; ೨೦೦೦; ಪುಟ ೩೯೦; ಇಪ್ಪತ್ತೆರಡು ಭಾಷೆಗಳಿಂದ ಆಯ್ದ ಬಾಯ್ಮಾತಿನ ಜಾನಪದ ಕಥೆಗಳು ಇದರಲ್ಲಿವೆ. ತಮಿಳು, ತೆಲುಗು, ಕನ್ನಡ, ಮರಾಠಿ, ಪಂಜಾಬಿ, ಸಿಂಧಿ, ಒರಿಯ, ಉರ್ದು, ಹಿಮದಿ, ಅಸ್ಸಾಮಿ, ಗುಜರಾತಿ, ದಿದಾಯಿ, ಕೊಂಕಣಿ, ಸಂತಾಲಿ, ಕಾಶ್ಮೀರಿ ಮೊದಲಾದ ಭಾಷೆಗಳಲ್ಲಿಯ ೧೦೬ ಕಥೆಗಳು ಈ ಸಂಗ್ರಹದಲ್ಲಿವೆ. ಎಂಟನೆ ಕೀಲಿಕೈ, ಗಿಣಿಯ ಮೈ ಹೊಕ್ಕ ಕುರುಬ, ಹಂಚಿ, ಅರಗಿನ ಎಮ್ಮೆ ಮೊದಲಾದ ಪ್ರಸಿದ್ಧ ಜಾನಪದ ಕಥೆಗಳ ಅನುವಾದಗಳು ಇದರಲ್ಲಿವೆ. ಕೃತಿಯ ಕೊನೆಯಲ್ಲಿ ಪ್ರತಿಯೊಂದು ಕಥೆಯ ಮೂಲ ಆಕರವನ್ನೂ, ಜನಪದ ಕಥೆಗಳ ಅಂತರಾಷ್ಟ್ರೀಯ ಸೂಚಿಗಳಲ್ಲಿ ಉಲ್ಲೇಖಿಸಲ್ಪಟ್ಟು ಆಯಾ ಕಥೆಗಳ ವರ್ಗವನ್ನು, ಇಲ್ಲಿನ ಕಥೆಗಳಿಗೆ ಬೇರೆ ಕೆಲವು

ಭಾಷೆಗಳಲ್ಲಿ ಕಂಡುಬರುವ ಸಂವಾದಿ ಕತೆಗಳನ್ನೂ ಸೂಚಿಸಿ ಅಗತ್ಯಕಂಡಲ್ಲಿ ಕೆಲವು ಸಾಂಸ್ಕೃತಿಕ ವಿವರಗಳನ್ನು ಸಂಕ್ಷಿಪ್ತವಾದ ಟಿಪ್ಪಣಿಯಲ್ಲಿ ಒದಗಿಸಲಾಗಿದೆ.

೧೨೫೫ (೨೮೦). ರಾಮೇಶ್ವರ ಎ.ಕೆ; ಬಸವಂತಪ್ಪ ಪಟ್ಟಣ; **ಕಸವ ಹೊಡೆದ ಕೈ ಕಸ್ತೂರಿ ನಾತಾವ**; ಗುಲ್ಬರ್ಗಾ; ಕವಿರಾಜಮಾರ್ಗ ಪ್ರಕಾಶನ; ೧೯೮೮; ಪುಟ ೨೧೦; ಇದು ಜಾನಪದ ಗೀತೆಗಳ ಸಂಗ್ರಹವಾಗಿದೆ. ಇದರಲ್ಲಿ ದೇವರ ಹಾಡು, ನೀತಿಯ ಹಾಡು, ಗೀಗೀ ಪದಗಳು, ಹಾಸ್ಯ, ಒಗಟು, ಪ್ರೇಮದ ಹಾಡುಗಳು, ತತ್ವಪದಗಲು, ಗರತಿಯ ಹಾಡುಗಳು, ನಿಸರ್ಗದ ಹಾಡುಗಳು, ಹೀಗೆ ಬದುಕಿನ ಎಲ್ಲ ಮುಖಗಳಿಗೂ ಸಂಬಂಧಿಸಿದ ಹಾಡುಗಳು ಇದರಲ್ಲಿ ಸಂಗ್ರಹಗೊಂಡಿವೆ. ಇದರಲ್ಲಿ ಒಟ್ಟು ೬೮ ಹಾಡುಗಳಿವೆ. ಇವೆಲ್ಲ ಗುಲ್ಬರ್ಗಾ ಜಿಲ್ಲೆಯ ಅಫಜಲಪುರ ತಾಲೂಕಿನಲ್ಲಿ ಸಂಗ್ರಹಿಸಿದಂಥ ಹಾಡುಗಳಾಗಿವೆ.

೧೨೬೪ (೨೮೧). ರುಕ್ಮಿಣಿಬಾಯಿ ಶಮರಾವ್ ನರಸಾಪುರ; **ಶ್ರೀ ಹನುಮದ್ವಿಲಾಸ**; ವಿಜಾಪುರ; ಶ್ರೀಮತಿ ವನಜ ಉಪೇಂದ್ರ ನರಸಾಪುರ; ೧೯೭೬; ಪುಟ ೪೮; ಹನುಮಂತನನ್ನು ಕುರಿತ ಯಕ್ಷಗಾನ ಪ್ರಸಂಗವನ್ನು ಈ ಕೃತಿ ವಸ್ತುವನ್ನಾಗಿ ಒಳಗೊಂಡಿದೆ. ಹನುಮಂತನ ಹಿರಿಮೆ ಹಾಗೂ ಅವನ ಪವಾಡಗಳನ್ನು ಈ ಕೃತಿಯಲ್ಲಿ ನೋಡಬಹುದಾಗಿದೆ.

೧೨೬೬ (೨೮೨). ರುದ್ರಪ್ಪ. ಕೆ; **ಬಳ್ಳಾರಿ ಜಿಲ್ಲೆಯ ಜಾನಪದ ಸಾಹಿತ್ಯ**; ಬಳ್ಳಾರಿ; ಶ್ರೀ ಸಿದ್ಧವೀರ ಶಿವಾಚಾರ್ಯ ಜ್ಞಾನ ಪ್ರಕಾಶನ; ೧೯೭೫; ಪುಟ ೬೧; ಬಳ್ಳಾರಿ ಜಿಲ್ಲೆಯ ಜಾನಪದ ಸಾಹಿತ್ಯದ ವರ್ಗೀಕರಣವನ್ನು ಪರಿಚಯಿಸಿದ್ದಾರೆ.

೧೨೭೦ (೨೮೩). ರುದ್ರಮೂರ್ತಿ ಶಾಸ್ತ್ರಿ ಸು; **ತಮಿಳು ನಾಡಿನ ಜಾನಪದ ಕಥೆಗಳು**; ಬೆಂಗಳೂರು; ಎಸ್.ಬಿ.ಎಸ್. ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್; ೧೯೯೩; ಪುಟ ೮+೧೦೪; ತಮಿಳುನಾಡಿನ ૩೪ ಜಾನಪದ ಕಥೆಗಳನ್ನು ಒಳಗೊಂಡ ಅನುವಾದ ಕೃತಿ.

೧೨೭೧ (೨೮೪). ರುದ್ರಮೂರ್ತಿ ಶಾಸ್ತ್ರಿ; **ಪಾಂಡಿಚೇರಿಯ ಜಾನಪದ ಕಥೆಗಳು**; ಬೆಂಗಳೂರು, ಎಸ್.ಬಿ.ಎಸ್. ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್; ೧೯೯೩; ಪುಟ ೬+೧೧೭

೧೨೭೨ (೨೮೫). ರುದ್ರಾರಾಧ್ಯ ಶಾಸ್ತ್ರಿ ಮತ್ತು ಹುಲಕುಂದ ಸಂಗಣ್ಣ; **ಜನಪದ ಸಾಹಿತ್ಯ ಸಂಗ್ರಹಮಾಲಾ**; ಬಾಗಲಕೋಟೆ; ಮಹಾಂತೇಶ್ ಬುಕ್ ಡಿಪೋ; ಪುಟ ೮೦; ಗೀತೆಗಳ ಸಂಗ್ರಹ ಇದಾಗಿದೆ.

೧೨೭೩ (೨೮೬). ರೂಪಕಲಾ ಆಳ್ವ; **ನಾಟಿ**; ಮಂಗಳೂರು; ಸಂದೇಶ ಪ್ರಕಾಶನ; ೧೯೯೨; ಪುಟ ೧೨೨; ಭತ್ತದ ಬೇಸಾಯದ ಸಂದರ್ಭದಲ್ಲಿ ಹಾಳುವ ತುಳು ಜನಪದ ಗೀತೆಗಳ ಸಂಗ್ರಹವಾಗಿದೆ. ಇದರಲ್ಲಿ ನಾಟಿಪದಗಳು, ತುಳು ಪಾಡ್ದನಗಳು, ಕವಿತಗಳು ಮತ್ತು ಉರಲ್‌ಗಳನ್ನು ಸಂಗ್ರಹಿಸಿ ಕೊಡಲಾಗಿದೆ. ಇವುಗಳಿಗೆ ಕನ್ನಡದಲ್ಲಿ ಸಾರಾಂಶ ಮತ್ತು ವಿಶ್ಲೇಷಣೆಯನ್ನು ಒದಗಿಸಲಾಗಿದೆ. ಕೃತಿಯ ಕೊನೆಯಲ್ಲಿ ಸಾಂಸ್ಕೃತಿಕ ಪದಕೋಶ, ಮಾಹಿತಿದಾರರ ವಿಳಾಸಗಳು ಮತ್ತು ಪರಾಮರ್ಶನ ಗ್ರಂಥಗಳನ್ನು ಕೊಡಲಾಗಿದೆ.

೧೨೭೫ (೨೮೭). ರೇವಣ್ಣ ಕೆ.ಎಂ; **ತೆಲುಗು ಗೌಡರು**; ತರೀಕೆರೆ; ಅಕ್ಕನಾಗಮ್ಮ ಪ್ರಕಾಶನ; ೧೯೯೮; ಪುಟ ೧೮೦; ಈ ಕೃತಿಯಲ್ಲಿ ತರೀಕೆರೆ ತಾಲೂಕಿನಲ್ಲಿರುವ ತೆಲುಗು ಗೌಡರ ಸಂಪ್ರದಾಯ, ನಡೆವಳಿಕೆಗಳನ್ನು, ಆಚರಣೆಗಳನ್ನು ಕುರಿತು ವಿವರಿಸಿದ್ದಾರೆ. ಇದು ಒಂದು ಜನಾಂಗೀಯ ಅಧ್ಯಯ.

೧೨೭೯ (೨೮೮). ಲಕ್ಕಪ್ಪ ಗೌಡ ಎಚ್.ಜೆ; **ಒಗಟುಗಳು**; ಮೈಸೂರು; ಕನ್ನಡ ಅಧ್ಯಯನ ಸಂಸ್ಥೆ; ೧೯೭೩; ಪುಟ ೨೪+೯೮; ಈ ಕೃತಿಯಲ್ಲಿ ೧೦೮೮ ಒಗಟುಗಳನ್ನು ಸಂಗ್ರಹಿಸಲಾಗಿದೆ. ಎಲ್ಲ ಒಗಟುಗಳನ್ನು ಹೇಳಿದ ನಂತರ, ಉತ್ತರಗಳನ್ನೂ ಸಂಪಾದಕರೇ ನೀಡಿದ್ದಾರೆ. ಕೊನೆಯಲ್ಲಿ ಅರ್ಥಕೋಶವನ್ನು ಆಕಾರಾದಿಯಾಗಿ ಓದುಗರ ಅನುಕೂಲಕ್ಕಾಗಿ ನೀಡಿದ್ದಾರೆ.

೧೨೮೧ (೨೮೯). ಲಕ್ಕಪ್ಪಗೌಡ ಎಚ್.ಜೆ; **ಹೊಂಬಾಳೆ**; ಮೈಸೂರು; ಚೇತನ ಬುಕ್ ಹೌಸ್; ೧೯೮೫; ಪುಟ ೮+೧೭೬; ಕರ್ನಾಟಕದ ಪ್ರಮುಖ ಜಾನಪದ ವಿದ್ವಾಂಸರಾದ ಎಚ್.ಜೆ. ಲಕ್ಕಪ್ಪಗೌಡ ಅವರು ಜಾನಪದವನ್ನು ಕುರಿತಂತೆ ಬರೆದ ಲೇಖನಗಳ ಸಂಗ್ರಹಕೃತಿ ಇದು. ಇದರಲ್ಲಿ ಒಟ್ಟು ೯ ಲೇಖನಗಳಿವೆ. ಅವುಗಳೆಂದರೆ ಕನ್ನಡ ನಾಡು, ನುಡಿ, ಜನತೆ, ಜನಪದ ಕಲೆಗಳ ಅಳಿವು ಕಾರಣ, ಪರಿಣಾಮ ವಸತಿ ಜಾನಪದ, ಆಕಾಶ ಜಾನಪದ, ಹಳ್ಳಿಯ ಆಟಗಳೂ, ಒಗಟುಗಳು, ಗಾದೆಗಳು, ಮಲ್ಲಿಗೆ ದಂಡೆ–ಒಂದು ಸಮೀಕ್ಷೆ, ರಗಳೆ ಸಾಹಿತ್ಯದಲ್ಲಿ ಜಾಮನಪದ.

೧೨೯೮ (೨೯೦). ಲಠ್ಠೆ ಎಂ.ಎಸ್; **ಉತ್ತರ ಕರ್ನಾಟಕದ ಜನಪದ ನಂಬಿಕೆಗಳು**; ಲಿಂಗವಾಡಿ; ಶ್ರೀ ಕೃಷ್ಣಾಜಿರಾವ ಮಾಣಿಕರಾವ ಪಾಟೀಲ; ೧೯೮೦; ಪುಟ ೭೪; ಉತ್ತರ ಕರ್ನಾಟಕದ ಹಲವಾರು ಪರದೇಶಗಳಲ್ಲಿ ಪ್ರಚಲಿತವಿರುವ ಜನಪದ ನಂಬಿಕೆಗಳ ಸಂಗ್ರಹ ಕೃತಿ. ದೇವರು, ಗೃಹ ಜೀವನ, ಮದುವೆ–ಮಂಗಲ, ಗರ್ಭಿಣಿ, ಕೂಸು ಉಡುಗೆ, ಊಟ, ವೃತ್ತಿ, ರೋಗ, ಶವ, ದೆವ್ವ ಮೊದಲಾದ ೧೬ ವಿಷಯವಾರಿ ಒಟ್ಟು ೯೦೨ ಜನಪದ ನಂಬಿಕೆಗಳನ್ನು ಇಲ್ಲಿ ಕಾಣಬಹುದು. ಸಂಪಾದಕರು ಅರ್ಥಪೂರ್ಣವಾದ ದೀರ್ಘ ಮುನ್ನುಡಿ ಬರೆದಿದ್ದು ಅದರಲ್ಲಿ ಸಮಾಜದಲ್ಲಿ ನಂಬಿಕೆಗಳ ಕ್ರಿಯಾತ್ಮಕ ಪ್ರಾಮುಖ್ಯತೆಯನ್ನು ಕುರಿತು ಗಂಭೀರ ಚಿಂತನೆ ನಡೆಸಲಾಗಿದೆ.

೧೩೦೨ (೨೯೧). ಲಠ್ಠೆ ಎಂ.ಎಸ್; **ಸಿದ್ಧಪ್ರಭು ವಿರಚಿತ ಭೂಕೈಲಾಸ ಮತ್ತು ಚಂದ್ರಶಿರೋಮಣಿ (ಸಣ್ಣಟಗಳು)**; ಧುಮ್ಮನಸೂರ; ಸಿದ್ಧಪ್ರಭು ಪ್ರಕಾಶನ; ೧೯೮೩; ಪುಟ ೧೧+೫೭+೫೨=೧೨೦

೧೩೦೩ (೨೯೨). ಲಠ್ಠೆ ಎಂ.ಎಸ್; **ಚಿತ್ರಕೇತು**; ಮುತನಾಳ; ಶ್ರೀ ಕಲ್ಮೇಶ್ವರ ಪ್ರಕಾಶನ; ೧೯೮೪; ಪುಟ ೧೧೨; ಇದು ಚಿತ್ರಕೇತು ಎಂಬ ದೊಡ್ಡಾಟದ ಸಂಗ್ರಹವಾಗಿದೆ. ಬೆಳಗಾವಿ ಜಿಲ್ಲೆಯ ಮುತನಾಳದ ಜಾಡರ ಮಲ್ಲೇಶಿ ಈ ದೊಡ್ಡಾಟವನ್ನು ರಚಿಸಿದ್ದಾರೆ. ಇದು ಒಂದು ಪೌರಾಣಿಕ ದೊಡ್ಡಾಟವಾಗಿದೆ. ಇದರಲ್ಲಿ ಚಿತ್ರಕೇತು ರಾಜನ ಕಥೆಯಿದೆ.

೧೩೦೪ (೨೯೩). ಲಠ್ಠೆ ಎಂ.ಎಸ್; **ಅರಬರಾಟ (ಡಪ್ಪಿನಾಟ)**; ಮುತನಾಳ; ಶ್ರೀ ಕಲ್ಮೇಶ್ವರ ಪ್ರಕಾಶನ; ೧೯೮೪; ಪುಟ ೮+೭೦; ಅರಬರಾಟ ಒಂದು ಸಾಮಾಜಿಕ ಡಪ್ಪಿನಾಟವಾಗಿದೆ.

೧೩೦೬ (೨೯೪). ಲಠ್ಠೆ ಎಂ.ಎಸ್; **ರಾಧಾನಾಟ**; ಮುತನಾಳ; ಶ್ರೀ ಕಲ್ಮೇಶ್ವರ ಪ್ರಕಾಶನ; ೧೯೮೪; ಪುಟ ೯೮; ಬೀಬೀ ಇಂಗಳಗಿ ಹಸನ ಮೊದಲಾದವರೂ ತಮಾಳಾದ ಪ್ರಭಾವದಿಂದ ರಾಧಾನಾಟಗಳನ್ನು ಬರೆದರೆಂದು ತಿಳಿದುಬರುತ್ತದೆ. ದಾಸರಾಟವೇ ಮಹಾರಾಷ್ಟ್ರದಲ್ಲಿ ತಮಾಶಾ ಎನಿಸಿ ಕರ್ನಾಟಕದಲ್ಲಿ ಹಲ ಕೆಲ ಬದಲಾವಣೆಗಳೊಂದಿಗೆ ರಾಧಾನಾಟವಾಗಿರಬೇಕು.

೧೩೧೨ (೨೯೫). ಲಕ್ಷ್ಮೀನಾರಾಯಣ ಆಳ್ವ ಏಯನ; **ಬ್ರಹ್ಮಕಳಶ**; ಅಮಟಾಡಿಮಂಗಳ ತಿಮರು; ೧೯೮೭; ಪುಟ ೯೦; ಇಲ್ಲಿ ಏರ್ಯದ ಅಣ್ಣಪ್ಪಸ್ವಾಮಿ ಮೆರೆದ ನೆಲೆ, ನಡೆದು ಬಂದ

ರೀತಿ, ನಿಯಮ, ನಡಾವಳಿಯ ಕುರಿತಾದ ವಿಶ್ಲೇಷಣೆಯಿದೆ. ಜಿಲ್ಲೆಯ ಭುತಾರಾಧನೆಯ ಬಡಗು ಸಂಪ್ರದಾಯ ಪಾಣಾರಾಟ, ದಕ್ಷಿಣ ಕರ್ನಾಟಕದ ಜನಪದ ದೇವತಾರಾಧನೆಗಳು, ಕೇರಳದ ತೆಯ್ಯಂ, ಆಂಧ್ರದಲ್ಲಿ ಭುತಾರಾಧನೆಗೆ ಸಮಾನವಾದ ಆರಾಧನೆಗಲು, ತಮಿಳುನಾಡಿನಲ್ಲಿ ಭೂತಾರಾಧನೆ ಎಂಬ ಲೇಖನಗಳಿವೆ. ಕೃತಿಯ ಆರಂಭದಲ್ಲಿ ಈ ಲೇಖನಗಳನ್ನು ಬರೆದ ಲೇಖಕರ ಪರಿಚಯವಿದೆ.

೧೩೧೯ (೨೯೬). ಲಿಂಗಣ್ಣ ಸಿಂಪಿ; **ಗರತಿಯ ಬಾಳ ಸಂಹಿತೆ;** ಕರ್ನಾಟ ಜಾನಪದ ಹಾಗೂ ಯಕ್ಷಗಾನ ಅಕಾಡೆಮಿ; ೧೯೮೫; ಪುಟ ೧೦೨+೧೬; ಇದು ಮಹಿಳೆಯ ಬಾಳಿನಲ್ಲಿ ಅಳವಡಿಸಿಕೊಳ್ಳಬೇಕಾದ ರೀತಿ–ನೀತಿಗಳನ್ನು ಜಾನಪದ ತ್ರಿಪದಿಗಳ ಮೂಲಕ ವಿಶ್ಲೇಷಿಸಿದಂಥ ಕೃತಿಯಾಗಿದೆ. ಇದರಲ್ಲಿ ಗರತಿಯ ಬದುಕಿನ ವಿವಿಧ ರಂಗಗಳಲ್ಲಿ ಹೇಗೆ ತನ್ನ ಪಾತ್ರವನ್ನು ಆತ್ಮ ವಿಶ್ವಾಸದಿಂದ ನಿರ್ವಹಿಸುತ್ತಾಳೆ ಎಂಬುದನ್ನು ೧೭೦ ತ್ರಿಪದಿಗಳ ಉದಹರಣೆಯಿಂದ ಸ್ಪಷ್ಟಪಡಿಸಿದ್ದಾರೆ.

೧೩೨೦ (೨೯೭). ಲಿಂಗಣ್ಣ ಸಿಂಪಿ; **ಗಾದೆಗಳ ಗಾರುಡಿ;** ಗೊಳಸಂಗಿ; ಜಾನಪದ ಪ್ರತಿಭಾ ಪ್ರಕಾಶನ; ೧೯೮೮; ಪುಟ ೧೧೩; ಇದು ಗಾದೆಗಳ ಕುರಿತಾದ ಪ್ರಬಂಧ ಸಂಕಲನವಾಗಿದೆ. ಗಾದೆಗಳ ಕುರಿತಂತೆ ಇದರಲ್ಲಿ ಒಟ್ಟು ೧೭ ಪ್ರಬಂಧಗಳಿವೆ. ಗಾದೆಗಳ ಗಾರುಡಿ ಎಂಬ ಪ್ರಬಂಧದಲ್ಲಿ ಗಾದೆಗಳ ಅರ್ಥವಂತಿಕೆಯ ಗಮ್ಮತ್ತನ್ನು ವಿವರಿಸಲಾಗಿದೆ.

೧೩೨೧ (೨೯೮). ಲಿಂಗಣ್ಣ ಸಿಂಪಿ; **ತಲೆಮಾರಿನ ಹಿಂದೆ (ಹಳ್ಳಿಯ ಜನಜೀವನದ ಚಿತ್ರಣ);** ದ್ವಿತೀಯ ಮುದ್ರಣ; ಚಡಚಣ; ಶ್ರೀ ಅರವಿಂದ ಗ್ರಂಥಾಲಯ; ೧೯೯೨; ಪುಟ ೧೩೧; 'ತಲೆಮಾರಿನ ಹಿಂದೆ' ಶೀರ್ಷಿಕೆಯ ಈ ಪುಸ್ತಕದಲ್ಲಿ ಸುಮಾರು ೧೬ ಉಪಶೀರ್ಷಿಕೆಗಳಲ್ಲಿ ಹಳ್ಳಿಯ ಜೀವನ ಚಿತ್ರಣಗೊಂಡಿದೆ. ನಮ್ಮೂರು ಭರ್ಜರಿ ಬಯಲಾಟ, ನ್ಯಾಯದಾನ, ಗಂಡಸರ ಹಬ್ಬ ಮೊದಲಾದ ಶೀರ್ಷಿಕೆಯ ಪ್ರಬಂಧಗಳಿವೆ.

೧೩೨೫ (೨೯೯). ಲಿಂಗಪ್ಪ ಕೆ.ವಿ; **ಮಲೆನಾಡಿನ ಮಡಿಲಲ್ಲಿ;** ಮೈಸೂರು; ಮೈಸೂರು ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿ; ೧೯೫೪; ಪುಟ ೩೨; ಐದು ಗೀತೆಗಳು, ಲಾವಣಿಗಳನ್ನು ಶಿವಮೊಗ್ಗ ಜಿಲ್ಲೆಯಲ್ಲಿ ಸಂಗ್ರಹಿಸಲಾಗಿದೆ.

೧೩೨೬ (೩೦೦). ಲಿಂಗಪ್ಪ ಕೆ.ವಿ; **ಮಲೆನಾಡಿನಲ್ಲಿ ಮದುವೆ;** ಮೈಸೂರು; ಮೈಸೂರು ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿ; ೧೯೫೫; ಪುಟ ೨೮; ಕೆಲವು ಮದುವೆ ಹಾಡುಗಳು ಇಲ್ಲಿವೆ. ಇದು ಶಿವಮೊಗ್ಗ ಜಿಲ್ಲೆಯ ಸಂಗ್ರಹ

೧೩೪೨ (೩೦೧). ಲೀಲಾವತಿ ಎಂ; **ಮೂಢನಂಬಿಕೆ ಮತ್ತು ಮಹಿಳೆ;** ಬೆಂಗಳೂರು; ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ; ೧೯೭೫; ಪುಟ ೪೧; ಈ ಕೃತಿಯಲ್ಲಿ ಮೂಢನಂಬಿಕೆಗಳು ಮಹಿಳೆಯರಲ್ಲಿ ಹೇಗೆ ಮನೆಮಾಡಿಕೊಂಡಿವೆ. ಅದರಿಂದ ಆಗುವ ಪರಿಣಾಮ ಮೊದಲಾದ ಅಂಶಗಳನ್ನು ಕುರಿತು ವಿಶೇಷವಾಗಿ ಚರ್ಚಿಸಿದ್ದಾರೆ.

